ಶನಿವಾರ, ಮಾರ್ಚ್ 25, 2023 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಡಗು

ಮುಂಬೈನಲ್ಲಿ ನಡೆದ ವೆಬ್ ಸರಣಿಯೊಂದರ ಪ್ರಚಾರ ಕಾರ್ಯಕ್ರಮದಲ್ಲಿ ಬಾಲಿವುಡ್ ನಟಿ ಅದಿತಿ ರಾವ್ ಹೈದರಿ ಪಾಲ್ಗೊಂಡಿದ್ದರು



ನವ ಭಾರತಕ್ಕಾಗಿ ನವ ಕರ್ನಾಟಕ

ಸನ್ಮಾನ್ಯ ಪ್ರಧಾನಮಂತ್ರಿಗಳ ಸಮರ್ಥ ನಾಯಕತ್ವದಡಿ ಬೆಂಗಳೂರಿನ ಸಂಚಾರ ಅಭಿವೃದ್ಧಿಯಲ್ಲಿ ಕ್ಷಿಪ್ರ ಪ್ರಗತಿ

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಸನ್ಮಾನ್ಯ ಪ್ರಧಾನಮಂತ್ರಿಗಳಾದ

ಶ್ರೀ ನರೇಂದ್ರ ಮೋದಿ ಅವರಿಂದ

ವೈಟ್‌ಫೀಲ್ಡ್ (ಕಾಡುಗೋಡಿ) ನಿಂದ ಕೃಷ್ಣರಾಜಪುರದವರೆಗಿನ ಮೆಟ್ರೋ ಲೈನ್ ಉದ್ಘಾಟನೆ

25ನೇ ಮಾರ್ಚ್ 2023, ಶನಿವಾರ, ಮಧ್ಯಾಹ್ನ 1.00 ಗಂಟೆ । ವೈಟ್‌ಫೀಲ್ಡ್ (ಕಾಡುಗೋಡಿ) ಮೆಟ್ರೋ ನಿಲ್ದಾಣ

13.71 ಕಿ.ಮೀ ● 12 ನಿಲ್ದಾಣಗಳು ● ಯೋಜನಾ ವೆಚ್ಚ: ರೂ.4,249 ಕೋಟಿ

- ಈ ವಿಭಾಗವು ಬೈಯಪ್ಪನಹಳ್ಳಿಯಿಂದ ವೈಟ್‌ಫೀಲ್ಡ್ ನಿಲ್ದಾಣದವರೆಗೆ ಕಾರ್ಯಾಚರಣೆಯಲ್ಲಿರುವ ಪೂರ್ವ–ಪಶ್ಚಿಮ ಕಾರಿಡಾರ್‌ನ (ಪರ್ಪಲ್ ಲೈನ್) ಪೂರ್ವ ವಿಸ್ತರಣೆಯಾಗಿದೆ
- ನಿರ್ಮಾಣದ ಹಂತದಲ್ಲಿರುವ 15.81 ಕಿ.ಮೀ. ವಿಸ್ತರಣೆಯ ಪೈಕಿ, ಕೆ.ಆರ್. ಪುರದಿಂದ ವೈಟ್‌ಫೀಲ್ಡ್‌ವರೆಗಿನ 13.71 ಕಿ.ಮೀ. ಭಾಗ ಸಂಚಾರಕ್ಕೆ ಸಿದ್ಧವಾಗಿದೆ.
- ಸಾರ್ವಜನಿಕರಿಗೆ ವಿಶ್ವ ದರ್ಜೆಯ ಇಂಧನ ದಕ್ಷ ಸ್ವಚ್ಛ ಸಾರಿಗೆ ವ್ಯವಸ್ಥೆಯನ್ನು ಒದಗಿಸುತ್ತದೆ
- ಈ ಮಾರ್ಗದಲ್ಲಿ ಪ್ರಯಾಣದ ಸಮಯವನ್ನು 40%ರಷ್ಟು ಕಡಿಮೆಗೊಳಿಸುತ್ತದೆ
- ಐಟಿ ಪಾರ್ಕ್‌ಗಳು, ರಫ್ತು ಪ್ರೋತ್ಸಾಹಿತ ಕೈಗಾರಿಕಾ ಪ್ರದೇಶಗಳು, ಮಾಲ್‌ಗಳು, ಆಸ್ಪತ್ರೆಗಳು ಹಾಗೂ ಹಲವು ಫಾರ್ಚ್ಯೂನ್ 500 ಕಂಪನಿಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸುಮಾರು 5 ರಿಂದ 6 ಲಕ್ಷ ಬೆಂಗಳೂರಿಗರಿಗೆ ಅನುಕೂಲ
- ರಸ್ತೆಗಳಲ್ಲಿನ ವಾಹನ ಸಂಚಾರ ದಟ್ಟಣೆಯನ್ನು ದೊಡ್ಡ ಪ್ರಮಾಣದಲ್ಲಿ ಕಡಿಮೆಗೊಳಿಸುತ್ತದೆ
- ಈ ಪ್ರದೇಶದಲ್ಲಿ ಕೈಗಾರಿಕಾ ಕ್ಷೇತ್ರದ ಹೊಸ ಅಭಿವೃದ್ಧಿಗೆ ಉತ್ತೇಜನ

ಪ್ರಯಾಣಿಕರ ಸೌಲಭ್ಯಗಳು

- ಎಲ್ಲಾ ನಿಲ್ದಾಣಗಳಲ್ಲಿಯೂ ದ್ವಿಚಕ್ರವಾಹನಗಳ ನಿಲುಗಡೆ ಸೌಲಭ್ಯ. ಕೆ.ಆರ್.ಪುರ ಹಾಗೂ ವೈಟ್‌ಫೀಲ್ಡ್‌ನಲ್ಲಿ ನಾಲ್ಕುಚಕ್ರ ವಾಹನಗಳು ಹಾಗೂ ದ್ವಿಚಕ್ರ ವಾಹನಗಳಿಗೆ ಸಾಕಷ್ಟು ಪಾರ್ಕಿಂಗ್ ಸೌಲಭ್ಯ.
- ಪಟ್ಟಂದೂರು ಅಗ್ರಹಾರ ನಿಲ್ದಾಣದಲ್ಲಿ ಐಟಿಪಿಬಿಗೆ ನೇರ ಸಂಪರ್ಕ ಕಲ್ಪಿಸುವ ಎತ್ತರಿಸಿದ ಮಾರ್ಗ
- ಎಲ್ಲಾ ನಿಲ್ದಾಣಗಳಲ್ಲಿಯೂ ವಿಶೇಷಚೇತನರ ಅನುಕೂಲಕ್ಕಾಗಿ ರ್‍ಯಾಂಪ್‌ಗಳು ಹಾಗೂ ಇತರೆ ಸೌಲಭ್ಯಗಳು
- ಪ್ರತಿ ನಿಲ್ದಾಣದಲ್ಲೂ ಸಾಮಾನ್ಯವಾಗಿ 8 ಎಸ್ಕಲೇಟರ್‌ಗಳು, 4 ಎಲಿವೇಟರ್‌ಗಳು ಹಾಗೂ 8 ಸ್ಟೇರ್‌ಕೇಸುಗಳು
- ಎಲ್ಲಾ ನಿಲ್ದಾಣಗಳಲ್ಲಿಯೂ ಎರಡೂ ದಿಕ್ಕುಗಳಲ್ಲೂ ಸರ್ವೀಸ್ ರಸ್ತೆಗಳು



ಬೆಂಗಳೂರಿನ ಸರ್ವತೋಮುಖ ಅಭಿವೃದ್ಧಿಗೆ ಆದ್ಯತೆ

2019ರಿಂದ ಮಹತ್ತರವಾದ ಬೆಳವಣಿಗೆ

- ಕಳೆದ ನಾಲ್ಕು ವರ್ಷಗಳಲ್ಲಿ ಬಿಬಿಎಂಪಿಗೆ ಸುಮಾರು **ರೂ.19,000 ಕೋಟಿ** ಹಂಚಿಕೆ ಮಾಡಲಾಗಿದೆ. 2013–18ರಲ್ಲಿ ಮಾಡಿರುವ ಹಂಚಿಕೆಗೆ ಹೋಲಿಸಿದರೆ ಇದು **35% ಹೆಚ್ಚಾಗಿದೆ.**
- ಕಳೆದ ನಾಲ್ಕು ವರ್ಷಗಳಲ್ಲಿ ಬೆಂಗಳೂರು ಮೆಟ್ರೊಗೆ **ರೂ.23,000 ಕೋಟಿಗೂ** ಹೆಚ್ಚಿನ ಹಣ ಹಂಚಿಕೆ ಮಾಡಲಾಗಿದ್ದು, 2013–18ರಲ್ಲಿ ಮಾಡಿರುವ ಹಂಚಿಕೆಗೆ ಹೋಲಿಸಿದರೆ **105%ರಷ್ಟು ಹೆಚ್ಚಿನ ಹಂಚಿಕೆ**ಯಾಗಿದೆ.
- ಕಳೆದ ನಾಲ್ಕು ವರ್ಷಗಳಲ್ಲಿ ಬೆಂಗಳೂರು ಜಲಮಂಡಳಿಗೆ **ರೂ.3,000 ಕೋಟಿಗೂ** ಹೆಚ್ಚಿನ ಮೌಲ್ಯದ ಸಂಪನ್ಮೂಲವನ್ನು ಒದಗಿಸಲಾಗಿದೆ. ಇದು 2013–18ರಲ್ಲಿ ಮಾಡಿರುವ ಹಂಚಿಕೆಗೆ ಹೋಲಿಸಿದರೆ **155% ಹೆಚ್ಚಳವಾಗಿದೆ.**

- ನವ ನಗರೋತ್ಥಾನ ಯೋಜನೆಗೆ **ರೂ.8,343 ಕೋಟಿ**
- ಬೆಂಗಳೂರಿಗೆ 243 'ನಮ್ಮ ಕ್ಲಿನಿಕ್'ಗಳು
- ಮುಖ್ಯಮಂತ್ರಿಗಳ ಅಮೃತ್ ನಗರೋತ್ಥಾನ ಯೋಜನೆ' ಅಡಿ ಮೂಲಸೌಕರ್ಯ ಅಭಿವೃದ್ಧಿಗೆ **ರೂ.6,000 ಕೋಟಿ**
- 171 ಕಿ.ಮೀ. ಉದ್ದದ ರಾಜಕಾಲುವೆ ಹಾಗೂ ಕಾಂಕ್ರೀಟ್ ತಡೆಗೋಡೆಗಳ ಅಭಿವೃದ್ಧಿಗೆ **ರೂ.1,813 ಕೋಟಿ**
- ಬಿಬಿಎಂಪಿ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆ ಮಾಡಿರುವ 110 ಗ್ರಾಮಗಳಿಗೆ **ರೂ.1,500 ಕೋಟಿ** ವೆಚ್ಚದಲ್ಲಿ ಕುಡಿಯುವ ನೀರು ಸರಬರಾಜು ಯೋಜನೆ

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು." - ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಕಾರ್ಯಕ್ರಮವನ್ನು ಡಿಡಿ ನ್ಯೂಸ್‌ನಲ್ಲಿ ನೇರ ಪ್ರಸಾರದಲ್ಲಿ ವೀಕ್ಷಿಸಿ

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಕರ್ನಾಟಕವನ್ನು ಎಟಿಎಂ ಮಾಡಿಕೊಳ್ಳಲು ಭ್ರಷ್ಟ ಕಾಂಗ್ರೆಸ್ ಯತ್ನ: ಸಮಾವೇಶದಲ್ಲಿ ಅಮಿತ್ ಶಾ ವಾಗ್ದಾಳಿ

‘ಅತಂತ್ರ ಸರ್ಕಾರ ಬೇಡ, ಬಹುಮತ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಧಾನಸಭೆ ಚುನಾವಣೆಯಲ್ಲಿ ಕರ್ನಾಟಕದ ಜನರು ಅತಂತ್ರ ಸರ್ಕಾರ ಸೃಷ್ಟಿಸಬಾರದು. ಬಿಜೆಪಿಗೆ ಸಂಪೂರ್ಣ ಬಹುಮತ ನೀಡಿ ಪ್ರಧಾನಿ ನರೇಂದ್ರ ಮೋದಿ ಅವರ ಕೈಬಲಪಡಿಸಬೇಕು’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಶುಕ್ರವಾರ ಹೇಳಿದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ₹1,400 ಕೋಟಿ ಮೊತ್ತದ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಉದ್ಘಾಟನೆ ಮತ್ತು ವಿವಿಧ ಯೋಜನೆಗಳ ಫಲಾನುಭವಿಗಳ ಸಮಾವೇಶ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ‘ತಮ್ಮ ಭಾಷಣದುದ್ದಕ್ಕೂ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.

‘ದೇಶದಲ್ಲಿ ಕಾಂಗ್ರೆಸ್ ಸಂಪೂರ್ಣ ಸಮಾಪ್ತಿಯಾಗುತ್ತಿದೆ. ಎಲ್ಲ ರಾಜ್ಯಗಳು ಕಾಂಗ್ರೆಸ್ ಮುಕ್ತವಾಗುತ್ತಿವೆ. ಕಾಂಗ್ರೆಸ್‌ಗೆ ಹಣ ನೀಡುವ ಎಟಿಎಂ ಬೇಕು. ಹೀಗಾಗಿಯೇ ಭ್ರಷ್ಟ ಕಾಂಗ್ರೆಸ್ ಪಕ್ಷ ತನ್ನ ಬೊಕ್ಕಸವನ್ನು ಭರ್ತಿ ಮಾಡಿಕೊಳ್ಳಲು ಕರ್ನಾಟಕವನ್ನು ಎಟಿಎಂ ಮಾಡಿಕೊಳ್ಳಲು ಹವಣಿಸುತ್ತಿದೆ’ ಎಂದು ಟೀಕಿಸಿದರು.

‘ಕಾಂಗ್ರೆಸ್ ಸರ್ಕಾರ ರಚಿಸಿರುವ ರಾಜ್ಯಗಳಲ್ಲಿ ಭ್ರಷ್ಟಾಚಾರದ ಇತಿಹಾಸವೇ ಇದೆ. ಜತೆಗೆ, ದೇಶ ವಿರೋಧಿ ಸಂಘಟನೆಗಳಿಗೆ ಬೆಂಬಲ ನೀಡಿದೆ. ದಲಿತರು ಮತ್ತು ಹಿಂದುಳಿದ ವರ್ಗಗಳಿಗೆ ಅವಮಾನ ಮಾಡಲಾಗಿದೆ. ಕರ್ನಾಟಕದಲ್ಲಿ ಸಿದ್ಧರಾಮಯ್ಯ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಪಿಎಫ್‌ಐ ಸಂಘಟನೆ ವಿರುದ್ಧ ದಾಖಲಾಗಿದ್ದ ಮೊಕದ್ದಮೆಗಳನ್ನು ವಾಪಸ್ ಪಡೆದಿತ್ತು. ಆದರೆ, ಪ್ರಧಾನಿ ನರೇಂದ್ರ ಮೋದಿ ಅವರು ಪಿಎಫ್‌ಐ ಸಂಘಟನೆಯನ್ನು ನಿಷೇಧಿಸುವ ಮೂಲಕ ದಕ್ಷಿಣ ಭಾರತಕ್ಕೆ ರಕ್ಷಣೆ ನೀಡಿದರು’ ಎಂದು ಪ್ರತಿಪಾದಿಸಿದರು.

‘ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣಕ್ಕೆ ಕಳೆದ 70 ವರ್ಷಗಳಿಂದಲೂ ಕಾಂಗ್ರೆಸ್ ಅಡ್ಡಿಪಡಿಸಿತ್ತು. ಪ್ರಧಾನಿ ನರೇಂದ್ರ ಮೋದಿ ಅವರೇ ಮಂದಿರ ನಿರ್ಮಾಣಕ್ಕೆ ಶಿಲಾನ್ಯಾಸ ನೆರವೇರಿಸಿದ್ದಾರೆ. ಶೀಘ್ರ ನಿರ್ಮಾಣ ಕಾರ್ಯ ಮುಕ್ತಾಯಗೊಳ್ಳಲಿದೆ’ ಎಂದರು. ‘ಸಮೃದ್ಧ ರಾಷ್ಟ್ರಕ್ಕಾಗಿ ಸಮಗ್ರ ಅಭಿವೃದ್ಧಿ ಎನ್ನುವ ಧ್ಯೇಯದೊಂದಿಗೆ ಶ್ರಮಿಸುತ್ತಿರುವ ಮೋದಿ ಅವರು, ಕಾಶ್ಮೀರದಲ್ಲಿ 370ನೇ ವಿಧಿಯನ್ನು ರದ್ದುಪಡಿಸಿದರು. ಈ ಮೂಲಕ ಭಯೋತ್ಪಾದನೆ ಚಟುವಟಿಕೆಗಳಿಗೂ ಅಂತ್ಯ ಹಾಡಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, ‘ಕರ್ನಾಟಕದಲ್ಲಿ ಪರಿವರ್ತನೆಯ ಗಾಳಿ ಬೀಸುತ್ತಿದೆ. ನವಭಾರತಕ್ಕಾಗಿ ನವ ಕರ್ನಾಟಕ ನಿರ್ಮಾಣವಾಗಬೇಕು. ಈ ನಿಟ್ಟಿನಲ್ಲಿ ಜನಪರವಾದ ಸರ್ಕಾರವನ್ನು ನೀಡಿದ್ದೇವೆ’ ಎಂದರು.

‘ಯಶವಂತಪುರ ಕ್ಷೇತ್ರದಲ್ಲಿ ಜಾತಿ-ಮತ, ಧರ್ಮದ ಆಧಾರದಲ್ಲಿ ಕೆಲವು ರಾಜಕೀಯ ಮುಖಂಡರು ರಾಜಕಾರಣ ಮಾಡುತ್ತಿದ್ದಾರೆ. ಆದರೆ, ಅದು ಇಲ್ಲಿ ನಡೆಯುವುದಿಲ್ಲ. ಎಸ್‌.ಟಿ. ಸೋಮಶೇಖರ್ ಅವರು ಈ ಕ್ಷೇತ್ರದಿಂದ ಆಯ್ಕೆಯಾದ ನಂತರ ಯಶವಂತಪುರದ ನಕ್ಷೆಯೇ ಬದಲಾಗಿದೆ’ ಎಂದು ಹೇಳಿದರು.

ನಗರದ ಕೊಮ್ಮಘಟ್ಟದಲ್ಲಿ ಸಹಕಾರ ಮತ್ತು ಇತರ ಇಲಾಖೆಗಳ ಸಂಯುಕ್ತಾಶ್ರದಲ್ಲಿ ಕಾರ್ಯಕ್ರಮ ನಡೆಯಿತು.

ಬೆಂಗಳೂರಿನಲ್ಲಿ ಶುಕ್ರವಾರ ನಡೆದ ಫಲಾನುಭವಿಗಳ ಸಮಾವೇಶದಲ್ಲಿ ವಿವಿಧ ಯೋಜನೆಗಳಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಚಾಲನೆ ನೀಡಿದರು. ಕೆಎಂಎಫ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ, ಸಹಕಾರ ಸಚಿವ ಎಸ್‌.ಟಿ. ಸೋಮಶೇಖರ್, ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಸಿ. ಸತೀಶ್, ಶಾಸಕ ಬಿ.ಎಸ್. ಯಡಿಯೂರಪ್ಪ ಮತ್ತು ಗೃಹ ಸಚಿವ ಆರಗ ಜ್ಞಾನೇಂದ್ರ ಇದ್ದಾರೆ. –ಪ್ರಜಾವಾಣಿ ಚಿತ್ರ

ಪ್ರಚಾರದ ಕಾರ್ಯಕ್ರಮ

ವಿವಿಧ ಇಲಾಖೆಗಳು ಆಯೋಜಿಸಿದ್ದ ಫಲಾನುಭವಿಗಳ ಸಮಾವೇಶ ಸಂಪೂರ್ಣ ಚುನಾವಣಾ ಕಾರ್ಯಕ್ರಮದ ವೇದಿಕೆಯಾಗಿತ್ತು.

ಯಶವಂತಪುರ ಕ್ಷೇತ್ರದ ಶಾಸಕರೂ ಆಗಿರುವ ಸಚಿವ ಎಸ್‌.ಟಿ. ಸೋಮಶೇಖರ್ ಅವರನ್ನು ಈ ಬಾರಿಯೂ ಬೆಂಬಲಿಸುವಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ, ಶಾಸಕ ಬಿ.ಎಸ್. ಯಡಿಯೂರಪ್ಪ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಮ್ಮ ಭಾಷಣದಲ್ಲಿ ಕೋರಿದರು.

ಶಾ ಬೆನ್ನು ತಟ್ಟಿದ್ದರಿಂದ ಆನೆಬಲ ಬಂದಂತಾಗಿದೆ: ವಿಜಯೇಂದ್ರ

ಬೆಂಗಳೂರು: ಬಿ. ಎಸ್. ಯಡಿಯೂರಪ್ಪ ಅವರ ಕಾವೇರಿ ನಿವಾಸಕ್ಕೆ ಶುಕ್ರವಾರ ಉಪಾಹಾರಕ್ಕೆ ಬಂದಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿ.ವೈ. ವಿಜಯೇಂದ್ರ ಅವರಿಂದಲೇ ಹೂಗುಚ್ಛ ಪಡೆದು ಬಳಿಕ ತಬ್ಬಿಕೊಂಡು ಬೆನ್ನು ತಟ್ಟಿದ್ದಾರೆ. ಶಾ ಅವರ ಈ ನಡೆ ಕುತೂಹಲ ಮತ್ತು ಚರ್ಚೆ ಹುಟ್ಟುಹಾಕಿದೆ.

ಯಡಿಯೂರಪ್ಪ ಅವರ ಆಹ್ವಾನದಿಂದಾಗಿ ಬೆಳಿಗ್ಗೆ 9:40ರ ವೇಳೆಗೆ ಶಾ ಅವರು ಕಾವೇರಿ ನಿವಾಸಕ್ಕೆ ಬಂದಿದ್ದರು. ಕಾರಿನಿಂದ ಅವರು ಇಳಿಯುತ್ತಿದ್ದಂತೆ, ಯಡಿಯೂರಪ್ಪ ಹೂಗುಚ್ಛ ನೀಡಲು ಮುಂದಾಗಿದ್ದರು. ಆದರೆ, ಆಗ ಆ ಹೂಗುಚ್ಛ ವಿಜಯೇಂದ್ರ ಕೈಗೆ ಕೊಡುವಂತೆ ಶಾ ಸೂಚಿಸಿದರು ಯಡಿಯೂರಪ್ಪ ಮೊದಲು ಗೊಂದಲಕ್ಕೆ ಒಳಗಾದರೂ, ಕೂಡಲೇ ವಿಜಯೇಂದ್ರ ಕೈಗೆ ತಮ್ಮ ಕೈಯಲ್ಲಿದ್ದ ಹೂಗುಚ್ಛ ನೀಡಿದರು. ವಿಜಯೇಂದ್ರ ಕೈಯಿಂದ ಹೂಗುಚ್ಛ ಸ್ವೀಕರಿಸಿದ ಶಾ, ನಗುತ್ತಾ ಅವರನ್ನು ತಬ್ಬಿಕೊಂಡಿದ್ದಲ್ಲದೇ ಬೆನ್ನು ತಟ್ಟಿ ಫೋಟೋಗೆ ಪೋಸ್ ಕೊಟ್ಟರು. ಶಾ ಅವರ ಈ ನಡೆಗೆ ಒಂದು ಕ್ಷಣ ಅಲ್ಲಿದ್ದವರೆಲ್ಲ ಗಲಿಬಿಲಿಗೊಂಡರು.

ಶಾ ಹೀಗೇಕೆ ಮಾಡಿದರು? ಇದು ಯಾರಿಗೆ ಸಂದೇಶ? ಮುಂದಿನ ಸಂಭಾವ್ಯ ವಿದ್ಯಮಾನಗಳಿಗೆ ಕೊಟ್ಟ ಸುಳಿವೇ? ಎಂದು ಬಿಜೆಪಿ ವಲಯದಲ್ಲಿ ಭಾರಿ ಚರ್ಚೆ ನಡೆಯುತ್ತಿದೆ. ಶಾ ನಡೆ ಬಗ್ಗೆ ಹಲವು ರೀತಿಯ ತರ್ಕ, ವಿಶ್ಲೇಷಣೆಗಳು ನಡೆಯುತ್ತಿವೆ.

ಬಳಿಕ ಮಾತಾಡಿದ ವಿಜಯೇಂದ್ರ, ‘ಅಮಿತ್ ಶಾ ಅವರು ನನ್ನ ಬೆನ್ನು ತಟ್ಟಿ ಮಾತಾಡಿಸಿದ್ದು ಆನೆ ಬಲ ಬಂದಂತಾಗಿದೆ’ ಎಂದರು.

‘ಕೆಲಸದ ಒತ್ತಡದ ನಡುವೆಯೂ ಬಿಡುವು ಮಾಡುಕೊಂಡು ಶಾ ಬಂದಿದ್ದರು. ಮನೆಯಲ್ಲಿ ಎಲ್ಲ ನಾಯಕರು ಚುನಾವಣೆ ಎದುರಿಸುವ ಕುರಿತು ಸಮಾಲೋಚನೆ ನಡೆಸಿದರು. ಕೇಂದ್ರ, ರಾಜ್ಯ ಸರ್ಕಾರದ ಯೋಜನೆ ಮನೆ ಮನೆಗೆ ತಲುಪಿಸುವ ಮೂಲಕ ರಾಜ್ಯದಲ್ಲಿ ಮತ್ತೊಮ್ಮೆ ಅಧಿಕಾರಕ್ಕೆ ಬರಬೇಕು ಎಂದು ಚರ್ಚೆ ನಡೆಸಲಾಯಿತು. ರಾಜಕಾರಣ ಬಿಟ್ಟು ಬೇರೆ ಏನೂ ಚರ್ಚೆ ಆಗಿಲ್ಲ. ಆಗಲು ಸಾಧ್ಯವೂ ಇಲ್ಲ’ ಎಂದರು.

ದಾವಣಗೆರೆ: ಇಂದು ‘ವಿಜಯ ಸಂಕಲ್ಪ’ ಸಮಾರೋಪ

ಬಿಜೆಪಿ ಶಕ್ತಿ ಪ್ರದರ್ಶನಕ್ಕೆ ಸಜ್ಜು

ದಾವಣಗೆರೆ: ಚುನಾವಣೆಗೆ ಸಿದ್ಧತೆಯಾಗಿ ಬಿಜೆಪಿ ರಾಜ್ಯದ ನಾಲ್ಕು ಕಡೆಯಿಂದ ಮಾರ್ಚ್ 1ರಂದು ಆರಂಭಿಸಿದ್ದ ‘ವಿಜಯ ಸಂಕಲ್ಪ ಯಾತ್ರೆ’ಯ ಸಮಾರೋಪಕ್ಕೆ ದಾವಣಗೆರೆ ಸಿದ್ಧವಾಗಿದೆ. ಶನಿವಾರ ಮಧ್ಯಾಹ್ನ 3ಕ್ಕೆ ನಡೆವ ‘ಮಹಾಸಂಗಮ’ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಸೇರಿ ಹಲವು ಮುಖಂಡರು ಭಾಗವಹಿಸುವರು.

ಇಲ್ಲಿನ ಜಿಎಂಐಟಿ ಸಂಸ್ಥೆ ಬಳಿ 400 ಎಕರೆ ವಿಸ್ತೀರ್ಣದಲ್ಲಿ ಬೃಹತ್ ಪೆಂಡಾಲ್ ಹಾಕಿದ್ದು, ಅಂದಾಜು 2 ಲಕ್ಷ ಜನರಿಗೆ ಆಸನದ ವ್ಯವಸ್ಥೆ ಮಾಡಲಾಗಿದೆ. ವಿವಿಧೆಡೆಯಿಂದ ಜನರನ್ನು ಕರೆತರಲು ಸಾರಿಗೆ ಸಂಸ್ಥೆಯ 10,000 ಬಸ್ ಹಾಗೂ ಸಾವಿರಾರು ಖಾಸಗಿ ವಾಹನಗಳ ವ್ಯವಸ್ಥೆ ಮಾಡಲಾಗಿದೆ.

ಕಳೆದ ವರ್ಷದ ಆಗಸ್ಟ್ 3ರಂದು ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಅವರ 75ನೇ ಜನ್ಮದಿನದ ಅದ್ಧೂರಿ ಸಮಾರಂಭ ಇಲ್ಲಿ ನಡೆದಿದ್ದು, ಲಕ್ಷಾಂತರ ಜನ ಸೇರಿದ್ದರು. ಆ ಕಾರ್ಯಕ್ರಮವನ್ನು ಮೀರಿಸುವಂತೆ ಶನಿವಾರದ ‘ಮಹಾಸಂಗಮ’ ಆಯೋಜಿಸುವ ಇರಾದೆಯನ್ನು ಬಿಜೆಪಿ ಮುಖಂಡರು ವ್ಯಕ್ತಪಡಿಸಿದ್ದಾರೆ.

ಪ್ರಧಾನ ವೇದಿಕೆಯಲ್ಲಿ ಮೋದಿ ಅವರ ಜತೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಪಕ್ಷದ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ಕೇಂದ್ರ ಸಚಿವರಾದ ಧರ್ಮೇಂದ್ರ ಪ್ರಧಾನ್, ಪ್ರಲ್ಹಾದ್ ಜೋಶಿ, ಶೋಭಾ ಕರಂದ್ಲಾಜೆ, ಭಗವಂತ್ ಖೂಬಾ, ಎ.ನಾರಾಯಣ ಸ್ವಾಮಿ ಸಹಿತ ಪ್ರಮುಖರು ಆಸೀನರಾಗುವರು.

ವಿಧಾನಸಭೆಯ ಚುನಾವಣೆ ಘೋಷಣೆ ಸಾಧ್ಯತೆ ಹಿನ್ನೆಲೆಯಲ್ಲಿ ಬಿಜೆಪಿ ಶಕ್ತಿ ಪ್ರದರ್ಶನಕ್ಕೆ ಪೂರ್ವಭಾವಿಯಾಗಿ ಸಮಾವೇಶ ಆಯೋಜಿಸಿದ್ದು, ದಾವಣಗೆರೆ ನಗರ ಕೇಸರಿಮಯವಾಗಿದೆ.

ಸಭಿಕರ ನಡುವೆ ಮೋದಿ: ಪ್ರಧಾನಿ ಮೋದಿ ‘ರೋಡ್ ಶೋ’ ಬದಲಿಗೆ ಪೆಂಡಾಲ್‌ನಲ್ಲಿ ಜನರ ನಡುವೆಯೇ ತೆರೆದ ವಾಹನದಲ್ಲಿ ಕೈಬೀಸುತ್ತ ವೇದಿಕೆಗೆ ಬರಲಿದ್ದಾರೆ.

ಸಭಿಕರಿಗೆ ಆರ್‌ಟಿಪಿಸಿಆರ್ ಪರೀಕ್ಷೆ

ಚಿಕ್ಕಬಳ್ಳಾಪುರ: ಪ್ರಧಾನಿ ನರೇಂದ್ರ ಮೋದಿ ಅವರು ತಾಲ್ಲೂಕಿನ ಮುದ್ದೇನಹಳ್ಳಿಯ ಸತ್ಯಸಾಯಿ ಗ್ರಾಮಕ್ಕೆ ಶನಿವಾರ ಭೇಟಿ ನೀಡಲಿದ್ದಾರೆ. ವೇದಿಕೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಸತ್ಯಸಾಯಿ ಸಂಸ್ಥೆ ವಿದ್ಯಾರ್ಥಿಗಳು, ಸಿಬ್ಬಂದಿ, ಕರ್ತವ್ಯಕ್ಕೆ ನಿಯೋಜಿತರಾಗಿರುವ ಪೊಲೀಸರು, ವಿವಿಧ ಇಲಾಖೆಗಳ ಅಧಿಕಾರಿಗಳು, ಮಾಧ್ಯಮದವರು ಸೇರಿದಂತೆ 1,500 ಮಂದಿಗೆ ಶುಕ್ರವಾರ ಆರ್‌ಟಿಪಿಸಿಆರ್ ಪರೀಕ್ಷೆ ಮಾಡಿಸಲಾಗಿದೆ.

ಮಧುಸೂದನ ಸಾಯಿ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಕಾಲೇಜು, ಸತ್ಯಸಾಯಿ ರಾಜೇಶ್ವರಿ ಭವನವನ್ನು ಪ್ರಧಾನಿ ಅವರು ಬೆಳಿಗ್ಗೆ 10.45ಕ್ಕೆ ಪ್ರಧಾನಿ ಉದ್ಘಾಟಿಸುವರು. ನಂತರ ಸತ್ಯಸಾಯಿ ಪ್ರೇಮಾಮೃತ ಸಭಾಂಗಣದ ವೇದಿಕೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.

ಬೆಳಿಗ್ಗೆ 10.45ಕ್ಕೆ ಸತ್ಯಸಾಯಿ ಗ್ರಾಮದ ಹೆಲಿಪ್ಯಾಡ್‌ಗೆ ಪ್ರಧಾನಿ ಬರಲಿದ್ದಾರೆ. ಕಾರ್ಯಕ್ರಮದ ಬಳಿಕ ಮಧ್ಯಾಹ್ನ 12.05ಕ್ಕೆ ಇಲ್ಲಿಂದ ಬೆಂಗಳೂರಿಗೆ ಪ್ರಯಾಣ ಬೆಳೆಸಲಿದ್ದಾರೆ.

₹32.20 ಲಕ್ಷ ನಗದು, 60ಗ್ರಾಂ ಚಿನ್ನ ವಶ

ವಿಜಯಪುರ: ನಗರದ ಹೊರಭಾಗದ ಜಮಖಂಡಿ ರಸ್ತೆಯಲ್ಲಿ ಕಾರಿನಲ್ಲಿ ದಾಖಲಾತಿ ಇಲ್ಲದೇ ಸಾಗಿಸುತ್ತಿದ್ದ ₹10.30 ಲಕ್ಷ ನಗದು 60 ಗ್ರಾಂ ಚಿನ್ನವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ನರೇಂದ್ರ ಎಂಬವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಜಿಲ್ಲೆಯ ವಿವಿಧೆಡೆ ಕಾರ್ಯಾಚರಣೆ ನಡೆದಿದ್ದು, ಹಣ, ಹೆಂಡ, ಚಿನ್ನ ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

₹ 10 ಲಕ್ಷ ವಶ: ಮುದ್ದೇಬಿಹಾಳ ತಾಲ್ಲೂಕಿನ ತಂಗಡಗಿ ಚೆಕ್ ಪೋಸ್ಟ್ ಬಳಿ ಖಾಸಗಿ ಸೊಸೈಟಿ ಮ್ಯಾನೇಜರ್ ಬಸಪ್ಪ ಹಡಗಲಿ ಅವರಿಂದ ಸೂಕ್ತ ದಾಖಲೆಗಳಿಲ್ಲದ ₹ 10 ಲಕ್ಷವನ್ನು ಪೊಲೀಸರು ವಶಕ್ಕೆ ಪಡೆದರು.

ಮಹಾರಾಷ್ಟ್ರ –ಕರ್ನಾಟಕ ಗಡಿಯ ಝಳಕಿ ಚೆಕ್ ಪೋಸ್ಟ್‌ನಲ್ಲಿ ಸೋಲಾಪುರದಿಂದ ಕರ್ನಾಟಕಕ್ಕೆ ಕಾರಿನಲ್ಲಿ ಸಾಗಿಸುತ್ತಿದ್ದ ₹ 2 ಲಕ್ಷ ನಗದು ಮತ್ತು 30 ಲೀಟರ್ ಮದ್ಯ ವಶ ಪಡಿಸಿಕೊಳ್ಳಲಾಗಿದೆ. ಯಲಗೂರ ಕ್ರಾಸ್ ಬಳಿ ಚೆಕ್ ಪೋಸ್ಟ್ ಹತ್ತಿರ ₹1.5 ಲಕ್ಷ ನಗದು ಅನ್ನು ವಶಕ್ಕೆ ಪಡೆಯಲಾಗಿದೆ.

ಗದಗ ವರದಿ: ದಾಖಲೆ ಇಲ್ಲದೇ ಸಾಗಿಸುತ್ತಿದ್ದ ₹1.90 ಲಕ್ಷವನ್ನು ಲಕ್ಷ್ಮೇಶ್ವರ ಠಾಣೆ ಪೊಲೀಸರು ಜಪ್ತಿ ಮಾಡಿದ್ದಾರೆ. ಆಂಧ್ರಪ್ರದೇಶದ ಅನಂತಪುರದಿಂದ ಧಾರವಾಡ ಜಿಲ್ಲೆಯ ಗುಡಗೇರಿಗೆ ತೆರಳುತ್ತಿದ್ದ ಕಾರಿನ ತಪಾಸಣೆ ನಡೆಸಿದಾಗ ಹಣ ಪತ್ತೆಯಾಗಿದೆ.

ಬಳ್ಳಾರಿ –₹ 5.50 ಲಕ್ಷ ನಗದು, 2,200 ಸೀರೆಗಳ ವಶ : ಸಿರುಗುಪ್ಪ ತಾಲ್ಲೂಕಿನ ವತ್ತುಮುರಣಿ ಚೆಕ್‌ಪೋಸ್ಟ್‌ನಲ್ಲಿ ಸುಬ್ಬಾರೆಡ್ಡಿ ಎಂಬುವವರಿಂದ ₹ 5.50 ಲಕ್ಷ ನಗದು ವಶಪಡಿಸಿಕೊಳ್ಳಲಾಗಿದೆ. ‘ನಗರದ ಮೀನಾಕ್ಷಿ ವೃತ್ತದ ಬಳಿ ₹ 5.30 ಲಕ್ಷ ಮೌಲ್ಯದ 2,200 ಸೀರೆ ವಶಕ್ಕೆ ಪಡೆಯಲಾಗಿದೆ’ ಎಂದು ಎಸ್ಪಿ ರಂಜಿತ್ ಕುಮಾರ್ ಬಂಡಾರು ತಿಳಿಸಿದರು.

ಕುಡುತಿನಿಯಲ್ಲಿ ₹ 10 ಸಾವಿರ ಮೌಲ್ಯದ 41 ಸೀರೆ, ಸಿರಿಗೇರಿ ಸಮೀಪ ಮಾಟಸುಗೂರು ಚೆಕ್‌ಪೋಸ್ಟ್ ಬಳಿ ₹ 1.36 ಲಕ್ಷ ಮೌಲ್ಯದ 643 ಸೀರೆಗಳನ್ನು ವಶಪಡಿಸಿಕೊಳ್ಳಲಾಗಿದೆ. ವಿವಿಧೆಡೆಗಳಲ್ಲಿ ₹ 4 ಲಕ್ಷ ಮೌಲ್ಯದ ಮದ್ಯ, ₹ 5 ಲಕ್ಷ ಮೌಲ್ಯದ ಐದು ಕೆ.ಜಿ ಗಾಂಜಾ ಜಪ್ತಿ ಮಾಡಲಾಗಿದೆ’ ಎಂದರು.

ಮದ್ಯ ಜಪ್ತಿ (ಬೀದರ್ ವರದಿ): ಪ್ರತ್ಯೇಕ ಪ್ರಕರಣದಲ್ಲಿ ಅಬಕಾರಿ ಇಲಾಖೆ ಅಧಿಕಾರಿಗಳು ₹ 10 ಲಕ್ಷ ಮೌಲ್ಯದ ಮದ್ಯ,4 ಲಕ್ಷ ನಗದು ವಶಪಡಿಸಿಕೊಂಡು ಇಬ್ಬರನ್ನು ಬಂಧಿಸಲಾಗಿದೆ.

ವರುಣಾ ಸೇರಿ 2 ಕಡೆ ಸ್ಪರ್ಧೆ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ/ಬಾಗಲಕೋಟೆ: ‘ವಿಧಾನಸಭೆಗೆ ಮೈಸೂರಿನ ವರುಣಾ ಸೇರಿದಂತೆ ರಾಜ್ಯದ ಎರಡು ಕ್ಷೇತ್ರಗಳಿಂದ ಸ್ಪರ್ಧಿಸಲು ಕುಟುಂಬದ ಸದಸ್ಯರು ಸಲಹೆ ನೀಡಿದ್ದಾರೆ. ವರುಣಾದಿಂದ ಟಿಕೆಟ್ ನೀಡಲು ಹೈಕಮಾಂಡ್ ಅನ್ನು ಕೋರಿದ್ದೇನೆ’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತಿಳಿಸಿದರು.

ಬಾದಾಮಿಗೆ ತೆರಳುವ ಮುನ್ನ ಚಿತ್ರದುರ್ಗದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಚಿತ್ರದುರ್ಗ ಸೇರಿ ರಾಜ್ಯದ 25 ಕ್ಷೇತ್ರಗಳಿಂದ ಮುಖಂಡರು ಸ್ಪರ್ಧೆಗೆ ಆಹ್ವಾನಿಸಿದ್ದಾರೆ. ನಾನು ವರುಣಾ ಕ್ಷೇತ್ರದಿಂದ ಟಿಕೆಟ್ ಕೇಳಿದ್ದು, ಈ ಕುರಿತ ನಿರ್ಧಾರ ಹೈಕಮಾಂಡ್‌ಗೆ ಬಿಟ್ಟದ್ದು’ ಎಂದು ತಿಳಿಸಿದರು.

ಬಾಗಲಕೊಟೆ ಜಿಲ್ಲೆಯ ಬಾದಾಮಿಯಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಸಂಜೆ ಚಾಲನೆ ನೀಡಿದ ಅವರು, ‘ಬಾದಾಮಿಯಲ್ಲಿ ಸ್ಪರ್ಧಿಸಿ ಎಂದು ಹೈಕಮಾಂಡ್ ಹೇಳಿದರೆ ಸ್ಪರ್ಧಿಸುತ್ತೇನೆ’ ಎಂದರು.

‘ವರುಣಾ, ಬಾದಾಮಿ ಎರಡೂ ಕಡೆ ಸ್ಪರ್ಧಿಸಿ’ ಎಂದು ಅಭಿಮಾನಿಗಳು ಆಗ್ರಹಿಸಿದರು. ‘ಆಗ, ಎರಡು ಕಡೆ ಸ್ಪರ್ಧಿಸುವ ಇಂಗಿತವನ್ನು ಹೈಕಮಾಂಡ್ ಗಮನಕ್ಕೆ ತರುತ್ತೇನೆ’ ಎಂದು ಸಿದ್ದರಾಮಯ್ಯ ಭರವಸೆ ನೀಡಿದರು.

‘ನೀವು ಚಾಲುಕ್ಯರ ನಾಡಿನಿಂದಲೇ ಗೆದ್ದು ಮುಖ್ಯಮಂತ್ರಿ ಆಗಬೇಕು’ ಎಂದು ಬೆಂಬಲಿಗರು ಆಗ್ರಹಿಸಿದಾಗ, ‘ನಾನು ಮುಖ್ಯಮಂತ್ರಿ ಆಗಲು ಮೊದಲು ನೀವು ಕಾಂಗ್ರೆಸ್ ಪಕ್ಷವನ್ನು ಆಶೀರ್ವದಿಸಬೇಕು. ನಾನು ಇಲ್ಲಿಂದ ಸ್ಪರ್ಧಿಸಲಿ, ಬಿಡಲಿ, ಎಂದೆಂದಿಗೂ ನಿಮ್ಮವನೇ. ನೀವು ನಮ್ಮವರು’ ಎಂದು ಭಾವುಕರಾದರು.

‘ಚಾಮುಂಡೇಶ್ವರಿಯಲ್ಲಿ ಐದು ಬಾರಿ ಗೆದ್ದು ಅಭಿವೃದ್ಧಿಪಡಿಸಿದ್ದರೂ ಅಲ್ಲಿನವರು ಕೈಬಿಟ್ಟರು. ನೀವು ಕೈಹಿಡಿದು ರಾಜಕೀಯ ಶಕ್ತಿ ತುಂಬಿದಿರಿ. ಬಾದಾಮಿ ಕ್ಷೇತ್ರದ ಜನರಿಗೆ ಕೋಟಿ ನಮನಗಳು. ಜೀವನದಲ್ಲಿ ನಿಮ್ಮನ್ನು ಮರೆಯಲು ಸಾಧ್ಯವಿಲ್ಲ. ಎಷ್ಟೇ ಕೆಲಸ ಮಾಡಿದರೂ ಋಣ ತೀರಿಸಲಾಗದು’ ಎಂದು ಹೇಳಿದರು.

ಸಿದ್ದರಾಮಯ್ಯ ಮಾತನಾಡುವಾಗ, ‘ಬಾದಾಮಿಯಿಂದಲೇ ಸ್ಪರ್ಧಿಸಬೇಕು’ ಎಂಬ ಕೂಗು ಜೋರಾಯಿತು. ಕೆಲ ಮುಖಂಡರು ವೇದಿಕೆಯೇರಿ, ಕುಳಿತು ಒತ್ತಾಯಿಸಿದರು. ‘ನೀವು ಸುಮ್ಮನಿರದಿದ್ದರೆ, ಭಾಷಣ ನಿಲ್ಲಿಸಬೇಕಾಗುತ್ತದೆ’ ಎಂದು ಅವರನ್ನು ಸಿದ್ದರಾಮಯ್ಯ ಗದರಿದರು. ಕೊನೆಯಲ್ಲಿ ಅಭಿಮಾನಿಯೊಬ್ಬರು ಕೈ ಕುಯ್ದುಕೊಳ್ಳಲು ಮುಂದಾದಾಗ ಪೊಲೀಸರು ತಡೆದರು.

‘ರಕ್ತದಲ್ಲಿ ಪತ್ರ ಬರೆದು ಒತ್ತಾಯ’: ‘ಬಾದಾಮಿಯಿಂದ ಸ್ಪರ್ಧಿಸಬೇಕು. ಇಲ್ಲದಿದ್ದರೆ, ಆತ್ಮಹತ್ಯೆ ಮಾಡಿಕೊಳ್ಳುವೆ. ಅದಕ್ಕೆ ನೀವು ಮತ್ತು ಹೊಳೆಬಸು ಶೆಟ್ಟರ್ ಹೊಣೆ. ನನ್ನ ಕುಟುಂಬವನ್ನು ಚೆನ್ನಾಗಿ ನೋಡಿಕೊಳ್ಳಿ’ ಎಂದು ಗುಳೇದಗುಡ್ಡ ಪುರಸಭೆ ಸದಸ್ಯೆ ವಂದನಾ ಗೋಪಾಲ ಭಟ್ಟದ ರಕ್ತದಲ್ಲಿ ಬರೆದಿರುವ ಪತ್ರವನ್ನು ಸಿದ್ದರಾಮಯ್ಯ ಅವರಿಗೆ ನೀಡಿದರು.

ಬಾದಾಮಿಯಿಂದಲೇ ಸ್ಪರ್ಧಿಸಿ ಎಂದು ಆಗ್ರಹಪಡಿಸಿದ ಬೆಂಬಲಿಗರಿಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕೈಮುಗಿದು ಶಾಂತರಾಗಲು ಮನವಿ ಮಾಡಿದರು

ವರುಣಾದಿಂದ ಸ್ಪರ್ಧೆ: ವರಿಷ್ಠರ ವಿವೇಚನೆಗೆ –ವಿಜಯೇಂದ್ರ

ಮೈಸೂರು: ‘ವರುಣಾ ಕ್ಷೇತ್ರದಲ್ಲಿ ನಾನು ಸ್ಪರ್ಧಿಸುವ ಕುರಿತು ಅಮಿತ್ ಶಾ ಅವರೊಂದಿಗೆ ಚರ್ಚಿಸಿಲ್ಲ. ಸ್ಪರ್ಧೆ ಬಗ್ಗೆ ರಾಜ್ಯ, ರಾಷ್ಟ್ರೀಯ ನಾಯಕರು ನಿರ್ಧರಿಸುತ್ತಾರೆ’ ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಶುಕ್ರವಾರ ತಿಳಿಸಿದರು.

‘ಕಾರ್ಯಕರ್ತರ ಒತ್ತಾಯದ ಮೇರೆಗೆ ಶಿಕಾರಿಪುರ ಕ್ಷೇತ್ರದಲ್ಲಿ ಪ್ರಚಾರ ಆರಂಭಿಸಿದ್ದೇನೆ. ಮೋರ್ಚಾಗಳ ಸಮಾವೇಶದ ಸಂಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ’ ಎಂದು ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

‘ಅಮಿತ್ ಶಾ ಅವರು ಮನೆಗೆ ಉಪಾಹಾರಕ್ಕೆ ಬಂದಿದ್ದ ವೇಳೆ, ವರುಣಾ ಸೇರಿದಂತೆ ಕೆಲವು ಕ್ಷೇತ್ರಗಳ ಬಗ್ಗೆ ಗಂಭೀರವಾಗಿ ಚರ್ಚಿಸಿದರು. ಎಷ್ಟು ಜಿಲ್ಲೆಗಳಿಗೆ ಹೋಗಿದ್ದೀಯಾ ಎಂದು ಕೇಳಿದ್ದರು. ಆ ಬಗ್ಗೆ ವರದಿ ನೀಡಿರುವೆ. ಫಲಾನುಭವಿಗಳ ಸಮಾವೇಶ, ವಿಜಯಸಂಕಲ್ಪ ಯಾತ್ರೆ ಬಗ್ಗೆ ಅವರಿಗೆ ತೃಪ್ತಿ ಇದೆ’ ಎಂದರು.

ಟಿಕೆಟ್ ಬೇಡಿಕೆ ವೇಳೆ ತಳ್ಳಾಟ: ಕಾರ್ಯಕರ್ತನಿಗೆ ಕಪಾಳಮೋಕ್ಷ

ಬೆಂಗಳೂರು: ಟಿಕೆಟ್ ಆಕಾಂಕ್ಷಿಗಳ ಬೆಂಬಲಿಗರು ಜಮಾಯಿಸಿದ್ದ ವೇಳೆ ಉಂಟಾದ ತಳ್ಳಾಟ ಕಂಡು ಸಿಟ್ಟಿಗೆದ್ದ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕಾರ್ಯಕರ್ತರೊಬ್ಬರಿಗೆ ಕಪಾಳಮೋಕ್ಷ ಮಾಡಿದ ಘಟನೆ ಶುಕ್ರವಾರ ನಡೆಯಿತು.

ಟಿಕೆಟ್‌ಗಾಗಿ ಲಾಬಿ ನಡೆಸಲು ಹರಿಹರ ಕ್ಷೇತ್ರದ ಶಾಸಕ ರಾಮಪ್ಪ ಮತ್ತು ರಾಣೆಬೆನ್ನೂರು ಕ್ಷೇತ್ರದ ಟಿಕೆಟ್ ಆಕಾಂಕ್ಷಿ, ವಿಧಾನಪರಿಷತ್ ಬಿಜೆಪಿ ಸದಸ್ಯ ಆರ್. ಶಂಕರ್ ಬೆಂಬಲಿಗರು ಶಿವಾನಂದ ಸರ್ಕಲ್ ಬಳಿ ಇರುವ ಸಿದ್ದರಾಮಯ್ಯ ಅವರ ಮನೆ ಬಳಿ ಜಮಾಯಿಸಿದ್ದರು. ರಾಮಪ್ಪ ಅವರಿಗೆ ಟಿಕೆಟ್ ಕೈ ತಪ್ಪುವ ಸಾಧ್ಯತೆ ಹಿನ್ನೆಲೆಯಲ್ಲಿ ಅವರ ಬೆಂಬಲಿಗರು ಜಮಾಯಿಸಿ ಟಿಕೆಟ್ ನೀಡುವಂತೆ ಆಗ್ರಹಿಸಿದರು. ಮತ್ತೊಂದು ಕಡೆ ಆರ್. ಶಂಕರ್ ಬೆಂಬಲಿಗರು ಕೂಡಾ ಇದ್ದರು. ಸಿದ್ದರಾಮಯ್ಯ ಅಲ್ಲಿಗೆ ಬರುತ್ತಿದ್ದಂತೆ ತಳ್ಳಾಟ ಉಂಟಾಗಿತ್ತು.

ಆರ್. ಶಂಕರ್ ಬೆಂಬಲಿಗರು ಸಿದ್ದರಾಮಯ್ಯ ಮನೆಗೆ ಬಂದಿರುವುದು ಕುತೂಹಲ ಕೆರಳಿಸಿದೆ. ಕಾಂಗ್ರೆಸ್ ಸೇರಲು ಶಂಕರ್ ಯತ್ನಿಸುತ್ತಿದ್ದು, ಅದಕ್ಕೆ ಸಿದ್ದರಾಮಯ್ಯ ವಿರೋಧ ವ್ಯಕ್ತಪಡಿಸಿದ್ದಾರೆ ಎಂಬ ಮಾಹಿತಿಯಿದೆ. ಈ ನಡುವೆ ಅವರ ಬೆಂಬಲಿಗರು ಸಿದ್ದರಾಮಯ್ಯ ಮನೆಯಲ್ಲಿ ಜಮಾಯಿಸಿ ಟಿಕೆಟ್‌ಗಾಗಿ ಬೇಡಿಕೆ ಇಟ್ಟಿದ್ದಾರೆ. ಘಟನೆಯ ವಿಡಿಯೊ ತುಣುಕು ಹಂಚಿಕೊಂಡ ಬಿಜೆಪಿ: ಕಾರ್ಯಕರ್ತನಿಗೆ ಸಿದ್ದರಾಮಯ್ಯ ಕಪಾಳಮೋಕ್ಷ ಮಾಡಿರುವ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡು ಬಿಜೆಪಿ ಟ್ವೀಟ್ ಮಾಡಿದೆ. ಶಾದಿ ಭಾಗ್ಯದ ನಾಯಕ ಸಿದ್ದರಾಮಯ್ಯ ಅವರಿಂದ ಕಪಾಳಮೋಕ್ಷ ಭಾಗ್ಯ ಎಂದು ಕುಟುಕಿದೆ.

ಸಂಕ್ಷಿಪ್ತ ಸುದ್ದಿ

ಎಡಿಎಲ್‌ಆರ್ ಲೋಕಾಯುಕ್ತ ಬಲೆಗೆ

ಆಲೂರು (ಹಾಸನ): ಜಮೀನು ದಾಖಲೆ ಸರಿಪಡಿಸುವ ಕಡತ ವಿಲೇವಾರಿಗೆ ₹ 30 ಸಾವಿರ ಲಂಚ ಪಡೆಯುತ್ತಿದ್ದ ಭೂ ದಾಖಲೆ ಇಲಾಖೆಯ ಸಹಾಯಕ ನಿರ್ದೇಶಕ ಆರ್.ಗೋಪಾಲ್ ಅವರನ್ನು ಶುಕ್ರವಾರ ಲೋಕಾಯುಕ್ತ ಪೊಲೀಸರು ಬಂಧಿಸಿದರು.

ಅಂತೋಣಿಸ್ವಾಮಿ ಎಂಬುವವರು ಸಲ್ಲಿಸಿದ್ದ ಅರ್ಜಿಯ ಕಡತ ವಿಲೇವಾರಿ ಮಾಡಲು ಅಧಿಕಾರಿ ಲಂಚ ಕೇಳಿದ್ದರು. ಸ್ವಾಮಿ ಪೊಲೀಸರಿಗೆ ದೂರು ನೀಡಿದ್ದರು.

27ರ ನಂತರ ರಾಜೀನಾಮೆ: ಶ್ರೀನಿವಾಸ್

ಗುಬ್ಬಿ (ತುಮಕೂರು ಜಿಲ್ಲೆ): ’ಶಾಸಕ ಸ್ಥಾನಕ್ಕೆ ಮಾರ್ಚ್ 27ರ ನಂತರ ಸ್ಪೀಕರ್ ಅವರನ್ನು ಭೇಟಿಯಾಗಿ ರಾಜೀನಾಮೆ ಸಲ್ಲಿಸುತ್ತೇನೆ’ ಎಂದು ಜೆಡಿಎಸ್‌ನ ಉಚ್ಚಾಟಿತ ಶಾಸಕ ಎಸ್.ಆರ್. ಶ್ರೀನಿವಾಸ್ ತಿಳಿಸಿದ್ದಾರೆ.

ರಾಜ್ಯಸಭೆ ಚುನಾವಣೆಯಲ್ಲಿ ಪಕ್ಷ ಸೂಚಿಸಿದವರಿಗೆ ಮತದಾನ ಮಾಡಿಲ್ಲ ಎಂದು ಜೆಡಿಎಸ್ ಉಚ್ಚಾಟಿಸಿತ್ತು. ಕಾಂಗ್ರೆಸ್ ಬಗ್ಗೆ ಒಲವು ಹೊಂದಿದ್ದ ಅವರು ಭಾರತ್ ಜೋಡೊ ಯಾತ್ರೆಯಲ್ಲೂ ಭಾಗವಹಿಸಿದ್ದರು.

ಈ ಮೊದಲು 2022ರ ಡಿಸೆಂಬರ್ ವೇಳೆಗೆ ರಾಜೀನಾಮೆ ನೀಡುವುದಾಗಿ ಹೇಳಿದ್ದರು. ನಂತರ ಅಧಿವೇಶನ ಮುಗಿದ ನಂತರ ನಿರ್ಧರಿಸುವುದಾಗಿ ತಿಳಿಸಿದ್ದರು. ಈಗ 27ರ ನಂತರ ನೀಡುವುದಾಗಿ ಪ್ರಕಟಿಸಿದ್ದಾರೆ.

ಮಮತಾ–ಕುಮಾರಸ್ವಾಮಿ ಚರ್ಚೆ

ಕೋಲ್ಕತ್ತ (ಪಿಟಿಐ): ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್. ಡಿ.ಕುಮಾರಸ್ವಾಮಿ ಅವರು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು ಶುಕ್ರವಾರ ಇಲ್ಲಿ ಭೇಟಿ ಮಾಡಿದರು.

ಕರ್ನಾಟಕದಲ್ಲಿ ನಡೆಯಲಿರುವ ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್ ಪರವಾಗಿ ಪ್ರಚಾರ ನಡೆಸುವಂತೆ ಮಮತಾ ಅವರಲ್ಲಿ ಕುಮಾರಸ್ವಾಮಿ ಮನವಿ ಮಾಡಿದ್ದಾರೆ.

‘ಉಭಯ ನಾಯಕರು ದೇಶದ ಪ್ರಸ್ತುತ ರಾಜಕೀಯ ಪರಿಸ್ಥಿತಿ ಹಾಗೂ 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ವಿರುದ್ಧದ ಹೋರಾಟದ ಕುರಿತು ಚರ್ಚಿಸಿದ್ದಾರೆ’ ಎಂದು ಟಿಎಂಸಿ ಮೂಲಗಳು ಹೇಳಿವೆ.

ಕೆ.ಆರ್.ಪೇಟೆ: ದೇವರಾಜು ಕಾಂಗ್ರೆಸ್‌ಗೆ

ಕೆ.ಆರ್.ಪೇಟೆ (ಮಂಡ್ಯ ಜಿಲ್ಲೆ): ಜೆಡಿಎಸ್ ವರಿಷ್ಠ ಎಚ್. ಡಿ.ದೇವೇಗೌಡರ ಕುಟುಂಬದ ಆಪ್ತ, ತಾಲ್ಲೂಕಿನ ಹಿರಿಯ ಮುಖಂಡ ಬಿ.ಎಲ್.ದೇವರಾಜು ಅವರು ಕಾಂಗ್ರೆಸ್‌ಗೆ ಸೇರಲು ನಿರ್ಧರಿಸಿದ್ದಾರೆ.

ಜೆಡಿಎಸ್ ಟಿಕೆಟ್ ದೊರೆಯದಿದ್ದಕ್ಕೆ ಬೇಸರಗೊಂಡಿದ್ದ ಅವರು ಪಕ್ಷ ತೊರೆಯುವ ತೀರ್ಮಾನವನ್ನು ಅವರು ಶುಕ್ರವಾರ ಪತ್ರಿಕಾ ಗೋಷ್ಠಿಯಲ್ಲಿ ಪ್ರಕಟಿಸಿದರು. ಇದೇ 27ರಂದು ಕಾಂಗ್ರೆಸ್ ಸೇರಲಿದ್ದೇನೆ ಎಂದರು.

‘ಇದು ನನಗೆ ಕಡೇ ಚುನಾವಣೆ. ಟಿಕೆಟ್ ಕೋರಿದ್ದೆ. ಆದರೆ, ಈಚೆಗೆ ಪಕ್ಷಕ್ಕೆ ಸೇರಿದ್ದ ಎಚ್.ಟಿ.ಮಂಜು ಅವರಿಗೆ ಟಿಕೆಟ್ ನೀಡಲಾಗಿದೆ 1983ರಿಂದ ಜನತಾಪಕ್ಷ, ಜನತಾದಳ, ಸಮಾಜವಾದಿ ಜನತಾ ಪಕ್ಷ, ಜೆಡಿಎಸ್‌ನಲ್ಲಿ ಪಕ್ಷ ಸಂಘಟಿಸಿದ್ದೇನೆ. 2019ರ ಉಪಚುನಾವಣೆಯಲ್ಲಿ 5 ಸಾವಿರ ಮತಗಳ ಅಂತರದಿಂದ ಸೋತೆ. ಆಗ ಎಚ್.ಡಿ.ಕುಮಾರಸ್ವಾಮಿ ಒಂದು ದಿನ ಪ್ರಚಾರಕ್ಕೆ ಬಂದಿದ್ದರೂ ನಾನು ಸೋಲುತ್ತಿರಲಿಲ್ಲ’ ಎಂದರು.

ಹುತಾತ್ಮರ ಸ್ಮಾರಕ ಉದ್ಘಾಟನೆ ನಾಳೆ

ಬಸವಕಲ್ಯಾಣ (ಬೀದರ್ ಜಿಲ್ಲೆ): ಸಮೀಪದ ಗೋರಟಾ (ಬಿ) ಗ್ರಾಮದಲ್ಲಿನ ಹುತಾತ್ಮ ಸ್ಮಾರಕವನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಉದ್ಘಾಟನೆ ಮಾರ್ಚ್ 26ರಂದು ನೆರವೇರಿಸುವರು. 8 ವರ್ಷಗಳ ಹಿಂದೆ ಗ್ರಾಮಕ್ಕೆ ಭೇಟಿ ನೀಡಿದ್ದ ಅವರು ಸ್ಮಾರಕದ ನಿರ್ಮಾಣ ಕಾರ್ಯಕ್ಕೆ ಶಂಕುಸ್ಥಾಪನೆ ನೆರವೇರಿಸಿದ್ದರು.

ಪಿಎಸ್‌ಐ ಅಕ್ರಮ: ವಿಚಾರಣೆ ಎದುರಿಸಿದ್ದ ವ್ಯಕ್ತಿ ಆತ್ಮಹತ್ಯೆ



ಗಣಪತಿ ಭಟ್

ಸಿದ್ದಾಪುರ: ಪಿಎಸ್‌ಐ ಅಕ್ರಮ ನೇಮಕಾತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕಳೆದ ಜುಲೈ 13 ರಂದು ಸಿಐಡಿ ವಿಚಾರಣೆಗೆ ಒಳಗಾಗಿದ್ದ ತಾಲ್ಲೂಕಿನ ನೆಲೆಮಾಂವ ಗ್ರಾಮದ ಗಣಪತಿ ಭಟ್ (63) ಶುಕ್ರವಾರ ಹೆರೂರು ಗ್ರಾಮದ ತಟ್ಟೀಕೈ ಎಂ.ಆರ್.ಭಟ್ಟ ಅವರ ತೋಟದ ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಲಕ್ಷಾಂತರ ರೂಪಾಯಿ ನೀಡಿ ಅಕ್ರಮವಾಗಿ ಎಸ್‌ಐ ಹುದ್ದೆಗೆ ಆಯ್ಕೆಯಾಗಿದ್ದ ಇಬ್ಬರು ಅಭ್ಯರ್ಥಿಗಳು ಭಟ್ ಹೆಸರು ಪ್ರಸ್ತಾಪಿಸಿದ್ದ ಕಾರಣ ಸಿಐಡಿ ವಿಚಾರಣೆ ನಡೆಸಿತ್ತು. ಆದರೆ ಪ್ರಕರಣ ದಾಖಲಿಸಿರಲಿಲ್ಲ. ನೆಲೆಮಾಂವ ಸೇವಾ ಸಹಕಾರ ಸಂಘದ ಅಧ್ಯಕ್ಷರಾಗಿದ್ದ ಅವರು ಈ ಹಿಂದೆ ಅಣಲೆಬೈಲ್ ಗ್ರಾಮ ಪಂಚಾಯ್ತಿ ಸದಸ್ಯರಾಗಿ ಕೆಲಸ ಮಾಡಿದ್ದರು. ಮೃತರಿಗೆ ಪತ್ನಿ, ಪುತ್ರ ಇದ್ದಾರೆ.

‘ಸಾಮಾಜಿಕ ಚಟುವಟಿಕೆಯಲ್ಲಿ ಸಕ್ರಿಯರಾಗಿದ್ದ ಅವರು ಈಚೆಗೆ ಒತ್ತಡಕ್ಕೆ ಸಿಲುಕಿದ್ದರು. ಆದರೆ ಯಾವ ಕಾರಣಕ್ಕೆ ಎಂಬುದು ಸ್ಪಷ್ಟವಾಗಿಲ್ಲ’ ಎಂದು ಕುಟುಂಬದ ಮೂಲಗಳು ತಿಳಿಸಿವೆ. ‘ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ತನಿಖೆ ಕೈಗೊಂಡಿದ್ದಾಗಿ’ ಸಿದ್ದಾಪುರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಬೇಲೂರಿನ ಚನ್ನಕೇಶವ ದೇವಸ್ಥಾನದಲ್ಲಿ ಕುರಾನ್ ಪಠಣ ನಿಲ್ಲಿಸಲು ಒತ್ತಾಯ

ಸ್ವಾಮೀಜಿ ಕ್ಷಮೆ ಕೋರುವೆ: ಅಡ್ಡಂಡ ಕಾರ್ಯಪ್ಪ

ಪ್ರಜಾವಾಣಿ ವಾರ್ತೆ

ಮೈಸೂರು: ‘ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಅವರಲ್ಲಿ ಕ್ಷಮೆ ಕೋರುವೆ. ನಾನು ಹಗುರ ಮಾತು ಬಳಸಿಲ್ಲ, ನನ್ನ ಹೇಳಿಕೆಯನ್ನು ಕೆಲವು ಮಾಧ್ಯಮಗಳು ಬೇಕಾದಂತೆ ತಿರುಚಿದ್ದರಿಂದ ಅಪಾರ್ಥವಾಗಿದೆ’ ಎಂದು ರಂಗಾಯಣ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ ಹೇಳಿದರು.

ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ಮುಖಂಡರು ಇಲ್ಲಿನ ರಂಗಾಯಣದ ಎದುರು ಶುಕ್ರವಾರ ಪ್ರತಿಭಟನೆ ನಡೆಸಿದ ಬಳಿಕ ಪ್ರತಿಕ್ರಿಯಿಸಿದ ಅವರು, ‘ಸ್ವಾಮೀಜಿ ಮಹಾಸಂತರು. ನನಗೆ ಬಹಳ ಗೌರವವಿದ್ದು, ಅವರ ಕ್ಷಮೆಯಾಚಿಸುತ್ತೇನೆ. ಆದರೆ, ಅವರ ಭಕ್ತರಲ್ಲಿ ಕ್ಷಮೆಯಾಚಿಸುವುದಿಲ್ಲ’ ಎಂದರು.

‘ಸ್ವಾಮೀಜಿ ಬಗ್ಗೆ ಸುದ್ದಿವಾಹಿನಿಯೊಂದರಲ್ಲಿ ಹಗುರವಾಗಿ ಮಾತನಾಡಿದ್ದಾರೆ’ ಎಂದು ಆರೋಪಿಸಿ, ಸಂಘದ ರಾಜ್ಯ ಸಮಿತಿ ಗೌರವಾಧ್ಯಕ್ಷ ಸಿ.ಜಿ.ಗಂಗಾಧರ್ ಕರೆಯಂತೆ ಕೆಲವರು ಮುತ್ತಿಗೆ ಹಾಕಲು ರಂಗಾಯಣ ಆವರಣಕ್ಕೆ ಪ್ರವೇಶಿಸುತ್ತಿದ್ದಂತೆ ಪೊಲೀಸರು ತಡೆದರು. ಆಗ ಕೆಲಹೊತ್ತು ವಾಗ್ವಾದ ನಡೆಯಿತು.

‘ಕಾರ್ಯಪ್ಪ ಸ್ವಾಮೀಜಿ ವಿರುದ್ಧ ಮಾತನಾಡಿದ್ದಾರೆ. ಸಮುದಾಯದ ಭಾವನೆಗಳಿಗೆ ಧಕ್ಕೆ ತಂದಿದ್ದಾರೆ’ ಎಂದು ಪ್ರತಿಭಟನಾನಿರತರು ಆಕ್ರೋಶ ವ್ಯಕ್ತಪಡಿಸಿದರು. ಪೊಲೀಸರು ಅವರನ್ನು ವಶಕ್ಕೆ ಪಡೆದರು. ರಂಗಾಯಣ ನಿರ್ದೇಶಕ ಸ್ಥಾನದಿಂದ ಕಾರ್ಯಪ್ಪ ಅವರನ್ನು ವಜಾಗೆ ಆಗ್ರಹಿಸಿ ರಾಜ್ಯ ಒಕ್ಕಲಿಗರ ಸಂಘ, ಅಖಿಲ ಕರ್ನಾಟಕ ಒಕ್ಕಲಿಗರ ಸಂಘ ಸೇರಿ ಹಲವು ಸಂಘ ಸಂಸ್ಥೆಗಳ ಒಕ್ಕೂಟದ ಪ್ರಮುಖರು ಶುಕ್ರವಾರ ಕಪ್ಪು ಪಟ್ಟಿ ಧರಿಸಿ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟಿಸಿದರು.

5 ದಿನ ಗಡುವು: ‘ಐದು ದಿನದಲ್ಲಿ ನಿರ್ದೇಶಕ ಸ್ಥಾನದಿಂದ ಸರ್ಕಾರ ವಜಾ ಮಾಡದಿದ್ದರೆ ಬೀದಿಗಿಳಿದು ಹೋರಾಟ ಮಾಡುತ್ತೇವೆ’ ಎಂದು ಕರ್ನಾಟಕ ಕಾವಲು ಪಡೆ ಅಧ್ಯಕ್ಷ ಮೋಹನ್ ಕುಮಾರ್ ಗೌಡ ಎಚ್ಚರಿಸಿದರು.

ಮೈಸೂರಿನ ರಂಗಾಯಣ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ ಅವರು ನಿರ್ಮಲಾನಂದನಾಥ ಸ್ವಾಮೀಜಿ ಬಗ್ಗೆ ಹಗುರವಾಗಿ ಮಾತನಾಡಿದ್ದಾರೆ ಎಂದು ಆರೋಪಿಸಿ ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ಮುಖಂಡರು ರಂಗಾಯಣದ ಎದುರು ಶುಕ್ರವಾರ ಪ್ರತಿಭಟನೆ ನಡೆಸಿದರು.

ಮುಖ್ಯಾಂಶಗಳು

- ಸ್ವಾಮೀಜಿ ಬಗ್ಗೆ ಗೌರವವಿದೆ, ಹಗುರ ಮಾತು ಬಳಸಿಲ್ಲ
- ಮಾಧ್ಯಮಗಳು ಹೇಳಿಕೆ ತಿರುಚಿದ್ದರಿಂದ ಅಪಾರ್ಥ

‘ಹೈದರಾಲಿ ದತ್ತಿ ನೀಡಿದ ದಾಖಲೆ ಇಲ್ಲ’

ಹಾಸನ: ‘ಮುಂದಿನ ವರ್ಷದಿಂದ ಬೇಲೂರಿನಲ್ಲಿ ಕುರಾನ್ ಪಠಣ ನಿಲ್ಲಿಸಲು ಸಂಕಲ್ಪ ಮಾಡಬೇಕು. ವಂದೇ ಮಾತರಂ ಗೀತೆ ಹಾಡದವರ ಕುರಾನ್ ಅನ್ನು ಚೆನ್ನಕೇಶವನ ದೇವಾಲಯದಲ್ಲಿ ಏಕೆ ಪಠಿಸಬೇಕು’’ ಎಂದು ಅಡ್ಡಂಡ ಕಾರ್ಯಪ್ಪ ಪ್ರಶ್ನಿಸಿದರು.

ಶುಕ್ರವಾರ ಇಲ್ಲಿ ‘ಬೇಲೂರು ಶ್ರೀ ಚನ್ನಕೇಶವನಿಗೆ ಬೇಕಿಲ್ಲ ಕುರಾನ್ ಪಠಣ’ ಕೃತಿಯ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು. ‘ಚನ್ನಕೇಶವನ ಮುಂದೆ ನಿಂತು ಕುರಾನ್ ಪಠಿಸಿ ಅಲ್ಲಾ ಒಬ್ಬನೇ ದೇವರು ಎಂದು ಹೇಳುವುದು ಬೇಕೆ’ ಎಂದು ಪ್ರಶ್ನಿಸಿದರು.

‘ಚನ್ನಕೇಶವ ದೇವಸ್ಥಾನಕ್ಕೆ ಹೈದರಾಲಿಯು ದತ್ತಿ ನೀಡಿರುವ ಬಗ್ಗೆ ದಾಖಲೆಗಳಿಲ್ಲ. ಅದು ಸುಳ್ಳು. ಅದನ್ನು ಸೇರಿಸಿದ್ದು 1932 ರಲ್ಲಿ ಮಿರ್ಜಾ ಇಸ್ಮಾಯಿಲ್ ಮ್ಯಾನುವಲ್‌ನಲ್ಲಿ. 1117ರಲ್ಲಿ ಚನ್ನಕೇಶವ ದೇವಸ್ಥಾನ ನಿರ್ಮಾಣವಾದ ಬಳಿಕ ಎಷ್ಟೋ ಜನ ದತ್ತಿ, ದಾನ ನೀಡಿರುವ ಬಗ್ಗೆ ದಾಖಲೆಗಳಿವೆ. ಹೈದರಾಲಿ ದತ್ತಿ ನೀಡಿರುವುದಕ್ಕೆ ದಾಖಲೆ ಇಲ್ಲ’ ಎಂದರು.

ಶನಿವಾರ, ಮಾರ್ಚ್ 25, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 83 | ಪುಟ 24
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ

ನನ್ನ ಸಮಯ ನನ್ನದು..!.

ಆದಾಯ ₹ 7 ಲಕ್ಷ ಮೀರಿದರೆ ವ್ಯತ್ಯಾಸದ ಮೊತ್ತಕ್ಕಷ್ಟೇ ತೆರಿಗೆ 10

ಮ್ಯೂಚುವಲ್ ಫಂಡ್: ತೆರಿಗೆ ಲೆಕ್ಕ ಬದಲು 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
57,527 ▼	16,945 ▼	₹61,400 (ಬೆಂಗಳೂರು) ▲	₹71,500 (ಬೆಂಗಳೂರು) ▲	82.40 ▼



ಪರಿಶಿಷ್ಟ ಜಾತಿಗೆ ಒಳ ಮೀಸಲಾತಿ

ಮುಸ್ಲಿಮರ ಶೇ 4ರ ಮೀಸಲು ಒಕ್ಕಲಿಗ, ಲಿಂಗಾಯತರ ಪಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಪಟ್ಟಿಯಲ್ಲಿದ್ದರೂ ಮೀಸಲಾತಿ ಸೌಲಭ್ಯದಿಂದ ವಂಚಿತರಾಗಿದ್ದ ಎಡಗೈ–ಬಲಗೈ ಸಮುದಾಯದವರಿಗೆ ಒಳಮೀಸಲಾತಿ ಕಲ್ಪಿಸುವ ಮಹತ್ವದ ತೀರ್ಮಾನವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಕೈಗೊಂಡಿದೆ.

ಅದೇ ಹೊತ್ತಿನಲ್ಲಿ, ಮುಸ್ಲಿಮರಿಗೆ ಇದ್ದ ಶೇ 4ರಷ್ಟು ಮೀಸಲಾತಿಯನ್ನು ಕಿತ್ತುಕೊಂಡು, ಅದನ್ನು ಲಿಂಗಾಯತರಿಗೆ ಹಾಗೂ ಒಕ್ಕಲಿಗರಿಗೆ ತಲಾ ಶೇ 2ರಷ್ಟು ಹಂಚುವ ನಿರ್ಣಯವನ್ನೂ ಮಾಡಿದೆ. ಮುಸ್ಲಿಮರನ್ನು ಆರ್ಥಿಕವಾಗಿ ದುರ್ಬಲ ವರ್ಗದ (ಇಡಬ್ಲ್ಯುಎಸ್) ಪಟ್ಟಿಗೆ ಸೇರಿಸುವ ನಿರ್ಧಾರವನ್ನೂ ಮಾಡಿದೆ.

ಶುಕ್ರವಾರ ನಡೆದ ಸಚಿವ ಸಂಪುಟ ಸಭೆ ಬಳಿಕ ತಮ್ಮ ಸಚಿವ ಸಹೋದ್ಯೋಗಿಗಳ ಜತೆ ಸುದ್ದಿಗೋಷ್ಠಿ ನಡೆಸಿದ ಮುಖ್ಯಮಂತ್ರಿ ಬೊಮ್ಮಾಯಿ, ಸರ್ಕಾರದ ನಿರ್ಣಯಗಳನ್ನು ಪ್ರಕಟಿಸಿದರು.

ಆದರೆ, ಸರ್ಕಾರದ ನಿರ್ಣಯಕ್ಕೆ ಒಳಮೀಸಲಾತಿ ಹೋರಾಟಗಾರರು ಹಾಗೂ ಒಳಮೀಸಲಾತಿ ನೀಡುವುದನ್ನು ವಿರೋಧಿಸುತ್ತಿರುವ ಒಳಮೀಸಲಾತಿ ಸಂರಕ್ಷಣಾ ಸಮಿತಿಯ ಎರಡು ಗುಂಪುಗಳೂ ವಿರೋಧ ವ್ಯಕ್ತಪಡಿಸಿವೆ.

ಪರಿಶಿಷ್ಟ ಜಾತಿ ಒಳ ಮೀಸಲಾತಿ	ಶೇಕಡಾವಾರು
ಎಡಗೈ	6.0
ಬಲಗೈ	5.5
ಲಂಬಾಣಿ, ಬೋವಿ, ಕೊರಮ, ಕೊರಚ	4.5
ಈ ಮೇಲಿನ ಗುಂಪಿಗೆ ಸೇರದ ಜಾತಿ	1.0
ಒಟ್ಟು	17

8ನೇ ಪುಟ ನೋಡಿ

ಹಿಂದುಳಿದವರ ಮೀಸಲಾತಿ ಬದಲು	ಶೇಕಡಾವಾರು
ಪ್ರವರ್ಗ 1	4.0
ಪ್ರವರ್ಗ 2 ಎ	15.0
ಪ್ರವರ್ಗ 2 ಬಿ	0.0*
ಪ್ರವರ್ಗ 2 ಸಿ	6.0
ಪ್ರವರ್ಗ 2 ಡಿ	7.0
ಒಟ್ಟು	32

ಪ್ರವರ್ಗ 2 ಬಿ ಅಡಿ ಮುಸ್ಲಿಮರಿಗೆ ಶೇ 4ರಷ್ಟು ಮೀಸಲಾತಿ ಇತ್ತು. ಮುಸ್ಲಿಮರನ್ನು ಆರ್ಥಿಕವಾಗಿ ದುರ್ಬಲ ವರ್ಗಕ್ಕೆ (ಇಡಬ್ಲ್ಯುಎಸ್) ಸೇರಿಸಲಾಗಿದೆ. ಈ ಶೇ 4 ರಲ್ಲಿ ತಲಾ ಶೇ 2ರಷ್ಟನ್ನು 2 ಸಿ (ಒಕ್ಕಲಿಗರಿಗೆ) ಹಾಗೂ 2 ಡಿ (ಲಿಂಗಾಯತ)ಗೆ ಹಂಚಲಾಗಿದೆ.

ಅಧಿಸೂಚನೆ ಹೊರಡಿಸಿದ ಲೋಕಸಭಾ ಕಾರ್ಯಾಲಯ: ವಿಪಕ್ಷಗಳ ಆಕ್ರೋಶ

ರಾಹುಲ್ ಸದಸ್ಯತ್ವಕ್ಕೆ ಕುತ್ತು

ನವದೆಹಲಿ (ಪಿಟಿಐ): ವಯನಾಡ್ ಸಂಸದ ಮತ್ತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಲೋಕಸಭೆ ಸದಸ್ಯ ಸ್ಥಾನದಿಂದ ಶುಕ್ರವಾರ ಅನರ್ಹಗೊಳಿಸಲಾಗಿದೆ. ಸೂರತ್‌ನ ನ್ಯಾಯಾಲಯವೊಂದು ಅವರಿಗೆ ಮಾನಹಾನಿ ಪ್ರಕರಣದಲ್ಲಿ ಎರಡು ವರ್ಷ ಶಿಕ್ಷೆ ಪ್ರಕಟಿಸಿದ 24 ತಾಸುಗಳೊಳಗೆ ಅನರ್ಹತೆ ನಿರ್ಧಾರ ಕೈಗೊಳ್ಳಲಾಗಿದೆ.

ಇದು ಬಿಜೆಪಿಯ ದ್ವೇಷದ ರಾಜಕಾರಣ ಎಂದು ವಿರೋಧ ಪಕ್ಷಗಳು ಆಕ್ರೋಶ ವ್ಯಕ್ತಪಡಿಸಿವೆ. ಕಾನೂನು ಮತ್ತು ರಾಜಕೀಯ ನೆಲೆಯಲ್ಲಿ ಇದರ ವಿರುದ್ಧ ಹೋರಾಟ ಮಾಡುವುದಾಗಿ ಶಪಥ ಮಾಡಿವೆ. ಈ ಕುರಿತು ದೇಶದಾದ್ಯಂತ ಜನಾಂದೋಲನ ರೂಪಿಸುವುದಾಗಿ ಕಾಂಗ್ರೆಸ್ ಹೇಳಿದೆ.

ವಿರೋಧ ಪಕ್ಷಗಳ ಆರೋಪವನ್ನು ಬಿಜೆಪಿ ನಿರಾಕರಿಸಿದೆ ಮತ್ತು ಅನರ್ಹತೆಯು ಕಾನೂನುಬದ್ಧವಾಗಿಯೇ ನಡೆದಿದೆ ಎಂದಿದೆ.

ಸೂರತ್‌ನ ಮುಖ್ಯ ನ್ಯಾಯಾಂಗೀಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ರಾಹುಲ್ ಅವರಿಗೆ ಎರಡು ವರ್ಷ ಸಜೆ ನೀಡಿರುವ ಕಾರಣ ಅವರ ಲೋಕಸಭಾ ಸದಸ್ಯತ್ವ ರದ್ದಾಗಿದೆ ಎಂದು ಲೋಕಸಭಾ ಕಾರ್ಯಾಲಯವು ಅಧಿಸೂಚನೆಯಲ್ಲಿ ತಿಳಿಸಿದೆ. ತೀರ್ಪು ಪ್ರಕಟವಾದ 2023ರ ಮಾರ್ಚ್ 23ರಿಂದಲೇ ಅನರ್ಹತೆ ಅನ್ವಯ ಎಂದೂ ಹೇಳಲಾಗಿದೆ.

ಉನ್ನತ ನ್ಯಾಯಾಲಯವು ಸೂರತ್ ನ್ಯಾಯಾಲಯದ ತೀರ್ಪಿಗೆ ತಡೆ ನೀಡದೇ ಇದ್ದರೆ, ಈಗಿನ ಅನರ್ಹತೆಯಿಂದಾಗಿ ರಾಹುಲ್ ಅವರು ಎಂಟು ವರ್ಷ ಚುನಾವಣೆಗೆ ಸ್ಪರ್ಧಿಸುವಂತಿಲ್ಲ. ಅವರು ನಾಲ್ಕು ಬಾರಿ ಸಂಸದರಾಗಿದ್ದರು.

‘ಎಲ್ಲ ಕಳ್ಳರಿಗೂ ಮೋದಿ ಎಂಬ ಉಪನಾಮ ಏಕಿದೆ’ ಎಂದು ಲೋಕಸಭೆಗೆ 2019ರಲ್ಲಿ ನಡೆದ ಚುನಾವಣಾ ಪ್ರಚಾರದಲ್ಲಿ ರಾಹುಲ್ ಪ್ರಶ್ನಿಸಿದ್ದರು. ಸೂರತ್‌ನ ಶಾಸಕ ಪೂರ್ಣೇಶ್ ಮೋದಿ ಅವರು ರಾಹುಲ್ ವಿರುದ್ಧ ಪ್ರಕರಣ ದಾಖಲಿಸಿದ್ದರು.

ಲೋಕಸಭೆ ಸದಸ್ಯ ಸ್ಥಾನದಿಂದ ಅನರ್ಹಗೊಂಡ ಬಳಿಕ ರಾಹುಲ್ ಗಾಂಧಿ ಅವರು ಸಂಸತ್‌ನಿಂದ ಹೊರನಡೆದರು –ಪಿಟಿಐ ಚಿತ್ರ

8ನೇ ಪುಟ ನೋಡಿ | ಇನ್ನಷ್ಟು ಸುದ್ದಿಗಳು 5

ಭಾರತದ ಧ್ವನಿಗಾಗಿ ನಾನು ಹೋರಾಡುತ್ತಿದ್ದೇನೆ. ಅದಕ್ಕಾಗಿ ಯಾವುದೇ ಬೆಲೆ ತೆರುವುದಕ್ಕೂ ಸಿದ್ಧನಿದ್ದೇನೆ

ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ತಪ್ಪೆಸಗುವುದು ರಾಹುಲ್ ಹವ್ಯಾಸ: ಬಿಜೆಪಿ

ರಾಹುಲ್ ಅವರಿಗೆ ತಪ್ಪು ಮಾಡುವುದು ಹವ್ಯಾಸವೇ ಆಗಿಬಿಟ್ಟಿದೆ. ತಮಗೆ ಕಾನೂನು ಅನ್ವಯವೇ ಆಗುವುದಿಲ್ಲ ಎಂದು ಅವರು ಭಾವಿಸಿದ್ದಾರೆ. ಅವರ ಅನರ್ಹತೆಯಲ್ಲಿ ಸರ್ಕಾರದ್ದಾಗಲಿ, ಬಿಜೆಪಿಯದ್ದಾಗಲಿ ಯಾವುದೇ ಪಾತ್ರ ಇಲ್ಲ. ಅಪರಾಧ ಪ್ರಕರಣದಲ್ಲಿ ಜನಪ್ರತಿನಿಧಿಯು ತಪ್ಪಿತಸ್ಥ ಎಂದು ತೀರ್ಪು ಬಂದರೆ ಅವರ ಸದಸ್ಯತ್ವ ರದ್ದಾಗುತ್ತದೆ ಎಂಬುದನ್ನು ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಹೇಳಿದೆ ಎಂದು ಬಿಜೆಪಿ ಪ್ರತಿಕ್ರಿಯೆ ನೀಡಿದೆ.

ಕಾಂಗ್ರೆಸ್ ಪಕ್ಷ, ಅದರಲ್ಲೂ ವಿಶೇಷವಾಗಿ ನೆಹರೂ–ಗಾಂಧಿ ಕುಟುಂಬದವರು ತಮಗೆ ಪ್ರತ್ಯೇಕವಾದ ಭಾರತೀಯ ದಂಡ ಸಂಹಿತೆ ಬೇಕು ಮತ್ತು ತಾವು ಯಾವತ್ತೂ ಶಿಕ್ಷೆಗೆ ಒಳಗಾಗಬಾರದು ಎಂಬ ಮನಃಸ್ಥಿತಿ ಹೊಂದಿದ್ದಾರೆ. ಅವರದ್ದು ಯಜಮಾನಿಕೆಯ ಮನೋಭಾವ. ಅವರು ಪ್ರಜಾಪ್ರಭುತ್ವವನ್ನು ಅರ್ಥ ಮಾಡಿಕೊಳ್ಳುವಲ್ಲಿ ವಿಫಲರಾಗಿದ್ದಾರೆ ಎಂದು ಬಿಜೆಪಿ ಮುಖಂಡ ಧರ್ಮೇಂದ್ರ ಪ್ರಧಾನ್ ಹೇಳಿದ್ದಾರೆ.

ಕೇಂದ್ರ ಸರ್ಕಾರಿ ನೌಕರರಿಗೆ ಶೇ 4 ರಷ್ಟು ತುಟ್ಟಿ ಭತ್ಯೆ ಹೆಚ್ಚಳ

ನವದೆಹಲಿ(ಪಿಟಿಐ): ಕೇಂದ್ರ ಸರ್ಕಾರಿ ನೌಕರರು ಮತ್ತು ಪಿಂಚಣಿದಾರರಿಗೆ 2023ರ ಜನವರಿ 1ರಿಂದಲೇ ಅನ್ವಯಿಸುವಂತೆ ಶೇ 4ರಷ್ಟು ತುಟ್ಟಿ ಭತ್ಯೆಯನ್ನು (ಡಿ.ಎ) ಕೇಂದ್ರ ಸಂಪುಟ ಶುಕ್ರವಾರ ಹೆಚ್ಚಿಸಿದೆ. ಇದರಿಂದಾಗಿ ಡಿ.ಎ ಪ್ರಮಾಣ ಶೇ 42ಕ್ಕೆ ಏರಿಕೆಯಾಗಿದೆ.

47.58 ಲಕ್ಷ ನೌಕರರು, 69.76 ಲಕ್ಷ ಪಿಂಚಣಿದಾರರಿಗೆ ಇದು ಅನ್ವಯವಾಗಲಿದೆ. ವಾರ್ಷಿಕ ₹12,815.60 ಕೋಟಿಯನ್ನು ಹೆಚ್ಚುವರಿಯಾಗಿ ಭರಿಸಬೇಕಾಗುತ್ತದೆ ಎಂದು ಕೇಂದ್ರ ಸಚಿವ ಅನುರಾಗ್ ಠಾಕೂರ್ ತಿಳಿಸಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ವಂಡರ್ ಲಾದಿಂದ 'ಡಿಜೆ ನೈಟ್' ಇಂದು

ಬೆಂಗಳೂರು: ವಂಡರ್ ಲಾ ಹಾಲಿಡೇಸ್ ಲಿಮಿಟೆಡ್ ತನ್ನ ಪಾರ್ಕ್‌ನಲ್ಲಿ ಶನಿವಾರ (ಮಾರ್ಚ್ 25) ಸಂಜೆ 7 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ 'ಡೆಸಿಬಲ್' ಶೀರ್ಷಿಕೆ ಯಡಿ 'ಡಿಜೆ ನೈಟ್' ಕಾರ್ಯಕ್ರಮ ಹಮ್ಮಿಕೊಂಡಿದೆ.

ಟ್ವಿನ್ಸ್ ಮತ್ತು ಲಾಸ್ಟ್ ಸ್ಟೋರಿಸ್ ಅವರಿಂದ 'ಡಿಜೆ ನೈಟ್' ನಡೆಯಲಿದೆ. ಲೈವ್ ಬಾರ್, ಆಹಾರದ ಕೌಂಟರ್‌ಗಳು ಸಹ ಇರಲಿವೆ.

ಟಿಕೆಟ್ ಬುಕ್ಕಿಂಗ್ ಮತ್ತು ಮಾಹಿತಿಗೆ ವೆಬ್‌ಸೈಟ್ www.wonderla.com ಅಥವಾ ಮೊಬೈಲ್ ಸಂಖ್ಯೆ 80372 30333, 80350 73966 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಬಾಲಕಿ ಮೇಲೆ ಅತ್ಯಾಚಾರ: ಆಸ್ಪತ್ರೆಗೆ ಸಾಗಿಸುವ ವೇಳೆ ಸಾವು

ರಾಮನಗರ: ಬೆಂಗಳೂರು ದಕ್ಷಿಣ ತಾಲ್ಲೂಕಿನ ಗ್ರಾಮವೊಂದರಲ್ಲಿ ಶುಕ್ರವಾರ ಯುವಕನೊಬ್ಬ ಬಾಲಕಿ ಮೇಲೆ ಅತ್ಯಾಚಾರ ಎಸಗಿದ್ದು, ಸಂತ್ರಸ್ತೆಯನ್ನು ಆಸ್ಪತ್ರೆಗೆ ಸಾಗಿಸುವಾಗ ಮೃತಪಟ್ಟಿದ್ದಾಳೆ. ಪ್ರಕರಣದ ಆರೋಪಿಯನ್ನು ಕಗ್ಗಲೀಪುರ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ನಗರದಲ್ಲಿ ಇಂದು

ಅಕ್ಷರ ಕ್ರಾಂತಿ: ಶಾಲೆಯ ಗ್ರಂಥಾಲಯಕ್ಕೆ ಪುಸ್ತಕ ಅರ್ಪಣೆ, ನೀರಿನ ಪಾಟ್ ಹಾಗೂ ಗಿಡಗಳ ವಿತರಣೆ: ಅಜಯ್ ಕುಮಾರ್, ಧರ್ಮೇಂದ್ರ ಕುಮಾರ್, ಆಯೋಜನೆ: ಸ್ವಯಂ ಜಾಗೃತಿ ಸೇವಾ ಟ್ರಸ್ಟ್, ಸ್ಥಳ: ಸರ್ಕಾರಿ ಪ್ರಾಥಮಿಕ ಶಾಲೆ, ಮಾನಸ ನಗರ, ನಾಗರಬಾವಿ, ಬೆಳಿಗ್ಗೆ 8

ನವೀಕರಣಗೊಂಡ ಬಾಲ ಭವನ ಲೋಕಾರ್ಪಣೆ ಹಾಗೂ ರಾಜ್ಯ ಪೂರ್ವ ಶಿಕ್ಷಣ ಪಠ್ಯಕ್ರಮ ಚೌಕಟ್ಟು ಬಿಡುಗಡೆ: ಬಸವರಾಜ ಬೊಮ್ಮಾಯಿ, ಆಯೋಜನೆ: ಬಾಲ ಭವನ ಸೊಸೈಟಿ, ಸ್ಮಾರ್ಟ್ ಸಿಟಿ ಲಿಮಿಟೆಡ್, ಸ್ಥಳ: ಬಾಲ ಭವನ, ಕಬ್ಬನ್ ಉದ್ಯಾನ, ಬೆಳಿಗ್ಗೆ 9

ವಾರ್ಷಿಕೋತ್ಸವ: ಉದ್ಘಾಟನೆ: ಗೋಪಾಲಯ್ಯ, ಅಧ್ಯಕ್ಷತೆ: ಆರ್. ನಾಗರಾಜ ಶೆಟ್ಟಿ, ವಾರ್ಷಿಕ ಸಂಚಿಕೆ ಬಿಡುಗಡೆ: ವಿನುತಾ ಹರೀಶ್, ಪ್ರಮಾಣಪತ್ರ ವಿತರಣೆ: ಮೋಹನ್ ರಾವ್, ಸಾಧಕರಿಗೆ ಸನ್ಮಾನ: ಎಸ್. ಹರೀಶ್, ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಣೆ: ಎನ್.ಎಲ್. ನರೇಂದ್ರ ಬಾಬು, ಆಯೋಜನೆ: ಗಾಣಿಗ ಎಜುಕೇಷನ್ ಆ್ಯಂಡ್ ಚಾರಿಟೆಬಲ್ ಟ್ರಸ್ಟ್, ಸ್ಥಳ: ಯೋಗ ಕೇಂದ್ರ, 1ನೇ ಕ್ರಾಸ್, ನಂದಿನಿ ಬಡಾವಣೆ, ಬೆಳಿಗ್ಗೆ 9.30

'ನಮ್ಮ ಬೆಂಗಳೂರು ಹಬ್ಬ'ದ ಅಂಗವಾಗಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಮೇಳಗಳ ಉದ್ಘಾಟನೆ: ಆರ್. ಅಶೋಕ, ಮುಖ್ಯ ಅತಿಥಿ: ಚಂದ್ರಶೇಖರ ಕಂಬಾರ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ಕಿಂಗ್ ಎಡ್ವರ್ಡ್ ಪ್ರತಿಮೆ ಹತ್ತಿರ, ಕಬ್ಬನ್‌ಪಾರ್ಕ್ ಆವರಣ, ಬೆಳಿಗ್ಗೆ 9.30


ಚಂದ್ರಶೇಖರ ಕಂಬಾರ

ಬ್ರಹ್ಮರಥೋತ್ಸವ: ಗಜೇಂದ್ರ ಮೋಕ್ಷ ಉತ್ಸವ, ಪ್ರವಚನ: ವೇಣುಗೋಪಾಲ ಗುಡಿ, ಮುಖ್ಯ ಅತಿಥಿ: ಪಿ. ಭುಜಂಗ ರಾವ್, ಆಯೋಜನೆ: ಕಾಕೋಳು ವೇಣುಗೋಪಾಲಸ್ವಾಮಿ ದೇವಸ್ಥಾನ ಟ್ರಸ್ಟ್, ಸ್ಥಳ: ರಾಜಾನುಕುಂಟೆ ಸಮೀಪದ ಕಾಕೋಳು, ಯಲಹಂಕ, ಬೆಳಿಗ್ಗೆ 10

'ಇಗ್‌ನಿಟ್ಸ್' ಬಹುಶಿಸ್ತೀಯ ಸಮಾವೇಶ: ಮುಖ್ಯ ಅತಿಥಿಗಳು: ನಂದನ್ ಕುಮಾರ್, ರಾಮ್‌ಕುಮಾರ್ ರಾಮಚಂದ್ರನ್, ಚಂದನ್ ಶೆಟ್ಟಿ, ಅಂಕಿತಾ ಕುಂದು, ಆಯೋಜನೆ: ಜೈನ್ ವಿಶ್ವವಿದ್ಯಾಲಯ, ಸ್ಥಳ: ನಿಮ್ಹಾನ್ಸ್ ಸಮಾವೇಶ ಕೇಂದ್ರ, ಬೆಳಿಗ್ಗೆ 10.15

'16ನೇ ವಿಧಾನಸಭೆ ಚುನಾವಣೆಯಲ್ಲಿ ಮಹಿಳೆಯರ ಪಾತ್ರ–ಪ್ರಾತಿನಿಧ್ಯ' ಸಂವಾದ: ಆಯೋಜನೆ: ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಸ್ಥಳ: ಸೌಹಾರ್ದ, ನಂ.1, ಮೊದಲನೇ ಅಡ್ಡ ರಸ್ತೆ, ಮಿಷನ್ ರಸ್ತೆ, ಸುಬ್ಬಯ್ಯ ಸರ್ಕಲ್ ಬಳಿ, ಬೆಳಿಗ್ಗೆ 10.30

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ: ಉದ್ಘಾಟನೆ: ಶಾಮನೂರು ಶಿವಶಂಕರಪ್ಪ, ಮುಖ್ಯ ಅತಿಥಿ: ಈಶ್ವರ ಖಂಡ್ರೆ, ಅಧ್ಯಕ್ಷತೆ: ಶರಣೆ ಮುಕ್ತಾಂಬ ಬಸವರಾಜು, ಸನ್ಮಾನ: ನೀಲಗಂಗಾ ಚರಂತಿಮಠ, ಆಯೋಜನೆ: ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ರಾಜ್ಯ ಮಹಿಳಾ ವಿಭಾಗ, ಸ್ಥಳ: ಹಾನಗಲ್ ಕುಮಾರಸ್ವಾಮಿ ಸಭಾಂಗಣ, ವೀರಶೈವ–ಲಿಂಗಾಯತ ಭವನ, ಸದಾಶಿವನಗರ, ಬೆಳಿಗ್ಗೆ 10.30

ಕೆ.ಜಿ. ಲಕ್ಷ್ಮೀನಾರಾಯಣಪ್ಪ ಅವರ ಕವನ ಸಂಕಲನಗಳು ಮತ್ತು ಅಂಕಣಗಳ ಪುಸ್ತಕ ಲೋಕಾರ್ಪಣೆ: ದಿವ್ಯ ಸಾನ್ನಿಧ್ಯ: ಶಿವಾನುಭವ ಚರಮೂರ್ತಿ ಶಿವರುದ್ರ ಸ್ವಾಮೀಜಿ, ಅಧ್ಯಕ್ಷತೆ: ನ್ಯಾ. ಸಂತೋಷ್ ಹೆಗ್ಡೆ, ಪುಸ್ತಕ ಲೋಕಾರ್ಪಣೆ: ಕೆ.ಈ. ರಾಧಾಕೃಷ್ಣ, ಆಯೋಜನೆ: ಛಾಯಾ ಸಾಹಿತ್ಯ ಮುದ್ರಕರು ಮತ್ತು ಪ್ರಕಾಶಕರು, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

ಸಂತೋಷ್ ಹೆಗ್ಡೆ

'ಕಲಾಕೃತಿ' ಕಲಾ ಪ್ರದರ್ಶನ: ಆಯೋಜನೆ: ಸ್ವಾಸ್ತಿಕ್ಸ್ ಸೊಸೈಟಿ ಆಫ್ ಕರ್ನಾಟಕ, ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 11

ಯುಗಾದಿ ಉತ್ಸವ: 'ಶ್ರೀ ಕೃಷ್ಣದೇವ ರಾಯ ಪುರಸ್ಕಾರಂ' ಪ್ರಶಸ್ತಿ ಪ್ರದಾನ: ಉದ್ಘಾಟನೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಮುಖ್ಯ ಅತಿಥಿ: ಡಿ.ವಿ. ಸದಾನಂದಗೌಡ, ಅಧ್ಯಕ್ಷತೆ: ಎ. ರಾಧಾಕೃಷ್ಣ ರಾಜು, ಗೌರವ ಅತಿಥಿ: ಕೆ. ಮುನಿಸ್ವಾಮಿ ರಾಜು, ಐ.ಎಲ್. ರೆಡ್ಡಿ, ಪ್ರಶಸ್ತಿ ಪುರಸ್ಕೃತರು: ಶ್ರೀನಾಥ್, ರಾಜಶೇಖರ್, ಜೀವಿತಾ, ಆಯೋಜನೆ: ತೆಲುಗು ವಿಜ್ಞಾನ ಸಮಿತಿ, ಸ್ಥಳ: ಶ್ರೀ ಕೃಷ್ಣದೇವರಾಯ ಕಲಾ ಮಂದಿರಮ್, ತೆಲುಗು ವಿಜ್ಞಾನ ಸಮಿತಿ, ವೈಯಾಲಿಕಾವಲ್, ಸಂಜೆ 4.30

'ಅಕ್ಕರಗೊಟ್ಟಿಯ ಅಲಂಪಿನ ಇಂಪು ಚಂಪೂ ಹಬ್ಬಗಳ ಹಬ್ಬ': ಉದ್ಘಾಟನೆ: ಎಚ್.ಎಸ್. ಶಿವಪ್ರಕಾಶ್, ಪುಗಿಲು: ಹಂ.ಪ. ನಾಗರಾಜಯ್ಯ, ಅಧ್ಯಕ್ಷತೆ: ಮಲ್ಲೇಪುರಂ ಜಿ. ವೆಂಕಟೇಶ್, ಉಪನ್ಯಾಸಕರು' ಸುಂದರಂ ಆರ್.ವಿ.ಎಸ್., ಆಶಾದೇವಿ ಎಂ.ಎಸ್., ನಾರಾಯಣಸ್ವಾಮಿ ಕೆ.ವೈ., ರಾಮೇಗೌಡ, ನಾರಾಯಣ ಪಿ.ವಿ., ಪದ್ಮಾ ಎಂ.ಎಸ್., ವಿನಯಾ ಒಕ್ಕುಂದ, ಬಸವರಾಜ ಕಲ್ಗುಡಿ, ಪ್ರೊ.ಸಿ. ಮಹಾದೇವಪ್ಪ ಅವರಿಗೆ ಗುರುವಂದನೆ, ಸನ್ಮಾನಿಸುವವರು: ಗುರುರಾಜ ಕರಜಗಿ, ನಾ. ಸೋಮೇಶ್ವರ, ಜಯರಾಂ ರಾಯಪುರ, ಅಧ್ಯಕ್ಷತೆ ಬಿ. ಪ್ರಸನ್ನಯ್ಯ, ಆಯೋಜನೆ: ಕಮಲಾ ಹಂಪನಾ ಸಾಹಿತ್ಯ ವೇದಿಕೆ, ಕರ್ನಾಟಕ ಜೈನ ಅಸೋಸಿಯೇಷನ್, ಸ್ಥಳ: ಕರ್ನಾಟಕ ಜೈನ ಭವನ, ಕೆ.ಆರ್. ರಸ್ತೆ, ಬೆಳಿಗ್ಗೆ 10

ಎಚ್.ಎಸ್. ಶಿವಪ್ರಕಾಶ್

'ಶ್ರೀರಾಮೋತ್ಸವ' ಸಂಗೀತ ಕಾರ್ಯಕ್ರಮ: ಪ್ರವಚನ: ಅಯನೂರು ಮಧುಸೂದನಾಚಾರ್ಯ, ದೇವರನಾಮ: ಶ್ರೀವಳ್ಳಿ ಸುಬ್ರಹ್ಮಣ್ಯ, ಗಾಯನ: ಸಿರಿಕೃಷ್ಣ ಯು. ಹಿಂದೂಪುರ, ಹಾರ್ಮೋನಿಯಂ: ಶ್ರೀರಕ್ಷಾ ಶಾನಬಾಗ್, ತಬಲಾ: ಪ್ರಹ್ಲಾದ ದೇಶಪಾಂಡೆ, ಆಯೋಜನೆ: ಶ್ರೀರಾಮ ಭಕ್ತ ಸಭಾ, ಸ್ಥಳ: ಶ್ರೀಕಂಠೇಶ್ವರ ಭವನ, ಮಲ್ಲೇಶ್ವರ, ಸಂಜೆ 6.15

'ಎಸ್.ವಿ. ನಾರಾಯಣಸ್ವಾಮಿರಾವ್ ರಾಷ್ಟ್ರೀಯ ಪ್ರಶಸ್ತಿ' ಪ್ರದಾನ ಸಮಾರಂಭ: ಮುಖ್ಯ ಅತಿಥಿ: ಎಚ್. ಆರ್. ನಾಗೇಂದ್ರ, ಗೌರವ ಅತಿಥಿ: ಕೆ. ರಾಧಾಕೃಷ್ಣ, ಎಸ್.ಆರ್. ರಾಮಸ್ವಾಮಿ, ಕೆ.ಸಿ. ರಾಮಮೂರ್ತಿ, ಪ್ರಶಸ್ತಿ ಪುರಸ್ಕೃತರು: ಎ. ಕನ್ಯಾಕುಮಾರಿ, ಎಲ್ಲಾ ವೆಂಕಟೇಶ್ವರರಾವ್, ಸಂಗೀತ ಕಛೇರಿ, ಆಯೋಜನೆ: ಶ್ರೀ ರಾಮಸೇವಾ ಮಂಡಳಿ ಟ್ರಸ್ಟ್, ಸ್ಥಳ: ಗಾಯನ ಸಮಾಜ ಸಭಾಂಗಣ, ಕೆ.ಆರ್. ರಸ್ತೆ, ಸಂಜೆ 5.15

ಕೆ.ಎಂ. ಮುನ್ಷೀಜೀಯವರ ಪ್ರತಿಮೆ ಅನಾವರಣ ಮತ್ತು ಇ.ಎಸ್.ವಿ. ಸಭಾಂಗಣ ಉದ್ಘಾಟನೆ: ರಾಜ್ಯಪಾಲ ಥಾವರಚಂದ್ ಗೆಹಲೋತ್, ಅಧ್ಯಕ್ಷತೆ: ಜಗದೀಶ್ ಲಖಾನಿ, ಆಯೋಜನೆ ಹಾಗೂ ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 6

ರಾಮನವಮಿ ಕಾರ್ಯಕ್ರಮ: ಗಮಕ: ಎನ್. ಶ್ರೀಮತಿ ಜಯರಾಂ, ಪಿಟೀಲು: ಜ್ಯೋತ್ಸ್ನಾ ಮಂಜುನಾಥ್, ಮೃದಂಗ: ಬೆಂಗಳೂರು ರಾಮನಾಥ್, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

ಪ್ರವಚನ ವಾಹಿನಿ: 'ಚಿರಂಜೀವಿ ಚಿಂತನೆ' ಕುರಿತು ಪ್ರವಚನ: ಎಚ್. ಸತ್ಯನಾರಾಯಣಾಚಾರ್ಯ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್‌ನ ಸಾಂಸ್ಕೃತಿಕ ಮಂದಿರ, ಜಯನಗರ, ಸಂಜೆ 6.30

'ಸಮರ್ಪಣಂ ಸಂಗೀತಂ': ಕರ್ನಾಟಕ ಶಾಸ್ತ್ರೀಯ ಸಂಗೀತ ಸೇವಾ ಕೈಂಕರ್ಯ, ವೀಣಾ ವಾದನ: ಮೈಸೂರು ಎಲ್. ಲೀಲಾ, ಆಯೋಜನೆ: ವಿಜಯ ಪದ್ಮ ಸಂಗೀತ ಶಾಲೆ, ಸ್ಥಳ: ಶ್ರೀನಿಧಿ ಶ್ರೀನಿವಾಸ ದೇವಸ್ಥಾನ, ಚುಂಚಘಟ್ಟ, ಕೋಣನಕುಂಟೆ, ಸಂಜೆ 6.30

ಶ್ರೀರಾಮ ನವಮಿ ಉತ್ಸವ: ಗಾಯನ: ವಿನಯ್ ಶರ್ಮಾ, ಪಿಟೀಲು: ವೈಭವ್ ರಮಣಿ, ಮೃದಂಗ: ಅನಿರುದ್ಧ ಭಟ್, ಮೋರ್ಸಿಂಗ್: ಭಾಗ್ಯಲಕ್ಷ್ಮಿ ಎಂ. ಕೃಷ್ಣ, ಆಯೋಜನೆ: ವೈಯಾಲಿ ಕಾವಲ್ ಎಕ್ಸ್‌ಟೆನ್ಷನ್ ಅಸೋಸಿಯೇಷನ್, ಸ್ಥಳ: ಶ್ರೀರಾಮ ದೇವಸ್ಥಾನ, ವೈಯಾಲಿ ಕಾವಲ್, ಸಂಜೆ 6.30

'ಅರಣ್ಯ ಕಾಂಡ' ನಾಟಕ ಪ್ರದರ್ಶನ: ರಚನೆ: ಪ್ರಸನ್ನ, ನಿರ್ದೇಶನ: ಶ್ರೀಪಾದ್ ಭಟ್, ಸಂಗೀತ: ಅನುಷ್ ಶೆಟ್ಟಿ, ತಂಡ: ನವೋದಯ, ಆಯೋಜನೆ: ರಂಗಾಸ್ಥೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 7.30

ಸಂಕ್ಷಿಪ್ತ ಸುದ್ದಿ

ಪಿಎಫ್ ಅದಾಲತ್ 27ಕ್ಕೆ

ಬೆಂಗಳೂರು: ಭವಿಷ್ಯ ನಿಧಿಯ ಬೆಂಗಳೂರು ಪ್ರಾದೇಶಿಕ ಆಯುಕ್ತರ ಕಚೇರಿ ವತಿಯಿಂದ ಮಾರ್ಚ್ 27ರಂದು ಬೆಳಿಗ್ಗೆ 9 ಗಂಟೆಗೆ 'ನಿಧಿ ಆಪ್ ಕೆ ನಿಕಟ್' ಅದಾಲತ್ ಆಯೋಜಿಸಿದೆ.

ಕಂಬಿಪುರದಲ್ಲಿರುವ ರಾಜರಾಜೇಶ್ವರಿನಗರ ವೈದ್ಯ ಕಾಲೇಜು ಮತ್ತು ಆಸ್ಪತ್ರೆ ಹಾಗೂ ರಾಮನಗರದ ಕಸಬಾ ಹೋಬಳಿ ಬಸವನಪುರದಲ್ಲಿರುವ ಆದಿತ್ಯ ಬಿರ್ಲಾ ಫ್ಯಾಷನ್ ರೀಟೈಲ್ ಲಿಮಿಟೆಡ್ ಕಚೇರಿಯಲ್ಲಿ ಅದಾಲತ್ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ವಿವಿಧೆಡೆ 'ಯೆಲ್ಲೊ ಅಲರ್ಟ್'

ಬೆಂಗಳೂರು: ರಾಜ್ಯದ ವಿವಿಧೆಡೆ ಶನಿವಾರ ಗುಡುಗು ಸಹಿತ ಮಳೆಯಾಗಲಿದ್ದು, ಬೆಂಗಳೂರು ಸೇರಿ 9 ಜಿಲ್ಲೆಗಳಿಗೆ ಹವಾಮಾನ ಇಲಾಖೆ 'ಯೆಲ್ಲೊ ಅಲರ್ಟ್' ಘೋಷಿಸಿದೆ.

ಬೀದರ್, ಕಲಬುರಗಿ, ಮೈಸೂರು, ಚಾಮರಾಜನಗರ, ರಾಮನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದ್ದು, ಭಾನುವಾರ ಗುಡುಗು ಸಹಿತ ಮಳೆಯಾಗುವ ಮುನ್ಸೂಚನೆ ನೀಡಲಾಗಿದೆ ಎಂದು ಇಲಾಖೆ ಹೇಳಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಂಜೆ ಅವಧಿಯಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ.

ವಿಶ್ವಕರ್ಮ ಜನಜಾಗೃತಿ ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತದ ಆಭರಣ ಕಲಾತ್ಮಕತೆ ವಿಶ್ವದ ಇನ್ಯಾವ ದೇಶದಲ್ಲೂ ಇಲ್ಲ. ಇದು ನಮ್ಮ ವಿಶ್ವಕರ್ಮರ ಶೈಲಿ' ಎಂದು ಸಾಹಿತಿ ಚಂದ್ರಶೇಖರ ಕಂಬಾರ ಹೇಳಿದರು.

ವಿಶ್ವಕರ್ಮ ಸೇವಾ ಪ್ರತಿಷ್ಠಾನದ ವತಿಯಿಂದ ಶುಕ್ರವಾರ ಆಯೋಜಿಸಿದ್ದ ರಾಜ್ಯಮಟ್ಟದ ವಿಶ್ವಕರ್ಮ ಸಮಾಜದ ಬೃಹತ್ ಜನಜಾಗೃತಿ ಸಮಾವೇಶದಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

'ಇಂಗ್ಲೆಂಡ್‌ನಲ್ಲಿ ವಿಶ್ವ ಆಭರಣ ಮೇಳದಲ್ಲಿ ಭಾಗವಹಿಸಿದ್ದಾಗ ಅಲ್ಲಿನ ತಜ್ಞರು ಭಾರತದ ಆಭರಣಗಳನ್ನು ಪ್ರಶಂಸಿಸಿದರು. ಅವುಗಳೇ ಉತ್ತಮ ಎಂದರು. ಏಕೆ ಎಂದು ಕೇಳಿದಾಗ, ಬೇರೆ ದೇಶಗಳ ಆಭರಣಗಳು ಜಿಯೊಮೆಟ್ರಿಗೆ ಅನುಗುಣವಾಗಿರುತ್ತವೆ. ಆದರೆ, ಭಾರತದ ಆಭರಣಗಳು ವಕ್ರರೇಖೆಯ ಕಲಾಕೃತಿಗಳಲ್ಲಿ ಅದ್ಭುತವಾಗಿರುತ್ತವೆ. ಇದು ನಮ್ಮ ವಿಶ್ವಕರ್ಮರ ಸಾಧನೆ' ಎಂದು ಕಂಬಾರ ನುಡಿದರು.

'ಸಂಸ್ಕೃತಿಗಳನ್ನು ಅಳವಡಿಸಿಕೊಂಡು ತಮ್ಮ ಪ್ರತಿಭೆಯನ್ನು ತೋರಿಸಿ, ಪ್ರಸಿದ್ಧರಾಗಿರುವ ವಿಶ್ವಕರ್ಮರು ಒಗ್ಗಟ್ಟಾಗಬೇಕು. ಇದರಿಂದ ಎಲ್ಲವನ್ನೂ ಸಾಮಾಜಿಕವಾಗಿ ಪಡೆಯಲು ಸಾಧ್ಯ' ಎಂದರು.

ವಿಶ್ವಕರ್ಮ ಜಗದ್ಗುರು ಪೀಠದ ಶಿವಜ್ಞಾನತೀರ್ಥ ಸ್ವಾಮೀಜಿ, ಸಿಂದಗಿಯ ಶೈಲಸ್ವಾಮಿ ಮೂರುಝಾವದಮಠದ ರಾಮಚಂದ್ರ ಸ್ವಾಮೀಜಿ, ಸ್ವಯಂ ಉದ್ಧವ ಅಭಯಹಸ್ತ ಆದಿಲಕ್ಷ್ಮಿ ಸಂಸ್ಥಾನದ ನೀಲಕಂಠಾಚಾರ್ಯ ಸ್ವಾಮೀಜಿ, ಶಂಕರಾತ್ಮಾನಂದ ಸರಸ್ವತಿ ಸ್ವಾಮೀಜಿ ಆಶೀರ್ವಚನ ನೀಡಿದರು.

ವಿಶ್ವಕರ್ಮ ಸೇವಾ ಪ್ರತಿಷ್ಠಾನದ ಕಾರ್ಯಾಧ್ಯಕ್ಷ ಬಿ.ಎಂ. ಉಮೇಶ್ ಕುಮಾರ್ ನೇತೃತ್ವದಲ್ಲಿ ನಡೆದ ಸಮಾವೇಶದಲ್ಲಿ ನಟಿ ಭವ್ಯಾ, ನಟ ಚಿದಾನಂದ, ಪಂಚ ಶಿಲ್ಪಿಗಳು ಸೇರಿದಂತೆ 12 ಮಂದಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಮಾವೇಶದಲ್ಲಿ 50 ಅಡಿ ಎತ್ತರದ ವಿಶ್ವಕರ್ಮರ ಚಿತ್ರಪಟವನ್ನು ಪ್ರದರ್ಶಿಸಲಾಗಿತ್ತು. ವಿಶ್ವಕರ್ಮರ ಮೂರ್ತಿಗಳನ್ನು ಸ್ಥಾಪಿಸಿದ್ದು ಆಕರ್ಷಕವಾಗಿತ್ತು.

ಎನ್. ವೀರಂಭಟ್ಟಯ್ಯ ಸ್ವಾಮಿ, ವಿಧಾನ ಪರಿಷತ್ ಸದಸ್ಯ ಟಿ.ಎ. ಶರವಣ, ವಿಶ್ವಕರ್ಮ ಸೇವಾ ಪ್ರತಿಷ್ಠಾನದ ಅಧ್ಯಕ್ಷ ಕೆ.ಎಸ್. ಪ್ರಭಾಕರ್ ಇದ್ದರು.

ರಾಜ್ಯ ಮಟ್ಟದ ವಿಶ್ವಕರ್ಮ ಸಮಾಜದ ಬೃಹತ್ ಜನಜಾಗೃತಿ ಸಮಾವೇಶದಲ್ಲಿ ಸಾಹಿತಿ ಚಂದ್ರಶೇಖರ ಕಂಬಾರ ಅವರನ್ನು ಸನ್ಮಾನಿಸಲಾಯಿತು. ವಿಶ್ವಕರ್ಮ ಸೇವಾ ಪ್ರತಿಷ್ಠಾನದ ಕಾರ್ಯಾಧ್ಯಕ್ಷ ಬಿ.ಎಂ.ಉಮೇಶ್ ಕುಮಾರ್, ಶಿವಸುಜ್ಞಾನತೀರ್ಥ ಸ್ವಾಮೀಜಿ, ವೀರಭಟ್ಟಯ್ಯ ಸ್ವಾಮಿ, ಬಿ. ರುದ್ರಚಾರ್ ಇದ್ದರು – ಪ್ರಜಾವಾಣಿ ಚಿತ್ರ

ಕಗ್ಗಲೀಪುರ: ಅರಣ್ಯ ಒತ್ತುವರಿ ತೆರವು

ಬೆಂಗಳೂರು: ಕಗ್ಗಲಿಪುರ ವ್ಯಾಪ್ತಿಯ ಬಿ.ಎಂ. ಕಾವಲ್‌ನಲ್ಲಿ 9 ಎಕರೆ 20 ಗುಂಟೆ ಒತ್ತುವರಿ ಪ್ರದೇಶವನ್ನು ರಾಜ್ಯ ಅರಣ್ಯ ಇಲಾಖೆ ತೆರವುಗೊಳಿಸಿದೆ.

ಭುವನ ಕಂಫರ್ಟ್ಸ್ ರಿಲೇಟರ್‌ನಿಂದ 6 ಎಕರೆ 18 ಗುಂಟೆ ಹಾಗೂ ಖೋಡೇಸ್ ಗ್ರೂಪ್ ವತಿಯಿಂದ 3 ಎಕರೆ 2 ಗುಂಟೆ ಅರಣ್ಯ ಪ್ರದೇಶ ಒತ್ತುವರಿಯಾಗಿತ್ತು. ಬೆಂಗಳೂರು ದಕ್ಷಿಣದ ಎಸಿಎಫ್, ಕಗ್ಗಲಿಪುರ ಆರ್‌ಎಫ್‌ಒ, ಉತ್ತರಹಳ್ಳಿ ಡಿಆರ್‌ಎಫ್‌ಒ ನೇತೃತ್ವದಲ್ಲಿ ಒತ್ತುವರಿ ತೆರವು ಕಾರ್ಯಾಚರಣೆ ಶುಕ್ರವಾರ ನಡೆಯಿತು.

ಉಜ್ವಲ ಯೋಜನೆ: ಸಬ್ಸಿಡಿ ವಿಸ್ತರಣೆ

ನವದೆಹಲಿ (ಪಿಟಿಐ): ಪ್ರಧಾನ ಮಂತ್ರಿ ಉಜ್ವಲ ಯೋಜನೆಯ (ಪಿಎಂಯುವೈ) ಅಡಿ ಪ್ರತಿ ಎಲ್‌ಪಿಜಿ ಸಿಲಿಂಡರ್‌ಗೆ ನೀಡುವ ₹ 200 ಸಬ್ಸಿಡಿಯನ್ನು ಕೇಂದ್ರ ಸರ್ಕಾರವು ಒಂದು ವರ್ಷದ ಅವಧಿಗೆ ವಿಸ್ತರಿಸಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಹೆಚ್ಚಿರುವ ಕಾರಣ ಹೀಗೆ ಮಾಡಲಾಗಿದೆ.

ಕೇಂದ್ರದ ಈ ತೀರ್ಮಾನದಿಂದಾಗಿ 9.6 ಕೋಟಿ ಕುಟುಂಬಗಳಿಗೆ ಪ್ರಯೋಜನ ಆಗಲಿದೆ. ಹಣಕಾಸು ವ್ಯವಹಾರಗಳಿಗೆ ಸಂಬಂಧಿಸಿದ ಸಂಪುಟ ಸಮಿತಿಯು ಈ ತೀರ್ಮಾನ ಕೈಗೊಂಡಿದೆ ಎಂದು ವಾರ್ತೆ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ಸುದ್ದಿಗಾರರಿಗೆ ತಿಳಿಸಿದ್ದಾರೆ. ಸಬ್ಸಿಡಿ ಮೊತ್ತವನ್ನು ಫಲಾನುಭವಿಗಳ ಖಾತೆಗೆ ನೇರವಾಗಿ ವರ್ಗಾವಣೆ ಮಾಡಲಾಗುತ್ತದೆ.

'ಉದ್ಯೋಗ ಖಾತರಿ ಉಳಿಸಿ' ಹೋರಾಟ

ನವದೆಹಲಿ: ನವದೆಹಲಿಯಲ್ಲಿ ನಡೆಯುತ್ತಿರುವ 100 ದಿನಗಳ 'ಉದ್ಯೋಗ ಖಾತರಿ ಉಳಿಸಿ' ಹೋರಾಟದಲ್ಲಿ ಕರ್ನಾಟಕ ಕೂಲಿಕಾರರು ಶುಕ್ರವಾರ ಭಾಗವಹಿಸಿದರು.

ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆಯ ಅನುದಾನವನ್ನು ವರ್ಷದಿಂದ ವರ್ಷಕ್ಕೆ ಕಡಿಮೆ ಮಾಡಿರುವುದು, ಕೂಲಿಕಾರರ ಹಾಜರಿಯ ಡಿಜಿಟಲೀಕರಣ ಮತ್ತು ಇತ್ತೀಚೆಗೆ ಜಾರಿಯಲ್ಲಿ ತಂದಿರುವ ಆಧಾರ್ ಆಧರಿತ ಸಂಬಳ ನೀಡಿಕೆ ವ್ಯವಸ್ಥೆಯನ್ನು ವಿರೋಧಿಸಿ ಜಂತರ್ ಮಂತರ್‌ನಲ್ಲಿ ಫೆಬ್ರುವರಿ 13ರಿಂದ ಧರಣಿ ಸತ್ಯಾಗ್ರಹ ನಡೆಸಲಾಗುತ್ತಿದೆ. ಕರ್ನಾಟಕದಿಂದ ಹೋರಾಟಗಾರರಾದ ಶಾರದಾ ಗೋಪಾಲ, ದು.ಸರಸ್ವತಿ ನೇತೃತ್ವದಲ್ಲಿ ಕೂಲಿಕಾರರು ಭಾಗವಹಿಸಿ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದರು.

ಹೈಕೋರ್ಟ್‌ಗೆ ಶಾಸಕ ಓಲೇಕಾರ ಅರ್ಜಿ

ಬೆಂಗಳೂರು: ರಾಜ್ಯ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿದ ಮತ್ತು ಸ್ವಜನ ಪಕ್ಷಪಾತದ ಆರೋಪದಡಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಿಂದ ಎರಡು ವರ್ಷಗಳ ಜೈಲು ಶಿಕ್ಷೆಗೆ ಗುರಿಯಾಗಿರುವ ಹಾವೇರಿ ಕ್ಷೇತ್ರದ ಬಿಜೆಪಿ ಶಾಸಕ ನೆಹರು ಓಲೇಕಾರ ತಮ್ಮನ್ನು ದೋಷಿ ಎಂದು ಪರಿಗಣಿಸಿರುವ ವಿಚಾರಣಾ ನ್ಯಾಯಾಲಯದ ಆದೇಶ ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

14ನೇ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ನಟಿ ಹೇಮಾ ಹೇಳಿಕೆ

‘ಅಭಿನಯವೂ ಪಠ್ಯ ವಿಷಯವಾಗಲಿ’

● ನವೀನ್‌ಕುಮಾರ್ ಜಿ.

ಬೆಂಗಳೂರು: ‘ಶಾಲೆಗಳಲ್ಲಿ ಇತರ ವಿಷಯಗಳನ್ನು ಕಲಿಸಿದಂತೆ ಅಭಿನಯ ಕೂಡ ಪಠ್ಯ ವಿಷಯವಾಗಬೇಕು. ಹಾಗಾದರೆ ಮಕ್ಕಳಿಗೆ ಮುಂದೆ ಸಿನಿಮಾ ಕ್ಷೇತ್ರಕ್ಕೆ ಪ್ರವೇಶಿಸಲು ಅನುಕೂಲವಾಗುತ್ತದೆ’ ಎಂದು ಚಿತ್ರನಟಿ ಹೇಮಾ ಪಂಚಮುಖಿ ಆಶಯ ವ್ಯಕ್ತಪಡಿಸಿದರು.

ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ‘ಮಕ್ಕಳ ಸಿನಿಮಾ- ಮುಂದಿನ ದಾರಿ’ ಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಶಾಲೆಯಲ್ಲೇ ಅಭಿನಯ ಕಲಿಸಿದರೆ ಪೋಷಕರು ಕೂಡ ತಮ್ಮ ಮಕ್ಕಳನ್ನು ಇತರ ಕಲಿಕಾ ಚಟುವಟಿಕೆಗಳಿಗೆ ಕಳುಹಿಸಿದಂತೆ ಸಿನಿಮಾ ಕ್ಷೇತ್ರಕ್ಕೂ ಕಳುಹಿಸುತ್ತಾರೆ’ ಎಂದರು.

‘ದೃಶ್ಯ ಮಾಧ್ಯಮವು ಪುಸ್ತಕದ ಓದಿಗಿಂತಲೂ ಹೆಚ್ಚು ಪರಿಣಾಮಕಾರಿ. ಇದು ಮಕ್ಕಳ ಮನಸ್ಸಿನಲ್ಲಿ ಗಾಢವಾಗಿ ಪ್ರಭಾವ ಬೀರುತ್ತದೆ. ಆದರೆ ಕೆಟ್ಟ ಪರಿಣಾಮ ಬೀರದಂತೆ ಎಚ್ಚರಿಕೆ ವಹಿಸುವ ಜವಾಬ್ದಾರಿ ಪೋಷಕರ ಮೇಲಿದೆ’ ಎಂದೂ ಹೇಳಿದ್ದಾರೆ.

‘ಮಕ್ಕಳ ಮುಗ್ಧತೆಯನ್ನು ಇಟ್ಟುಕೊಂಡು ಸಿನಿಮಾ ಮಾಡಿ, ಸಿನಿಮಾಗಳಲ್ಲಿ ದೊಡ್ಡವರು ಹೇಳುವ ಸಂಭಾಷಣೆಗಳನ್ನು ಮಕ್ಕಳ ಬಾಯಲ್ಲಿ ಹೇಳಿಸಿ ಸಮಾಜಕ್ಕೆ ಕೆಟ್ಟ ಸಂದೇಶವನ್ನು ನೀಡಬೇಡಿ’ ಎಂದೂ ಅವರು ಕಿವಿಮಾತು ಹೇಳಿದರು.

ಮಾಸ್ಟರ್ ಮಂಜುನಾಥ್ ಮಾತನಾಡಿ, ‘ಮಕ್ಕಳ ಸಿನಿಮಾಗಳು ದೊಡ್ಡವರ ಮೇಲೂ ಪರಿಣಾಮ ಬೀರುವಂತಿರಬೇಕು. ಹಾಗಿದ್ದರೆ ಮಾತ್ರ ಅಂತಹ ಚಿತ್ರಗಳು ಯಶಸ್ವಿಯಾಗುತ್ತವೆ. ಇಂದು ಮಕ್ಕಳಿಗೂ ದೊಡ್ಡವರಿಗೂ ಇಷ್ಟವಾಗುವ ಸಿನಿಮಾಗಳು ಕಡಿಮೆಯಾಗುತ್ತಿವೆ’ ಎಂದೂ ಖೇದ ವ್ಯಕ್ತಪಡಿಸಿದರು.

‘ನಾನು ಬಾಲನಟನಾಗಿ ಅಭಿನಯಿಸುತ್ತಿದ್ದ ಕಾಲದಲ್ಲಿ ಸಾಮಾಜಿಕ ಮಾಧ್ಯಮಗಳು ಇರಲಿಲ್ಲ. ಹಾಗಾಗಿ ನಮ್ಮನ್ನು ಗುರುತಿಸುವವರ ಸಂಖ್ಯೆ ಕೂಡ ಸೀಮಿತವಾಗಿತ್ತು. ಇಂದು ಕಾಲ ಬದಲಾಗಿದೆ ಸಾಮಾಜಿಕ ಮಾಧ್ಯಮಗಳ ಮೂಲಕ ಅಲ್ಪ ಕಾಲದಲ್ಲೇ ಪ್ರಸಿದ್ಧಿ ಪಡೆಯಬಹುದು’ ಎಂದು ಅಭಿಪ್ರಾಯಪಟ್ಟರು.



ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಗೋಷ್ಠಿಯಲ್ಲಿ ಚಿತ್ರನಟಿ ಹೇಮಾ ಪಂಚಮುಖಿ ಮಾತನಾಡಿದರು. ಮಾಸ್ಟರ್ ಮಂಜುನಾಥ್ ಮತ್ತು ಮಾಸ್ಟರ್ ಆನಂದ್ ಇದ್ದರು

‘ಕ್ರೇನ್ ಲ್ಯಾಂಟರ್ನ್’ ಎಂಬ ದೃಶ್ಯಕಾವ್ಯ

ಚಲನಚಿತ್ರೋತ್ಸವದ ಮೊದಲ ದಿನ ಪ್ರದರ್ಶನಗೊಂಡ ಅಜರ್ಬೈಜಾನ್ ದೇಶದ 'ಕ್ರೇನ್ ಲ್ಯಾಂಟರ್ನ್ ಎಂಬ ಸಿನಿಮಾವೂ ಪ್ರೇಕ್ಷಕರ ಮನಗೆಲ್ಲುವಲ್ಲಿ ಯಶಸ್ವಿಯಾಯಿತು.

2021ರಲ್ಲಿ ಬಿಡುಗಡೆಗೊಂಡಿದ್ದ ಹಿಲಾಲ್ ಬೈದರೋವ್ ನಿರ್ದೇಶನದ ಈ ಚಿತ್ರವು ಕಾನೂನು ವಿದ್ಯಾರ್ಥಿಯೊಬ್ಬ ಅಪರಾಧಿಯೊಬ್ಬನ ಹಿನ್ನೆಲೆ ಅರಸಿ ಸಾಗುವ ರೋಚಕ ಕಥನವನ್ನು ಹೊಂದಿದೆ.

ನಾಲ್ವರು ಮಹಿಳೆಯರನ್ನು ಅಪಹರಿಸಿದ್ದಕ್ಕಾಗಿ ಜೈಲಿನಲ್ಲಿರುವ ದಾವೂದ್ ಎಂಬಾತ ಈ ಚಿತ್ರದ ಪ್ರಮುಖ ಕೇಂದ್ರ ಬಿಂದು.

ಈ ಚಿತ್ರದುದ್ದಕ್ಕೂ ದಾವೂದ್ ಹಾಗೂ ಸಂತ್ರಸ್ತೆಯರು ತೋರಿಕೆಯ ಬಲಿಪಶುಗಳಂತೆ ಕಂಡುಬರುತ್ತಾರೆ. ಇಡೀ ಚಿತ್ರದುದ್ದಕ್ಕೂ ವಿಷಾದದ ಛಾಯೆ ಮೂಡಿ ಬಂದು ಮನಸ್ಸನ್ನು ಆರ್ದ್ರಗೊಳಿಸುತ್ತದೆ. ಕಾಡು, ಮರುಭೂಮಿ, ಹಿಮಪಾತ, ಹಕ್ಕಿಗಳ ಕಲರವ, ಮಿಡತೆಗಳ ಸದ್ದು ಇವೆಲ್ಲವೂ ಈ ಚಿತ್ರದ ಚೌಕಟ್ಟಿನೊಳಗೆ ಮೂಡಿ ಬಂದು ಪ್ರೇಕ್ಷಕರಿಗೆ ವಿಭಿನ್ನವಾದ ದೃಶ್ಯಕಾವ್ಯಾನುಭವ ಉಂಟು ಮಾಡುತ್ತದೆ.

ಸಾಮಾಜಿಕ ಮಾಧ್ಯಮಗಳು ಮಕ್ಕಳ ಮೇಲೆ ದುಷ್ಪರಿಣಾಮ ಬೀರದಂತೆ ಪೋಷಕರು ಎಚ್ಚರದಿಂದಿರಬೇಕು
ಹೇಮಾ ಪಂಚಮುಖಿ, ನಟಿ

ಎಲ್ಲಾ ಸೌಕರ್ಯಗಳು ಒಂದೇ ಸೂರಿನಡಿ ಸಿಗುವಂತಹ ಚಿತ್ರನಗರಿಗಳನ್ನು ನಿರ್ಮಿಸಲು ಸರ್ಕಾರ ಮುಂದಾಗಬೇಕು
ಮಾಸ್ಟರ್ ಮಂಜುನಾಥ್, ನಟ

ಬಾಲ ಕಲಾವಿದರಿಗೆ ಸಿನಿಮಾ ಮತ್ತು ವಾಸ್ತವಿಕತೆಯ ಅರಿವನ್ನು ಪೋಷಕರು ಮಾಡಿಕೊಡಬೇಕು. ಇಲ್ಲದಿದ್ದರೆ ಅವರ ಭವಿಷ್ಯ ಅತಂತ್ರವಾಗುವ ಅಪಾಯವಿದೆ
ಮಾಸ್ಟರ್ ಆನಂದ್, ನಟ

'1980, 90ರ ದಶಕಗಳ ಬಳಿಕ ಸಿನಿಮಾಗಳಲ್ಲಿ ಮಕ್ಕಳ ಪಾತ್ರಗಳು ಕಡಿಮೆಯಾಗಿವೆ. ಮಕ್ಕಳ ಸಿನಿಮಾ ಎಂದು ಮುದ್ರೆಯೊತ್ತಿರುವ ಸಿನಿಮಾಗಳಲ್ಲಿ ಮಾತ್ರವಲ್ಲ ಪ್ರತಿ ಸಿನಿಮಾದಲ್ಲೂ ಅವರ ಪಾತ್ರಗಳು ಇರಬೇಕು’ ಎಂದರು.

ಮಾಸ್ಟರ್ ಆನಂದ್ ಮಾತನಾಡಿ, ‘ಇಂದು ‘ಬೇಡಿಕೆ’ ಮತ್ತು ‘ವಿತರಣೆ’ಯ ಕಾಲ. ಹಾಗಾಗಿ ಸಿನಿಮಾದ ವಿಷಯ ಮುಖ್ಯವಾಗಿರುತ್ತದೆ. ರೋಚಕ ವಿಷಯಗಳುಳ್ಳ ಮಕ್ಕಳ ಸಿನಿಮಾಗಳು ನಿರ್ಮಾಣವಾದರೆ ಅದಕ್ಕೂ ಬೇಡಿಕೆ ಬರುತ್ತದೆ’ ಎಂದರು.

‘ಮಕ್ಕಳ ಸಿನಿಮಾ ನಿರ್ಮಾಣಕ್ಕೆ ಸರ್ಕಾರವು ನೆರವು ನೀಡಿದರೆ ಸಾಲದು. ಇಂತಹ ಸಿನಿಮಾಗಳ ವಿಷಯವನ್ನು ಆಯ್ಕೆ ಮಾಡುವ ಸಮಿತಿಯನ್ನು ರಚಿಸಬೇಕು ಎಂದು ಆಗ್ರಹಿಸಿದರು.

ವಿಶ್ವ ಚಿತ್ರಗಳ ಬೆಳ್ಳಿ ಚಿತ್ತಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅದೆಷ್ಟೋ ಕತೆಗಳು, ಮಾತು– ಕತೆಗಳು, 10 ಬೆಳ್ಳಿ ಪರದೆಗಳ ಮೇಲೆ ಫಳ್ಳನೆ ಮೂಡುವ ಬೆಳಕು ಚಿತ್ರ ನಿರ್ಮಾಪಕ ನಿರ್ದೇಶಕರ, ಪ್ರೇಕ್ಷಕರ ಮುಖದಲ್ಲಿ ಮೂಡಿಸುವ ಬೆರಗು, ಸಣ್ಣಗಿನ ಅಭಿಮಾನದ ಚಪ್ಪಾಳೆ, ಪುಟ್ಟ ಹರಟೆ... ಹೀಗೆ ಇನ್ನೂ ಏನೇನೋ ವರ್ಣ– ರಂಜಿತ ನೋಟಗಳು.

ಇದು ನಗರದ ಒರಾಯನ್ ಮಾಲ್‌ನಲ್ಲಿ ಶುಕ್ರವಾರ ಆರಂಭವಾದ 14ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವದ ನೋಟ. ಒರಾಯನ್ ಮಾಲ್‌ನಲ್ಲಿ ಇಂದು 32 ಚಿತ್ರಗಳು ಪ್ರದರ್ಶನಗೊಂಡವು. ಸುಚಿತ್ರಾ ಮತ್ತು ಡಾ.ರಾಜ್‌ಕುಮಾರ್ ಕಲಾ ಭವನದಲ್ಲಿ ಒಟ್ಟು 8 ಚಿತ್ರಗಳು ಪ್ರದರ್ಶನಗೊಂಡವು.

ಹೊಸ ಪ್ರತಿಭೆಗಳು, ಯುವ ನಿರ್ದೇಶಕರು ಅವರ ಅಭಿಮಾನಿಗಳ ದಂಡು ಈ ಚಿತ್ರೋತ್ಸವ ಪರಿಸರದ ಸುತ್ತಮುತ್ತ ಸೇರಿತ್ತು. ನೋಂದಾಯಿತ ಪ್ರತಿನಿಧಿಗಳು, ವಿದ್ಯಾರ್ಥಿಗಳು ಚಿತ್ರ ಪ್ರದರ್ಶನದ ಪಟ್ಟಿಯನ್ನು ತದೇಕಚಿತ್ತದಿಂದ ಗಮನಿಸುತ್ತಾ ಯಾವುದು ಚೆನ್ನಾಗಿದೆ, ಚೆನ್ನಾಗಿಲ್ಲ ಎಂಬ ಚರ್ಚೆ ನಡೆಸುತ್ತಲೇ ಚಿತ್ರ ಮಂದಿರಗಳ ಒಳಗೆ ಹೆಜ್ಜೆ ಹಾಕಿದರು. ಇಂದು ಪ್ರದರ್ಶನಗೊಂಡ ಚಿತ್ರಗಳ ಪೈಕಿ ಸ್ಟೋನ್ ಟರ್ಟಲ್ (ಮಲೇಷ್ಯಾದ ಚಿತ್ರ, ನಿರ್ದೇಶನ: ವೂ ಮಿಂಗ್ ಜಿನ್) ಕ್ಲೋಂಡಿಕ್ (ಉಕ್ರೇನಿ ಭಾಷೆ, ನಿರ್ದೇಶನ: ಮರ್ಯೆನಾ ಎರ್ ಗೊರ್ಬಚ್) ಹೌಸ್‌ಫುಲ್ ಪ್ರದರ್ಶನ ಕಂಡವು. ಸಂಜೆ ವೇಳೆಗೆ ಎಲ್ಲ ಪ್ರದರ್ಶನ ಮಂದಿರಗಳು ಪ್ರೇಕ್ಷಕರಿಂದ ತುಂಬಿದ್ದವು.

ಪ್ರದರ್ಶನ ಮಂದಿರಗಳ ಹೊರಗೆ ಸಿನಿಮಾ ಫಲಕಗಳ ಮುಂದೆ, ಚಿತ್ರೋತ್ಸವದ ಲೋಗೊ, ಬ್ಯಾನರ್ ಮುಂದೆ ಫೋಟೊ ತೆಗೆಸಿಕೊಳ್ಳುವವರ ಸಂಖ್ಯೆಯೂ ದೊಡ್ಡದಿತ್ತು. ನಿರ್ದೇಶಕರೊಂದಿಗೆ ಸಂವಾದ, ಸಮಕಾಲೀನ ಚಿತ್ರಗಳ ಬಗೆಗೆ ಚರ್ಚೆಗಳು ನಡೆದವು.

ವಿ.ಕೆ. ಮೂರ್ತಿ ಅವರ ಶತಮಾನೋತ್ಸವದ ಸಂದರ್ಭದಲ್ಲಿ 14ನೇ ಬೆಂಗಳೂರು ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಶುಕ್ರವಾರ ನಡೆದ ವಿಚಾರಗೋಷ್ಠಿಯಲ್ಲಿ ಸಿನಿಮಾಟೊಗ್ರಾಫರ್‌ಗಳಾದ ಜಿ.ಎಸ್‌. ಭಾಸ್ಕರ್, ಬಿ.ಎಸ್‌. ಬಸವರಾಜು, ಚಿತ್ರ ನಿರ್ದೇಶಕರಾದ ಗೋವಿಂದ್ ನಿಹಲಾನಿ, ರವಿ ಕೆ. ಚಂದನ್‌ –ಪ್ರಜಾವಾಣಿ ಚಿತ್ರ

ತವರೂರಷ್ಟೇ ಅಲ್ಲ, ಬೆವರೂರು ಎಂಬ ಪರಿಕಲ್ಪನೆ ನಮ್ಮದು. ಅದನ್ನು ಈ ಚಿತ್ರದಲ್ಲಿ ಕಟ್ಟಿಕೊಟ್ಟಿದ್ದೇವೆ. ಎಲ್ಲರೂ ಬೆಂಗಳೂರು ಬಗ್ಗೆ ತಿಳಿದುಕೊಳ್ಳಲಿ
ಪ್ರದೀಪ್ ಶಾಸ್ತ್ರಿ, ನಿರ್ದೇಶಕ, ‘ಮೇಡ್ ಇನ್ ಬೆಂಗಳೂರು’

‘ಗುರುಶಿಷ್ಯರು’ ಚಿತ್ರ ದೇಸಿ ಕ್ರೀಡೆಯೊಂದರ ಪುನರುತ್ಥಾನ ಸಂಬಂಧಿಸಿದಂತೆ ನೈಜ ಘಟನೆ ಆಧರಿಸಿಯೇ ಮೂಡಿಬಂದಿದೆ ಎಂಬ ಕಾರಣಕ್ಕೆ ಆಯ್ಕೆ ಮಾಡಲಾಗಿದೆ
ಜಡೇಶ ಕೆ. ಹಂಪಿ, ಚಿತ್ರ ನಿರ್ದೇಶಕ

ಚಿತ್ರೋತ್ಸವದಲ್ಲಿ ಇಂದು

ಒರಾಯನ್ ಮಾಲ್: ಚಿತ್ರಮಂದಿರಗಳ ಸಂಖ್ಯೆ 3ರಿಂದ 10: ವಿವಿಧ ಚಿತ್ರಗಳ ಪ್ರದರ್ಶನ
ಆಡಿಟೋರಿಯಂ 11: ಸಿನಿಮಾಟೋಗ್ರಪಿ ಮಾಸ್ಟರ್ ಕ್ಲಾಸ್ ಬೆಳಿಗ್ಗೆ 11.30
ಆರ್‌ಆರ್‌ಆರ್ ಬಿಹೈಂಡ್ ದಿ ಸ್ಕ್ರೀನ್ ಪ್ಲೇ – ಚಿತ್ರಕಥೆಗಾರ ವಿ. ವಿಜಯೇಂದ್ರ ಪ್ರಸಾದ್ ಮಧ್ಯಾಹ್ನ 3.30

ನಮಗೆ ಇಂಥ ಚಿತ್ರೋತ್ಸವದಲ್ಲಿ ಭಾಗವಹಿಸಿ ಗೊತ್ತಿಲ್ಲ. ರಾಜ್ಯದ ಬೇರೆ ಬೇರೆ ಭಾಗಗಳಲ್ಲಿಯೂ ರಾಜ್ಯಮಟ್ಟದ ಚಿತ್ರೋತ್ಸವಗಳು ಇದೇ ಮಾದರಿಯಲ್ಲಿ ನಡೆಯಬೇಕು.
ಮಹಾದೇವ ಹಡಪದ, ಚಿತ್ರನಟ

ಇದೊಂದು ರಿಫ್ರೆಷ್ ಆಗುವ ಉತ್ಸವ. ಇಲ್ಲಿನ ಚಿತ್ರಗಳಿಂದಲೇ ನಾವು ಎಂತಹ ಚಿತ್ರ ಮಾಡಬಹುದು ಎಂಬ ಐಡಿಯಾಗಳನ್ನು ಪಡೆದಿದ್ದಿದೆ. ವಿಶ್ವದ ಶ್ರೇಷ್ಠ ಸಿನಿಮಾಗಳನ್ನು ನೋಡುವ ಅವಕಾಶ ಇದೊಂದು ತರಬೇತಿಯೂ ಹೌದು.
ಮಂಸೋರೆ, ಚಿತ್ರ ನಿರ್ದೇಶಕ

ತುಂಬಾ ಚೆನ್ನಾಗಿ ಆಯೋಜಿಸಿದ್ದಾರೆ. ಮೊದಲ ದಿನವಾದ ಕಾರಣ ಜನರ ಸಂಖ್ಯೆ ಕಡಿಮೆ ಇದೆ. ಮುಂದೆ ಒಳ್ಳೆಯ ಪ್ರತಿಕ್ರಿಯೆ ಸಿಗುವ ನಿರೀಕ್ಷೆ ಇದೆ. ನಮ್ಮ ಚಿತ್ರವೂ (ಮಾವು ಬೇವು) ಇಲ್ಲಿ ಹೆಚ್ಚು ಜನರಿಗೆ ತಲುಪಿದೆ.
ಪ್ರೊ.ದೊಡ್ಡರಂಗೇಗೌಡ, ಸಾಹಿತಿ

ತೆರಿಗೆದಾರರೇ ಗಮನಿಸಿ!

Azadi Ka Amrit Mahotsav | G20 भारत 2023 INDIA

ಕೆಳಕಂಡ ಸಂದರ್ಭಗಳಲ್ಲಿ ಅಪ್‌ಡೇಟೆಡ್ ರಿಟರ್ನ್‌ಗಳನ್ನು ಸಲ್ಲಿಸಬಹುದು:

- ಒಂದು ವೇಳೆ ಮೂಲ ರಿಟರ್ನ್ಸ್ ಸಲ್ಲಿಸದೆ ಇದ್ದಲ್ಲಿ
- ಒಂದು ವೇಳೆ ನಿಗದಿತ ವೇಳೆಯಲ್ಲಿ ಸಲ್ಲಿಕೆಯಾಗದಿದ್ದಲ್ಲಿ
- ಮೂಲ ರಿಟರ್ನ್ ಮಾರ್ಪಾಡು ಮಾಡಲು–ಒಂದು ವೇಳೆ – ಆದಾಯವನ್ನು ಸರಿಯಾಗಿ ಘೋಷಿಸಿರದಿದ್ದಲ್ಲಿ
  ಆದಾಯದ ಮುಖ್ಯಸ್ಥರನ್ನು ತಪ್ಪಾಗಿ ಆಯ್ಕೆ ಮಾಡಿದ್ದಲ್ಲಿ ಅಥವಾ ತಪ್ಪು ದರದಲ್ಲಿ ತೆರಿಗೆ ಪಾವತಿಸಿದ್ದರೆ
  ಅವಶ್ಯಕ ಕ್ಯಾರೀಡ್ ಫಾರ್ವಾರ್ಡ್ ಲಾಸ್‌ನಲ್ಲಿ ಅಥವಾ ಅನ್‌ಅಬ್ಸಾರ್ಬ್ಡ್ ಡಿಪ್ರಿಸಿಯೇಶನ್‌ನಲ್ಲಿ ಕಡಿತ ಆಗಿದ್ದರೆ
  ಎಂಎಟಿ/ಎಎಂಟಿ ಕ್ರೆಡಿಟ್ ರಿಡಕ್ಷನ್ ಅಗತ್ಯ

ನೀವು ನಿಮ್ಮ 2020–21ನೇ ಹಣಕಾಸು ವರ್ಷದ ಅಪ್‌ಡೇಟೆಡ್ ರಿಟರ್ನ್‌ಗಳನ್ನು
31ನೇ ಮಾರ್ಚ್, 2023 ರೊಳಗೆ ಸಲ್ಲಿಸಬಹುದು
ವಿಳಂಬ ಮಾಡದಿರಿ. ಇಂದೇ ಸಲ್ಲಿಸಿರಿ.

ಒಂದು ವೇಳೆ 31.03.2023 ರೊಳಗೆ ಐಟಿಆರ್–ಯು ಸಲ್ಲಿಸಿದರೆ	ಪಾವತಿಸಬೇಕಾದ ಹೆಚ್ಚುವರಿ ತೆರಿಗೆ ಮೊತ್ತ
2020–2021ನೇ ಹಣಕಾಸು ವರ್ಷಕ್ಕೆ	ಸರಾಸರಿ ತೆರಿಗೆಯ 50% ರಷ್ಟು ಮತ್ತು ಬಡ್ಡಿ ಪಾವತಿಸುವುದು
2021–2022 ಮತ್ತು 2022–2023ನೇ ಹಣಕಾಸು ವರ್ಷಕ್ಕೆ	ಸರಾಸರಿ ತೆರಿಗೆಯ 25% ರಷ್ಟು ಮತ್ತು ಬಡ್ಡಿ ಪಾವತಿಸುವುದು

ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಆದಾಯ ತೆರಿಗೆ ಕಾಯ್ದೆ, 1961ರ ಸೆಕ್ಷನ್ 139(8ಎ) ಮತ್ತು 140ಬಿ ಪರಿಶೀಲಿಸಿರಿ

cbc 15401/13/0021/2223

ಆದಾಯ ತೆರಿಗೆ ಇಲಾಖೆ
ಕೇಂದ್ರೀಯ ನೇರ ತೆರಿಗೆಗಳ ಮಂಡಳಿ
INCOME TAX DEPARTMENT

For e-Brochures scan QR Code
For more information scan QR Code
ಹೆಚ್ಚುವರಿ ಮಾಹಿತಿಗಾಗಿ ಮತ್ತು ಅಪ್‌ಡೇಟೆಡ್ ರಿಟರ್ನ್ ಸಲ್ಲಿಕೆಗಾಗಿ ಭೇಟಿ ಕೊಡಿ: www.incometax.gov.in

@IncomeTaxIndia @IncomeTaxIndiaOfficial @IncomeTaxIndiaOfficial @Income Tax India @Income Tax India Official

ದೇಶದ 2ನೇ ದೊಡ್ಡ ಮೆಟ್ರೊ ಮಾರ್ಗವಾದ ‘ನಮ್ಮ ಮೆಟ್ರೊ’

ವೈಟ್‌ಫೀಲ್ಡ್ ಮೆಟ್ರೊ ಉದ್ಘಾಟನೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಟ್‌ಫೀಲ್ಡ್-ಕೆ.ಆರ್. ಪುರ ನಡುವಿನ ಮೆಟ್ರೊ ರೈಲು ಮಾರ್ಗ ಶನಿವಾರ ಉದ್ಘಾಟನೆಯಾಗಲಿದ್ದು, ಆ ಮೂಲಕ ದೇಶದ ಎರಡನೇ ಅತಿದೊಡ್ಡ ಮೆಟ್ರೊ ರೈಲು ಮಾರ್ಗವಾಗಿ ‘ನಮ್ಮ ಮೆಟ್ರೊ’ ಹೊರ ಹೊಮ್ಮಲಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಹಸಿರು ನಿಶಾನೆ ತೋರಿಸಲಿದ್ದು, ಭಾನುವಾರದಿಂದ ಸಾರ್ವಜನಿಕ ಸಂಚಾರಕ್ಕೆ ಲಭ್ಯವಾಗಲಿದೆ. ‘ನಮ್ಮ ಮೆಟ್ರೊ’ ಎರಡನೇ ಹಂತದ ವಿಸ್ತರಿತ ಮೂರನೇ ಮಾರ್ಗ ಇದಾಗಿದ್ದು, ನಾಗಸಂದ್ರ- ಮಾದಾವರ ನಡುವಿನ ಮಾರ್ಗ ಇನ್ನೂ ಬಾಕಿ ಇದೆ.

ಶನಿವಾರ ಉದ್ಘಾಟನೆಯಾಗುತ್ತಿರುವ ಮಾರ್ಗವನ್ನು ಐಟಿ ಕಾರಿಡಾರ್ ಮಾರ್ಗ ಎಂದು ಕರೆಯಲಾಗುತ್ತಿದೆ. ಆದರೆ, ಬೈಯಪ್ಪನಹಳ್ಳಿಯಿಂದ ಕೆ.ಆರ್.ಪುರ ನಡುವೆ ಕಾಮಗಾರಿ ಬಾಕಿ ಇರುವುದರಿಂದ ನೇರ ಸಂಪರ್ಕಕ್ಕೆ ಪ್ರಯಾಣಿಕರು ಇನ್ನೂ ಮೂರ್ನಾಲ್ಕು ತಿಂಗಳು ಕಾಯಬೇಕಿದೆ. ಆ ತನಕ ಬೈಯ್ಯಪ್ಪನಹಳ್ಳಿ-ಕೆ.ಆರ್.ಪುರ ನಡುವೆ ಬಿಎಂಟಿಸಿ ಫೀಡರ್ ಬಸ್‌ಗಳನ್ನು ಜನ ಅವಲಂಬಿಸಬೇಕಾಗಿದೆ.

ಇದರ ನಡುವೆಯೂ ಹಲವು ಹೆಗ್ಗಳಿಕೆಯನ್ನು ಈ ಮಾರ್ಗ ಹೊಂದಿದೆ. ಈವರೆಗೆ ನಗರದಲ್ಲಿ ಉದ್ಘಾಟನೆಯಾಗಿರುವ ಮೆಟ್ರೊ ಮಾರ್ಗಗಳಲ್ಲೇ ಇದು ಉದ್ದನೆಯ ಮಾರ್ಗ(13.71 ಕಿಲೋ ಮೀಟರ್) ಇದಾಗಿದೆ. ದೇಶದಲ್ಲೇ ಅತೀ ದೊಡ್ಡ ಮೆಟ್ರೊ ಜಾಲ ಹೊಂದಿರುವ ನಗರ ಎಂದರೆ ದೆಹಲಿಯಾಗಿದ್ದು, 2ನೇ ಸ್ಥಾನದಲ್ಲಿ ಹೈದರಾಬಾದ್ ಇತ್ತು. 69.66 ಕಿಲೋ ಮೀಟರ್ ಮೆಟ್ರೊ ಮಾರ್ಗವನ್ನು ‘ನಮ್ಮ ಮೆಟ್ರೊ’ ಹೊಂದುತ್ತಿದ್ದು, ಶನಿವಾರದಿಂದ ಹೈದರಾಬಾದ್ ಹಿಂದಿಕ್ಕಿ ಎರಡನೇ ಸ್ಥಾನಕ್ಕೆ ಜಿಗಿಯಲಿದೆ.

ಹಸಿರು ಮಾರ್ಗ 30 ಕಿಲೋ ಮೀಟರ್ ಇದ್ದರೆ, ನೇರಳ ಮಾರ್ಗ 25.60 ಕಿ.ಮೀ ಇತ್ತು. ಶನಿವಾರ ವೈಟ್‌ಫೀಲ್ಡ್ ತನಕ ಮೆಟ್ರೊ ರೈಲು ಸಂಚರಿಸಿದರೆ 39.31 ಕಿ.ಮೀಗೆ ಹೆಚ್ಚಾಗಲಿದೆ. ನಿತ್ಯ ಒಂದೂವರೆ ಲಕ್ಷ ಜನ ಇದರ ಅನುಕೂಲ ಪಡೆದುಕೊಳ್ಳಲಿದ್ದಾರೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಅಂದಾಜಿಸಿದ್ದು, ಪೂರ್ಣ ಮಾರ್ಗ ಜೋಡಣೆಯಾದ ಬಳಿಕ ಕನಿಷ್ಠ ಪ್ರಯಾಣಿಕರ ಸಂಖ್ಯೆ ದುಪ್ಪಟ್ಟಾಗುವ ಸಾಧ್ಯತೆ ಇದೆ.

ವೈಟ್‌ಫೀಲ್ಡ್ ಮೆಟ್ರೊ ನಿಲ್ದಾಣಕ್ಕೆ ದೀಪಾಲಂಕಾರ ಮಾಡಿರುವುದು

12 ನಿಲ್ದಾಣಗಳು: ಕಂಪನಿಗಳ ಹೆಸರು ಸೇರ್ಪಡೆ

ಹೊಸ ಮಾರ್ಗದಲ್ಲಿ 12 ನಿಲ್ದಾಣಗಳಿದ್ದು, ಕೆಲವು ನಿಲ್ದಾಣಗಳಿಗೆ ಐಟಿ ಕಂಪನಿಗಳ ಹೆಸರುಗಳನ್ನು ಜೋಡಿಸಿ ಹೆಸರಿಡಲಾಗಿದೆ.

ಕೃಷ್ಣರಾಜಪುರ, ಸಿಂಗಯ್ಯನಪಾಳ್ಯ, ಗರುಡಾಚಾರ್ ಪಾಳ್ಯ, ಹೂಡಿ, ಸೀತಾರಾಮಪಾಳ್ಯ, ಕುಂದಲಹಳ್ಳಿ, ನಲ್ಲೂರು ಹಳ್ಳಿ, ಶ್ರೀಸತ್ಯ ಸಾಯಿ ಆಸ್ಪತ್ರೆ, ಪಟ್ಟಂದೂರು ಅಗ್ರಹಾರ, ಕಾಡುಗೋಡಿ ಟ್ರೀ ಪಾರ್ಕ್, ಹೋಪ್‌ಫಾರ್ಮ್ ಚನ್ನಸಂದ್ರ, ವೈಟ್‌ಫೀಲ್ಡ್ (ಕಾಡುಗೋಡಿ) ಎಂಬ ಹೆಸರುಗಳನ್ನು ಇಡಲಾಗಿದೆ.

ಪ್ರಧಾನಿ ಸಂಚಾರ: ವಾಹನಗಳಿಗೆ ನಿರ್ಬಂಧ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಶನಿವಾರ (ಮಾರ್ಚ್ 25) ನಗರಕ್ಕೆ ಭೇಟಿ ನೀಡಲಿದ್ದು, ಅವರ ಸಂಚಾರಕ್ಕೆ ಅನುಕೂಲ ಕಲ್ಪಿಸುವುದಕ್ಕಾಗಿ ಹಲವು ರಸ್ತೆಗಳಲ್ಲಿ ಸಾರ್ವಜನಿಕರ ವಾಹನಗಳ ಓಡಾಟವನ್ನು ನಿರ್ಬಂಧಿಸಲಾಗಿದೆ.

ಎಲ್ಲೆಲ್ಲಿ ನಿರ್ಬಂಧ (ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 2.30 ಗಂಟೆಯವರೆಗೆ):

- ವರ್ತೂರು ಕೋಡಿಯಿಂದ ಹೋಪ್ ಫಾರಂ ವೃತ್ತ- ಕಾಡುಗೋಡಿ- ಕನ್ನಮಂಗಲ ಗೇಟ್‌ವರೆಗೆ
- ಚನ್ನಸಂದ್ರದಿಂದ ಹೋಪ್ ಫಾರಂ ವೃತ್ತ- ಹೂಡಿ ವೃತ್ತ
- ಕುಂದಲಹಳ್ಳಿ ರಸ್ತೆ- ಗ್ರಾಫೈಟ್ ಜಂಕ್ಷನ್- ವೈದೇಹಿ ಆಸ್ಪತ್ರೆ ವೃತ್ತ- ಬಿಗ್ ಬಜಾರ್ ಜಂಕ್ಷನ್‌ವರೆಗೆ ಭಾರಿ ವಾಹನಗಳ ಸಂಚಾರಕ್ಕೂ ನಿರ್ಬಂಧ (ಬೆಳಿಗ್ಗೆ 8 ಗಂಟೆಯಿಂದ ಮಧ್ಯಾಹ್ನ 3 ಗಂಟೆ)
- ಕಾಟಂನಲ್ಲೂರು ಕ್ರಾಸ್- ಕಾಡುಗೋಡಿ- ಹೋಪ್ ಫಾರಂ ವೃತ್ತ- ವರ್ತೂರು ಕೋಡಿ
- ಗುಂಜೂರು- ವರ್ತೂರು- ವೈಟ್‌ಫೀಲ್ಡ್- ಹೋಪ್ ಫಾರಂ ವೃತ್ತ- ಕಾಡುಗೋಡಿ- ಕಾಟಂನಲ್ಲೂರು ಕ್ರಾಸ್
- ತಿರುಮಲಶೆಟ್ಟಿಹಳ್ಳಿ ಕ್ರಾಸ್- ಚನ್ನಸಂದ್ರ- ಹೋಪ್ ಫಾರಂ ವೃತ್ತ
- ಟಿನ್ ಫ್ಯಾಕ್ಟರಿ- ಹೂಡಿ- ಐಟಿಪಿಎಲ್ ಮುಖ್ಯರಸ್ತೆ- ಹೋಪ್ ಫಾರಂ ವೃತ್ತ
- ಮಾರತ್ತಹಳ್ಳಿ ಸೇತುವೆ- ಕುಂದಲಹಳ್ಳಿ- ವರ್ತೂರು ಕೋಡಿ- ವೈಟ್‌ಫೀಲ್ಡ್‌ವರೆಗೆ

ಕರ್ನಾಟಕ ರಕ್ಷಣಾ ವೇದಿಕೆ ಬೆಳ್ಳಿ ಹಬ್ಬ ಸಂಭ್ರಮ

‘ಕನ್ನಡಿಗರ ಅಭಿಮಾನ ಶೂನ್ಯತೆ ಸಲ್ಲದು’

ಬೆಂಗಳೂರು: ಕನ್ನಡಿಗರಲ್ಲಿ ಅಭಿಮಾನ ಶೂನ್ಯತೆ ಆವರಿಸಿದೆ. ಭಾಷೆ, ನೆಲ, ಜಲ, ಗಡಿಯ ಬಗ್ಗೆ ಕಾಳಜಿ ಇಲ್ಲದಿದ್ದರೆ ಭವಿಷ್ಯದಲ್ಲಿ ಬೆಲೆ ತೆರಬೇಕಾಗುತ್ತದೆ ಎಂದು ಸಿದ್ದಗಂಗ ಮಠದ ಸಿದ್ದಲಿಂಗ ಸ್ವಾಮೀಜಿ ಹೇಳಿದರು.

ಕರ್ನಾಟಕ ರಕ್ಷಣಾ ವೇದಿಕೆ ಶುಕ್ರವಾರ ಹಮ್ಮಿಕೊಂಡಿದ್ದ ಬೆಳ್ಳಿ ಹಬ್ಬ ಸಂಭ್ರಮ ಹಾಗೂ ಕರ್ನಾಟಕ ಸಾಂಸ್ಕೃತಿಕ ಸಮಾವೇಶದಲ್ಲಿ ಅವರು ಮಾತನಾಡಿದರು.

ಕನ್ನಡಕ್ಕೆ ಪ್ರಾಚೀನ ಸಾಂಸ್ಕೃತಿಕ ಶಕ್ತಿ ಇದೆ. ಅಂತಹ ಶಕ್ತಿ ಉಳಿಸಿಕೊಂಡು ಹೋಗುವ ಜವಾಬ್ದಾರಿ ಎಲ್ಲ ಕನ್ನಡಿಗರ ಮೇಲಿದೆ ಎಂದರು.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, ‘ದೇಹವನ್ನು ಎಷ್ಟೇ ಚೆನ್ನಾಗಿ ನೋಡಿಕೊಂಡರೂ ನಾನಾ ಕಾರಣಗಳಿಂದಾಗಿ ಆರೋಗ್ಯ ವ್ಯತ್ಯಾಸವಾಗುತ್ತದೆ. ಅದೇ ರೀತಿ ಸಂಘಟನೆಯನ್ನು ಎಷ್ಟೇ ಸೂಕ್ಷ್ಮವಾಗಿ ನಡೆಸಿದರೂ ಭಿನ್ನಮತ ಬರುತ್ತವೆ. ಅದೆಲ್ಲ ಮೀರಿ ನಡೆಯುವುದೇ ನಾಯಕತ್ವದ ಶಕ್ತಿ’ ಎಂದು ವಿಶ್ಲೇಷಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, ‘ಗಡಿ ವಿಚಾರದಲ್ಲಿ ಮಹಾರಾಷ್ಟ್ರ ತಗಾದೆ ತೆಗೆದಾಗ ನಮ್ಮ ನಿಲುವು ಸ್ಪಷ್ಟಪಡಿಸಲಾಗಿದೆ. ಸಂಗೊಳ್ಳಿ ರಾಯಣ್ಣನ ಮೂರ್ತಿ ಪೂರ್ಣಗೊಳಿಸಲಾಗಿದೆ. ಕನ್ನಡಿಗರ ಇತಿಹಾಸ, ಸಾಹಿತ್ಯ, ಆಡಳಿತ, ಪರಂಪರೆ ಸಂರಕ್ಷಿಸಲಾಗಿದೆ. ಕನ್ನಡಕ್ಕಾಗಿ ಉದ್ಯೋಗ ನೀತಿ ರೂಪಿಸಿ, ಶೇ 80ರಷ್ಟು ಮೀಸಲಾತಿ ಕಲ್ಪಿಸಲಾಗಿದೆ’ ಎಂದು ಹೇಳಿದರು.

ಆರೋಗ್ಯ ಸಚಿವ ಡಾ.ಸುಧಾಕರ್, ‘ನಾಡುನುಡಿ ವಿಚಾರದಲ್ಲಿ ಕನ್ನಡಪರ ಸಂಘಟನೆಗಳು ಹೋರಾಟ ಮಾಡಿದರೆ ಸಾಲದು. ಎಲ್ಲರೂ ತಮ್ಮ ಜವಾಬ್ದಾರಿ ಅರಿತು ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಕೊಡುಗೆ ನೀಡಬೇಕು’ ಎಂದರು.

ಮಾದಾರ ಚನ್ನಯ್ಯ ಪೀಠದ ಬಸವಮೂರ್ತಿ ಮಾದಾರ ಚಮ್ಮಯ್ಯ ಸ್ವಾಮೀಜಿ, ಸಾಹಿತಿ ಚಂದ್ರಶೇಖರ ಕಂಬಾರ, ನಟ ದ್ವಾರಕೀಶ್, ಮಾಜಿ ಸಚಿವ ಪಿ.ಜಿ.ಆರ್.ಸಿಂಧ್ಯ, ಕರವೇ ಅಧ್ಯಕ್ಷ ನಾರಾಯಣ ಗೌಡ ಉಪಸ್ಥಿತರಿದ್ದರು.

ಕರ್ನಾಟಕ ರಕ್ಷಣಾ ವೇದಿಕೆ ಬೆಳ್ಳಿ ಹಬ್ಬ ಸಂಭ್ರಮದಲ್ಲಿ (ಕುಳಿತವರು ಎಡದಿಂದ) ಸುಬ್ರಹ್ಮಣ್ಯಧಾರೇಶ್ವರ (ಎಸ್‌.ಕೆ.ಕರೀಂಖಾನ್ ಪ್ರಶಸ್ತಿ), ಬೈರಮಂಗಲ ರಾಮೇಗೌಡ (ಕುವೆಂಪು), ದ್ವಾರಕೀಶ್ (ರಾಜಕುಮಾರ್), ಪಿ.ಜಿ.ಆರ್‌.ಸಿಂಧ್ಯ (ಶಾಂತವೇರಿ ಗೋಪಾಲಗೌಡ), ವೀರಸಂಗಯ್ಯ (ಎಂ.ಡಿ.ನಂಜುಂಡಸ್ವಾಮಿ) ಮತ್ತು ಬಿ.ಎಂ. ಹನೀಫ್ (ಕೆ.ಶಾಮರಾವ್) ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ನಿರ್ಮಲಾನಂದನಾಥ ಸ್ವಾಮೀಜಿ, ಚಂದ್ರಶೇಖರ ಕಂಬಾರ, ಎ.ನಾರಾಯಣ ಗೌಡ ಇದ್ದಾರೆ – ಪ್ರಜಾವಾಣಿ ಚಿತ್ರ

ಶಾಸಕ ಡಿ.ಕೆ.ಶಿವಕುಮಾರ್ ವಿರುದ್ಧದ ಪ್ರಕರಣದ ವಿಚಾರಣೆ

ಸಿಬಿಐ–ನ್ಯಾಯಪೀಠದ ಜಟಾಪಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯ ಮೀರಿ ಆಸ್ತಿ ಗಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಕನಕಪುರ ಶಾಸಕ ಡಿ.ಕೆ.ಶಿವಕುಮಾರ್ ವಿರುದ್ಧದ ಪ್ರಕರಣದ ವಿಚಾರಣೆ ವೇಳೆ ಸಿಬಿಐ ನಿಲುವಿಗೆ ಕರ್ನಾಟಕ ಹೈಕೋರ್ಟ್ ಏಕಸದಸ್ಯ ನ್ಯಾಯಪೀಠ ಕೆಂಡಾಮಂಡಲವಾದರೆ, ಅಷ್ಟೇ ಖಡಕ್ಕಾಗಿ ಸಿಬಿಐ ತನ್ನ ನಿಲುವನ್ನು ನ್ಯಾಯಪೀಠಕ್ಕೆ ಅರುಹುವ ಮೂಲಕ ಬಿಸಿ ಬಿಸಿ ವಾದಕ್ಕೆ ಸಾಕ್ಷಿಯಾಯಿತು.

ಸಿಬಿಐ ತನಿಖೆ ಪ್ರಶ್ನಿಸಿ ಡಿ.ಕೆ. ಶಿವಕುಮಾರ್ ಸಲ್ಲಿಸಿರುವ ರಿಟ್ ಅರ್ಜಿಯನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ ನಡೆಸುವ ಹೈಕೋರ್ಟ್‌ನ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಪ್ರಕರಣದ ಈ ಹಿಂದಿನ ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲ ಸಿ.ಎಚ್.ಜಾಧವ್, 'ಸಿಬಿಐ ತನಿಖೆಗೆ ರಾಜ್ಯ ಸರ್ಕಾರ ನೀಡಿರುವ ಆದೇಶವನ್ನು ಪ್ರಶ್ನಿಸಲಾದ ಮತ್ತೊಂದು ಅರ್ಜಿ ಬೇರೆ ನ್ಯಾಯಪೀಠದಲ್ಲಿದೆ. ಅದನ್ನೂ ಇದೇ ಪೀಠಕ್ಕೆ ಸಂಬಂಧಿಸಿ ವಿಚಾರಣೆಗೆ ಕೈಗೆತ್ತಿಕೊಳ್ಳಬೇಕು' ಎಂದು ಕೋರಿದ್ದರು. ಈ ಮನವಿಗೆ ನ್ಯಾಯಮೂರ್ತಿ ನಟರಾಜನ್ ಸಹಮತ ವ್ಯಕ್ತಪಡಿಸಿದ್ದರು.

ಶುಕ್ರವಾರದ ವಿಚಾರಣೆ ವೇಳೆ ಬೆಳಿಗ್ಗೆಯಿಂದ ನ್ಯಾಯಪೀಠ-ದಲ್ಲಿ ಅರ್ಜಿಯ ಪರವಾಗಿ ಹಿರಿಯ ವಕೀಲ ಉದಯ ಹೊಳ್ಳ ಹಾಜರಾಗಿ, 'ಇನ್ನೂ ಆ ಪೀಠದಿಂದ ಅರ್ಜಿಯನ್ನು ಇಲ್ಲಿಗೆ ವರ್ಗಾವಣೆ ಮಾಡಿಲ್ಲ' ಎಂಬ ಅಂಶವನ್ನು ನ್ಯಾಯಮೂರ್ತಿಗಳ ಗಮನಕ್ಕೆ ತಂದರು.

'ಯಾಕೆ' ಎಂಬ ನ್ಯಾಯಮೂರ್ತಿ-ಗಳ ಪ್ರಶ್ನೆಗೆ, 'ಸಿಬಿಐ ಅದಕ್ಕೆ ಅಸ್ತು ಕೊಡುತ್ತಿಲ್ಲ' ಎಂದು ಆಕ್ಷೇಪಿಸಿದರು. ಈ ಮಾತಿಗೆ ಸಿಬಿಐ ಪರ ವಕೀಲ ಪಿ.ಪ್ರಸನ್ನ ಕುಮಾರ್ ಅವರನ್ನು ಪ್ರಶ್ನಿಸಿದ ನ್ಯಾಯ ಮೂರ್ತಿಗಳು, 'ಯಾಕೆ ನೀವು ಅದನ್ನು ಇಲ್ಲಿಗೆ ವರ್ಗಾಯಿಸಲು ಮೆಮೊ ಸಲ್ಲಿಸಿಲ್ಲ' ಎಂದು ಕೇಳಿದರು.

ಇದಕ್ಕೆ ಪ್ರಸನ್ನಕುಮಾರ್, 'ಅದು ಸಿಬಿಐ ಕೆಲಸವಲ್ಲ. ಅರ್ಜಿದಾರರ ಕೋರಿಕೆ. ಅಷ್ಟಕ್ಕೂ, ಇದೇ ನ್ಯಾಯಪೀಠಕ್ಕೆ ಬರಬೇಕು ಎಂಬ ಬಗ್ಗೆ ಯಾವುದೇ ನ್ಯಾಯಾಂಗ ಆದೇಶವಿಲ್ಲ. ಅಂತೆಯೇ, ವಿಭಾಗೀಯ ನ್ಯಾಯಪೀಠವು ಅರ್ಜಿದಾರ ಸಂಬಂಧಿಯೊಬ್ಬರು ಸಲ್ಲಿಸಿದ್ದ ಇದೇ ಸಂಬಂಧದ ಮನವಿಯನ್ನು ತಳ್ಳಿ ಹಾಕಿ ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಎತ್ತಿಹಿಡಿದಿತ್ತು. ಹೀಗಿರುವಾಗ ಶಿವಕುಮಾರ್ ಪುನಃ ಇದೇ ಪ್ರಾರ್ಥನೆ ಅಡಿಯಲ್ಲಿ ಸಲ್ಲಿರುವ ಅರ್ಜಿಯು ಇದೇ ನ್ಯಾಯಪೀಠಕ್ಕೆ ಬರಬೇಕು ಎಂದು ತಾವು ಹೇಗೆ ಹೇಳುತ್ತೀರಿ. ಇದನ್ನು ನಿರ್ಧರಿಸುವವರು ರೋಸ್ಟರ್‌ನ ಮಾಸ್ಟರ್ ಚೀಫ್ ಜಸ್ಟೀಸ್ ಅಲ್ಲವೇ' ಎಂದು ಅಸಮಾಧಾನ ಹೊರಹಾಕಿದರು.

ಇದಕ್ಕೆ ಗರಂ ಆದ ನ್ಯಾಯಪೀಠ, 'ಏನು ನೀವು ಹೇಳುತ್ತಿರುವುದು, ನಾನು ಆವತ್ತು ಮೌಖಿಕವಾಗಿ ನೀಡಿದ ನಿರ್ದೇಶನವನ್ನು ನೀವು ಪಾಲಿಸುವು-ದಿಲ್ಲವೇ, ಅದೇನು ಆದೇಶವಲ್ಲವೇ' ಎಂದು ತರಾಟೆಗೆ ತೆಗೆದುಕೊಂಡಿತು. ಈ ಮಾತಿಗೆ ಅಷ್ಟೇ ಗಟ್ಟಿಯಾದ ನಿಲುವಿನಲ್ಲಿ ಉತ್ತರಿಸಿದ ಪ್ರಸನ್ನಕುಮಾರ್, 'ಸ್ವಾಮಿ, ಈ ನ್ಯಾಯಪೀಠಕ್ಕೆ ಆ ಅರ್ಜಿ ಬರಬೇಕು ಎಂಬ ಬಗ್ಗೆ ಸಿಬಿಐ ಅಭ್ಯಂತರವೇನೂ ಇಲ್ಲ. ಬೇಕಾದರೆ ತಾವು ಇದೇ ನ್ಯಾಯಪೀಠಕ್ಕೆ ಬರಬೇಕು ಎಂಬ ಬಗ್ಗೆ ಲಿಖಿತ ಆದೇಶ ಮಾಡಿ' ಎಂದರು.

ನಂತರ ನ್ಯಾಯಪೀಠವು, ಸಮಾಧಾನವಾಗಿ ಆದೇಶ ಬರೆಯಿಸಿ, ವಿಚಾರಣೆಯನ್ನು ಇದೇ 31ಕ್ಕೆ ಮುಂದೂಡಿತು. ಅಂತೆಯೇ, ಸಿಬಿಐಗೆ ನೀಡಿರುವ ಮಧ್ಯಂತರ ತಡೆ ಆದೇಶವನ್ನು ಮುಂದಿನ ವಿಚಾರಣೆವರೆಗೆ ವಿಸ್ತರಿಸಿತು.

ಪ್ರಕರಣವೇನು?: 'ಭ್ರಷ್ಟಾಚಾರ ನಿಗ್ರಹ ಕಾಯ್ದೆ-1988ರ ಕಲಂ 13 (2), 13 (1)(ಇ) ಅಡಿಯಲ್ಲಿ ಸಿಬಿಐ 2020ರ ಅಕ್ಟೋಬರ್ 3ರಂದು ಪ್ರಕರಣ ದಾಖಲಿಸಿದೆ. ಸಿಬಿಐ ದಾಖಲಿಸಿರುವ ಈ ಎಫ್‌ಐಆರ್ ಕಾನೂನು ಬಾಹಿರವಾಗಿದ್ದು ಇದನ್ನು ರದ್ದುಗೊಳಿಸಬೇಕು' ಎಂದು ಕೋರಿ ಶಿವಕುಮಾರ್ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಸಿಬಿಐ ತನಿಖೆಗೆ ಹೈಕೋರ್ಟ್ 2023ರ ಫೆಬ್ರುವರಿ 10ರಂದು ಮಧ್ಯಂತರ ತಡೆ ನೀಡಿತ್ತು.

ಉಚಿತ ವೈಫೈ ಹಾಟ್‌ಸ್ಪಾಟ್‌ಗಳಿಗೆ ಚಾಲನೆ

ಬೆಂಗಳೂರು: ವೈಫೈ ಸೌಲಭ್ಯವು ಸುಗಮವಾಗಿ ಎಲ್ಲರಿಗೂ ಸಿಗಲು ಮಲ್ಲೇಶ್ವರ ಕ್ಷೇತ್ರ ವ್ಯಾಪ್ತಿಯಲ್ಲಿ 100 ಹಾಟ್‌ಸ್ಪಾಟ್ ತಾಣಗಳಿಗೆ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಶುಕ್ರವಾರ ಚಾಲನೆ ನೀಡಿದರು.

'ಇಂದು ತಂತ್ರಜ್ಞಾನವು ನೀರಿಗಿಂತಲೂ ಹೆಚ್ಚಿನ ಮೂಲ ಅಗತ್ಯವಾಗಿದೆ. ಹೀಗಾಗಿ ಆಕ್ಟ್ ಫೈಬರ್‌ನೆಟ್ ಕಂಪನಿಯ ಸಹಯೋಗದಲ್ಲಿ ಉದ್ಯಾನ, ಮೆಟ್ರೊ ನಿಲ್ದಾಣಗಳು, ಬಸ್ ನಿಲ್ದಾಣಗಳು, ಶಿಕ್ಷಣ ಸಂಸ್ಥೆಗಳು, ಮಾಲ್‌ಗಳು ಮತ್ತು ಇತರ ಸಾರ್ವಜನಿಕ ತಾಣಗಳಲ್ಲಿ ಈ ಹಾಟ್‌ಸ್ಪಾಟ್ ಸೌಲಭ್ಯ ಕೊಡಲಾಗುತ್ತಿದೆ. ಇದರಡಿಯಲ್ಲಿ ಸಾರ್ವಜನಿಕರು 25 ಎಂಬಿಪಿಎಸ್ ವೇಗದಲ್ಲಿ ಕೆಲಸ ಮಾಡುವ ಇಂಟರ್‌ನೆಟ್ ಅನ್ನು 45 ನಿಮಿಷ ಉಚಿತವಾಗಿ ಬಳಸಿಕೊಳ್ಳಬಹುದು' ಎಂದು ಸಚಿವರು ತಿಳಿಸಿದರು.

ವೈಫೈ ಅಳವಡಿಕೆಯಿಂದ ಪದೇ ಪದೇ ರಸ್ತೆ ಅಗೆಯುವ ಪ್ರಮೇಯ ತಪ್ಪಲಿದೆ. ಕಂಪನಿಯು ಒಟ್ಟು ಆರು ಕೇಬಲ್ ಇರುವ ಡಕ್ಟ್ ಅಳವಡಿಸಿದ್ದು, ಈ ಪೈಕಿ ಮೂರು ಕೇಬಲ್‌ಗಳನ್ನು ಮುಕ್ತವಾಗಿಟ್ಟಿದೆ ಎಂದು ಮಾಹಿತಿ ನೀಡಿದರು.

ಆಕ್ಟ್ ಫೈಬರ್‌ನೆಟ್ ಕಂಪನಿಯ ಸಿಇಒ ಬಾಲ ಮಲ್ಲಾಡಿ, ಬಿಬಿಎಂಪಿ ಪಶ್ಚಿಮ ವಲಯದ ಆಯುಕ್ತ ಡಾ.ಆರ್ ಎಲ್ ದೀಪಕ್, ಡಿಸಿಪಿ ಡಿ.ದೇವರಾಜ್, ಬಿಬಿಎಂಪಿ ಜಂಟಿ ಆಯುಕ್ತ ಲೋಕನಾಥ ಇದ್ದರು.

ಮೆಕ್ಸಿಕೊ ಕರ್ತವ್ಯಕ್ಕೆ ಕಾನ್‌ಸ್ಟೆಬಲ್

ಬೆಂಗಳೂರು: ಬೆಂಗಳೂರು ಪೊಲೀಸ್ ಕಮಿಷನರ್ ಕಚೇರಿಯ ಸಾಮಾಜಿಕ ಮಾಧ್ಯಮಗಳ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಕಾನ್‌ಸ್ಟೆಬಲ್ ಎಚ್.ಎಂ.ಲೋಕೇಶ್ ಅವರನ್ನು ಮೆಕ್ಸಿಕೊದಲ್ಲಿರುವ ಭಾರತೀಯ ರಾಯಭಾರ ಕಚೇರಿಯಲ್ಲಿ ಕರ್ತವ್ಯಕ್ಕೆ ನಿಯೋಜಿಸಲಾಗಿದೆ.

ಲೋಕೇಶ್ ಅವರು ರಾಯಭಾರ ಕಚೇರಿಯ ಭದ್ರತಾ ಸಹಾಯಕ ಹುದ್ದೆಯ ಲಿಖಿತ ಪರೀಕ್ಷೆ ಹಾಗೂ ಸಂದರ್ಶನದಲ್ಲಿ ಉತ್ತೀರ್ಣರಾಗಿ ಹುದ್ದೆಗೆ ಆಯ್ಕೆಯಾಗಿದ್ದಾರೆ. ಈ ಕುರಿತು ಮೆಕ್ಸಿಕೊ ರಾಯಭಾರ ಕಚೇರಿ ಅಧಿಕಾರಿಗಳು ಮಾರ್ಚ್ 14ರಂದು ಆದೇಶ ಹೊರಡಿಸಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ಮಾಜಿ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್, 'ಕನ್ನಡಿಗ ಲೋಕೇಶ್ ಅವರು ಸಂವಹನ, ಕಂಪ್ಯೂಟರ್ ಹಾಗೂ ಇಂಗ್ಲಿಷ್ ಭಾಷೆಯಲ್ಲಿ ಪರಿಣತಿ ಪಡೆದು ಹುದ್ದೆಗೆ ನಿಯೋಜನೆ ಆಗಿದ್ದಾರೆ. ಅವರಿಗೆ ಅಭಿನಂದನೆಗಳು' ಎಂದಿದ್ದಾರೆ.

ಬೋರ್ಡ್ ಪರೀಕ್ಷೆ ಮುಂದೂಡಿಕೆಗೆ ನಕಾರ

ಬೆಂಗಳೂರು: 'ರಾಜ್ಯ ಪಠ್ಯಕ್ರಮ ಹೊಂದಿದ ಶಾಲೆಗಳ 5 ಮತ್ತು 8ನೇ ತರಗತಿ ವಿದ್ಯಾರ್ಥಿಗಳಿಗೆ ಇದೇ 27ರಿಂದ ಬೋರ್ಡ್ (ಮಂಡಳಿ) ಪರೀಕ್ಷೆ ನಡೆಸಲು ರಾಜ್ಯ ಸರ್ಕಾರ ಉದ್ದೇಶಿಸಿದ್ದು ಇದನ್ನು ಮುಂದೂಡಬೇಕು' ಎಂಬ ಅರ್ಜಿದಾರರ ಮನವಿಯನ್ನು ಆಲಿಸಲು ಹೈಕೋರ್ಟ್ ನಿರಾಕರಿಸಿದೆ.

ನೈಋತ್ಯ ರೈಲ್ವೆ G20

ಟೆಂಡರ್ ಸೂಚನೆ ಸಂ. No.ECN-TRD-04-2023
ದಿನಾಂಕ: 17.03.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಗಳ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ಮತ್ತು ಮೈಸೂರು ವಿಭಾಗದಲ್ಲಿ ಅಸ್ತಿತ್ವದಲ್ಲಿರುವ ಎಲ್‌ಸಿ ಗೇಟ್‌ಗಳಿಗೆ ಬದಲಾಗಿ ವಿವಿಧ ಆರ್‌ಒಬಿ / ಆರ್‌ಯುಬಿಗಳಿಗೆ ಓಎಚ್‌ಇ ಮಾರ್ಪಾಡುಗಳು.	ರೂ. 1,81,97,710.20/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18–04–2023, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನೀಯರ್/ಟಿಆರ್‌ಡಿ ಸಿಎನ್/ಬೆಂಗಳೂರು ಕಂಟೋನ್ಮೆಂಟ್

PUB/748/AAV/PRB/SWR/2022-23

S.W.Railways SWRRLY SWRRLY

ಮುದ್ರಣ, ಲೇಖನ ಸಾಮಗ್ರಿ & ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ
ಸರ್ಕಾರಿ ಕೇಂದ್ರ ಮುದ್ರಣಾಲಯ
8ನೇ ಮೈಲಿ, ಆರ್. ವಿ. ಕಾಲೇಜ್ ಅಂಚೆ, ಮೈಸೂರು ರಸ್ತೆ,
ಬೆಂಗಳೂರು – 560 059. ದೂರವಾಣಿ : 080–2848 4515, 2848 4518.

ಸಂ.: ಡಿಪಿಎಸ್45ಪಿಯುಆರ್(ಎ)/2022–23/ಕರೆ–2/ಪ್ಲೇಟ್&ಕೆಮಿಕಲ್ಸ್ ದಿ: 23–03–2023

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಪಿ.ಎಸ್. ಪ್ಲೇಟ್ಸ್, ವಯೋಲೆಟ್ಸ್ ಹಾಗೂ ಫ್ರೀ–ಪ್ರೆಸ್ ಕೆಮಿಕಲ್ಸ್‌ಗಳ ಸಂಗ್ರಹಣೆಗಾಗಿ ದರ ಗುತ್ತಿಗೆ ಆಧಾರದ ಮೇರೆಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ ರೂ. 45.00 ಲಕ್ಷಗಳು ಹಾಗೂ ಇ.ಎಂ.ಡಿ. ಮೊತ್ತ ರೂ. 2.25 ಲಕ್ಷಗಳು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 10–04–2023. 17.30 ಗಂಟೆಗೆ. ಮಾಹಿತಿಯನ್ನು ವೆಬ್‌ಸೈಟ್ : https://eproc.karnataka.gov.in ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ವಾಸಾಇ/ಬೆಂ.ನ./5438/ಮಣಿಪಾಲ್/2022–23 ಸಹಿ/– ನಿರ್ದೇಶಕರು.

ಯುವಜನ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ
ಯುವಜನ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದಲ್ಲಿನ ಯುಥ್–20 (ವೈ–20) ಸಂಬಂಧಿಸಿದಂತೆ ಕನ್ಸಲ್ಟಂಟ್ ನಿಯೋಜನೆ / ನೇಮಕಾತಿ

ಭಾರತ ಸರ್ಕಾರದ ಯುವಜನ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯವು ಕೆಳಕಂಡ ಹುದ್ದೆ ಅರ್ಜಿಗಳನ್ನು ಆಹ್ವಾನಿಸಿದೆ:

ಕ್ರ. ಸಂ.	ಹುದ್ದೆ	ಖಾಲಿ ಹುದ್ದೆ ಸಂಖ್ಯೆ	ವಯೋಮಿತಿ (ಮೀರ ಕೂಡದು)	ಅವಧಿ
1.	ಕನ್ಸಲ್ಟಂಟ್ (ವೈ20)	3	32	ಭಾರತದ ಜಿ–20 ಪ್ರೆಸಿಡೆನ್ಸಿಗಾಗಿ ಗುತ್ತಿಗೆ ಆಧಾರದಲ್ಲಿ ಫೆಬ್ರವರಿ 2024 ರವರೆಗೆ

ವಿದ್ಯಾರ್ಹತೆ, ಕೆಲಸದ ಸ್ವರೂಪ, ಸಂಭಾವನೆ ಇತ್ಯಾದಿಗಳ ಕುರಿತಾದ ವಿವರಗಳಿಗಾಗಿ ದಯವಿಟ್ಟು ಯುವಜನ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದ https://yas.nic.in ವೆಬ್‌ಸೈಟ್‌ಗೆ ಭೇಟಿ ಕೊಡಿ. ಆಸಕ್ತಿಯುಳ್ಳ ಅಭ್ಯರ್ಥಿಗಳು ಆಯ್ಕೆ ಸಮಿತಿಯ ಎದುರು ನೇರ ಸಂದರ್ಶನಕ್ಕೆ ಹಾಜರಾಗುವುದು. ಸಂದರ್ಶನದ ಸ್ಥಳ ಮತ್ತು ದಿನಾಂಕವನ್ನು ಸಚಿವಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ.

CBC 47101/11/0002/2223

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020

ನಂ. ಬೆಂಅಪ್ರಾ/ಕಾನಿಅ(ಎನ್‌ಪಿಕೆಎಲ್)/715/2022–23 ದಿನಾಂಕ :24.03.2023

ಟೆಂಡರ್‌ಗಳಿಗೆ ಆಹ್ವಾನ (ಐಎಫ್‌ಟಿ)
(ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ https://eproc.karnataka.gov.in ಮೂಲಕ)

ಕೆಳಕಂಡ ಕಾಮಗಾರಿಗಾಗಿ ಕಾರ್ಯನಿರ್ವಾಹಕ ಅಭಿಯಂತರರು, ನಾಡಪ್ರಭು ಕೆಂಪೇಗೌಡ ಬಡಾವಣೆ ವಿಭಾಗ, ಬೆಂಅಪ್ರಾ, ಬೆಂಗಳೂರು ಇವರು ಆಯುಕ್ತರು, ಬೆಂಅಪ್ರಾ, ಬೆಂಗಳೂರು ಇವರ ಪರವಾಗಿ ಅರ್ಹ ಟೆಂಡರುದಾರರಿಂದ ದ್ವಿಲಕೋಟೆ ಟೆಂಡರ್ ಪ್ರಕ್ರಿಯೆಯಲ್ಲಿ ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.
ಕಾಮಗಾರಿಯ ಹೆಸರು : ಎಂಎಆರ್ (ಚೈ :0.00 ಇಂದ 10.35 ಕಿ.ಮೀ) ನಿಂದ ಎನ್‌ಪಿಕೆಎಲ್‌ವರೆಗಿನ ಸಂಪರ್ಕಿತ ರಸ್ತೆ ಮತ್ತು ಎರಡೂ ಬದಿಗಳಲ್ಲಿನ ಸರ್ವೀಸ್ ರಸ್ತೆಗಳಿಗೆ ಕಾಸ್ಟ್ ಇನ್ ಸಿಟು ಬಾಕ್ಸ್ ಜೊತೆಗೆ ತಡೆಗೋಡೆ ನಿರ್ಮಿಸುವುದು ಮತ್ತು ಚೈನ್.2.90 ಕಿ.ಮೀ. 5.10 ಕಿ.ಮೀ, 9.70 ಕಿ.ಮೀ.ನಲ್ಲಿ ಕೆಳಸೇತುವೆ ನಿರ್ಮಾಣ. ಕಾಮಗಾರಿಗಿಟ್ಟ ಅಂದಾಜು ಮೊತ್ತ : **ರೂ.3745.19 ಲಕ್ಷಗಳು.** ಇ.ಎಂ.ಡಿ.: **37.50ಲಕ್ಷಗಳು.** ಟೆಂಡರ್ ಪ್ರಕ್ರಿಯೆ ಶುಲ್ಕ: **ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪರಿವೀಕ್ಷಿಸಿ.** ಪೂರ್ಣಗೊಳಿಸುವ ಕಾಲಾವಧಿ: ಮಳೆಗಾಲ ಸೇರಿದಂತೆ **18ತಿಂಗಳು.**
ಯಾವುದೇ ಇತರೆ ವಿವರಗಳಿಗೆ ವೆಬ್‌ಸೈಟ್ https://eproc.karnataka.gov.in ಗೆ ಲಾಗಾನ್ ಮಾಡಿ ಅಥವಾ ಇ-ಪ್ರೊಕ್ಯೂರ್‌ಮೆಂಟ್ ಹೆಲ್ಪ್‌ಡೆಸ್ಕ್ ನಂ.080–48010000/6894877ಗೆ ಸಂಪರ್ಕಿಸಿ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಎನ್‌ಪಿಕೆಎಲ್ ವಿಭಾಗ, ಬೆಂಅಪ್ರಾ, ಬೆಂಗಳೂರು

BDA/PRO/TN/49/2022-23

ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ನನ್ನ ಕಕ್ಷಿದಾರರು ಸುಂದಕುರಿಚಿ ಗ್ರಾಮದ ಸರ್ವೆ ನಂಬರ್ 11/5 (P), 13/1(P), 13/2(P), 111/5(P) , 111/6A, 111/6B , 111/6C, 111/6D(P), 111/6F, 111/6G, 111/7 (P), 111/9(P), 111/12A(P), 152/1B(P), 152/3(P), 4/6B(P), 5/2B(P), 5/6A(P), 5/7A(P)ಗಳಲ್ಲಿ ಮತ್ತು ಮೊವಿರುಂಥಲಿ ಗ್ರಾಮ, ಮನೂರ ತಾಲ್ಲೂಕು, ತಿರುನಲ್ವೇಲಿ ಜಿಲ್ಲೆಯ ಸರ್ವೆ ನಂಬರ್ 37/1(ಪಿ) ಯಲ್ಲಿ ಸಂಯೋಜಿತ, ಕಯತಾರ್ ಉಪ–ನೋಂದಣಿ ಜಿಲ್ಲೆ ಮತ್ತು ಪಲಯಂಕೊಟ್ಟಾಯ್ ನೋಂದಣಿ ಜಿಲ್ಲೆ ವ್ಯಾಪ್ತಿಗೆ ಒಳಪಡುವ, 13.25 ಎಕರೆ ವಿಸ್ತೀರ್ಣವುಳ್ಳ ಖಾಲಿ ಜಮೀನು ಮತ್ತು ವಿಂಡ್‌ಮಿಲ್‌ಗಳನ್ನು, ಅವುಗಳ ಮಾಲೀಕರಾದ ಮೆ. ಶ್ರೀ ಕುಮಾರಸ್ವಾಮಿ ಮಿನರಲ್ ಎಕ್ಸ್‌ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್, ಕಂಪನಿಯ ನೋಂದಾಯಿತ ಕಚೇರಿ ವಿಳಾಸ ನಂ.61, ಕನ್ನಿಂಗ್‌ಹ್ಯಾಮ್ ಕ್ರಾಸ್ ರೋಡ್, ವಸಂತನಗರ, ಬೆಂಗಳೂರು 560052 ಇವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಯಾವುದಾದರು ವ್ಯಕ್ತಿಯು ಅಥವಾ ವ್ಯಕ್ತಿಗಳು ಅಥವಾ ಕಾರ್ಪೊರೇಟ್ ಅಂಗ ಅಥವಾ ಹಣಕಾಸು ಸಂಸ್ಥೆಗಳು ಅಥವಾ ಸಾರ್ವಜನಿಕರು ಸದರಿ ಸ್ವತ್ತಿನ ಮೇಲಾಗಲಿ ಅಥವಾ ಸ್ವತ್ತಿನ ಯಾವುದೇ ಭಾಗದ ಮೇಲಾಗಲಿ, ಯಾವುದೇ ರೀತಿಯ ಮಾರಾಟ, ಸೆಟ್ಲ್‌ಮೆಂಟ್, ವಿನಿಯಮ, ಅಡಮಾನ, ಚಾರ್ಜ್, ಉಡುಗೊರೆ, ಟ್ರಸ್ಟ್, ಆನುವಂಶಿಕ, ಸ್ವಾಧೀನ, ಭೋಗ್ಯ, ಲೀನ್, ಕೋರ್ಟ್ ಡಿಕ್ರಿ, ಶಾಸನಬದ್ಧ ಅನುಸರಣೆಗಳು ಅಥವಾ ಇನ್ನಿತರ ಯಾವುದೇ ಮಾದರಿಯ ಕ್ಲೇಮ್‌ಗಳನ್ನು ಹೊಂದಿದ್ದರೆ, ಅಂತಹವರು ಈ ದಿನಾಂಕದಿಂದ 5 ದಿನಗಳೊಳಗೆ ಇಲ್ಲಿ ಕೆಳಗೆ ಸಹಿ ಹಾಕಿರುವವರಿಗೆ ಲಿಖಿತ ರೂಪದಲ್ಲಿ ತಿಳಿಸತಕ್ಕದ್ದು, ಇಲ್ಲವಾದಲ್ಲಿ ನಿಗದಿತ ಅವಧಿಯ ನಂತರ ಸಲ್ಲಿಕೆಯಾಗುವ ಯಾವುದೇ ವ್ಯಕ್ತಿಯ ಅಥವಾ ವ್ಯಕ್ತಿಗಳ ಅಥವಾ ಕಾರ್ಪೊರೇಟ್ ಸಂಸ್ಥೆಯ ಕ್ಲೇಮ್ ಅಥವ ಕ್ಲೇಮ್‌ಗಳನ್ನು ಕೈಬಿಡಲಾಗುತ್ತದೆ ಮತ್ತು/ಅಥವಾ ಪರಿಗಣಿಸಲಾಗುವುದಿಲ್ಲ.

ಪಿ. ಅಂಗನರಸು, ವಕೀಲರು,
ವಿಳಾಸ: ನಂ.1, ರಾಮಕೃಷ್ಣ ಮುಖ್ಯರಸ್ತೆ, ಪೊರೂರ್, ಚೆನ್ನೈ–600116 ಮೊ:9940063234

ಸಮಗ್ರ ಶಿಕ್ಷಣ – ಕರ್ನಾಟಕ
ಹೊಸ ಸಾರ್ವಜನಿಕ ಕಚೇರಿಗಳ ಪೂರಕ ಕಟ್ಟಡ, ನೃಪತುಂಗರಸ್ತೆ,
ಕೆ.ಆರ್. ವೃತ್ತ, ಬೆಂಗಳೂರು–560001
ಇ–ಮೇಲ್: ssaspoadmn@gmail.com

ಸಂಖ್ಯೆ: ಸಶಿಕ/ಆ/ಸಿ1/24/2022–ಜೆಡಿಎ/Call-3/Call-2 ದಿನಾಂಕ: 24.03.2023

ಇ–ಟೆಂಡರ್ ಪ್ರಕಟಣೆ
(ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ವಿಷಯ: ರಾಜ್ಯ ಯೋಜನಾ ನಿರ್ದೇಶಕರ ಕಚೇರಿ, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು ಈ ಕಚೇರಿಗೆ ಮಾಸಿಕ ಗುತ್ತಿಗೆ ಆಧಾರದ ಮೇರೆಗೆ ವಾಹನವನ್ನು ಸರಬರಾಜು ಪಡೆಯಲು ಇ–ಟೆಂಡರ್ ಆಹ್ವಾನಿಸುವ ಬಗ್ಗೆ.

ರಾಜ್ಯ ಯೋಜನಾ ನಿರ್ದೇಶಕರ ಕಚೇರಿ, ಸಮಗ್ರ ಶಿಕ್ಷಣ – ಕರ್ನಾಟಕ, ಬೆಂಗಳೂರು ಈ ಕಚೇರಿಗೆ ಮಾಸಿಕ ಗುತ್ತಿಗೆ ಆಧಾರದ ಮೇರೆಗೆ ವಾಹನವನ್ನು ಸರಬರಾಜು ಮಾಡುವ ಸಂಬಂಧ ಅರ್ಹ ಬಿಡ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಿದೆ. ಇ.ಎಂ.ಡಿ ಮೊತ್ತ: **ರೂ.1,40,000/–.**
1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಹಾಗೂ ಸಮಯ: **04.04.2023ರ ಸಂಜೆ 05.30 ಗಂಟೆಯವರೆಗೆ.** 2) ಪ್ರಿ–ಬಿಡ್ ಸಭೆಯ ದಿನಾಂಕ: **28.03.2023 ರಂದು ಬೆಳಿಗ್ಗೆ 11.00 ಗಂಟೆಗೆ.** 3) ವಿವರಗಳಿಗಾಗಿ http://eproc.karnataka.gov.in ಗಮನಿಸುವುದು.

ಸಹಿ/–
ರಾಜ್ಯಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ–ಕರ್ನಾಟಕ

DIPR/CP/BCPL/5442/2022-23

ಡೆಟ್ಸ್ ರಿಕವರಿ ಅಪ್ಪೆಲ್ಲೇಟ್ ಟ್ರಿಬ್ಯೂನಲ್ ಮುಂಬೈ
ಪ್ಲಾಟ್ ನಂ. 19, 1ನೇ ಮಹಡಿ, ಟೆಲೆಫೋನ್ ಭವನ, ಆರ್ಥರ್ ಬಂಡರ್ ರೋಡ್,
ಕೊಲಾಬಾ ಮಾರ್ಕೆಟ್,ಕೊಲಾಬಾ, ಮುಂಬೈ 400 005.
ಲಾಜ್. ನಂ. 166/2019 ರಲ್ಲಿ
ಎಂ.ಎ.ನಂ.699/2019

ಕೆನರಾ ಬ್ಯಾಂಕ್ ...ಅಪ್ಪೆಲ್ಲೆಂಟ್ಸ್
ವಿರುದ್ಧ
ಮೆ. ಮಿಡ್ ಇಂಡಿಯಾ ಆಯಿಲ್ಸ್ & ಎಕ್ಸ್‌ಪೋರ್ಟ್ಸ್. ಲಿ. & ಓರ್ಸ್ ... ಎದುರುದಾರರು

ಪ್ರಿಸೈಡಿಂಗ್ ಆಫೀಸರ್, ಸಾಲಗಳ ವಸೂಲಾತಿ ನ್ಯಾಯಾಧಿಕರಣ, ನಾಗಪುರ ಇವರು 16.11.2018 ರಂದು ನಿರ್ಧರಿಸಿ ಹೊರಡಿಸಿರುವ ಒ.ಎ.ನಂ. 75/2010ರ ಆದೇಶದಿಂದ ಮನವಿ.

ಗೆ,

1. **ಮೆ. ಮಿಡ್ ಇಂಡಿಯಾ ಆಯಿಲ್ಸ್ & ಎಕ್ಸ್‌ಪೋರ್ಟ್ಸ್ ಲಿ.,** ನೋಂದಾಯಿತ ಕಚೇರಿ ವಿಳಾಸ 501, ಸದೋದಯ 77, ಸೆಂಟ್ರಲ್ ಅವೆನ್ಯೂ, ನಾಗಪುರ–440002. ಮತ್ತು ಪ್ರಧಾನ ಕಚೇರಿ ವಿಳಾಸ ರೂನ್ವಾಲ್ ಸೆಂಟರ್, 2ನೇ ಮಹಡಿ, ಗೋವಂದಿ ಸ್ಟೇಷನ್ ರೋಡ್, ದಿಯೊನಾರ್, ಮುಂಬೈ–400088.... **ಎದುರುದಾರ ನಂ.1**
2. **ಎಡ್ವಿನ್ ಡಿಸೋಜಾ,** ವಯಸ್ಕರು, ವಿಳಾಸ ಎಫ್–8, ದತ್ತಗುರು ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿ, ದಿಯೊನಾರ್, ಮುಂಬೈ–400088 **...ಎದುರುದಾರ ನಂ.2**
3. **ಹೆನ್ರಿ ಡಿಸೋಜಾ,** ವಯಸ್ಕರು, ವಿಳಾಸ ಹೆಚ್–8, ದತ್ತಗುರು ಕೋ–ಪರೇಟಿವ್ ಹೌಸಿಂಗ್ ಸೊಸೈಟಿ, ದಿಯೊನಾರ್, ಮುಂಬೈ–400088 **...ಎದುರುದಾರ ನಂ.3**
4. **(ಎ) ಶ್ರೀಮತಿ. ಡಿ.ಎ. ಸತ್ಯಪ್ರಭಾ, (ಬಿ) ಶ್ರೀ. ಡಿ.ಎ. ಶ್ರೀನಿವಾಸ್, (ಸಿ) ಶ್ರೀಮತಿ. ತೇಜಶ್ವರಿ ಶ್ರೀನಿವಾಸಮೂರ್ತಿ, (ಡಿ) ಶ್ರೀಮತಿ. ಕಲ್ಪನಾ ಬಿನ್ ಡಿ.ಕೆ.ಆದಿಕೇಶವುಲು,** ಡಿ4(ಎ) ಇಂದ ಡಿ4(ಡಿ) ವರೆಗೆ ಎಲ್ಲರ ವಿಳಾಸ ಕೇರಾಫ್ ಲೇಟ್ ಶ್ರೀ. ಕೆ.ಆದಿಕೇಶವುಲು ನಾಯ್ಡು ಹೌಸ್ ನಂ.1, ಸಾಯಿ ಗಾರ್ಡನ್ ವಿಲ್ಲಾ ಎದುರು, ಹೆಚ್.ಪಿ. ಪೆಟ್ರೋಲ್ ಬಂಕ್ ಪಕ್ಕ, ವೈಟ್‌ಫೀಲ್ಡ್–ಹೊಸಕೋಟೆ ರೋಡ್, ಬೆಂಗಳೂರು–560067 ಕರ್ನಾಟಕ. **...ಎದುರುದಾರ ನಂ.4**
5. **ಸೋಲ್‌ಚೆಮಿ ಇಕ್ವಿಪ್‌ಮೆಂಟ್ ಪ್ರೈ. ಲಿ.,** ನೋಂದಾಯಿತ ಕಚೇರಿ ವಿಳಾಸ ರೂನ್ವಾಲ್ ಸೆಂಟರ್, 2ನೇ ಮಹಡಿ, ಗೋವಂದಿ ಸ್ಟೇಷನ್ ರೋಡ್, ದಿಯೊನಾರ್, ಮುಂಬೈ–400088. ...ಎದುರುದಾರ ನಂ.5
6. **ನಿಶ್ಚಲ್ ಫೈನಾನ್ಸ್ ಪ್ರೈ. ಲಿ.,** ನೋಂದಾಯಿತ ಕಚೇರಿ ವಿಳಾಸ ರೂನ್ವಾಲ್ ಸೆಂಟರ್, 2ನೇ ಮಹಡಿ, ಗೋವಂದಿ ಸ್ಟೇಷನ್ ರೋಡ್, ದಿಯೊನಾರ್, ಮುಂಬೈ–400088. **...ಎದುರುದಾರ ನಂ.6**
7. **ಮಿಡ್ ಇಂಡಿಯಾ ಆಯಿಲ್ಸ್ ಅಂಡ್ ಎಕ್ಸ್‌ಪೋರ್ಟ್ಸ್ ಕಂಪನಿ ಪರ ಅಧಿಕೃತ ಲಿಕ್ವಿಡೇಟರ್,** ಕಚೇರಿ ವಿಳಾಸ ನ್ಯೂ ಸೆಕ್ರೆಟರಿಯಾಟ್ ಬಿಲ್ಡಿಂಗ್, ವಿಸಿಎ ಮೈದಾನದ ಹತ್ತಿರ, ಸಿವಿಲ್ ಲೈನ್ಸ್, ನಾಗಪುರ–1, **ಎದುರುದಾರ ನಂ.8**
8. **ಶ್ರೀ. ಪಿ.ರಾಜರತ್ನಮ್,** ವಿಳಾಸ ನಂ.33, ನುಂಗಂಬಾಕ್ಕಂ ಹೈ ರೋಡ್, ಮದ್ರಾಸ್–600034 ... **ಎದುರುದಾರ ನಂ.9**
9. **ಶ್ರೀ. ಸಾಲಿಯಾ ಕಾದ್ಯಂಭ ಮಣಿ,** ವಿಳಾಸ ಬಿ–28, ಸಿಂಡಿಕೇಟ್ ರೆಸಿಡೆನ್ಸ್, ಥಾಮಸ್ ರೋಡ್, ಮದ್ರಾಸ್–600017 **...ಎದುರುದಾರ ನಂ.11**
10. **ಶ್ರೀ. ಪಿ.ರಾಜರತ್ನಮ್,** ವಿಳಾಸ ನಂ.8/12, ಶಕ್ತಿ ವೆಲ್ಲಮಲ್ ಸ್ಟ್ರೀಟ್, ಎಸ್.ಎಸ್.ಕಾಲೋನಿ, ಮದ್ರಾಸ್ **...ಎದುರುದಾರ ನಂ.12**

ದಯವಿಟ್ಟು ಗಮನಿಸಿ, ನಾಗಪುರ ಡಿಆರ್‌ಟಿ'ಯ ಪ್ರಿಸೈಡಿಂಗ್ ಆಫೀಸರ್ ರವರು ಒ.ಎ.ನಂ. 75/2010ಕ್ಕೆ ಸಂಬಂಧಿಸಿದಂತೆ 16.11.2018 ರಂದು ಹೊರಡಿಸಿರುವ ಆದೇಶ ಮನವಿಯನ್ನು, ಅಪ್ಪೆಲ್ಲಂಟ್ ಪರ ವಕೀಲರಿಂದ ಸದರಿ ನ್ಯಾಯಾಧಿಕರಣದಲ್ಲಿ **06.02.2019** ರಂದು ಮಂಡಿಸಲಾಗಿದ್ದು, ಅಪೀಲ್ ಸಲ್ಲಿಕೆಯಲ್ಲಿ ವಿಳಂಬವಾಗಿರುವುದಕ್ಕೆ ಕ್ಷಮೆ ಕೋರಿಕೆ ಅರ್ಜಿಯನ್ನೂ ಸಲ್ಲಿಸಿರುತ್ತಾರೆ ಮತ್ತು ಅದು ಲಾಜ್.ನಂ.166/2019 ರಲ್ಲಿ ಎಂ.ಎ.ನಂ.699/2019 ಸಂಖ್ಯೆಯಲ್ಲಿ ನೋಂದಣಿ ಆಗಿರುತ್ತದೆ.
ವಿಳಂಬಕ್ಕೆ ಕ್ಷಮೆ ಕೋರಿದ ಅರ್ಜಿಯ ಜೊತೆಗೆ ಸದರಿ ಅಪೀಲ್ ನೋಟಿಸ್‌ನ್ನು ಆರ್‌ಪಿಎಡಿ ಮುಖಾಂತರ ಸರ್ವ್ ಮಾಡಲು ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಲಾಯಿತು, ಆದರೆ ಎದುರುದಾರರಿಗೆ ರವಾನಿಸಲಾಗಿದ್ದ ಲಕೋಟೆಗಳು ಅಂಚೆ ಪ್ರಾಧಿಕಾರದ "ಲೆಫ್ಟ್" ಎಂಬ ಷರಾದೊಂದಿಗೆ ಮರಳಿ ಬಂದಿರುತ್ತವೆ. ಆದ್ದರಿಂದ, ಈ ಪ್ರಕಟಣೆಯನ್ನು ನಿಮ್ಮ ಮಾಹಿತಿಗಾಗಿ ನೀಡಲಾಗಿದೆ.
ಮೆಮೊರ್‍ಯಾಂಡಮ್ ಆಫ್ ಅಪೀಲ್‌ನ ಪ್ರತಿಯನ್ನು ಅಪ್ಪೆಲ್ಲಂಟ್ಸ್ ಪರ ವಕೀಲರಾದ ವೈಶಾಲಿ ಭಿಲಾರೆ 414, ಎ/ಬಿ, 4ನೇ ಮಹಡಿ, ಯೂಸುಫ್ ಬಿಲ್ಡಿಂಗ್, ಎಂ.ಜಿ.ರೋಡ್, ಫೋರ್ಟ್, ಮುಂಬೈ 400 001 ಇವರಿಂದ ಪಡೆದುಕೊಳ್ಳಬಹುದು.
ಈ ಪ್ರಕಟಣೆಗೆ ಏನಾದರು ಪ್ರತಿಕ್ರಿಯೆ ನೀಡುವುದಿದ್ದಲ್ಲಿ, ನೀವು **25 ಏಪ್ರಿಲ್, 2023 ರಂದು ಬೆಳಗ್ಗೆ 11:30** ಗಂಟೆಗೆ ಇಲ್ಲಿ ಕೆಳಗೆ ಸಹಿ ಹಾಕಿರುವವರ ಎದುರಿಗೆ ಹಾಜರಾಗಬಹುದು.
ಸದರಿ ವಿಷಯಕ್ಕೆ ಸಂಬಂಧಿಸಿದಂತೆ ವ್ಯವಹರಿಸಲಿಕ್ಕೆ ಒಂದು ವೇಳೆ ನೀವು ಖುದ್ದಾಗಿಯಾಗಲಿ ಅಥವಾ ನಿಮ್ಮ ಪರ ವಕೀಲರ ಮುಖಾಂತರವಾಗಲಿ ಅಥವಾ ಕಾನೂನು ಪ್ರಕಾರ ನಿಮ್ಮಿಂದ ಅಧಿಕೃತವಾಗಿರು ಇನ್ಯಾರಾದರು ಹಾಜರಾಗದಿದ್ದರೆ, ನಿಮ್ಮ ಅನುಪಸ್ಥಿತಿಯಲ್ಲಿಯೇ ಈ ವಿಷಯವನ್ನು ಇತ್ಯರ್ಥಪಡಿಸಲಾಗುತ್ತದೆ.
ನನ್ನ ಕೈಯಾರೆ ನ್ಯಾಯಾಧಿಕರಣದ ಮೊಹರಿನೊಂದಿಗೆ 23 ಮಾರ್ಚ್, 2023 ರಂದು ನೀಡಲಾಗಿದೆ.

Seal ಸಹಿ/– ರಿಜಿಸ್ಟ್ರಾರ್

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮುಖ್ಯ ಆಯುಕ್ತರು, ಅನೆಕ್ಸ್ ಕಟ್ಟಡ–1, ನರಸಿಂಹರಾಜ ಚೌಕ, ಬೆಂಗಳೂರು – 560 002

ಸಂಖ್ಯೆ: ಬೃಬೆಂಮಪಾ/ಮು.ಆಯುಕ್ತರು/ಪಿಎಸ್ಆರ್(ಜಿ)/4295/2022–23 **ನಮೂನೆ –3** ದಿನಾಂಕ: 20.03.2023

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಪಟ್ಟಣ ಯೋಜನಾ ಕಾಯಿದೆ 1961ರ ಸೆಕ್ಷನ್ 14–ಬಿ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತ, **"ಆರ್‌ಎಂಪಿ–2015ರಂತೆ ಅಗಲ 18.00 ಮೀಟರ್‌ಗಳು ಸಾದರಮಂಗಲ ಮಾರ್ಗವಾಗಿ ಹೂಡಿ ರೈಲು ನಿಲ್ದಾಣದಿಂದ ಕುಂಬೇನ ಅಗ್ರಹಾರದವರೆಗೆ ರಸ್ತೆ ನಿರ್ಮಾಣ ಮತ್ತು ಅಭಿವೃದ್ಧಿ ಮಾಡುವ ಕಾಮಗಾರಿಗಾಗಿ ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ನರಸಿಂಹರಾಜ ಚೌಕ, ಬೆಂಗಳೂರು–560002** ಇವರಿಗೆ ಈ ಕೆಳಗಿನ ಷೆಡ್ಯೂಲ್‌ನಲ್ಲಿ ತಿಳಿಸಲಾದ ಪ್ರದೇಶಗಳು ಅವಶ್ಯಕವಿರುತ್ತದೆ.
ಈ ಕೆಳಗಿನ ಜಮೀನು/ಕಟ್ಟಡದ ಮಾಲೀಕರು ನ್ಯಾಯೋಚಿತ ಪರಿಹಾರ ಮತ್ತು ಭೂಸ್ವಾಧೀನ, ಪುನರ್ವಸತಿ ಮತ್ತು ರೀಸೆಟಲ್‌ಮೆಂಟ್ ಪಾರದರ್ಶಕ ಕಾಯಿದೆ 2013ರಂತೆ ವಿತ್ತೀಯ ಪರಿಹಾರದ ಬದಲಾಗಿ ಅಭಿವೃದ್ಧಿ ಹಕ್ಕುಗಳನ್ನು ಆಯ್ಕೆಯನ್ನು ಹೊಂದಿರುತ್ತಾರೆ. ಅಭಿವೃದ್ಧಿ ಹಕ್ಕುಗಳನ್ನು/ಮೌಲ್ಯವನ್ನು ಪ್ರಾಧಿಕಾರವು ಭೂಮಿಯನ್ನು ನೀಡಿದ/ಒಪ್ಪಿಸಿದ ದುಪ್ಪಟ್ಟು ಮತ್ತು ನೀಡಿದ/ಒಪ್ಪಿಸಿದ ಕಟ್ಟಡ ಪ್ರದೇಶದ ಎರಡರಷ್ಟು ಹಾಗೂ ನೀಡಿದ/ಒಪ್ಪಿಸಿದ ಕಟ್ಟಡದ ಪ್ರದೇಶದ ಅಂದಾಜು ಮೌಲ್ಯವನ್ನು (ಲೋಕೋಪಯೋಗಿ ಇಲಾಖೆ ಮಾನದಂಡಗಳಂತೆ) ಭೂಮಿಯ ಪೈಕಿ ಕಟ್ಟಡ ನಿರ್ಮಿಸಿರುವ ಭಾಗದ ಮಾರುಕಟ್ಟೆ ಮೌಲ್ಯದಂತೆ ವಿಂಗಡಿಸಿ ನೀಡಲಾಗುವುದು.
ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯಕವಿರುವ ಸ್ವತ್ತು ಮತ್ತು ಸ್ವತ್ತಿನ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರಗಳನ್ನು (ಡಿಆರ್‌ಸಿಗಳು) ವಿತರಿಸಲಾಗುವುದು. ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿಗಳು, ಉಪ ಆಯುಕ್ತರವರ ಕಚೇರಿ, (ಭೂಸ್ವಾಧೀನ ಮತ್ತು ಟಿಡಿಆರ್), ಕೇಂದ್ರ ಕಚೇರಿ, ಬೃ.ಬೆಂ.ಮ.ಪಾಲಿಕೆ ಇವರನ್ನು ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಸಂಪರ್ಕಿಸಬಹುದು.

ಭೂಮಿ/ಕಟ್ಟಡ ಪ್ರದೇಶವನ್ನು ನೀಡಿದ/ಒಪ್ಪಿಸಿದವರು ಹಾಗೂ ಡಿಆರ್‌ಸಿ ನೀಡುವ ಭೂ ಮಾಲೀಕರ ಪಟ್ಟಿ

ಜಿಲ್ಲೆಯ ಹೆಸರು: **ಬೆಂಗಳೂರು ನಗರ** ತಾಲ್ಲೂಕಿನ ಹೆಸರು: **ಬೆಂಗಳೂರು ಪೂರ್ವ** ಗ್ರಾಮದ ಹೆಸರು: **ಸಾದರಮಂಗಲ**

Sy.No/ Khatha No.	Type of Land		Nature of Land			Dimension of the Land/ Plot & Extent in Sq.M		Boundaries of the Land / Plot				Building Details			Present Activity on Land/Building (Specify Specific activity such as Shop, Office, Factory, Apartment, Individual house etc.,	Market (guide -lines) value of the land Per Sq.M (in Rs.)	Name and address of the owner of the plot/Land for Which DRC is to be issued
	Vacant	Built up	Agriculture	Converted undeveloped	Approved Layout / developed Land Building Site	Dimension	Extent	North	South	East	West	Extent in Sq.M	Type of Construction & No.of Floors	Floor Area Ratio			
Sy No: 1/3, 2/4, Khatha No: 535/1, Site No: 23 & 24	Vacant		Converted Unauthorized Layout-B Khatha Site/Plot			329.52 Sqm		Remaining Portion of Site No:17	Road	Site No:16 & 17	Road	-	-		Vacant	13950/- Per Sqm	Sri. D. Madhu Sudhana Rao. (Rep by this GPA Holder Smt. N Padma) No: P-102, 7th Main, Sector-10, Jeevanabhimanagar, Bengaluru - 560 075.

ಆಕ್ಷೇಪಣೆ ಮತ್ತು ಸಲಹೆಗಳನ್ನು ಈ ಕೆಳಕಂಡಂತೆ ನಿರ್ದಿಷ್ಟಪಡಿಸಿರುವ ವಿಳಾಸಕ್ಕೆ ಸಲ್ಲಿಸಬಹುದು

ವಿಭಾಗ / ಉಪ–ವಿಭಾಗ / ಶಾಖೆ ಕಚೇರಿಗಳ ಹೆಸರು ಮತ್ತು ವಿಳಾಸ	ವಿಶೇಷ ಭೂಸ್ವಾಧೀನ ಅಧಿಕಾರಿ, 1ನೇ ಮಹಡಿ, ಕೊಠಡಿ ಸಂ.107, ಅನೆಕ್ಸ್ ಕಟ್ಟಡ–3, ನರಸಿಂಹರಾಜ ಚೌಕ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು – 560 002.

ಸಹಿ/–
ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮುಖ್ಯ ಆಯುಕ್ತರವರ ಕಛೇರಿ, ಅನೆಕ್ಸ್ ಕಟ್ಟಡ–1, ನರಸಿಂಹ ರಾಜ ಚೌಕ–1, ಬೆಂಗಳೂರು–560 002.

ಸಂಖ್ಯೆ: ಬೃಬೆಂಮಪಾ/ಆಯುಕ್ತರು/ಪಿಎಸ್ಆರ್(ಜಿ)/4290/2022–23 **ನಮೂನೆ-3** ದಿನಾಂಕ: 20.03.2023

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಪಟ್ಟಣ ಯೋಜನಾ ಕಾಯಿದೆ 1961ರ ಸೆಕ್ಷನ್ 14-ಬಿ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತ, 45.00 ಮೀಟರ್‌ಗಳ ಅಗಲದಂತೆ, ಅನುಮೋದಿತ ಮಹಾಯೋಜನೆ 2015ರ ಪ್ರಸ್ತಾವನೆಗಳನ್ನು ಅನುಷ್ಠಾನಗೊಳಿಸಲು ಹೂಡಿ ರೈಲ್ವೆ ನಿಲ್ದಾಣ ದಿಂದ ಕುಂಬೇನ ಅಗ್ರಹಾರ, ಸಾದರಮಂಗಲ ಮಾರ್ಗವಾಗಿ ರಸ್ತೆ ನಿರ್ಮಾಣ ಮತ್ತು ಅಭಿವೃದ್ಧಿ ಮಾಡುವ ಕಾಮಗಾರಿಗಾಗಿ ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರಿಗೆ ಈ ಕೆಳಗಿನ ಷೆಡ್ಯೂಲ್‌ನಲ್ಲಿ ತಿಳಿಸಲಾದ ಪ್ರದೇಶಗಳು ಅವಶ್ಯಕವಿರುತ್ತದೆ.
ಈ ಕೆಳಗಿನ ಜಮೀನು ಕಟ್ಟಡದ ಮಾಲೀಕರು ನ್ಯಾಯೋಚಿತ ಪರಿಹಾರ ಮತ್ತು ಭೂಸ್ವಾಧೀನ, ಪುನರ್ವಸತಿ ಮತ್ತು ರೀಸೆಟಲ್‌ಮೆಂಟ್ ಪಾರದರ್ಶಕ ಕಾಯಿದೆ 2013ರಂತೆ ವಿತ್ತೀಯ ಪರಿಹಾರದ ಬದಲಾಗಿ ಅಭಿವೃದ್ಧಿ ಹಕ್ಕುಗಳನ್ನು ಆಯ್ಕೆಯನ್ನು ಹೊಂದಿರುತ್ತಾರೆ. ಅಭಿವೃದ್ಧಿ ಹಕ್ಕುಗಳನ್ನು ಮೌಲ್ಯವನ್ನು ಪ್ರಾಧಿಕಾರವು ಭೂಮಿಯನ್ನು ನೀಡಿದ, ಒಪ್ಪಿಸಿದ ದುಪ್ಪಟ್ಟು ಮತ್ತು ನೀಡಿದ ಒಪ್ಪಿಸಿದ ಕಟ್ಟಡ ಪ್ರದೇಶದ ಎರಡರಷ್ಟು ಹಾಗೂ ನೀಡಿದ/ಒಪ್ಪಿಸಿದ ಕಟ್ಟಡದ ಪ್ರದೇಶದ ಅಂದಾಜು ಮೌಲ್ಯವನ್ನು (ಲೋಕೋಪಯೋಗಿ ಇಲಾಖೆ ಮಾನದಂಡಗಳಂತೆ) ಭೂಮಿಯ ಪೈಕಿ ಕಟ್ಟಡ ನಿರ್ಮಿಸಿರುವ ಭಾಗದ ಮಾರುಕಟ್ಟೆ ಮೌಲ್ಯದಂತೆ ವಿಂಗಡಿಸಿ ನೀಡಲಾಗುವುದು.
ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯಕವಿರುವ ಸ್ವತ್ತು ಮತ್ತು ಸ್ವತ್ತಿನ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರಗಳನ್ನು (ಡಿಆರ್‌ಸಿಗಳು) ವಿತರಿಸಲಾಗುವುದು, ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ವಿಶೇಷ ಭೂಸ್ವಾಧೀನ ಅಧಿಕಾರಿ, ಉಪ ಆಯುಕ್ತರವರ ಕಚೇರಿ, (ಭೂಸ್ವಾಧೀನ ಮತ್ತು ಟಿಡಿಆರ್), ಕೇಂದ್ರ ಕಚೇರಿ, ಬೃ.ಬೆಂ.ಮ.ಪಾಲಿಕೆ ಇವರನ್ನು ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಸಂಪರ್ಕಿಸಬಹುದು.

ಭೂಮಿ / ಕಟ್ಟಡ ಪ್ರದೇಶವನ್ನು ನೀಡಿದ / ಒಪ್ಪಿಸಿದವರು ಹಾಗೂ ಡಿಆರ್‌ಸಿ ನೀಡುವ ಭೂ ಮಾಲೀಕರ ಪಟ್ಟಿ

ಜಿಲ್ಲೆಯ ಹೆಸರು: ಬೆಂಗಳೂರು ನಗರ ತಾಲ್ಲೂಕಿನ ಹೆಸರು: ಬೆಂಗಳೂರು ಪೂರ್ವ ಗ್ರಾಮದ ಹೆಸರು: ಸಾದರಮಂಗಲ

Sy.No/ Khatha No.	Type of Land		Nature of Land			Dimension of the land/ plot and Extent in Sq.m		Boundaries of the Land/ Plot				Building Details			Present Activity on Land/Building (Specify Specific activity such as Shop, Office, Factory, Apartment, Individual house etc.,	Market (guidel-ines) value of the land per Sq.m.	Name and address of the owner of the plot/Land for which DRC is to be issued
	Vacant	Built up	Agriculture	Converted undeveloped	Approved Layout/ Developed Land Building Site	Dimension	Extent	North	South	East	West	Extent in Sq.m	Type of Construction and No. of Floors	Floor Area Ratio			
Sy.No.1/3, 2/4, Khatha No. 538/1, Site No.35 & 36	Vacant			Converted Unauthorised Layout-B Khatha Site/Plot			391.56 Sqm	Remaining Portion of Site No.36	Road	Road	Private Property				Vacant	13950/- per Sqm	Sri. S.J. Prashanth, Rep. by his GPA Holder, Sri. A.Nageshwara Rao, No.21, Harris Road, Benson Town, Bengaluru-560 046.

ಆಕ್ಷೇಪಣೆ ಮತ್ತು ಸಲಹೆಗಳನ್ನು ಈ ಕೆಳಕಂಡಂತೆ ನಿರ್ದಿಷ್ಟಪಡಿಸಿರುವ ವಿಳಾಸಕ್ಕೆ ಸಲ್ಲಿಸಬಹುದು

ವಿಭಾಗ / ಉಪ–ವಿಭಾಗ / ಶಾಖೆ ಕಚೇರಿಗಳ ಹೆಸರು ಮತ್ತು ವಿಳಾಸ	ವಿಶೇಷ ಭೂಸ್ವಾಧೀನ ಅಧಿಕಾರಿ, 1ನೇ ಮಹಡಿ, ಕೊಠಡಿ ಸಂ.107, ಅನೆಕ್ಸ್ ಕಟ್ಟಡ–3, ನರಸಿಂಹರಾಜ ಚೌಕ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು – 560 002.

ಸಹಿ/–
ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮುಖ್ಯ ಆಯುಕ್ತರು, ಆನೆಕ್ಸ್ –1 ಕಟ್ಟಡ, ನರಸಿಂಹರಾಜ ಚೌಕ, ಬೆಂಗಳೂರು – 560 002
ನಮೂನೆ –3

ಸಂಖ್ಯೆ: ಬೃಬೆಂಮಪಾ/ಆಯುಕ್ತರು/ಪಿಎಸ್ಆರ್(ಜಿ)/4291/2022–23 ದಿನಾಂಕ:20.03.2023

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಪಟ್ಟಣ ಯೋಜನಾ ಕಾಯಿದೆ 1961ರ ಸೆಕ್ಷನ್ 14–ಬಿ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತಾ, **18.00 ಮೀಟರ್‌ಗಳ ಅಗಲದಂತೆ, ಅನುಮೋದಿತ ಮಹಾಯೋಜನೆ 2015ರ ಪ್ರಸ್ತಾವನೆಗಳನ್ನು ಅನುಷ್ಠಾನಗೊಳಿಸಲು ಹೂಡಿ ರೈಲು ನಿಲ್ದಾಣದಿಂದ ಸಾದರಮಂಗಲ ಮೂಲಕ ಕುಂಬೇನ ಅಗ್ರಹಾರದವರೆಗೆ ರಸ್ತೆ ನಿರ್ಮಾಣದ ಅಭಿವೃದ್ಧಿ ಕಾಮಗಾರಿಗಾಗಿ** ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರಿಗೆ ಈ ಕೆಳಗಿನ ಷೆಡ್ಯೂಲ್‌ನಲ್ಲಿ ತಿಳಿಸಲಾದ ಪ್ರದೇಶಗಳು ಅವಶ್ಯಕವಿರುತ್ತದೆ.
ಈ ಕೆಳಗಿನ ಜಮೀನು / ಕಟ್ಟಡದ ಮಾಲೀಕರು ನ್ಯಾಯೋಚಿತ ಪರಿಹಾರ ಮತ್ತು ಭೂಸ್ವಾಧೀನ, ಪುನರ್ವಸತಿ ಮತ್ತು ರಿಸೆಟಲ್‌ಮೆಂಟ್ ಪಾರದರ್ಶಕ ಕಯಿದೆ 2013ರಂತೆ ವಿತ್ತೀಯ ಪರಿಹಾರದ ಬದಲಾಗಿ ಅಭಿವೃದ್ಧಿ ಹಕ್ಕುಗಳನ್ನು ಆಯ್ಕೆಯನ್ನು ಹೊಂದಿರುತ್ತಾರೆ. ಅಭಿವೃದ್ಧಿ ಹಕ್ಕುಗಳನ್ನು / ಮೌಲ್ಯವನ್ನು ಪ್ರಾಧಿಕಾರವು ಭೂಮಿಯನ್ನು ನೀಡಿದ / ಒಪ್ಪಿಸಿದ ದುಪ್ಪಟ್ಟು ಮತ್ತು ನೀಡಿದ / ಒಪ್ಪಿಸಿದ ಕಟ್ಟಡದ ಪ್ರದೇಶದ ಅಂದಾಜು ಮೌಲ್ಯವನ್ನು (ಲೋಕೋಪಯೋಗಿ ಇಲಾಖೆ ಮಾನದಂಡಗಳಂತೆ) ಭೂಮಿಯ ಪೈಕಿ ಕಟ್ಟಡ ನಿರ್ಮಿಸಿರುವ ಭಾಗದ ಮಾರುಕಟ್ಟೆ ಮೌಲ್ಯದಂತೆ ವಿಂಗಡಿಸಿ ನೀಡಲಾಗುವುದು.
ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯಕವಿರುವ ಸ್ವತ್ತು ಮತ್ತು ಸ್ವತ್ತಿನ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣಪತ್ರಗಳನ್ನು (ಡಿಆರ್‌ಸಿಗಳು) ವಿತರಿಸಲಾಗುವುದು. ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ಡೆಪ್ಯೂಟಿ ಕಮೀಷನರ್‌ರವರ ಕಛೇರಿ, (ಭೂಸ್ವಾಧೀನ ಮತ್ತು ಟಿಡಿಆರ್), ಕೇಂದ್ರ ಕಛೇರಿ, ಬೃ.ಬೆಂಮಪಾಲಿಕೆ ಇವರನ್ನು ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಸಂಪರ್ಕಿಸಬಹುದು.

ಭೂಮಿ / ಕಟ್ಟಡ ಪ್ರದೇಶವನ್ನು ನೀಡಿದ ಒಪ್ಪಿಸಿದವರು ಹಾಗೂ ಡಿಆರ್‌ಸಿ ನೀಡುವ ಭೂಮಾಲೀಕರ ಪಟ್ಟಿ

ಜಿಲ್ಲೆಯ ಹೆಸರು : ಬೆಂಗಳೂರು ನಗರ, ತಾಲ್ಲೂಕಿನ ಹೆಸರು: ಬೆಂಗಳೂರು ಪೂರ್ವ, ಗ್ರಾಮದ ಹೆಸರು : ಸಾದರಮಂಗಲ

Sy. No. Khatha No.	Type of land		Nature of land			Dimension of the land/ Plot & Extent in Sq.M		Boundaries of the land				Building Details			Present Activity on Land/Building (Specify Specific activity such as Shop, Office, factory, Apartment, Individual House etc.)	Market (guide lines) value of the land per Sq.M (in Rs.)	Name and address of the owner of the plot/Land for which DRC is to be issued
	Vacant	Built up	Agriculture	Converted Undeveloped	Approved layout / developed land Building site	Dimension	Extent	North	South	East	West	Extent in Sq.M	Type of Construction and No,. of floors	Floor Area Ratio			
Sy. No. 1/3, 2/4, Khatha No. 536/1, Site No. 25	Vacant		Converted Unauthorised Layout B-Khatha Site / Plot			239.67 Sqm		Site No. 26	Road	Road	Sy. No. 34	None	None	None	Vacant	13,950/- per Sqm	Sri Atluri Balamuralikrishna S/o. Sri Purushotham, #008, #135, Sree Charitha Gardens, 1st Cross, Chandra Layout, Marathahalli, Bangalore - 560 037. Aadhar No. 2896-1891-4664

ಆಕ್ಷೇಪಣೆ ಮತ್ತು ಸಲಹೆಗಳನ್ನು ಈ ಕೆಳಕಂಡಂತೆ ನಿರ್ದಿಷ್ಟಪಡಿಸಿರುವ ವಿಳಾಸಕ್ಕೆ ಸಲ್ಲಿಸಬಹುದು

ವಿಭಾಗ / ಉಪ ವಿಭಾಗ / ಶಾಖೆ ಕಛೇರಿಗಳ ಹೆಸರು ಮತ್ತು ವಿಳಾಸ	ವಿಶೇಷ ಭೂಸ್ವಾಧೀನ ಅಧಿಕಾರಿ, 1ನೇ ಮಹಡಿ, ಕೊಠಡಿ ಸಂಖ್ಯೆ 107, ಅನೆಕ್ಸ್ ಕಟ್ಟಡ–3, ನರಸಿಂಹರಾಜ ಚೌಕ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು – 560 002.

ಸಹಿ/–
ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪರಿಸರ ಸಂರಕ್ಷಣೆಗೆ ಕಠಿಣ ಕಾನೂನು; ಪ್ರಸ್ತಾವ

ವಿದ್ಯುತ್ ಚಾಲಿತ ವಾಹನಗಳಿಗೆ ಚಾಲನೆ ನೀಡಿದ ಸಚಿವ ಆನಂದ್ ಸಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಸರ ಸಂರಕ್ಷಣೆಗೆ ಇನ್ನಷ್ಟು ಕಠಿಣ ಕಾನೂನು ರೂಪಿಸಲು ಕೇಂದ್ರ ಪರಿಸರ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗುವುದು ಎಂದು ಪ್ರವಾಸೋದ್ಯಮ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವ ಆನಂದ್ ಸಿಂಗ್ ಹೇಳಿದರು.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನೂತನ ವಿದ್ಯುತ್ ಚಾಲಿತ ವಾಹನಗಳಿಗೆ ಶುಕ್ರವಾರ ಚಾಲನೆ ನೀಡಿದ ಬಳಿಕ ಅವರು ಮಾತನಾಡಿದರು.

ರಾಸಾಯನಿಕಗಳನ್ನು ಹೊರ ಹಾಕುವ ಕಾರ್ಖಾನೆಗಳಿಗೆ ಮಂಡಳಿ ನೋಟಿಸ್ ನೀಡಿ, ಕ್ರಮ ಕೈಗೊಳ್ಳುವ ಕೆಲಸ ಮಾಡುತ್ತದೆ. ಇದಕ್ಕೆ ಶಾಶ್ವತವಾಗಿ ಕಡಿವಾಣ ಹಾಕುವ ಕೆಲಸ ಆಗಬೇಕು. ಪರಿಸರ ಮಾಲಿನ್ಯ ಮಾಡುವ ಕಾರ್ಖಾನೆಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು ಎಂದರು.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನೂತನ ವಿದ್ಯುತ್ ಚಾಲಿತ ವಾಹನಗಳಿಗೆ ಪ್ರವಾಸೋದ್ಯಮ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವ ಆನಂದ್ ಸಿಂಗ್ ಶುಕ್ರವಾರ ಚಾಲನೆ ನೀಡಿದರು.

ಎರಡು ವರ್ಷಗಳಲ್ಲಿ ಮಂಡಳಿ ವತಿಯಿಂದ ಪರಿಸರ ಮಾಲಿನ್ಯ ತಡೆಗೆ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ವಾಯುಮಾಲಿನ್ಯ ತಗ್ಗಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರ ವಿದ್ಯುತ್ ಚಾಲಿತ ವಾಹನಗಳ ನೀತಿ ರೂಪಿಸಿವೆ. ಬಳಕೆಯಲ್ಲಿರುವ ಡೀಸೆಲ್ ಅಥವಾ ಪೆಟ್ರೋಲ್ ವಾಹನಗಳಿಗೆ ಪರ್ಯಾಯವಾಗಿ ವಿದ್ಯುತ್ ಚಾಲಿತ ವಾಹನಗಳನ್ನು ಮಂಡಳಿಯ ದೈನಂದಿನ ಕೆಲಸ ಕಾರ್ಯಗಳಿಗೆ ಉಪಯೋಗಿಸಲು ವಿದ್ಯುತ್ ಚಾಲಿತ ವಾಹನಗಳನ್ನು ನೀಡಲಾಗಿದೆ. ಇತರೆ ಇಲಾಖೆ ಹಾಗೂ ಸರ್ಕಾರದ ಪ್ರತಿಯೊಂದು ಕಚೇರಿಯಲ್ಲೂ ಇಂತಹ ವಿದ್ಯುತ್ ಚಾಲಿತ ವಾಹನಗಳ ಬಳಕೆಗೆ ಕ್ರಮಕೈಗೊಳ್ಳಲಾಗುವುದು ಎಂದು ಮಾಹಿತಿ ನೀಡಿದರು.

ಉದ್ದಿಮೆದಾರರು ತಮ್ಮ ಸಮ್ಮತಿ ಅರ್ಜಿ ಸಲ್ಲಿಸಲು ಅನುಕೂಲವಾಗುವಂತಹ ಮಂಡಳಿಯ ನೂತನ ಮೊಬೈಲ್ ಅಪ್ಲಿಕೇಶನ್ ಬಿಡುಗಡೆ ಮಾಡಲಾಯಿತು. ಉದ್ದಿಮೆದಾರರು ಹಾಗೂ ಸಾರ್ವಜನಿಕರು ತಮ್ಮ ನಗರದಲ್ಲಿನ ವಾಯುಗುಣಮಟ್ಟವನ್ನು ತಿಳಿಯಬಹುದು ಎಂದರು.

ಇದೇ ಸಂದರ್ಭದಲ್ಲಿ ಕೈಗಾರಿಕೆಗಳಿಗೆ ಅತ್ಯುತ್ತಮ ಪರಿಸರಸ್ನೇಹಿ ಕ್ರಮಗಳನ್ನು ಅಳವಡಿಸಿಕೊಳ್ಳುವುದನ್ನು ಪ್ರೋತ್ಸಾಹಿಸುವ ಸಲುವಾಗಿ ಕೈಗಾರಿಕೆಗಳಿಗೆ ಗ್ರೀನ್ ರೇಟಿಂಗ್ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವ ವಿನೂತನ ಕಾರ್ಯಕ್ರಮಕ್ಕೆ ಸಿಐಐ ಸಂಸ್ಥೆ ಜತೆ ಮಂಡಳಿ ಒಡಂಬಡಿಕೆ ಮಾಡಿಕೊಂಡಿತು.

ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಪ್ರಧಾನ ಕಾರ್ಯದರ್ಶಿ ವಿಜಯ್ ಮೋಹನ್ ರಾಜ್, ಮಂಡಳಿ ಅಧ್ಯಕ್ಷ ಡಾ.ಶಾಂತ್ ಎ.ತಿಮ್ಮಯ್ಯ, ಸದಸ್ಯ ಕಾರ್ಯದರ್ಶಿ ಎಚ್.ಸಿ.ಗಿರೀಶ್, ಸಿಐಐ ಅಧಿಕಾರಿಗಳಾದ ವಿಜಯ್ ಕೃಷ್ಣನ್ ವೆಂಕಟೇಶ್ ಇದ್ದರು.

ಶಿಕ್ಷಕರ ವರ್ಗಾವಣೆಗೆ ಮುಖ್ಯಮಂತ್ರಿ ಸಮ್ಮತಿ

ಬೆಂಗಳೂರು: ಹೆಚ್ಚುವರಿ ಶಿಕ್ಷಕರ ಸಮಸ್ಯೆ ಸೇರಿದಂತೆ ವಿವಿಧ ಕಾರಣಗಳಿಂದ ಸ್ಥಗಿತಗೊಂಡಿದ್ದ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಯನ್ನು ತಕ್ಷಣ ಆರಂಭಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶುಕ್ರವಾರ ಅನುಮತಿ ನೀಡಿದ್ದಾರೆ.

ಚುನಾವಣಾ ಆಯೋಗದ ಅನುಮತಿ ಪಡೆದು ಪ್ರಕ್ರಿಯೆ ಆರಂಭಿಸುವಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಸೂಚಿಸಿದ್ದಾರೆ.

ಶಿಕ್ಷಕರ ವರ್ಗಾವಣೆಗೆ ಅರ್ಜಿ ಸಲ್ಲಿಸುವ ಅವಧಿಯನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಮಾರ್ಚ್ 4ರ ವರೆಗೆ ವಿಸ್ತರಿಸಿತ್ತು. ಸುಮಾರು 80 ಸಾವಿರ ಶಿಕ್ಷಕರು ಅರ್ಜಿ ಸಲ್ಲಿಸಿದ್ದರು. ಅರ್ಜಿ ಸಲ್ಲಿಸುವ ಅವಧಿ ಮುಗಿದರೂ ಪ್ರಕ್ರಿಯೆ ಆರಂಭಿಸಿರಲಿಲ್ಲ. ಈ ಕುರಿತು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದ್ದರು.

ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ ಕಾಯ್ದೆ-2020ಯನ್ನು ಜಾರಿಗೊಳಿಸಿ, ರಾಜ್ಯ ಸರ್ಕಾರ ಕಳೆದ ಡಿಸೆಂಬರ್‌ನಲ್ಲಿ ಆದೇಶ ಹೊರಡಿಸಿತ್ತು. ಇದರಿಂದ ಒಮ್ಮೆ ವರ್ಗಾವಣೆಯಾದವರು 3 ವರ್ಷಗಳ ನಂತರ ಮತ್ತೆ ವರ್ಗಾವಣೆಗೆ ಕೋರಿಕೆ ಸಲ್ಲಿಸಬಹುದು.

'ರೈತ ಸಹಾಯಕ' ಆ್ಯಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈತರು ಮತ್ತು ಗ್ರಾಹಕರ ನಡುವೆ ನೇರ ಸಂಪರ್ಕ ಕಲ್ಪಿಸುವ, ಆಹಾರೋತ್ಪನ್ನದ ಗುಣಮಟ್ಟದ ವರದಿ ನೀಡುವ 'ರೈತ ಸಹಾಯಕ' ಮೊಬೈಲ್ ಆ್ಯಪ್ ನಗರದಲ್ಲಿ ಶುಕ್ರವಾರ ಲೋಕಾರ್ಪಣೆಯಾಯಿತು.

ರಾಜ್ಯ ಸರ್ಕಾರದ ಸಹಯೋಗದಲ್ಲಿ ಎಕೋಟ್ಯಾಪ್ ನ್ಯಾಚುರಲ್ಸ್ ಸಂಸ್ಥೆ ಈ ಆ್ಯಪ್ ಅನ್ನು ಅಭಿವೃದ್ಧಿಪಡಿಸಿದ್ದು, ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಲಭ್ಯವಿದೆ.

ಕಾರ್ಯಕ್ರಮದಲ್ಲಿ ಮಾತನಾಡಿದ ಸಂಸ್ಥೆಯ ಸಂಸ್ಥಾಪಕ ಆರ್. ಶ್ರೀನಿವಾಸ್, 'ಆ್ಯಪ್ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಅಳವಡಿಸಿಕೊಳ್ಳಲಾಗಿದೆ. ಆಹಾರೋತ್ಪನ್ನಗಳ ವರದಿಯು 30 ಸೆಕೆಂಡ್‌ಗಳಲ್ಲಿ ಸಿದ್ಧಗೊಳ್ಳಲಿದೆ. ಸ್ಥಳಕ್ಕೆ ಭೇಟಿ ನೀಡಿ, ಆಹಾರೋತ್ಪನ್ನಗಳನ್ನು ಪರಿಶೀಲಿಸಬೇಕಾದ ಅಗತ್ಯತೆವಿಲ್ಲ. ರೈತರು ಮೊಬೈಲ್ ಫೋನ್‌ಗಳ ನೆರವಿನಿಂದ ಛಾಯಾಚಿತ್ರ ತೆಗೆದು, ಆಹಾರೋತ್ಪನ್ನದ ಗುಣಮಟ್ಟವನ್ನು ಅಳೆಯಬಹುದಾಗಿದೆ. ಈ ಆ್ಯಪ್‌ನಿಂದ ಮಧ್ಯವರ್ತಿಗಳ ಹಾವಳಿಯೂ ತಪ್ಪಲಿದ್ದು, ರೈತರಿಗೆ ಉತ್ತಮ ಬೆಲೆ ಸಿಗಲಿದೆ. ಗ್ರಾಹಕರೂ ಗುಣಮಟ್ಟದ ಉತ್ಪನ್ನಗಳನ್ನು ನೇರವಾಗಿ ರೈತರಿಂದ ಖರೀದಿಸಬಹುದು' ಎಂದು ಹೇಳಿದರು.



'ರೈತ ಸಹಾಯಕ' ಆ್ಯಪ್‌ನಲ್ಲಿ ಆಹಾರೋತ್ಪನ್ನದ ವರದಿ

ಸಂಸ್ಥೆಯ ಸಹ ಸಂಸ್ಥಾಪಕಿ ಲಕ್ಷ್ಮೀ ಪ್ರಿಯಾ, 'ಗುಣಮಟ್ಟದ ವರದಿಯ ಫಲಿತಾಂಶದ ಆಧಾರದ ಮೇಲೆ ಆಹಾರೋತ್ಪನ್ನಗಳನ್ನು ವಿಂಗಡಿಸಲಾಗುತ್ತದೆ. ಶೇ 85ಕ್ಕಿಂತ ಹೆಚ್ಚಿನ ಗುಣಮಟ್ಟ ಹೊಂದಿದ್ದಲ್ಲಿ ಉತ್ತಮ ಗುಣಮಟ್ಟದ ಆಹಾರೋತ್ಪನ್ನ ಎಂದು ನಿರ್ಧರಿಸಲಾಗುತ್ತದೆ. ಈ ಆ್ಯಪ್ ನೆರವಿನಿಂದ ಗ್ರಾಹಕರು ತಮ್ಮ ಬೇಡಿಕೆಯನ್ನು ಸಲ್ಲಿಸಬಹುದು. ಗುಣಮಟ್ಟದ ವರದಿಯು ಆಹಾರೋತ್ಪನ್ನ ಹಾಳಾಗಿರುವುದು, ಹುಳು ಬಿದ್ದಿರುವುದು, ಬೇಳೆ ಕಾಳುಗಳು ತುಂಡು ಬಿದ್ದಿರುವುದು, ತೇವಾಂಶ ಸೇರಿ ಎಲ್ಲ ಮಾಹಿತಿಯನ್ನು ಒಳಗೊಂಡಿರಲಿದೆ' ಎಂದು ತಿಳಿಸಿದರು.

ವಿಜಯಪುರದ ರೈತ ಶಿವಾನಂದ, 'ಈ ಮೊದಲು ಮೂರು ನಾಲ್ಕು ರೈತರು ಒಟ್ಟಾಗಿ ಬೇಳೆ ಕಾಳುಗಳನ್ನು ಮಾರುತ್ತಿದ್ದೆವು. ಗುಣಮಟ್ಟ ಕಾಯ್ದುಕೊಳ್ಳುವುದು ಕಷ್ಟವಾಗುತ್ತಿತ್ತು. ಈಗ ಆ್ಯಪ್‌ನಿಂದಾಗಿ ಸಮಸ್ಯೆ ದೂರವಾಗಿದೆ. ಮಧ್ಯವರ್ತಿಗಳ ಸಹಾಯವಿಲ್ಲದೆಯೇ ಮಾರಾಟ ಮಾಡುತ್ತಿದ್ದು, ಉತ್ತಮ ಬೆಲೆ ಸಿಗುತ್ತಿದೆ' ಎಂದು ಸಂತಸ ವ್ಯಕ್ತಪಡಿಸಿದರು.

ಯಾದಗಿರಿಯ ರೈತ ಮಹಿಳೆ ಮುಸ್ಕಾನ್, 'ಈ ಆ್ಯಪ್ ರೈತರಿಗೆ ಸಹಕಾರಿಯಾಗಿದ್ದು, ತೊಗರಿ, ಕಡಲೆ ಸೇರಿ ವಿವಿಧ ಬೇಳೆ ಕಾಳುಗಳ ಮಾರಾಟ ಸುಲಭವಾಗಿದೆ' ಎಂದು ಹೇಳಿದರು.

ಕರ್ನಾಟಕ ಸರಕಾರ

ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ

ಉರ್ವಾಸ್ಟೋರ್ಸ್, ಅಶೋಕನಗರ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ

ಸಂಖ್ಯೆ: ಮನಪ್ರಾ: ತಾಂತ್ರಿಕ:ಜೆಇ(204):2022–23 ದಿನಾಂಕ: 24–03–2023

ಟೆಂಡರು ಪ್ರಕಟಣೆ

ಈ ಕೆಳಗೆ ತಿಳಿಸಿದ ಕಾಮಗಾರಿಗೆ ಸಂಬಂಧಿಸಿದಂತೆ ಇ–ಟೆಂಡರನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಪೋರ್ಟಲ್ ಅಂತರ್‌ಜಾಲದ ವೆಬ್ ಸೈಟ್ **http://eproc.karnataka.gov.in** ನಲ್ಲಿ ಆಯುಕ್ತರು, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು ಇವರು ಅರ್ಹ ಗುತ್ತಿಗೆದಾರರಿಂದ **(INDENT NO. UDD/2022-23/OW/WORK_INDENT1967) Standard Tender Document KW-4** ರ ಪ್ರಕಾರ ಆಹ್ವಾನಿಸಿರುತ್ತಾರೆ. ಟೆಂಡರುದಾರರು ಟೆಂಡರ್ ನಿಯಮಾವಳಿಯ Clause 3 ರಂತೆ ಕನಿಷ್ಠ ಅರ್ಹತೆಯನ್ನು ಪಡೆದಿರಬೇಕು ಎಂಬುದನ್ನು ಗಮನಿಸಲು ಸೂಚಿಸಲಾಗಿದೆ. (2) ಟೆಂಡರುದಾರರು ಕರ್ನಾಟಕ ಸರಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್‌ಜಾಲದ ಮುಖಾಂತರ ಟೆಂಡರು ಡಾಕ್ಯುಮೆಂಟ್‌ಗಳನ್ನು ಪಡೆಯಬಹುದಾಗಿರುತ್ತದೆ. (Download). (3) ಟೆಂಡರುದಾರರು ಈ ಕೆಳಗೆ ನೀಡಲಾದ ವಿವರದಂತೆ ಕಾಮಗಾರಿಗೆ ನಿಗದಿಪಡಿಸಿದ ಇ.ಎಂ.ಡಿ. ಯನ್ನು ಸರಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಿರುವಂತೆ ಯಾವುದಾದರೂ ಒಂದು ರೀತಿಯಲ್ಲಿ ಸಲ್ಲಿಸಬೇಕಾಗಿರುತ್ತದೆ. (4) ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 26.04.2023 ಅಪರಾಹ್ನ 4.00 ಗಂಟೆ (16–00 ಗಂಟೆ)** ಒಳಗೆ ಸಲ್ಲಿಸತಕ್ಕದ್ದು, ಪೂರ್ವ ಬಿಡ್ ಸಭೆಯ **ದಿನಾಂಕ: 18.04.2023 @ 4.00PM** ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು. ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 28.04.2023** ಹೆಚ್ಚಿನ ವಿವರಗಳನ್ನು ಟೆಂಡರು ಡಾಕ್ಯುಮೆಂಟ್‌ನಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಕ್ಯಾಲೆಂಡರ್ ಅನ್ನು ಮುಂದೂಡುವುದು (ಯಾವುದಾದರೂ ಇದ್ದರೆ) ಇ ಪ್ರೋಕ್ಯೂರ್ ಮೆಂಟ್ ಪೋರ್ಟಲ್ ಮೂಲಕ ಮಾತ್ರ ಅಧಿಸೂಚಸಲಗುವುದು ಮತ್ತು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/– ಆಯುಕ್ತರು,
ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು

DIPR/MNG/KSMCA/1592/22-23 dt.24.03.2023

ಕರ್ನಾಟಕ ಸರ್ಕಾರ
(ಜಲ ಸಂಪನ್ಮೂಲ ಇಲಾಖೆ)

ಸಮಗ್ರ ಜಲಸಂಪನ್ಮೂಲ ನಿರ್ವಹಣಾ ಉನ್ನತ ಕೇಂದ್ರ

#1/1, 1ನೇ ಮಹಡಿ, ಕೆ.ಎಸ್.ಎಫ್.ಸಿ. ಭವನ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರ–560 052.
ದೂರವಾಣಿ ಸಂಖ್ಯೆ: 080–22262042/43/44, e-mail.registrar@aciwrm.org

No.ACIWRM/CE/MP/2022-23/1089 Date: 23-03-2023

ಅಲ್ಪಾವಧಿ ಇ–ಟೆಂಡರ್ ಆಹ್ವಾನ ಪತ್ರಿಕೆ–2ನೇ ಕರೆ

Tender No: ACIWRM/CE/MP/2022-23/01 Dt: 2/3/23/Call-2

(ಇ–ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸರ್ಕಾರ, ಜಲಸಂಪನ್ಮೂಲ ಇಲಾಖೆಯ ಸಮಗ್ರ ಜಲಸಂಪನ್ಮೂಲ ನಿರ್ವಹಣಾ ಉನ್ನತ ಕೇಂದ್ರ (ಎಸಿ.ಐ.ಡಬ್ಲ್ಯೂ.ಆರ್‌ಎಮ್) ಅರ್ಹ ಟೆಂಡರ್‌ದಾರರು / ಏಜೆನ್ಸಿಯಿಂದ ವಿವಿಧ ವರ್ಗಗಳ ಮಾನವ ಸಂಪನ್ಮೂಲ ಸಿಬ್ಬಂದಿಯನ್ನು ಹೊರಗುತ್ತಿಗೆ ಆಧಾರದ ಮೇಲೆ ಸೇವೆಗಳನ್ನು ಒದಗಿಸುವ ಕೆಲಸಕ್ಕೆ **"Supply of Manpower personnel of different category to ACIWRM, Bengluru"** ಶೇಕಡವಾರು ಟೆಂಡರ್‌ಗಳನ್ನು ದ್ವಿ–ಲಕೋಟೆಗಳಲ್ಲಿ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು **ದಿನಾಂಕ: 24–03–2023** ರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **http://eproc.karnataka.gov.in** ನಿಂದ ಪಡೆಯಬಹುದು.

ಆಸಕ್ತ ಗುತ್ತಿಗೆದಾರರು/ಏಜೆನ್ಸಿ/ಸಂಸ್ಥೆಯವರು ಭಾಗವಹಿಸಲು ವಿವರಗಳನ್ನು **http://www.waterresources.karnataka.gov.in** ಮತ್ತು **http://aciwrm.karnataka.gov.in** ರಲ್ಲಿಯೂ ಲಭ್ಯವಿರುತ್ತದೆ. ಯಾವುದೇ ಸ್ಪಷ್ಟೀಕರಣ/ಹೆಚ್ಚಿನ ಮಾಹಿತಿಯ ಅವಶ್ಯವಿದ್ದಲ್ಲಿ **registrar@aciwrm.org** ಗೆ ಇ–ಮೇಲ್ ಕಳುಹಿಸಿ ಪಡೆಯಬಹುದಾಗಿದೆ.

ಸಹಿ/– ನಿಬಂಧಕರು/ಮುಖ್ಯ ಇಂಜಿನಿಯರ್,
ಎಸಿ.ಐ.ಡಬ್ಲ್ಯೂ.ಆರ್‌ಎಮ್, ಬೆಂಗಳೂರು

DIPR/CP/AAPL/RO5453/22-23

INNOVATE KARNATAKA K-tech

ಪ್ರಸ್ತಾವನೆ ಮನವಿ ಆಹ್ವಾನ

Tender Notice No.KITS/ADMN/PUR/3/2022–AA-KITS

ಕಿಟ್ಸ್ 22 ಆಲ್–ಇನ್–ಒನ್ ಡೆಸ್ಕ್‌ಟಾಪ್‌ಗಳು, 15 ಲ್ಯಾಪ್‌ಟಾಪ್‌ಗಳು, 7 ಪ್ರಿಂಟರ್‌ಗಳು ಹಾಗೂ ಸಾಫ್ಟ್‌ವೇರ್‌ಗಳ ಸರಬರಾಜು ಮತ್ತು ಅಳವಡಿಕೆಗಾಗಿ ಸಂಸ್ಥೆಗಳಿಂದ ಪ್ರಸ್ತಾವನೆ ಮನವಿ (RFP) ಆಹ್ವಾನಿಸಿದೆ.

ಆಸಕ್ತಿವುಳ್ಳ ಕಂಪನಿಗಳು ತಮ್ಮ RFP ಯ ಎಲೆಕ್ಟ್ರಾನಿಕ್ ಪ್ರತಿಯನ್ನು ಇ–ಟೆಂಡರ್ ಪೋರ್ಟಲ್ https://eproc.karnataka.gov.in ನಲ್ಲಿ ಡೌನ್‌ಲೋಡ್ ಮಾಡಿಕೊಂಡು ಪ್ರಸ್ತಾವನೆ (RFP) ಯನ್ನು (PDF ನಮೂನೆಯಲ್ಲಿ) ಬಿಡ್‌ದಾರರ ಡಿಜಿಟಲ್ ಸಹಿ ಪ್ರಮಾಣ ಪತ್ರ ಆುರುಣಚಿಟ ಖುರಟಿಚಿಣಡಿಜ ಅಜಡಿಣುಜಿಭಿಚಿಣಜ (ಆಖಅ) ದೊಂದಿಗೆ ಅಪ್‌ಲೋಡ್ ಮಾಡಬಹುದು.

ಪ್ರಸ್ತಾವನೆ ಸಲ್ಲಿಸಲು ಅಗತ್ಯವಿರುವ ದಾಖಲೆಗಳು RFP ದಾಖಲೆಗಳಲ್ಲಿ ಲಭ್ಯವಿರುತ್ತವೆ. ಯಾವುದೇ ಸೂಚನೆ/ಮಾಹಿತಿಗಳನ್ನು https://eproc.karnataka.gov.in ನಲ್ಲಿ ಮಾತ್ರ ಅಪ್‌ಲೋಡ್ ಮಾಡಲಾಗುವುದು.

ಪ್ರಸ್ತಾವನೆ ಮನವಿಯನ್ನು ಸಲ್ಲಿಸಲು ಕಡೆಯ ದಿನಾಂಕ **08.05.2023 ರಂದು ಸಂಜೆ 5.30 ಗಂಟೆಗೆ** ಮುಂಚಿತವಾಗಿ ಸಲ್ಲಿಸತಕ್ಕದ್ದು. ಅರ್ಹತೆ ಅಗತ್ಯತೆಗಳಿಗೆ ಹಾಗೂ ಇತರೆ ನಿಬಂಧನೆಗಳಿಗೆ RFP ದಾಖಲೆಯನ್ನು ನೋಡಬಹುದು.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ಕಿಟ್ಸ್

ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿ (ಕಿಟ್ಸ್)
ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ
ಬಿಎಂಟಿಸಿ ಕೇಂದ್ರ ಕಛೇರಿಗಳ ಕಟ್ಟಡ, ಟಿಟಿಎಂಸಿ 'ಬಿ' ಬ್ಲಾಕ್, 4ನೇ ಮಹಡಿ, ಶಾಂತಿನಗರ, ಕೆ. ಹೆಚ್. ರಸ್ತೆ, ಬೆಂಗಳೂರು–560027.
ದೂರವಾಣಿ: 080–22231006/8. ಇ–ಮೇಲ್: kitsgok@karnataka.gov.in

ವಾ.ಸಾ.ಸಂ.ಇ/ವಾಪ್ರ/5446/ಆಕಾರ್/2022–23

ಲೋಕೋಪಯೋಗಿ ಇಲಾಖೆ. ತುಮಕೂರು

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ತುಮಕೂರು.

ಕ್ರ.ಸಂ:ಕಾಇಂ:ಲೋಇವಿ:ತುವಿ:ಕಿಇಂ–3:ಟೆಂಡರ್–94/2022–23
ದಿನಾಂಕ: 23.03.2022

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ.94/2022–23 ದಿನಾಂಕ: 23.03.2023

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 94/2022–23:ದಿನಾಂಕ 23–03–2023ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ 5054 ರಾಜ್ಯ ಹೆದ್ದಾರಿ ರಸ್ತೆ–ಸುಧಾರಣೆ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 01 ಕಾಮಗಾರಿಗೆ ಇ–ಪ್ರೂಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಮೊತ್ತ ರೂ: 826.60 ಲಕ್ಷಗಳು, ಇ.ಎಂ.ಡಿ ಮೊತ್ತ ರೂ.12,39,900/– ಅರ್ಹ ಗುತ್ತಿಗೆದಾರರು : 1 ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 11 ತಿಂಗಳು, ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: 29–03–2023 ರ 16–00 ಗಂಟೆಗೆ, ಇ–ಪ್ರೂಕ್ಯೂರ್‌ಮಂಟ್ ಮೂಲಕ ಟೆಂಡರ್‌ಗಳನ್ನು ದಿನಾಂಕ 23–03–2023 ರಿಂದ 30–03–2023 ರ 16–00 ಗಂಟೆಯವರೆಗೆ ಪಡೆಯಬಹುದಾಗಿದೆ. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: 30–03–2023 ರ ಸಂಜೆ 16–00 ಗಂಟೆವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: 31–03–2023 ರ ಸಂಜೆ 16–30 ಗಂಟೆಗೆ, ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: 01–04–2023 ರ ಬೆಳಿಗ್ಗೆ 11.00 ಗಂಟೆಗೆ,ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ: www.eproc.karnataka.gov.inರಲ್ಲಿ ಪಡೆಯಬಹುದಾಗಿದೆ.

ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.

DIPR/TUM/1174/KSMCA/2022-23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಯೋಜನೆ ದಕ್ಷಿಣ,
ದಕ್ಷಿಣ ವಲಯ ಕಛೇರಿ ಸಂಕೀರ್ಣ, 9ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ,
ಜಯನಗರ 2ನೇ ಬ್ಲಾಕ್, ಬೆಂಗಳೂರು – 560011.

ಸಂಖ್ಯೆ: ಕಾಅಯೋ(ದ)/ಇ–ಪ್ರೊಕ್/27/2022–23 ದಿನಾಂಕ: 24–03–2023

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ದ್ವಿ–ಲಕೋಟೆ ಪದ್ಧತಿ) (ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಯೋಜನೆ ದಕ್ಷಿಣ, ದಕ್ಷಿಣ ವಲಯ, ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ಸೇವೆಗಳಿಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)
1	ಎಡಿಇಓ ಬಿಬಿಎಂಪಿ (ದಕ್ಷಿಣ) ಇವರ ವ್ಯಾಪ್ತಿಯ ಅಡಿಯಲ್ಲಿ ಏಳು ವಿಧಾನಸಭಾ ಕ್ಷೇತ್ರದಲ್ಲಿ ಚುನಾವಣಾ ತರಬೇತಿ, ಆರ್‌ಓ ಕಛೇರಿಗಳು, ಮಸ್ಟರಿಂಗ್ ಮತ್ತು ಡಿ–ಮಸ್ಟರಿಂಗ್ ಸೆಂಟರ್, ಕೌಂಟಿಂಗ್ ಸೆಂಟರ್ ಮತ್ತಿತರ ಸ್ಥಳಗಳಿಗೆ ಅಪರ ಜಿಲ್ಲಾ ಚುನಾವಣಾಧಿಕಾರಿ ಇವರು ನಿರ್ದೇಶಿಸಿದಂತೆ ಕೇಟರಿಂಗ್ ಸೇವೆ ಒದಗಿಸುವುದು.	300.00	4,50,000.00
2	ಏಳು ವಿಧಾನಸಭಾ ಕ್ಷೇತ್ರಗಳಲ್ಲಿ ಎಡಿಇಓ ಬಿಬಿಎಂಪಿ (ದಕ್ಷಿಣ) ಇವರ ವ್ಯಾಪ್ತಿಯ ಅಡಿಯಲ್ಲಿ ಬಿಬಿಎಂಪಿ (ದಕ್ಷಿಣ) ಇಲ್ಲಿ ಚುನಾವಣಾ ಕರ್ತವ್ಯ ಉದ್ದೇಶಕ್ಕೆ ಮತ್ತು ಸ್ಕ್ವಾಡ್‌ಗಳಿಗೆ ವೀಡಿಯೊಗ್ರಾಫರ್ ಮತ್ತು ವೀಡಿಯೊ ಕ್ಯಾಮರಾ ಸೇವೆಗಳನ್ನು ಪೂರೈಸುವುದು.	100.00	2,00,000.00
3	ಏಳು ವಿಧಾನಸಭಾ ಕ್ಷೇತ್ರಗಳಲ್ಲಿ ಎಡಿಇಓ ಬಿಬಿಎಂಪಿ (ದಕ್ಷಿಣ) ಇವರ ವ್ಯಾಪ್ತಿಯ ಅಡಿಯಲ್ಲಿ ಬಿಬಿಎಂಪಿ (ದಕ್ಷಿಣ) ಇಲ್ಲಿಗೆ ಚುನಾವಣಾ ಮುದ್ರಣ ಸಾಮಗ್ರಿಗಳನ್ನು ಪೂರೈಸುವುದು.	100.00	2,00,000.00
4	ಏಳು ವಿಧಾನಸಭಾ ಕ್ಷೇತ್ರಗಳಲ್ಲಿ ಎಡಿಇಓ ಬಿಬಿಎಂಪಿ (ದಕ್ಷಿಣ) ಇವರ ವ್ಯಾಪ್ತಿಯ ಅಡಿಯಲ್ಲಿ ಮತಗಟ್ಟೆ ಸ್ಟೇಶನ್‌ಗಳು ಬಿಬಿಎಂಪಿ (ದಕ್ಷಿಣ) ಇಲ್ಲಿಗೆ ಮುದ್ರಣ ಐಟಂಗಳು ಮತ್ತು ಸಾಮಗ್ರಿಗಳನ್ನು ಪೂರೈಸುವುದು.	70.00	1,40,000.00

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **www.eproc.karnataka.gov.in** ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ಸ್ಪಷ್ಟೀಕರಣಗಳಿಗೆ ದಿನಾಂಕ: **25–03–2023 ರಂದು ಮಧ್ಯಾಹ್ನ 12.00 ಗಂಟೆಗೆ ಕಾರ್ಯಪಾಲಕ ಅಭಿಯಂತರ ಕಛೇರಿ, ಯೋಜನೆ ದಕ್ಷಿಣ ಇಲ್ಲಿ.** 3) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **02–04–2023 ರಂದು ಸಂಜೆ 4.00 ಗಂಟೆವರೆಗೆ.** 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **04–04–2023 ರಂದು ಬೆಳಿಗ್ಗೆ 11.30 ಗಂಟೆಗೆ.** 5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **05–04–2023 ರಂದು ಮಧ್ಯಾಹ್ನ 3.00 ಗಂಟೆಗೆ ಅಥವಾ ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಜನೆ ದಕ್ಷಿಣ, ಬಿಬಿಎಂಪಿ.

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋ.ಇ ಶಿವಮೊಗ್ಗ ವಿಭಾಗ, ಶಿವಮೊಗ್ಗ

ಟೆಂಡರ್ ಪ್ರಕಟಣೆ ಸಂಖ್ಯೆ ಕಾಪಾಅ/ಶಿವಿಶಿ/ಎಇ–3/ಐಎಫ್‌ಟಿ–82/2022–23
ದಿನಾಂಕ:24–03–2023

ಅಲ್ಪಾವಧಿ ಟೆಂಡರ್ ಪ್ರಕಟಣೆ (2ನೇ ಕರೆ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು. ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಅರ್ಹತೆ ಹೊಂದಿದ ಪ್ರತಿಷ್ಠಿತ ಏಜೆನ್ಸಿಯವರಿಂದ ಈ ಕೆಳಕಂಡ ಕಾಮಗಾರಿಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ ಅರ್ಹ ಏಜೆನ್ಸಿಯುವರು ವೆಬ್‌ಸೈಟ್ www.eproc.Karnataka.gov.in/eportal/index.seam ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.

ಇ–ಪ್ರೊಕ್ಯೂರ್ ಮೆಂಟ್ ಮೂಲಕ– ದ್ವಿ ಲಕೋಟೆ ಪದ್ಧತಿ

ಲೆಕ್ಕ ಶೀರ್ಷಿಕೆ: ಲೆಕ್ಕ ಶೀರ್ಷಿಕೆ 3054–03–337–0–05–200 ರಾಜ್ಯ ಹೆದ್ದಾರಿ ರಸ್ತೆ ನಿರ್ವಹಣೆ (2ನೇ ಕರೆ)

ಕ್ರ.ಸಂ. 1. ಕಾಮಗಾರಿಯ ವಿವರ: Conducting Land Plan survey for balance length of State Highways under PWD Divisions Shivamogga, Shimogga Special and Chikkamagalur Division (I.No:160599) ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 251.00

ಕಾಮಗಾರಿ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ

1. ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ: 30–03–2023 ಸಮಯ: 17–30 2. ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ: 01–04–2023 ಸಮಯ: 16–00 3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 03–04–2023 ಸಮಯ: 16–01 4. ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 05–04–2023 ಸಮಯ :11–00

ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ 08182–274942) ಹಾಗೂ ಸಹಾಯಕ ದೂರವಾಣಿ ಸಂಖ್ಯೆ: 080–23010900 / 080–23010901 ರಿಂದ ಮಾಹಿತಿ ಪಡೆಯಬಹುದು.

ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– (ಬಿ.ಎಸ್ ನಾಗೇಶ್) ಕಾರ್ಯಪಾಲಕ ಇಂಜಿನಿಯರ್,
ಲೋ.ಇ ಶಿವಮೊಗ್ಗ ವಿಭಾಗ, ಶಿವಮೊಗ್ಗ

ವಾ.ಸಾ.ಸಂ.ಇ/ಎಂಸಿಎ/ಶಿ/208/03/22–23/2243

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ,
ರಸ್ತೆ ಮೂಲ ಸೌಕರ್ಯ – ಬೊಮ್ಮನಹಳ್ಳಿ ವಿಭಾಗ, ನಂ.207, 2ನೇ ಮಹಡಿ,
ಅನೆಕ್ಸ್ ಕಟ್ಟಡ–3, ಎನ್.ಆರ್. ಚೌಕ, ಬೆಂಗಳೂರು – 560002.

ಸಂಖ್ಯೆ: ಕಾಅ/ರಮೂಸೌ–ಬೊಮ್ಮ/ಟೆಂಡರ್/06/2022–23 ದಿನಾಂಕ: 23–03–2023

ಟೆಂಡರ್‌ಗಳಿಗಾಗಿ ಆಹ್ವಾನ (ಐಎಫ್‌ಟಿ) – (ಅಲ್ಪಾವಧಿ)

(ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ರಸ್ತೆ ಮೂಲ ಸೌಕರ್ಯ – ಬೊಮ್ಮನಹಳ್ಳಿ ವಿಭಾಗ), ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ)
1	ಓಆರ್‌ಆರ್ ಸರ್ವೀಸ್ ರಸ್ತೆ ಮತ್ತು ಹೆಚ್‌ಎಸ್‌ಆರ್ ಲೇಔಟ್ 19ನೇ ಮುಖ್ಯರಸ್ತೆಯ ರಿಸರ್ಫೇಸಿಂಗ್.	157.43	2.36

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **http://eproc.karnataka.gov.in** ನಲ್ಲಿ ದಿನಾಂಕ: **24–03–2023 ರ ನಂತರ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆ ದಿನಾಂಕ: **29–03–2023ರಂದು 15.00 ಗಂಟೆಗೆ ಮುಖ್ಯ ಅಭಿಯಂತರರ ಕಛೇರಿ (ರಸ್ತೆ ಮೂಲ ಸೌಕರ್ಯ)** ಇಲ್ಲಿ ನಡೆಯುವುದು. 3) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್ ಮೂಲಕ ಸಲ್ಲಿಸುವ ಕೊನೆಯ ದಿನಾಂಕ: **01–04–2023 ರಂದು 16.00 ಗಂಟೆಗೆ ಅಥವಾ ಮುಂಚಿತವಾಗಿ.** 4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ: **03–04–2023 ರಂದು 16.00 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ರಸ್ತೆ ಮೂಲ ಸೌಕರ್ಯ – ಬೊಮ್ಮನಹಳ್ಳಿ ವಿಭಾಗ ಇಲ್ಲಿ ತೆರೆಯಲಾಗುವುದು.**
ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ರಸ್ತೆ ಮೂಲ ಸೌಕರ್ಯ – ಬೊಮ್ಮನಹಳ್ಳಿ ವಿಭಾಗ, ಬಿಬಿಎಂಪಿ.

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಡೆತನದ್ದು)
ಕಾರ್ಯಪಾಲಕ ಅಭಿಯಂತರರ ಕಛೇರಿ, ಕೃಭಾಜನಿನಿ
ಮುಏನೀ ವಿಭಾಗ ನಂ–4 ದೇವರಹಿಪ್ಪರಗಿ.
ತಾ॥ ದೇವರಹಿಪ್ಪರಗಿ ಜಿಲ್ಲೆ॥ ವಿಜಯಪುರ

ಸಂ:ಕೃಭಾಜನಿನಿ/ಮುಏನೀ/ವಿ–4/ಟೆಂಡರ್/ರಸ್ತೆಅಭಿವೃದ್ಧಿ/2022–23/1208
ದಿನಾಂಕ:24.03.2023

ಅಲ್ಪಾವಧಿ ಟೆಂಡರ್ ಪ್ರಕಟಣೆ–2 ನೇ ಕರೆ (ಇ–ಪ್ರೋಕ್ಯುರಮೆಂಟ್‌ನಲ್ಲಿ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಶೇಕಡಾವಾರು ಆಧಾರದ ಮೇಲೆ ನೋಂದಾಯಿತ KPWD Class-I ಗುತ್ತಿಗೆದಾರರಿಂದ ಕಾಮಗಾರಿ ಇಂಡೆಂಟ್ ಸಂಖ್ಯೆ "KBJNL/2022-23/CN/WORK_INDENT23604" ಕಾಮಗಾರಿಗಳಿಗೆ ಎರಡು ಕವರ್‌ಗಳಲ್ಲಿ (ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್) ಟೆಂಡರ್ ಕರೆಯಲಾಗಿರುತ್ತದೆ. ಟೆಂಡರ್‌ಗಿಟ್ಟ ಮೊತ್ತ ರೂ. **146.28** ಲಕ್ಷಗಳು. ಪೂರ್ಣಗೊಳಿಸಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ **ದಿನಾಂಕ:03.04.2023** ಸಾಯಂಕಾಲ 5.00 ಗಂಟೆಯಾಗಿರುತ್ತದೆ. ಸದರಿ ಕಾಮಗಾರಿಗಳ ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **29.03.2023 ರಂದು ಪೂರ್ವಾಹ್ನ 11.00 ಗಂಟೆಗೆ** ಅಧೀಕ್ಷಕ ಅಭಿಯಂತರರ ಕಚೇರಿ, ಕೃ.ಭಾ.ಜ.ನಿ.ನಿ. ಮು.ಏ.ಯೋ ವೃತ್ತ ಕಛೇರಿ ಬಸವನ ಬಾಗೇವಾಡಿ ಕ್ಯಾಂಪ್, ಆಲಮಟ್ಟಿಯಲ್ಲಿ ನಡೆಸಲಾಗುವುದು. ಕಾಮಗಾರಿ ಕುರಿತು ಪ್ರಶ್ನಾವಳಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ **29.03.2023** ಬೆಳಿಗ್ಗೆ 10.00 ಗಂಟೆಯಾಗಿರುತ್ತದೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 05.04.2023 ಬೆಳಿಗ್ಗೆ 10.00 ಗಂಟೆಯಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಜಾಲತಾಣ (ವೆಬ್ ಸೈಟ್) https://eproc.karnataka.gov.in/eportal/index.seam ದಲ್ಲಿ ಹಾಗೂ ಈ ಕೆಳಗೆ ಸಹಿ ಮಾಡಿದವರ ಕಛೇರಿಯ ಕೆಲಸದಅವಧಿಯಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ.

ಸಹಿ/–ಕಾರ್ಯಪಾಲಕ ಅಭಿಯಂತರರು,
ಕೃಭಾಜನಿನಿ, ಮುಏನೀ ವಿಭಾಗ–04, ದೇವರ ಹಿಪ್ಪರಗಿ

ವಾಸಾಸಂಇ/ವಿಜಯಪುರ/1118/ಕೆಎಸ್‌ಎಂಸಿಎ/2022–23

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ನಂ.ಲೋ.ಇ./ಚಿ.ವಿ./ಸ.ಇಂ.–3/ಟೆಂಡರ/2022–23/8662 ದಿನಾಂಕ: 18/03/2023

ಅಲ್ಪಾವಧಿ ಇ–ಟೆಂಡರ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ ಲೆಕ್ಕ ಶೀರ್ಷಿಕೆ 5054–ಜಿಮುರ ಸುಧಾರಣೆ ಅಡಿ 6 ಕಾಮಗಾರಿಗಳು, 5054–ಜಿಮುರ ಸೇತುವೆ ಸುಧಾರಣೆ ಅಡಿ 1 ಕಾಮಗಾರಿ & 3054–ಜಿಮುರ ನಿರ್ವಹಣೆ ಅಡಿ 1 ಕಾಮಗಾರಿ, ಹೀಗೆ ಒಟ್ಟು 8 ಕಾಮಗಾರಿಗಳು ಇದ್ದು, ಗುತ್ತಿಗೆ ಇಟ್ಟ ಕನಿಷ್ಠ ಮೊತ್ತ ರೂ. 77.93 ಲಕ್ಷ ಹಾಗೂ ರೂ. 240.00 ಲಕ್ಷ ಇರುವ ಕಾಮಗಾರಿಗಳಿಗೆ ಗುತ್ತಿಗೆ ಆಹ್ವಾನಿಸಲಾಗಿದೆ.

ಕ್ರ.ಸಂ. 1, 4, 7 & 8 ರಲ್ಲಿನ ಕಾಮಗಾರಿಗಳಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು.

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:27–03–2023 ರಂದು (11.00 ಗಂಟೆಗೆ), 2)ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:28–03–2023 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:30–03–2023 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):01–04–2023 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"

ಕ್ರ.ಸಂ. 2, 3, 5 & 6 ರಲ್ಲಿನ ಕಾಮಗಾರಿಗಳಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು.

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:28–03–2023 ರಂದು (11.00 ಗಂಟೆಗೆ), 2)ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:29–03–2023 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:31–03–2023 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):03–04–2023 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"

ಕಾಮಗಾರಿಯ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ www.eproc.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ.

DIPR/BGM/RO-NO-2148/KSMCA/2022-23

ನಗರಸಭಾ ಕಾರ್ಯಾಲಯ, ತಿಪಟೂರು

ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ, ದೂ: 08134–250785, E-mail:itstaff_ulb_tiptur@yahoo.co.in, www.tipturcity.mrc.gov.in

ನಂ.ನ.ಸ.ತಿ/ತಾಂಶಾ/ಸಿ.ಆರ್/ /2022–23 ದಿನಾಂಕ:

ಟೆಂಡರ್/ಕೊಟೇಷನ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಯಲ್ಲಿ ಆದ್ಯಾದೇಶ 1999 – 2000ರ ನಿಯಮದಂತೆ ನಗರಸಭೆಯ ವಿವಿದ ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ/ ವಿದ್ಯುತ್ ಪರಿವೀಕ್ಷಕರ ಇಲಾಖೆಯಲ್ಲಿ ನೊಂದಾಯಿಸಿರುವ ಅರ್ಹ ದರ್ಜೆಯ ಸಿವಿಲ್ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಈ ಕೆಳಕಂಡ ಕಾಮಗಾರಿಗಳಿಗೆ ಇ–ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ (https://eproc.karnataka.gov.in) ಟೆಂಡರ್‌ಗಳನ್ನು ಆಹ್ವಾನಿಸಿದೆ. (ಹೆಚ್ಚಿನ ಮಾಹಿತಿಗಳ ಅಗತ್ಯವಿದ್ದಲ್ಲಿ ಕಛೇರಿಯಿಂದ ಪಡೆಯಬಹುದು)

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್

ಕ್ರ ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ ರೂ.ಲಕ್ಷ	ಇ.ಎಂ.ಡಿ ರೂಗಳಲ್ಲಿ	ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ	ಟೆಂಡರ್ ತೆರೆಯುವ ಕಡೆಯ ದಿನಾಂಕ
1	DMA/2022-23/OW/WORK_INDENT 131848/CALL-3	57.80	1,16,000/-	10.04.2023	12.04.2023
2	DMA/2022-23/OW/WORK_INDENT 140305/CALL-7	2.50	6,250/-	10.04.2023	12.04.2023
3	DMA/2022-23/OW/WORK_INDENT 144172/CALL-4	5.00	12,500/-	10.04.2023	12.04.2023
4	DMA/2022-23/OW/WORK_INDENT 144171/CALL-4	5.00	12,500/-	10.04.2023	12.04.2023
5	DMA/2022-23/OW/WORK_INDENT 145945/CALL-3	20.00	50,000/-	10.04.2023	12.04.2023
6	DMA/2022-23/OW/WORK_INDENT 145959/CALL-3	8.00	20,000/-	10.04.2023	12.04.2023
7	DMA/2022-23/OW/WORK_INDENT 146720/CALL-2	4.00	10,000/-	10.04.2023	12.04.2023
8	DMA/2022-23/OW/WORK_INDENT 149214	5.50	13,750/-	10.04.2023	12.04.2023
9	DMA/2022-23/OW/WORK_INDENT 149217	3.12	7,800/-	10.04.2023	12.04.2023
10	DMA/2022-23/OW/WORK_INDENT 149222	8.10	20,250/-	10.04.2023	12.04.2023

ಕರ್ನಾಟಕ ಪುರಸಭಾ ಕಾಯ್ದೆ 1964 ನಿಯಮ 347ರಂತೆ ಕೆಲಸ ನಿರ್ವಹಿಸಲು ಅರ್ಹ ಗುತ್ತಿಗೆದಾರರು ಕೊಟೇಷನ್ ಆಹ್ವಾನಿಸಲಾಗಿದೆ.

1	ಗೊರಗೊಂಡನಹಳ್ಳಿ ವೆಟ್‌ವೆಲ್‌ನ 2ನೇ ಮೋಟಾರ್ ಪಂಪ್‌ನ 40 ಹೆಚ್.ಪಿ Soft Starter ನ್ನು ಬದಲಿಸಿ Star Delta Starter ನ್ನು ಅಳವಡಿಸಲು ಕೊಟೇಷನ್ ಸಲ್ಲಿಸುವುದು.
2	ಗೊರಗೊಂಡನಹಳ್ಳಿ ವೆಟ್‌ವೆಲ್‌ನ 40 ಹೆಚ್.ಪಿ ಸಾಮರ್ಥ್ಯದ 2,&3ನೇ ಮೋಟಾರ್ ಪಂಪ್‌ಗಳನ್ನು ಎತ್ತಿ ದುರಸ್ತಿ ಪಡಿಸಲು ಕೋಟೇಷನ್ ಸಲ್ಲಿಸುವುದು.
3	ಈಡೇನಹಳ್ಳಿ ವೆಟ್‌ವೆಲ್‌ನ ಮೋಟಾರ್ ಸಂಖ್ಯೆ 1 ರ ಮೋಟಾರ್ ಪಂಪ್‌ನ್ನು ದುರಸ್ತಿಗೊಳಿಸಲು ಕೊಟೇಷನ್ ಸಲ್ಲಿಸುವುದು.
4	ಈಡೇನಹಳ್ಳಿ ವೆಟ್‌ವೆಲ್‌ನ ಮೋಟಾರ್ ಸಂಖ್ಯೆ 4 ರ ಮೋಟಾರ್ ಪಂಪ್‌ನ್ನು ದುರಸ್ತಿಗೊಳಿಸಲು ಕೊಟೇಷನ್ ಸಲ್ಲಿಸುವುದು.
5	2023 ರ ವಿಧಾನಸಭಾ ಚುನಾವಣೆ ಪ್ರಯುಕ್ತ ಮತಗಟ್ಟೆಗಳನ್ನು ದುರಸ್ಥಿ ಮಾಡಲು ಮತಗಟ್ಟೆಗಳನ್ನು ಪರಿಶೀಲಿಸಿ ಅವಶ್ಯವಿರುವ ದುರಸ್ಥಿ ಕಾಮಗಾರಿಗಳಿಗೆ ಕೋಟೇಷನ್ ಸಲ್ಲಿಸುವುದು.

ಸೂಚನೆ: ಕೊಟೇಷನ್ ಪ್ರಕಟಣೆಯು ದಿನಪತ್ರಿಕೆಯಲ್ಲಿ ಪ್ರಕಟಣೆ ಆದ 7 ದಿನಗಳ ಒಳಗೆ ಹಾಗೂ ಕೊನೆಯ ದಿನ ಸರ್ಕಾರಿ ರಜೆ ಬಂದಲ್ಲಿ ಮುಂದಿನ ದಿನ ಕಚೇರಿಗೆ ಕೊಟೇಷನ್ ಸಲ್ಲಿಸುವುದು.

DIPR/TUM/1166/MCA/2022-23

ಸಹಿ/–ರಾಮಮೋಹನ್.ಪಿ.ಜೆ, (ರಾಮಿ) ಅಧ್ಯಕ್ಷರು ನಗರಸಭೆ, ತಿಪಟೂರು.
ಸಹಿ/–ಗಣೇಶ್(ಸೊಪ್ಪು), ಉಪಾಧ್ಯಕ್ಷರು ನಗರಸಭೆ, ತಿಪಟೂರು.
ಸಹಿ/–ಪೌರಾಯುಕ್ತರು, ನಗರಸಭೆ, ತಿಪಟೂರು.

ಕರ್ನಾಟಕ ಸರ್ಕಾರ

ಹಿರಿಯ ಭೂವಿಜ್ಞಾನಿಯವರ ಕಛೇರಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, 'ಖನಿಜ ಭವನ' 2ನೇ ಗೇಟ್, ಕಂಟೋನ್ಮೆಂಟ್, ಬಳ್ಳಾರಿ–583 104. E mail: sgbel-dmg-ka@nic.in, ದೂರವಾಣಿ ಸಂಖ್ಯೆ: 08392–242941.

ಸಂಖ್ಯೆ: ಗಭೂಇ/ಹಿಭೂವಿ/ಕ & ಮ್ಯಾ/ಅದಿರು/ಇ–ಹರಾಜು/2022–23
ದಿನಾಂಕ:21–03–2023

ಇ–ಹರಾಜು ಪ್ರಕಟಣೆ

ಬಳ್ಳಾರಿ ಜಿಲ್ಲೆಯ, ಬಳ್ಳಾರಿ ಮತ್ತು ಸಂಡೂರು ತಾಲ್ಲೂಕುಗಳ ವ್ಯಾಪ್ತಿಯಲ್ಲಿ ರದ್ದುಗೊಳಿಸಿದ/ಅವಧಿ ಮುಗಿದ ಗಣಿ ಗುತ್ತಿಗೆ ಪ್ರದೇಶಗಲ್ಲಿ ಹಾಗೂ ಇನ್ನಿತರೆ ಪ್ರದೇಶಗಳಲ್ಲಿ ವಶಪಡಿಸಿಕೊಳ್ಳಲಾಗಿದ್ದ ಕಬ್ಬಿಣ ಮತ್ತು ಮ್ಯಾಂಗನೀಸ್ ಅದಿರನ್ನು "ಎಲ್ಲಿದೆಯೋ ಹೇಗಿದೆಯೋ ಹಾಗೇ" ಎನ್ನುವ ಷರತ್ತಿಗೊಳಪಟ್ಟು ಇ–ಹರಾಜು ಮಾಡಲು ಅರ್ಹ ವ್ಯಕ್ತಿ/ಕಂಪನಿ/ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಸಲಾಗಿರುತ್ತದೆ. ಇ–ಹರಾಜು ಸಂಖ್ಯೆ ಈ ಕೆಳಕಂಡಂತ್ತಿದೆ. 1.MSTC/BLR/The Senior Geologist Mineral Department Of Mines And Geology/1/Khanija Bhavana Near II Railway Gate Cantonment/22-23/44911[371587] 2. MSTC/BLR/The Senior Geologist Mineral Department Of Mines And Geology/2/Khanija Bhavana Near II Railway Gate Cantonment/22-23/44912[371588] 3.MSTC/BLR/The Senior Geologist Mineral Department Of Mines And Geology/3/Khanija Bhavana Near II Railway Gate Cantonment/22-23/44913[371589]

ಇ–ಹರಾಜು ದಸ್ತಾವೇಜುಗಳನ್ನು ಮತ್ತು ಅನುಬಂಧಗಳನ್ನು MSTC Website **https://www.mstcecommerce.com** ಮೂಲಕ ಡೌನಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಇ–ಹರಾಜಿನಲ್ಲಿ ಭಾಗವಹಿಸಲು ಇಚ್ಚಿಸುವವರು ಹರಾಜಿನ ಷರತ್ತು ಮತ್ತು ನಿಬಂಧನೆಗಳನ್ನು, ಕಬ್ಬಿಣ ಮತ್ತು ಮ್ಯಾಂಗನೀಸ್ ಅದಿರಿನ ಗುಣಮಟ್ಟ ಮತ್ತು ಇನ್ನಿತರೆ ಅಂಶಗಳ ಬಗ್ಗೆ ಮುಂಚಿತವಾಗಿ ಪರಿಶೀಲಿಸಿಕೊಂಡು, ಮೇಲ್ಕಂಡಂತೆ ತಿಳಿಸಿರುವ MSTC Website ನಿಂದ ಅನುಬಂಧಗಳನ್ನು ಡೌನ್‌ಲೋಡ್ ಮಾಡಿಕೊಂಡು ನಿಗಧಿತ ದಿನಾಂಕದೊಳಗಾಗಿ ಸಂಬಂಧಿಸಿದ Pre bid EMD ಶುಲ್ಕವನ್ನು ಪಾವತಿಸಿ ಅರ್ಜಿ ಸಲ್ಲಿಸುವುದು. ಇ–ಹರಾಜು ಬಿಡ್ಡಿಂಗ್‌ನ್ನು ದಿನಾಂಕ:04–04–2023 ರಂದು ನಿಗಧಿಪಡಿಸಲಾಗಿರುತ್ತದೆ. ಇ–ಹರಾಜು ಅರ್ಜಿಗಳನ್ನು MSTC ಪ್ಲಾಟ್ ಫಾರಂ ಮೂಲಕವೇ ಸಲ್ಲಿಸುವುದು.

ಸದರಿ ಇ–ಹರಾಜು ಕುರಿತು ಹೆಚ್ಚಿನ ಮಾಹಿತಿಗೆ **MSTC** ಕಛೇರಿಯ ದೂರವಾಣಿ ಸಂಖ್ಯೆ:080–22260054/22266417/22379145 ಮೂಲಕ ಹಾಗೂ ಇ–ಮೇಲ್ tejasv@mstcindia.co.inಸಂಪರ್ಕಿಸಬಹುದಾಗಿರುತ್ತದೆ.

ಸಹಿ/–ಹಿರಿಯ ಭೂವಿಜ್ಞಾನ ಹಾಗೂ
ಸದಸ್ಯ ಕಾರ್ಯದರ್ಶಿ ಜಿಲ್ಲಾ ಟಾಸ್ಕ್ ಫೋರ್ಸ್(ಗಣಿ) ಬಳ್ಳಾರಿ

ಡಿಐಪಿಆರ್/ಬಳ್ಳಾರಿ/1071/ಕೆಎಸ್‌ಎಂಸಿಎ/2022–23

ದಕ್ಷಿಣ ರಾಜ್ಯಗಳ ಪ್ರಾದೇಶಿಕ ಸಮ್ಮೇಳನದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆ

‘ಮಾದಕ ದ್ರವ್ಯ ಮುಕ್ತ ಭಾರತಕ್ಕೆ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾದಕ ದ್ರವ್ಯ ಮುಕ್ತ ಭಾರತ ನಿರ್ಮಾಣದ ಸವಾಲುಗಳನ್ನು ಸಾಮಾಜಿಕ, ಸಾರ್ವಜನಿಕ ಜವಾಬ್ದಾರಿಯಾಗಿ ಪರಿವರ್ತಿಸಿದಾಗ ಮಾತ್ರ ಗುರಿ ತಲುಪಲು ಸಾಧ್ಯ’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.

ಮಾದಕ ದ್ರವ್ಯ ಕಳ್ಳ ಸಾಗಣೆ ಹಾಗೂ ರಾಷ್ಟ್ರೀಯ ಭದ್ರತೆ ಕುರಿತ ದಕ್ಷಿಣ ರಾಜ್ಯಗಳ ಪ್ರಾದೇಶಿಕ ಸಮ್ಮೇಳನದಲ್ಲಿ ಅವರು ಮಾತನಾಡಿದರು.

‘ದೇಶದಲ್ಲಿ ಮಾದಕ ದ್ರವ್ಯದ ಮಾರಾಟ, ಸೇವನೆಯನ್ನು ಸಂಪೂರ್ಣ ನಿರ್ಮೂಲನೆ ಮಾಡುವುದು ದೊಡ್ಡ ಸವಾಲು. ಇಂತಹ ಹೋರಾಟ ಸರ್ಕಾರದ ಪ್ರಯತ್ನಗಳಿಂದ ಸಾಧ್ಯವಿಲ್ಲ. ಸರ್ಕಾರದ ಜತೆಗೆ, ಸಮುದಾಯದ ಪ್ರತಿಯೊಬ್ಬ ನಾಗರಿಕರ ಸಹಕಾರವೂ ಮುಖ್ಯ. ದೇಶದ ಭದ್ರತೆಗೆ ಮಾರಕವಾದ ಈ ವ್ಯಸನವನ್ನು ದೇಶದಿಂದ ಬುಡಸಮೇತ ಕಿತ್ತೆಸೆಯಲು ಎಲ್ಲರೂ ಒಗ್ಗೂಡಬೇಕಿದೆ’ ಎಂದರು.

ಮಾದಕವಸ್ತುಗಳ ಪತ್ತೆ, ಜಾಲದ ನಾಶ, ಅಪರಾಧಿಗಳ ಬಂಧನ ಹಾಗೂ ಮಾದಕ ದ್ರವ್ಯ ವ್ಯಸನಿಗಳಿಗೆ ಪುನರ್ವಸತಿ ಕಲ್ಪಿಸುವ ನಾಲ್ಕು ಹಂತದ ಕಾರ್ಯಾಚರಣೆ ಕೈಗೊಳ್ಳಲಾಗಿದೆ ಎಂದು ವಿವರ ನೀಡಿದರು.

ನಿಯಂತ್ರಣಕ್ಕೆ ಕಠಿಣ ಕ್ರಮ: ‘ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, ರಾಜ್ಯದಲ್ಲಿ ಮಾದಕವಸ್ತು ನಿಯಂತ್ರಣಕ್ಕೆ ಕಠಿಣ ಕ್ರಮ ಕೈಗೊಳ್ಳಲಾಗಿದೆ. ಶೂನ್ಯ ಸಹಿಷ್ಣುತೆ ನಿಯಮ ಅನುಸರಿಸಲಾಗುತ್ತಿದೆ. ಪ್ರತಿವರ್ಷ ಐದು ಸಾವಿರ ಪ್ರಕರಣಗಳು ದಾಖಲಾಗುತ್ತಿವೆ. ಶಿಕ್ಷೆಯ ಪ್ರಮಾಣವೂ ಅಧಿಕವಾಗಿದೆ’ ಎಂದರು.

ಶಿವಮೊಗ್ಗದಲ್ಲಿ ರಾಷ್ಟ್ರೀಯ ರಕ್ಷಾ ವಿವಿ

ಶಿವಮೊಗ್ಗದಲ್ಲಿ ರಾಷ್ಟ್ರೀಯ ರಕ್ಷಾ ವಿಶ್ವವಿದ್ಯಾಲಯದ ಹೊಸ ಕ್ಯಾಂಪಸ್ ಆರಂಭಕ್ಕೆ ವಿಶ್ವವಿದ್ಯಾಲಯ ಆಡಳಿತ ಮಂಡಳಿ ಹಾಗೂ ಕರ್ನಾಟಕ ಸರ್ಕಾರದ ಮಧ್ಯೆ ಒಡಂಬಡಿಕೆ ಪತ್ರಕ್ಕೆ ಶುಕ್ರವಾರ ಸಹಿ ಹಾಕಲಾಯಿತು.

ಪ್ರಾದೇಶಿಕ ಸಮ್ಮೇಳನದಲ್ಲಿ ದಕ್ಷಿಣದ ಐದು ರಾಜ್ಯಗಳು, ಮೂರು ಕೇಂದ್ರಾಡಳಿತ ಪ್ರದೇಶಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

₹ 90.80 ಕೋಟಿ ಮೌಲ್ಯದ ಡ್ರಗ್ಸ್ ನಾಶ

ಬೆಂಗಳೂರು: ನಗರದ ಪೊಲೀಸರು ಜಪ್ತಿ ಮಾಡಿದ್ದ ₹ 90.80 ಕೋಟಿ ಮೌಲ್ಯದ ಮಾದಕ ವಸ್ತುವನ್ನು (ಡ್ರಗ್ಸ್) ದಾಬಸ್‌ಪೇಟೆಯ ತ್ಯಾಜ್ಯ ವಿಲೇವಾರಿ ಘಟಕದಲ್ಲಿ ಶುಕ್ರವಾರ ನಾಶಪಡಿಸಲಾಯಿತು.

ದಕ್ಷಿಣ ಭಾರತದ ರಾಜ್ಯಗಳಲ್ಲಿ ಕೇಂದ್ರ ತನಿಖಾ ಸಂಸ್ಥೆಗಳು ಹಾಗೂ ಪೊಲೀಸರು, ₹ 1,235 ಕೋಟಿ ಮೌಲ್ಯದ 9,300 ಕೆ.ಜಿ ಮಾದಕ ವಸ್ತುವನ್ನು ಜಪ್ತಿ ಮಾಡಿದ್ದಾರೆ.

‘ಡ್ರಗ್ಸ್ ಸಾಗಣೆ ಹಾಗೂ ರಾಷ್ಟ್ರೀಯ ಭದ್ರತೆ’ ವಿಷಯದಡಿ ನಗರದಲ್ಲಿ ಶುಕ್ರವಾರ ಜರುಗಿದ ಪ್ರಾದೇಶಿಕ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ, ಡ್ರಗ್ಸ್ ನಾಶಪಡಿಸುವ ಪ್ರಕ್ರಿಯೆಗೆ ಚಾಲನೆ ನೀಡಿದರು. ಬಳಿಕ, ಆಯಾ ರಾಜ್ಯಗಳಲ್ಲಿ ಡ್ರಗ್ಸ್ ಸುಟ್ಟು ಹಾಕಲಾಯಿತು.

ಬೆಂಗಳೂರು ಪೊಲೀಸರು 2022ರ ಅಕ್ಟೋಬರ್‌ನಿಂದ 2023ರ ಮಾರ್ಚ್‌ವರೆಗೆ 4,297 ಕೆ.ಜಿ ತೂಕದ ₹ 90.08 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದರು. ಡ್ರಗ್ಸ್ ವಿಲೇವಾರಿ ಸಮಿತಿ ಸದಸ್ಯರ ಹಾಗೂ ವಾಯು ಮಾಲಿನ್ಯ ನಿಯಂತ್ರಣ ಅಧಿಕಾರಿಗಳ ಸಮ್ಮುಖದಲ್ಲಿ ಶುಕ್ರವಾರ ಎಲ್ಲ ಡ್ರಗ್ಸ್ ನಾಶಪಡಿಸಲಾಯಿತು.

ದಾಬಸ್‌ಪೇಟೆ ಕೈಗಾರಿಕಾ ಪ್ರದೇಶದಲ್ಲಿರುವ ತ್ಯಾಜ್ಯ ವಿಲೇವಾರಿ ಘಟಕದಲ್ಲಿ ಶುಕ್ರವಾರ ಡ್ರಗ್ಸ್ ನಾಶಪಡಿಸಲಾಯಿತು

‘ಡ್ರಗ್ಸ್ ನಾಶಪಡಿಸುವುದು ಸಮಾವೇಶದ ಭಾಗವಾಗಿತ್ತು. ದಾಬಸ್‌ಪೇಟೆ ಕೈಗಾರಿಕೆ ಪ್ರದೇಶದಲ್ಲಿರುವ ನಿಗದಿತ ತ್ಯಾಜ್ಯ ವಿಲೇವಾರಿ ಘಟಕದಲ್ಲಿ ಅಧಿಕಾರಿಗಳ ಸಮ್ಮುಖದಲ್ಲಿ ಡ್ರಗ್ಸ್ ನಾಶಪಡಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಬೆಂಗಳೂರಿನಿಂದ 60 ಕಿ.ಮೀ ದೂರದಲ್ಲಿ ತಮಿಳುನಾಡು ಗಡಿ ಇದೆ. ಹಾಗಾಗಿ, ಮಾದಕ ವಸ್ತು ವಿಚಾರದಲ್ಲಿ ಎರಡೂ ರಾಜ್ಯಗಳ ನಡುವೆ ಸಹಕಾರ ಅಗತ್ಯ. ವಿದೇಶದ ಪ್ರಜೆಗಳ ವಿಚಾರದಲ್ಲಿ ಕೇಂದ್ರ ಸರ್ಕಾರ ನೆರವು ಪಡೆಯಲಾಗುತ್ತಿದೆ’ ಎಂದರು.

ಗೃಹ ಸಚಿವ ಆರಗ ಜ್ಞಾನೇಂದ್ರ, ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ಪೊಲೀಸ್ ಮಹಾ ನಿರ್ದೇಶಕ ಪ್ರವೀಣ್ ಸೂದ್ ಇದ್ದರು.

₹ 4.51 ಕೋಟಿ ವಂಚನೆ: ಕಂಪನಿ ಮಾಲೀಕ ಬಂಧನ

ಪ್ರಜಾವಾಣಿ ವಾರ್ತೆ

ಪ್ರಮೋದ್ ಪ್ರಕಾಶ್ ರಾವ್

ಬೆಂಗಳೂರು: ಸೋಲಾರ್ ಘಟಕ ಅಳವಡಿಸುವ ನೆಪದಲ್ಲಿ ಉದ್ಯಮಿಯೊಬ್ಬರಿಂದ ₹ 4.51 ಕೋಟಿ ಪಡೆದು ವಂಚಿಸಿದ್ದ ಆರೋಪದಡಿ ಪ್ರಮೋದ್ ಪ್ರಕಾಶ್ ರಾವ್ ಎಂಬುವವರನ್ನು ಸಂಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಸಮೃದ್ಧಿ ರಿನಿವೆಬಲ್ ಸೆಲ್ಯೂಷನ್ ಕಂಪನಿ ಮಾಲೀಕ ಪ್ರಮೋದ್ ಪ್ರಕಾಶ್ ರಾವ್, ಎಂಜಿನಿಯರಿಂಗ್ ಪದವೀಧರ. ಗೊರಗುಂಟೆಪಾಳ್ಯದಲ್ಲಿರುವ ಜೆಮಿನಿ ಡೈಯಿಂಗ್ ಆ್ಯಂಡ್ ಪ್ರಿಂಟಿಂಗ್ ಮಿಲ್ಸ್ ಕಂಪನಿ ಮಾಲೀಕ ಗುಲ್ಲು ಜಿ. ತಲರೇಜ್ ನೀಡಿದ್ದ ದೂರಿನಡಿ ಆರೋಪಿಯನ್ನು ಬಂಧಿಸಲಾಗಿದೆ’ ಎಂದು ಸಂಜಯನಗರ ಪೊಲೀಸರು ಹೇಳಿದರು.

‘ಬನಶಂಕರಿ ಠಾಣೆಯಲ್ಲೂ ಆರೋಪಿ ವಿರುದ್ಧ ಪ್ರತ್ಯೇಕ ಪ್ರಕರಣ ದಾಖಲಾಗಿದೆ. ಅಲ್ಲಿಯ ಪೊಲೀಸರು ಬಾಡಿ ವಾರೆಂಟ್ ಮೇಲೆ ಆರೋಪಿಯನ್ನು ಕಸ್ಟಡಿಗೆ ಪಡೆದು ವಿಚಾರಣೆ ಮುಂದುವರಿಸಿದ್ದಾರೆ’ ಎಂದು ತಿಳಿಸಿದರು.

ದಂಪತಿಯೇ ನಿರ್ದೇಶಕರು: ‘ಆರೋಪಿ ಪ್ರಮೋದ್ ಪ್ರಕಾಶ್ ಹಾಗೂ ಈತನ ಪತ್ನಿಯೇ ಕಂಪನಿ ನಿರ್ದೇಶಕರಾಗಿದ್ದರು. ಕಂಪನಿ ಮಾಲೀಕನೆಂದು ಹೇಳಿಕೊಂಡು ಹಲವರನ್ನು ಸಂಪರ್ಕಿಸುತ್ತಿದ್ದ ಆರೋಪಿ, ಸೋಲಾರ್ ವಿದ್ಯುತ್ ಉತ್ಪಾದನಾ ಘಟಕ ಸ್ಥಾಪನೆ ಮಾಡುವುದಾಗಿ ಹೇಳಿ ಹಣ ಪಡೆದು ವಂಚಿಸುತ್ತಿದ್ದ’ ಎಂದು ಪೊಲೀಸರು ಹೇಳಿದರು.

‘ಕಂಪನಿ ಅಸಲಿಯೋ ಅಥವಾ ನಕಲಿಯೋ ಎಂಬುದು ಗೊತ್ತಾಗಿಲ್ಲ. ಈ ಬಗ್ಗೆ ದಾಖಲೆಗಳ ಪರಿಶೀಲನೆ ನಡೆಸಲಾಗುತ್ತಿದೆ’ ಎಂದರು.

ನಕಲಿ ದಾಖಲೆ ತೋರಿಸಿ ವಂಚನೆ: ‘ದೂರುದಾರ ತಲರೇಜ್, ತಮ್ಮ ಕಂಪನಿ ಕಟ್ಟಡದಲ್ಲಿ ಸೋಲಾರ್ ಘಟಕ ಅಳವಡಿಸಲು ಯೋಚಿಸಿದ್ದರು. ಘಟಕ ಅಳವಡಿಕೆ ಹಾಗೂ ನಿರ್ವಹಣೆ ಮಾಡುವವರಿಗಾಗಿ ಹುಡುಕಾಟ ಆರಂಭಿಸಿದ್ದರು. ಅವರನ್ನು ಸಂಪರ್ಕಿಸಿದ್ದ ಆರೋಪಿ ಪ್ರಮೋದ್ ಪ್ರಕಾಶ್, ಸೋಲಾರ್ ಘಟಕ ಅಳವಡಿಸಿಕೊಡುವುದಾಗಿ ಹೇಳಿದ್ದ’ ಎಂದು ಪೊಲೀಸರು ತಿಳಿಸಿದರು.

‘ಹಲವು ಕಂಪನಿಗಳಲ್ಲಿ ಘಟಕ ಅಳವಡಿಸಿರುವ ಬಗ್ಗೆ ನಕಲಿ ದಾಖಲೆ ಹಾಗೂ ಫೋಟೊಗಳನ್ನು ದೂರುದಾರರಿಗೆ ತೋರಿಸಿದ್ದ. ಅದನ್ನು ನಂಬಿದ್ದ ದೂರುದಾರ, ಹಂತ ಹಂತವಾಗಿ ₹ 4.11 ಕೋಟಿ ಪಾವತಿಸಿದ್ದರು. ಹಣ ಪಡೆದು ಹಲವು ತಿಂಗಳಾದರೂ ಆರೋಪಿ ಘಟಕ ಅಳವಡಿಸಿರಲಿಲ್ಲ. ಅದನ್ನು ಪ್ರಶ್ನಿಸಿದ್ದಕ್ಕೆ ದೂರುದಾರರಿಗೆ ಜೀವ ಬೆದರಿಕೆಯೊಡ್ಡಿದ್ದ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಸಿನಿಮಾ ನಿರ್ದೇಶಕನಿಗೆ ಹಣ’

‘ಆರೋಪಿ ಪ್ರಮೋದ್ ಪ್ರಕಾಶ್ ವಂಚನೆಯನ್ನೇ ವೃತ್ತಿ ಮಾಡಿಕೊಂಡಿದ್ದ. ಗಳಿಸಿದ್ದ ಹಣದಲ್ಲಿ ಕೆಲಭಾಗವನ್ನು ನಿರ್ದೇಶಕನಿಗೆ ನೀಡಿ, ಸಿನಿಮಾ ನಿರ್ಮಾಣ ಮಾಡಿಸಲು ಮುಂದಾಗಿದ್ದ. ಈ ಬಗ್ಗೆ ಹೆಚ್ಚಿನ ಮಾಹಿತಿ ಕಲೆಹಾಕಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಅಪರಾಧ ಸುದ್ದಿ

ಬಸವನಗುಡಿಯ ಕತ್ರಿಗುಪ್ಪೆ ವಾರ್ಡ್‌ನಲ್ಲಿ ಆಸ್ಪತ್ರೆ ಕಟ್ಟಡವನ್ನು ಶಾಸಕ ರವಿಸುಬ್ರಮಣ್ಯ ಉದ್ಘಾಟಿಸಿದರು. ವಲಯ ಆಯುಕ್ತ ಜಯರಾಮ್ ರಾಯಪುರ, ಸಂಸದ ತೇಜಸ್ವಿ ಸೂರ್ಯ ಇದ್ದರು

ಬಿಬಿಎಂಪಿ ಆಸ್ಪತ್ರೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವನಗುಡಿ ಹಾಗೂ ಚಿಕ್ಕಪೇಟೆ ವಿಧಾನಸಭೆ ಕ್ಷೇತ್ರಗಳಲ್ಲಿ ಬಿಬಿಎಂಪಿಯ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶುಕ್ರವಾರ ಚಾಲನೆ ನೀಡಲಾಯಿತು.

ಬಸವನಗುಡಿಯ ಕತ್ರಿಗುಪ್ಪೆ ವಾರ್ಡ್‌ನಲ್ಲಿ ಆಸ್ಪತ್ರೆ ಕಟ್ಟಡ, ಬಸವನಗುಡಿ ವಾರ್ಡ್‌ನ ಅಶೋಕ ನಗರದಲ್ಲಿ ಪ್ರೌಢಶಾಲೆ, ಸರ್ಕಾರಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆ, ಹನುಮಂತನಗರ ವಾರ್ಡ್‌ನಲ್ಲಿ ಸಮುದಾಯ ಭವನ ಹಾಗೂ ದೋಬಿಘಾಟ್ ಒಳಗಿನ ಚಾವಣಿಯನ್ನು ಶಾಸಕ ರವಿಸುಬ್ರಮಣ್ಯ ಉದ್ಘಾಟಿಸಿದರು.

ಕತ್ರಿಗುಪ್ಪೆಯಲ್ಲಿ 30 ಹಾಸಿಗೆಯ ಆಸ್ಪತ್ರೆ ಕಟ್ಟಡವನ್ನು ನವ ನಗರೋತ್ಥಾನ ಅನುದಾನದಲ್ಲಿ ₹3 ಕೋಟಿ ಹಾಗೂ ಬಿಬಿಎಂಪಿಯ ₹5.5 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಸಂಸದ ತೇಜಸ್ವಿ ಸೂರ್ಯ, ವಲಯ ಆಯುಕ್ತ ಜಯರಾಮ್ ರಾಯಪುರ ಇದ್ದರು.

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸಿದ್ದಯ್ಯ ರಸ್ತೆಯಲ್ಲಿ ರೆಫೆರಲ್ ಆಸ್ಪತ್ರೆಯನ್ನು ಶಾಸಕ ಉದಯ್ ಬಿ. ಗರುಡಾಚಾರ್ ಉದ್ಘಾಟಿಸಿದರು.

ನಿಗಮದ ಬದಲು ಉದ್ಯೋಗ ಮೀಸಲಾತಿ ನೀಡಿ: ಸೀತಾರಾಂ

ಪ್ರಜಾವಾಣಿ ವಾರ್ತೆ

ಎಂ.ಆರ್. ಸೀತಾರಾಂ

ಬೆಂಗಳೂರು: ‘ಬಲಿಜ ಸಮುದಾಯಕ್ಕೆ ಸರ್ಕಾರ ಘೋಷಿಸಿರುವ ಪ್ರತ್ಯೇಕ ಅಭಿವೃದ್ಧಿ ನಿಗಮದಿಂದ ಯಾವುದೇ ಪ್ರಯೋಜನವಾಗುವುದಿಲ್ಲ. ಆದ್ದರಿಂದ, ನಿಗಮದ ಬದಲು ಈ ಹಿಂದೆ ಇದ್ದಂತೆ ‘ಪ್ರವರ್ಗ–2ಎ’ ಅಡಿ ಉದ್ಯೋಗ ಮತ್ತು ರಾಜಕೀಯ ಕ್ಷೇತ್ರದಲ್ಲಿ ಮೀಸಲಾತಿ ನೀಡಬೇಕು’ ಎಂದು ಕೆಪಿಸಿಸಿ ಉಪಾಧ್ಯಕ್ಷ ಎಂ.ಆರ್. ಸೀತಾರಾಂ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ‘ಉದ್ಯೋಗ ಕ್ಷೇತ್ರದಲ್ಲಿ ಮೀಸಲಾತಿಗಾಗಿ ಬಲಿಜ ಸಮುದಾಯವು ಬಹಳ ವರ್ಷಗಳಿಂದ ಹೋರಾಟ ನಡೆಸುತ್ತಾ ಬಂದಿದೆ. ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರವು ಚುನಾವಣೆ ಸಂದರ್ಭದಲ್ಲಿ ಬಲಿಜ ಸಮುದಾಯಕ್ಕೆ ನಿಗಮ ಘೋಷಿಸಿರುವುದು ಚುನಾವಣೆಯ ಗಿಮಿಕ್ ಹೊರತು, ಸಮುದಾಯದ ಕಾಳಜಿಯಿಂದಲ್ಲ’ ಎಂದರು.

‘ಹಾವನೂರು ಆಯೋಗವು ಬಲಿಜ ಜನಾಂಗವನ್ನು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಪರಿಗಣಿಸಿದೆ. ಸಂವಿಧಾನದ ಕಲಂ 154 ಮತ್ತು 16 (4) ರಂತೆ ಮೀಸಲಾತಿ ನೀಡಿ, ಈ ಜನಾಂಗವು ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿದೆಯೆಂದು ಪರಿಗಣಿಸಿ ಸೌಲಭ್ಯವನ್ನು ನೀಡಲಾಗಿತ್ತು. ಚಿನ್ನಪ್ಪರೆಡ್ಡಿ ಆಯೋಗವೂ ಬಲಿಜ ಜನಾಂಗವನ್ನು ಹಿಂದುಳಿದ ವರ್ಗಗಳ ಸಾಲಿನಲ್ಲಿ ಮುಂದುವರಿಸಿ, ‘ಪ್ರವರ್ಗ–2ಎ’ ಗುಂಪಿನಡಿ ಶಿಕ್ಷಣ, ಉದ್ಯೋಗ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಮೀಸಲಾತಿ ಸೌಲಭ್ಯವನ್ನು ನೀಡಿತ್ತು’ ಎಂದು ಹೇಳಿದರು.

ಕರ್ನಾಟಕ ಪ್ರದೇಶ ಬಲಿಜ ಸಂಘದ ಅಧ್ಯಕ್ಷ ಪೆರಿಕಲ್ ಎಂ. ಸುಂದರ್ ಹಾಗೂ ಸಮುದಾಯದ ಮುಖಂಡರು ಇದ್ದರು.

ಅಸಮಾಧಾನ ವ್ಯಕ್ತಪಡಿಸಿದ ಪರಿಶಿಷ್ಟ ಜಾತಿಯಲ್ಲಿನ ಎಲ್ಲ ಸಮುದಾಯಗಳು

ಒಳ ಮೀಸಲಾತಿ ವರ್ಗೀಕರಣ: ಚುನಾವಣಾ ತಂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪರಿಶಿಷ್ಟ ಜಾತಿಯ ಒಳ ಮೀಸಲಾತಿಯ ವರ್ಗೀಕರಣಕ್ಕೆ ಶಿಫಾರಸು ಮಾಡುವ ರಾಜ್ಯ ಸರ್ಕಾರದ ಪ್ರಯತ್ನ ನ್ಯಾಯ ಸಮ್ಮತವಲ್ಲ. ಕೇವಲ ಚುನಾವಣಾ ತಂತ್ರ’ ಎಂದು ಪರಿಶಿಷ್ಟ ಜಾತಿಯಲ್ಲಿನ ಎಡಗೈ, ಬಲಗೈ ಸೇರಿ ಎಲ್ಲಾ ಸಮುದಾಯಗಳು ಅಸಮಾಧಾನ ವ್ಯಕ್ತಪಡಿಸಿವೆ.

ಒಳಮೀಸಲಾತಿಗಾಗಿ ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಧರಣಿ ನಡೆಸುತ್ತಿರುವ ಮುಖಂಡರಾದ ಎಸ್.ಮಾರಪ್ಪ, ಅಂಬಣ್ಣ ಅರೋಲಿಕರ್, ಶಿವರಾಯ ಅಕ್ಕರಕಿ, ಕೇಶವಮೂರ್ತಿ, ಬಸವರಾಜ ಕೌತಾಳ, ಹೆಣ್ಣೂರು ಶ್ರೀನಿವಾಸ್, ಜೇಬಿರಾಜು, ಕರಿಯಪ್ಪ ಗುಡಿಮನಿ ಅವರು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

‘ನಮ್ಮ ಹಕ್ಕೊತ್ತಾಯಕ್ಕೆ ಸಕಾಲದಲ್ಲಿ ಪರಿಗಣಿಸದೆ, ಚುನಾವಣೆ ಸಮಯದಲ್ಲಿ ಕೇಂದ್ರಕ್ಕೆ ಶಿಫಾರಸು ಮಾಡುವ ನೆಪದಲ್ಲಿ ಕಾಟಾಚಾರಕ್ಕೆ ಕೇಂದ್ರಕ್ಕೆ ತಳ್ಳಿಹಾಕಿ ವರದಿಯು ಅಲ್ಲಿ ಕೊಳೆಯುವಂತೆ ಮಾಡಿ ಸಮುದಾಯಗಳನ್ನು ಇನ್ನಷ್ಟು ಸಂಕಷ್ಟಕ್ಕೆ ದೂಡುವ ಬಿಜೆಪಿಯ ಹುನ್ನಾರ ಈ ಮೂಲಕ ಬಯಲಾಗಿದೆ’ ಎಂದು ಪ್ರತಿಕ್ರಿಯಿಸಿದ್ದಾರೆ.

‘ಈಗ ಮೀಸಲಾತಿ ಹೆಚ್ಚಳ ಮಾಡಿರುವುದು ಕಾನೂನುಬದ್ಧವಲ್ಲದ ಕಾರಣದಿಂದ ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿಯನ್ನು ಯಥಾವತ್ತಾಗಿ ಕೇಂದ್ರಕ್ಕೆ ಕಳಿಸಿಕೊಡಬೇಕು ಎಂಬುದು ನಮ್ಮ ಒತ್ತಾಯವಾಗಿತ್ತು. ಆದರೆ, ಈಗಿನ ಶಿಫಾರಸು ಅವೈಜ್ಞಾನಿಕವಾಗಿದ್ದು, ನ್ಯಾಯಸಮ್ಮತವಾಗಿಲ್ಲ. ನಿಜವಾಗಿಯೂ ಸರ್ಕಾರಕ್ಕೆ ಸಮುದಾಯಗಳ ಬಗ್ಗೆ ಕಾಳಜಿ ಇದ್ದರೆ ಇಡಬ್ಲ್ಯೂಎಸ್ ಮಾದರಿಯಲ್ಲಿ ಒಂಬತ್ತನೇ ಷೆಡ್ಯೂಲ್‌ಗೆ ಸೇರಿಸಿ ಸಂವಿಧಾನಕ್ಕೆ ತಿದ್ದುಪಡಿ ತರಬೇಕಿತ್ತು. ಅದನ್ನು ಮಾಡದೆ ಚುನಾವಣಾ ಸಮಯದಲ್ಲಿ ಆಸೆ ತೋರಿಸುವ ಬಿಜೆಪಿಯ ತಂತ್ರವನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ’ ಎಂದು ತಿಳಿಸಿದ್ದಾರೆ.

‘ಸಂವಿಧಾನ ತಿದ್ದುಪಡಿ ಮಾಡದೆ ಮೀಸಲಾತಿ ವರ್ಗೀಕರಣ ಆಗುವುದಿಲ್ಲ. ಇದನ್ನು ಡಬಲ್ ಎಂಜಿನ್ ಸರ್ಕಾರ ಹೇಗೆ ನಿರ್ವಹಿಸುತ್ತದೆ ನೋಡಬೇಕು. ಕೇವಲ ಚುನಾವಣಾ ತಂತ್ರವಾದರೆ ಈ ಸಮುದಾಯಗಳಿಗೆ ದೊಡ್ಡ ಮೋಸ ಆಗಲಿದೆ’ ಎಂದು ದಲಿತ ಸಂಘರ್ಷ ಸಮಿತಿ(ಅಂಬೇಡ್ಕರ್ ವಾದ) ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ಹೇಳಿದರು.

ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟ ಮತ್ತು ಕುಳುವ ಮಹಾಸಭಾ ಪ್ರತ್ಯೇಕವಾಗಿ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ್ದು, ‘ಕೇವಲ ಜನಸಂಖ್ಯೆ ಆಧರಿಸಿ ಪರಿಶಿಷ್ಟ ಜಾತಿಯನ್ನು 5 ಪಂಗಡಗಳಾಗಿ ವಿಂಗಡಿಸಿರುವುದು ಅವೈಜ್ಞಾನಿಕ. ಸುಪ್ರೀಂ ಕೋರ್ಟ್ ತೀರ್ಪಿಗೆ ವಿರುದ್ಧವಾದ ನಡೆ. ಅಸಂವಿಧಾನಿಕ ಶಿಫಾರಸಿನ ವಿರುದ್ಧ ನ್ಯಾಯಾಂಗ ಹೋರಾಟಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ’ ಎಂದು ತಿಳಿಸಿವೆ.

ಮೀಸಲಾತಿ ನೀತಿ ‘ಕನ್ನಡಿಯೊಳಗಿನ ಗಂಟು’- ಸಿದ್ದರಾಮಯ್ಯ

ಬೆಂಗಳೂರು: ‘ರಾಜ್ಯ ಸರ್ಕಾರ ಘೋಷಿಸಿರುವ ಪರಿಷ್ಕೃತ ಮೀಸಲಾತಿ ನೀತಿ ‘ಕನ್ನಡಿಯೊಳಗಿನ ಗಂಟು’ ಅಷ್ಟೆ. ಚುನಾವಣೆಯಲ್ಲಿ ರಾಜಕೀಯ ಲಾಭದ ದುರುದ್ದೇಶದ ಈ ಮೀಸಲಾತಿ ನೀತಿಯಿಂದ ಯಾವ ಸಮುದಾಯಕ್ಕೂ ಲಾಭ ಇಲ್ಲ. ಇಂತಹ ಗಿಮಿಕ್‌ಗಳಿಗೆ ಜನ ಬಲಿಯಾಗಬಾರದು’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರತಿಕ್ರಿಯಿಸಿದ್ದಾರೆ.

‘ಹಿಂದುಳಿದ ಜಾತಿ ಗುಂಪಿನಲ್ಲಿದ್ದ ಮುಸ್ಲಿಂ ಸಮುದಾಯಕ್ಕೆ ನೀಡಲಾಗುತ್ತಿದ್ದ ಶೇ 4ರಷ್ಟು ಮೀಸಲಾತಿಯನ್ನು ರದ್ದುಗೊಳಿಸಿ, ಒಕ್ಕಲಿಗ ಮತ್ತು ಲಿಂಗಾಯತರಿಗೆ ಹಂಚಲಾಗಿದೆ. ಒಬ್ಬರಿಂದ ಕಿತ್ತು ಇನ್ನೊಬ್ಬರಿಗೆ ನೀಡುವ ಮೂಲಕ ಸಮುದಾಯಗಳ ನಡುವೆ ವೈಮನಸ್ಸು ಬೆಳೆಯುವಂತೆ ಮಾಡುವುದು ಬಿಜೆಪಿಯ ದುರುದ್ದೇಶ’ ಎಂದೂ ಅವರು ಹೇಳಿದ್ದಾರೆ.

‘ಪರಿಶಿಷ್ಟ ಜಾತಿಗಳಿಗೆ ಒಳಮೀಸಲಾತಿಯ ಅನುಷ್ಠಾನ ಒಂದು ದೀರ್ಘ ಪ್ರಕ್ರಿಯೆ. ಇದಕ್ಕಾಗಿ ಸಂವಿಧಾನದ ಪರಿಚ್ಛೇದ 341ಕ್ಕೆ ತಿದ್ದುಪಡಿ ಮಾಡಬೇಕಾಗುತ್ತದೆ. ಈ ಬಗ್ಗೆ ಸಂಪುಟ ಕೈಗೊಂಡಿದ್ದ ತೀರ್ಮಾನವನ್ನು ಇಲ್ಲಿಯವರೆಗೆ ಕೇಂದ್ರ ಸರ್ಕಾರಕ್ಕೆ ಕಳುಹಿಸದೆ ಇರುವುದು ರಾಜ್ಯ ಸರ್ಕಾರದ ಅಪ್ರಮಾಣಿಕತೆಗೆ ಸಾಕ್ಷಿ. ಮುಸ್ಲಿಮರಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ನೀಡಲಾಗಿರುವ ಮೀಸಲಾತಿಯನ್ನು ವಿಸ್ತರಿಸಲಾಗುವುದು ಎಂದು ಮುಖ್ಯಮಂತ್ರಿ ಹೇಳಿದ್ದರೂ ಇದು ಸುಲಭಸಾಧ್ಯ ಅಲ್ಲ. ಬೇರೆ ರಾಜ್ಯಗಳಲ್ಲಿಯೂ ಮುಸ್ಲಿಂಮರು ಇರುವ ಕಾರಣ ಒಂದು ರಾಜ್ಯದ ವ್ಯಾಪ್ತಿಯಲ್ಲಿ ಮೀಸಲಾತಿ ಮರುಹಂಚಿಕೆ ಮಾಡಲು ಸಾಧ್ಯ ಇಲ್ಲ’ ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.

ಬೆನ್ನಿಗೆ ಚೂರಿ ಹಾಕಿ ಒಡಕು ತರುವಂಥ ಕೆಲಸ: ಪ್ರಕಾಶ ರಾಠೋಡ್ ಕಿಡಿ

ಬೆಂಗಳೂರು: ‘ಪರಿಶಿಷ್ಟ ಜಾತಿಯ ಒಳ ಮೀಸಲಾತಿಯ ವರ್ಗೀಕರಣಕ್ಕೆ ಕೇಂದ್ರಕ್ಕೆ ಶಿಫಾರಸು ಮಾಡಲು ನಿರ್ಧರಿಸಿರುವ ಬೊಮ್ಮಾಯಿ ನೇತೃತ್ವದ ರಾಜ್ಯ ಬಿಜೆಪಿ ಸರ್ಕಾರದ ನಡೆ ಸಂವಿಧಾನ ವಿರೋಧಿಯಾಗಿದೆ. ಇದು ಪರಿಶಿಷ್ಟ ಜಾತಿಯಲ್ಲಿರುವ 99 ಸಮುದಾಯಗಳ ಬೆನ್ನಿಗೆ ಚೂರಿ ಹಾಕಿ ನಮ್ಮಲ್ಲಿಯೇ ಒಡಕು ತರುವಂಥ ಕೆಲಸ’ ಎಂದು ಕೆಪಿಸಿಸಿ ವಕ್ತಾರ, ವಿಧಾನ ಪರಿಷತ್ ಕಾಂಗ್ರೆಸ್ ಮುಖ್ಯ ಸಚೇತಕ ಪ್ರಕಾಶ ರಾಠೋಡ್ ಕಿಡಿಕಾರಿದ್ದಾರೆ.

‘ಪರಿಶಿಷ್ಟ ಜಾತಿಯಲ್ಲಿರುವ ಸಮಾನ ಅವಕಾಶ ವಂಚಿತ ಶೋಷಿತ ಸಮುದಾಯಗಳನ್ನು ಮರು ವರ್ಗೀಕರಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ಇಲ್ಲ. ಆದರೂ ರಾಜ್ಯ ಸರ್ಕಾರ ಕೇವಲ ಜನಸಂಖ್ಯೆಯ ಆಧಾರದ ಮೇಲೆ ಪರಿಶಿಷ್ಟ ಜಾತಿಯ ಪಟ್ಟಿಯನ್ನು ತಿದ್ದಿ, ತೇಪೆ ಹಚ್ಚಿ, ಮರು ವರ್ಗೀಕರಿಸುತ್ತಿರುವುದು ಕಾರ್ಯಸಾಧುವಲ್ಲ’ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಮೀಸಲಾತಿ ಕುರಿತು ಶನಿವಾರ ಬೆಳಿಗ್ಗೆ ಕಾರ್ಯಕಾರಿಣಿ ನಡೆಸಲಾಗುವುದು. ಈ ಸಭೆಯಲ್ಲಿ ಎಲ್ಲ ವಿಷಯಗಳನ್ನು ಸಮಗ್ರವಾಗಿ ಪರಿಶೀಲಿಸಿ ಮುಂದಿನ ನಿರ್ಧಾರ ಪ್ರಕಟಿಸಲಾಗುವುದು

ಬಸವಜಯ ಮೃತ್ಯುಂಜಯ ಸ್ವಾಮೀಜಿ
ಕೂಡಲಸಂಗಮ ಪಂಚಮಸಾಲಿ ಪೀಠ

ಪಿಎಸ್‌ಐ, ಕಾನ್‌ಸ್ಟೆಬಲ್ ಬಂಧನಕ್ಕೆ ಎರಡು ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ₹ 40 ಲಕ್ಷಕ್ಕೆ ಬೇಡಿಕೆ ಇರಿಸಿದ್ದ ಪ್ರಕರಣದಲ್ಲಿ ತಲೆಮರೆಸಿಕೊಂಡಿರುವ ಮಾರತ್ತಹಳ್ಳಿ ಠಾಣೆಯ ಪಿಎಸ್‌ಐ ರಂಗೇಶ್ ಹಾಗೂ ಕಾನ್‌ಸ್ಟೆಬಲ್‌ಗಳಾದ ಮಹದೇವಸ್ವಾಮಿ, ಮಹೇಶ್ ಬಂಧನಕ್ಕೆ ಎರಡು ಪ್ರತ್ಯೇಕ ತಂಡ ರಚಿಸಲಾಗಿದೆ.

ಬಾಗಲೂರು ಠಾಣೆಯಲ್ಲಿ ದಾಖಲಾಗಿದ್ದ ರಾಮಾಂಜನಿ ಎಂಬುವವರ ಅಪಹರಣ ಪ್ರಕರಣದ ಬೆನ್ನು ಬಿದ್ದಿರುವ ಪೊಲೀಸರು, ಮಾರತ್ತಹಳ್ಳಿ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಹರೀಶ್ ಸೇರಿ ಮೂವರನ್ನು ಈಗಾಗಲೇ ಬಂಧಿಸಿದ್ದಾರೆ.

‘ಹುಲಿ ಚರ್ಮ, ಉಗುರು ಮಾರಾಟ ನೆಪದಲ್ಲಿ ರಾಮಾಂಜನಿ ಅವರನ್ನು ವಶಕ್ಕೆ ಪಡೆದಿದ್ದ ಪಿಎಸ್‌ಐ ಹಾಗೂ ಇತರರು, ಅಕ್ರಮ ಬಂಧನದಲ್ಲಿಟ್ಟು ₹ 40 ಲಕ್ಷಕ್ಕೆ ಬೇಡಿಕೆ ಇರಿಸಿದ್ದರು. ಪ್ರಮುಖ ಆರೋಪಿ ರಂಗೇಶ್ ಹಾಗೂ ಕಾನ್‌ಸ್ಟೆಬಲ್‌ಗಳು ತಲೆಮರೆಸಿಕೊಂಡಿದ್ದು, ಅವರಿಗಾಗಿ ಹುಡುಕಾಟ ಮುಂದುವರಿದಿದೆ’ ಎಂದು ಬಾಗಲೂರು ಪೊಲೀಸರು ಹೇಳಿದರು.

‘ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿರುವ ರಂಗೇಶ್ ಹುಟ್ಟೂರಿಗೂ ವಿಶೇಷ ತಂಡ ಹೋಗಿದೆ. ಆದರೆ, ಪಿಎಸ್‌ಐ ಅಲ್ಲಿಲ್ಲ. ಬಂಧನ ಭೀತಿಯಿಂದ ನಗರದಿಂದ ನಗರಕ್ಕೆ ಸ್ಥಳ ಬದಲಾವಣೆ ಮಾಡುತ್ತಿರುವ ಬಗ್ಗೆ ಮಾಹಿತಿ ಇದೆ’ ಎಂದರು.

ವಂಚನೆ ಪ್ರಕರಣ ದಾಖಲು: ‘ನಕಲಿ ಚರ್ಮ, ಉಗುರುಗಳನ್ನು ಅಸಲಿ ಎಂಬುದಾಗಿ ಬಿಂಬಿಸಿ ಸಾರ್ವಜನಿಕರಿಗೆ ಮಾರಲು ಯತ್ನಿಸುತ್ತಿದ್ದ ಆರೋಪದಡಿ ಸಿದ್ದಮಲ್ಲಪ್ಪ ಹಾಗೂ ರಾಮಾಂಜನಿ ವಿರುದ್ಧ ಮಾರತ್ತಹಳ್ಳಿ ಠಾಣೆಯಲ್ಲಿ ವಂಚನೆ ಪ್ರಕರಣ ದಾಖಲಾಗಿದೆ. ಅದರ ವಿಚಾರಣೆ ಮುಂದುವರಿದಿದೆ’ ಎಂದು ಪೊಲೀಸರು ಹೇಳಿದರು.

ತಲೆ ಮೇಲೆ ಕಲ್ಲು ಎತ್ತಿ ಹಾಕಿ ಕೊಲೆ

ಬೆಂಗಳೂರು: ಗೋವಿಂದರಾಜನಗರ ಠಾಣೆ ವ್ಯಾಪ್ತಿಯಲ್ಲಿ ನರೇಶ್ (25) ಎಂಬುವವರನ್ನು ತಲೆ ಮೇಲೆ ಕಲ್ಲು ಎತ್ತಿ ಹಾಕಿ ಶುಕ್ರವಾರ ಕೊಲೆ ಮಾಡಲಾಗಿದೆ.

‘ಗೋವಿಂದರಾಜನಗರ ಎರಡನೇ ಮುಖ್ಯರಸ್ತೆಯ ನಿವಾಸಿ ನರೇಶ್, ಕಟ್ಟಡ ನಿರ್ಮಾಣದ ಕಾರ್ಮಿಕರಾಗಿದ್ದರು. ಪತ್ನಿ ಮಹಾದೇವಿ ಹಾಗೂ ಇಬ್ಬರು ಮಕ್ಕಳ ಜೊತೆ ವಾಸವಿದ್ದರು. ಕೊಲೆ ಸಂಬಂಧ ಪತ್ನಿ ದೂರು ನೀಡಿದ್ದು, ಆರೋಪಿ ಮಾರಿಮುತ್ತು ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

ಜಾತಿ ಬಣ್ಣ ಹಚ್ಚಿ ಚುನಾವಣೆ ಗೆಲ್ಲುವ ಬೊಮ್ಮಾಯಿ: ಅಬ್ದುಲ್ ಕರೀಂ ಆರೋಪ

ಹಾವೇರಿ: ‘ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಚುನಾವಣೆಯಲ್ಲಿ ಜಾತಿ ಬಣ್ಣ ಹಚ್ಚಿ ಗೆಲ್ಲುತ್ತಾ ಬಂದಿದ್ದಾರೆ. ಮುಸ್ಲಿಂ ಸಮುದಾಯಕ್ಕೆ ಒಂದು ಪೈಸೆ ಸಹಾಯ ಮಾಡಿಲ್ಲ. ಮಸೀದಿಗಳಿಗೆ ಯಾವುದೇ ಅನುದಾನ ನೀಡಿಲ್ಲ. ಹೀಗಾಗಿ ಶಿಗ್ಗಾವಿ ಕ್ಷೇತ್ರದಲ್ಲಿ ಬೊಮ್ಮಾಯಿ ಎದುರು ಕಾಂಗ್ರೆಸ್‌ನಿಂದ ಯಾರೇ ಸ್ಪರ್ಧಿಸಿದರೂ ಗೆಲ್ಲುವುದು ನಿಶ್ಚಿತ’ ಎಂದು ಶಿಗ್ಗಾವಿ ಅಂಜುಮನ್ ಇಸ್ಲಾಂ ಕಮಿಟಿ ಸದಸ್ಯ ಅಬ್ದುಲ್ ಕರೀಂ ಮೊಗಲಲ್ಲಿ ಹೇಳಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ‘ಮುಸ್ಲಿಮರಿಗೆ ಭಯೋತ್ಪಾದಕರ ಜತೆ ನಂಟಿದೆ. ಹೀಗಾಗಿ ಮುಸ್ಲಿಂ ಅಭ್ಯರ್ಥಿಗೆ ಮತ ಹಾಕಬೇಡಿ. ಹಿಂದೂಗಳು ನಾವೆಲ್ಲರೂ ಒಗ್ಗೂಡೋಣ’ ಎಂದು ಬೊಮ್ಮಾಯಿ ಅವರು ಜಾತಿ ಬಣ್ಣ ಹಚ್ಚಿ ಗೆಲುವು ಸಾಧಿಸುತ್ತಾ ಬಂದಿದ್ದಾರೆ ಎಂದು ಆರೋಪಿಸಿದರು.

ಸಮಾಜವಾದಿ ಹಿನ್ನೆಲೆಯಿಂದ ಬಂದ ಬಸವರಾಜ ಬೊಮ್ಮಾಯಿ ಅವರ ಮೇಲೆ ಬಹಳ ನಿರೀಕ್ಷೆಗಳಿದ್ದವು. ಎಲ್ಲ ಸಮುದಾಯಗಳನ್ನು ಒಗ್ಗೂಡಿಸಿ ಕೆಲಸ ಮಾಡುತ್ತಾರೆ ಎಂಬ ನಿರೀಕ್ಷೆ ಹುಸಿಯಾಗಿದೆ. ಬಿಜೆಪಿ ಐಡಿಯಾಲಜಿ ಪ್ರಕಾರ ಕೆಲಸ ಮಾಡುತ್ತಿದ್ದಾರೆ. ಸಿಎಂ ಬಳಿ ಮುಸ್ಲಿಂ ಮುಖಂಡರು ಮನವಿ ಪತ್ರ ತೆಗೆದುಕೊಂಡು ಹೋದರೆ, ‘ನೀವು ನನಗೆ ಓಟು ಹಾಕಲ್ಲ, ನಿಮ್ಮ ಕೆಲಸ ಹೇಗೆ ಮಾಡಿಕೊಡುವುದು’ ಅನ್ನುವ ರೀತಿ ಮಾತನಾಡುತ್ತಾರೆ. ನಮ್ಮ ಸಮುದಾಯಕ್ಕೆ ವಿರುದ್ಧವಾಗಿದ್ದಾರೆ ಎಂದು ದೂರಿದರು.

ರಾಮದೇವರ ಬೆಟ್ಟ: ಆತ್ಮಹತ್ಯೆಗೆ ಯತ್ನಿಸಿದ ಪ್ರೇಮಿಗಳ ರಕ್ಷಣೆ

ಪ್ರಜಾವಾಣಿ ವಾರ್ತೆ

ರಾಮನಗರ: ಇಲ್ಲಿನ ರಾಮದೇವರ ಬೆಟ್ಟದ ಮೇಲಿಂದ ಜಿಗಿದು ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದ ಪ್ರೇಮಿಗಳನ್ನು ಪೊಲೀಸರು ರಕ್ಷಿಸಿದ್ದಾರೆ.

ಬೆಂಗಳೂರಿನ ಆರ್.ಎನ್. ಶೆಟ್ಟಿ ಕಾಲೇಜಿನ ಪ್ರಥಮ ಬಿ.ಇ. ವಿದ್ಯಾರ್ಥಿ ಚೇತನ್ (19) ಹಾಗೂ ಅದೇ ಕಾಲೇಜಿನ ಪ್ರಥಮ ಬಿ.ಕಾಂ. ವಿದ್ಯಾರ್ಥಿನಿ ಸಾಹಿತ್ಯ (19) ಆತ್ಮಹತ್ಯೆಗೆ ಯತ್ನಿಸಿದವರು. ಬೆಳಿಗ್ಗೆ 11.30ರ ಸುಮಾರಿಗೆ ಬೆಟ್ಟದ ಮೇಲಿಂದ ಜಿಗಿದು ಬಂಡೆಗಳ ಮಧ್ಯೆ ಸಿಲುಕಿ ಗಾಯಗೊಂಡಿದ್ದ ಅವರನ್ನು ಗ್ರಾಮೀಣ ಠಾಣೆ ಇನ್‌ಸ್ಪೆಕ್ಟರ್ ಗಿರಿರಾಜ್ ಮತ್ತು ಸಿಬ್ಬಂದಿ ಸುಮಾರು 3 ಗಂಟೆ ಕಾಲ ಕಾರ್ಯಾಚರಣೆ ನಡೆಸಿ ರಕ್ಷಣೆ ಮಾಡಿದರು.

ಗಾಯಾಳುಗಳನ್ನು ರಾಜರಾಜೇಶ್ವರಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಜೋಶಿ ನಡವಳಿಕೆ ತಿದ್ದಿಕೊಳ್ಳದಿದ್ದರೆ ಪ್ರತಿಭಟನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರು ತಮ್ಮ ಧೋರಣೆ ತಿದ್ದಿಕೊಳ್ಳದಿದ್ದರೆ ಪ್ರತಿಭಟನೆ ನಡೆಸಲಾಗುವುದು ಎಂದು ಸಮಾನ ಮನಸ್ಕರ ವೇದಿಕೆ ಎಚ್ಚರಿಕೆ ನೀಡಿದೆ.

ಚಾಮರಾಜಪೇಟೆಯಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ, ವೇದಿಕೆಯ ಸಿ.ಕೆ. ರಾಮೇಗೌಡ, ಲೇಖಕಿಯರಾದ ವಸುಂಧರಾ ಭೂಪತಿ, ಎಚ್.ಎಲ್. ಪುಷ್ಪಾ, ಮುಖಂಡ ಹನುಮೇಗೌಡ, ಶೇಖರಗೌಡ ಮಾಲಿಪಾಟೀಲ ಸೇರಿ ನೂರಕ್ಕೂ ಹೆಚ್ಚು ಮಂದಿ ಭಾಗವಹಿಸಿ ಮಹೇಶ ಜೋಶಿ ವಿರುದ್ಧ ವಾಗ್ದಾಳಿ ನಡೆಸಿದರು.

‘ಮಹೇಶ ಜೋಶಿ ಅವರು ಸರ್ವಾಧಿಕಾರಿಯಂತೆ ನಡೆದುಕೊಳ್ಳುತ್ತಿದ್ದಾರೆ. ಅವರ ಅವಧಿಯಲ್ಲಿನ ಕಾರ್ಯಗಳ ಕುರಿತು ಶ್ವೇತಪತ್ರ ಹೊರಡಿಸಲಿ, ಬಹಿರಂಗ ಚರ್ಚೆಗೆ ಸಿದ್ಧ’ ಎಂದು ಸಿ.ಕೆ. ರಾಮೇಗೌಡ ಹೇಳಿದರು.

‘ಸಾಹಿತ್ಯ ಪರಿಷತ್ತು ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿದ್ದು, ಇಲ್ಲಿನ ಕಾರ್ಯ ಚಟುವಟಿಕೆಗಳ ಬಗ್ಗೆ ಪ್ರಶ್ನೆ ಮಾಡುವಂತಿಲ್ಲ ಎಂಬಂತೆ ಮಹೇಶ ಜೋಶಿ ನಡೆದುಕೊಳ್ಳುತ್ತಿದ್ದಾರೆ. ಹಿಟ್ಲರ್, ಮುಸಲೋನಿ ರೀತಿಯ ನಡವಳಿಕೆ ಸಲ್ಲದು’ ಎಂದು ವಸುಂಧರಾ ಭೂಪತಿ ಅಸಮಾಧಾನ ವ್ಯಕ್ತಪಡಿಸಿದರು.

ಸಂಪುಟ ಸಭೆಯಲ್ಲಿ ನಿರ್ಧಾರ • 2023–24ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿದ್ದ ಮುಖ್ಯಮಂತ್ರಿ

ಪರಿಶಿಷ್ಟರಿಗೆ ಗುತ್ತಿಗೆ ಮೀಸಲು ₹1 ಕೋಟಿ ಮಿತಿ ಹೆಚ್ಚಿಸಲು ಸುಗ್ರೀವಾಜ್ಞೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಗುತ್ತಿಗೆದಾರರಿಗೆ ಮೀಸಲಾತಿ ಸೌಲಭ್ಯ ಕಲ್ಪಿಸಿದ್ದ ಕಾಮಗಾರಿಗಳ ಮಿತಿಯನ್ನು ₹ 1 ಕೋಟಿಗೆ ಹೆಚ್ಚಿಸಿ ಅವಕಾಶ ಕಲ್ಪಿಸಲು ಸುಗ್ರೀವಾಜ್ಞೆ ಹೊರಡಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

2023–24ನೇ ಸಾಲಿನ ಬಜೆಟ್‌ನಲ್ಲಿ ಅನುಸೂಚಿತ ಜಾತಿ (ಎಸ್‌ಸಿ) ಮತ್ತು ಅನುಸೂಚಿತ ವರ್ಗಗಳ (ಎಸ್‌ಟಿ) ಗುತ್ತಿಗೆದಾರರಿಗೆ ಸರ್ಕಾರದ ಗುತ್ತಿಗೆ ಕಾಮಗಾರಿಗಳಲ್ಲಿ ಗುತ್ತಿಗೆ ಮೀಸಲಾತಿ ಮಿತಿಯನ್ನು ₹ 1 ಕೋಟಿಗೆ ಹೆಚ್ಚಿಸಲಾಗುವುದು ಎಂದು ಮುಖ್ಯಮಂತ್ರಿ ಘೋಷಿಸಿದ್ದರು.

ಶುಕ್ರವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ, ಗುತ್ತಿಗೆ ಮೀಸಲಾತಿ ಮಿತಿ ಹೆಚ್ಚಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಕಾಯ್ದೆ ತಿದ್ದುಪಡಿಗೆ ಸುಗ್ರೀವಾಜ್ಞೆ ಹೊರಡಿಸಲು ಅನುಮೋದನೆ ನೀಡಲಾಗಿದೆ.

ಸಂಪುಟ ಸಭೆಯ ಇತರ ತೀರ್ಮಾನಗಳು

- 2022–23ನೇ ಸಾಲಿನಿಂದ ಆರಂಭವಾಗಿರುವ ಪರಿಷ್ಕೃತ ಯಶಸ್ವಿನಿ ಯೋಜನೆಯಡಿ ಬರುವ ಕೆಲವು ಚಿಕಿತ್ಸೆಗಳಿಗೆ ಹಿಂದಿನ ಯಶಸ್ವಿನಿ ಯೋಜನೆಯ ದರಗಳನ್ನೇ ಅಳವಡಿಸಿಕೊಳ್ಳಲು ಜ. 24ರಂದು ಹೊರಡಿಸಿರುವ ಆದೇಶಕ್ಕೆ ಘಟನೋತ್ತರ ಅನುಮೋದನೆ
- ಕೇಂದ್ರ ಪುರಸ್ಕೃತ ಯೋಜನೆಯಾದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಗಣಕೀಕರಣ ಯೋಜನೆಯಡಿ ಒಟ್ಟು ₹ 66.99 ಕೋಟಿಗಳಿಗೆ ಹಾರ್ಡ್‌ವೇರ್ ಸಾಮಾಗ್ರಿಗಳನ್ನು ಖರೀದಿಸಲು ಅನುಮೋದನೆ
- ಅಂಗವಿಕಲ ಸರ್ಕಾರಿ ನೌಕರರಿಗೆ ಗುಂಪು–ಡಿ ಮತ್ತು ಗುಂಪು–ಸಿ ವೃಂದಗಳಿಗೆ ನೀಡುವ ಮುಂಬಡ್ತಿಯಲ್ಲಿ ಶೇ 4ರಷ್ಟು ಮೀಸಲಾತಿ ಕಲ್ಪಿಸುವ ಪ್ರಸ್ತಾವಕ್ಕೆ ಒಪ್ಪಿಗೆ
- ನೂತನ ಕರ್ನಾಟಕ ರಾಜ್ಯ ದತ್ತಾಂಶ ಕೇಂದ್ರವನ್ನು ₹ 592.86 ಕೋಟಿ ವೆಚ್ಚದಲ್ಲಿ ಸ್ಥಾಪಿಸಲು ಅನುಮೋದನೆ
- ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಕುಕನೂರು ಸಮುದಾಯ ಆರೋಗ್ಯ ಕೇಂದ್ರದಲ್ಲಿ ಕೈಗೊಂಡಿರುವ 30 ಹಾಸಿಗೆಗಳ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ನಿರ್ಮಾಣ ಕಾಮಗಾರಿಗಳ ಮೂಲ ಅಂದಾಜು ₹ 9.50 ಕೋಟಿಗಳಿದ್ದು, ಪರಿಷ್ಕೃತ ಅಂದಾಜು ₹ 11.18 ಕೋಟಿಗೆ ಆಡಳಿತಾತ್ಮಕ ಅನುಮೋದನೆ
- ರಾಜ್ಯ ಏಳು ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳನ್ನು ‘ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ’ (ಕೆಐಟಿ) ಆಗಿ ಉನ್ನತೀಕರಿಸಲು ಮತ್ತು ಬೆಂಗಳೂರು ಸರ್ಕಾರಿ ಎಸ್‌ಕೆಎಸ್‌ಜೆಐಟಿ ಸಂಸ್ಥೆಯ ಸಿವಿಲ್ ಕಾಮಗಾರಿಗಳನ್ನು ₹ 32.50 ಕೋಟಿ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಅನುಮೋದನೆ
- ಶೈಕ್ಷಣಿಕ ಹಿಂದುಳಿದ ಜಿಲ್ಲೆಗಳಲ್ಲಿ 10 ಮಾದರಿ ಎಸ್‌ಸಿ, ಎಸ್‌ಟಿ ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡ ನಿರ್ಮಾಣ ಕಾಮಗಾರಿಯ ಮೂಲ ಅಂದಾಜು ₹ 237.50 ಕೋಟಿಯಿದ್ದು, ಪರಿಷ್ಕೃತ ಅಂದಾಜು ₹ 347.35 ಕೋಟಿಗೆ ಅನುಮೋದನೆ
- ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ 11 ಕ್ರಿಮಿನಲ್ ಮೊಕದ್ದಮೆಗಳನ್ನು ಅಭಿಯೋಜನೆಯಿಂದ ಹಿಂಪಡೆಯುವುದು
- ನಬಾರ್ಡ್ ನೆರವಿನ ವಿಜಯಪುರ ಜಿಲ್ಲೆ ತಿಕೋಟ ತಾಲ್ಲೂಕಿನ ತೊರವಿ ಗ್ರಾಮದಲ್ಲಿ ಒಣದ್ರಾಕ್ಷಿ ಸಂಸ್ಕರಣೆಗೆ ಸಮುದಾಯ ಸೌಲಭ್ಯ ಕೇಂದ್ರದ ಜೊತೆ 10 ಸಾವಿರ ಟನ್ ಶೀತಲ ಘಟಕವನ್ನು ₹ 40.75 ಕೋಟಿ ಮೊತ್ತದಲ್ಲಿ ಸ್ಥಾಪಿಸಲು ಅನುಮೋದನೆ
- ಕರ್ನಾಟಕ ಗೃಹ ಮಂಡಳಿಯು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಸೂಲಿಬೆಲೆ ಹೋಬಳಿ, ಪುಲಿಮಂಚಿ ಹಾಗೂ ಸಸಿಮಾಕನಹಳ್ಳಿ ಗ್ರಾಮದ ಒಟ್ಟು 71 ಎಕರೆ 29 ಗುಂಟೆ ಜಮೀನುಗಳನ್ನು ಶೇ 50:50 ಅನುಪಾತದ ಪಾಲುದಾರಿಕೆಯಲ್ಲಿ ಅಭಿವೃದ್ಧಿಪಡಿಸಿದ ನಿವೇಶನಗಳನ್ನು ಭೂ ಮಾಲೀಕರಿಗೆ ನೀಡಲು ಹಾಗೂ ಪ್ರತಿ ಎಕರೆಗೆ ₹ 15 ಲಕ್ಷ ಮುಂಗಡ ಹಣವನ್ನು ಭೂ ಮಾಲೀಕರಿಗೆ ನೀಡಲು ಹಾಗೂ ₹ 113.77 ಕೋಟಿ ಮೊತ್ತದಲ್ಲಿ ವಸತಿ ಯೋಜನೆ ಕೈಗೊಳ್ಳಲು ಅನುಮೋದನೆ
- ಧಾರವಾಡ ಜಿಲ್ಲೆಯ ಧಾರವಾಡ ತಾಲ್ಲೂಕು ಮತ್ತು ಹೋಬಳಿ ಅತ್ತಿಕೊಳ್ಳ ಗ್ರಾಮದ ವಿವಿಧ ಸರ್ವೆ ನಂಬರ್‌ಗಳಲ್ಲಿ 26 ಎಕರೆ 28 ಗುಂಟೆ ಜಮೀನನ್ನು ಶೇ 50:50 ಅನುಪಾತದ ಪಾಲುದಾರಿಕೆಯ ಅಡಿಯಲ್ಲಿ ಅಭಿವೃದ್ಧಿಪಡಿಸಿದ ನಿವೇಶನಗಳನ್ನು ಭೂ ಮಾಲೀಕರಿಗೆ ನೀಡಲು ಹಾಗೂ ಪ್ರತಿ ಎಕರೆಗೆ ₹ 10 ಲಕ್ಷ ಮುಂಗಡ ಹಣವನ್ನು ಭೂ ಮಾಲೀಕರಿಗೆ ನೀಡಲು ಹಾಗೂ ₹ 43.36 ಕೋಟಿ ಮೊತ್ತದಲ್ಲಿ ವಸತಿ ಯೋಜನೆ ಕೈಗೊಳ್ಳಲು ಅನುಮೋದನೆ
- ಕರ್ನಾಟಕ ಗೃಹ ಮಂಡಳಿಯ ವಸತಿ ಯೋಜನೆಗೆ ಕೊಪ್ಪಳ ಜಿಲ್ಲೆಯ ಕೊಪ್ಪಳ ತಾಲ್ಲೂಕು ಇರಕಲಗಡ ಗ್ರಾಮದ ವಿವಿಧ ಸರ್ವೆ ನಂಬರ್‌ಗಳಲ್ಲಿ ಒಟ್ಟು ಕ್ಷೇತ್ರ 25 ಎಕರೆ 15 ಗುಂಟೆ ಜಮೀನನ್ನು ಶೇ 60:40 ಅನುಪಾತದ ಪಾಲುದಾರಿಕೆಯಲ್ಲಿ ಅಭಿವೃದ್ಧಿಪಡಿಸಿ ನಿವೇಶನಗಳನ್ನು ಭೂಮಾಲೀಕರಿಗೆ ನೀಡಲು ಹಾಗೂ ಯೋಜನೆ ವೆಚ್ಚ ₹ 27.50 ಕೋಟಿಗಳಿದ್ದು, ಪ್ರತಿ ಎಕರೆಗೂ ₹ 5 ಲಕ್ಷಗಳ ಮುಂಗಡ ಹಣವನ್ನು ಭೂ ಮಾಲೀಕರಿಗೆ ನೀಡಲು ಒಪ್ಪಿಗೆ
- ಗೃಹ ಬಳಕೆ, ವಾಣಿಜ್ಯ, ಕೈಗಾರಿಕಾ ಗ್ರಾಹಕರಿಗೆ ಕೊಳವೆ ಮೂಲಕ ನೈಸರ್ಗಿಕ ಅನಿಲ ಸರಬರಾಜು (ಪಿಎನ್‌ಜಿ) ಮತ್ತು ವಾಹನಗಳಿಗೆ ಕಂಪ್ರೆಸ್ಡ್ ನೈಸರ್ಗಿಕ ಅನಿಲ (ಸಿಎನ್‌ಜಿ) ಒದಗಿಸಲು, ‘ನಗರ ಅನಿಲ ವಿತರಣಾ ಜಾಲದ ಅಭಿವೃದ್ಧಿ ರಾಜ್ಯ ನೀತಿ’ಗೆ ಅನುಮೋದನೆ

ಸುಳ್ಳು ಹೇಳಿದ ಬಿಜೆಪಿ: ಆರೋಪ

ಪ್ರಜಾವಾಣಿ ವಾರ್ತೆ

ಡಾ.ಶಂಕರ್ ಗುಹಾ ದ್ವಾರಕನಾಥ್ ಮತ್ತು ವಿಧಾನ ಪರಿಷತ್ ಸದಸ್ಯ ಯು.ಬಿ.ವೆಂಕಟೇಶ್ ಧರಣಿ ನಡೆಸಿದರು

ಬೆಂಗಳೂರು: ಶ್ರೀ ಗುರುರಾಘವೇಂದ್ರ ಬ್ಯಾಂಕ್ ಮತ್ತು ವಸಿಷ್ಠ ಸೌಹಾರ್ದ ಸೊಸೈಟಿಯ ಹಗರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕು ಎಂದು ಆಗ್ರಹಿಸಿ ಠೇವಣಿದಾರರ ಹಿತ ರಕ್ಷಣಾ ವೇದಿಕೆಯ ಮುಖ್ಯಸ್ಥ ಡಾ.ಶಂಕರ್ ಗುಹಾ ದ್ವಾರಕನಾಥ್ ಮತ್ತು ವಿಧಾನ ಪರಿಷತ್ ಸದಸ್ಯ ಯು.ಬಿ.ವೆಂಕಟೇಶ್ ಧರಣಿ ನಡೆಸಿದರು.

ವಿಧಾನಸೌಧದಲ್ಲಿರುವ ಗಾಂಧಿ ಪ್ರತಿಮೆಯ ಮುಂದೆ ಧರಣಿ ನಡೆಸಿದ ಕಾಂಗ್ರೆಸ್ ನಾಯಕರು, ‘ಹಗರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸಲಿದ್ದೇವೆ ಎಂದು ಸಹಕಾರಿ ಸಚಿವರೇ ಸದನದಲ್ಲಿ ಹೇಳಿದ್ದರು. ಆದರೆ ಶುಕ್ರವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಕುರಿತು ಯಾವುದೇ ತೀರ್ಮಾನ ತೆಗೆದುಕೊಳ್ಳಲೇ ಇಲ್ಲ’ ಎಂದು ದೂರಿದರು.

‘ಚುನಾವಣಾ ನೀತಿ ಸಂಹಿತೆ ಜಾರಿ ಆಗಲಿದ್ದು, ಇದೇ ಕೊನೆಯ ಸಂಪುಟ ಸಭೆಯಾಗಲಿದೆ. ಆದರೂ ಪ್ರಕರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸದೆ ಆಡಳಿತ ಸರ್ಕಾರ ಸುಳ್ಳು ಹೇಳಿ ಜಾರಿಕೊಂಡಿದೆ. ಬಿಜೆಪಿಯವರು ಜನರನ್ನು ದಿಕ್ಕು ತಪ್ಪಿಸುವ ತಂತ್ರಗಾರಿಕೆಯನ್ನು ಮಾಡಿದ್ದಾರೆ. ಈ ಸಹಕಾರಿ ಬ್ಯಾಂಕ್ ಹಗರಣದಲ್ಲಿ ತಪ್ಪಿತಸ್ಥರನ್ನು ಕಾಪಾಡುವ ಕೆಲಸ ಮಾಡಿದ್ದಾರೆ’ ಎಂದು ಡಾ.ಶಂಕರ್ ಆರೋಪಿಸಿದರು.

ಯು.ಬಿ. ವೆಂಕಟೇಶ್ ಮಾತನಾಡಿ, ‘ನಾನು ಸದನದಲ್ಲಿ ಅದೆಷ್ಟೋ ಬಾರಿ ಈ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಆದರೆ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ನೀಡಿದ್ದ ಭರವಸೆ ಕೊನೆಗೆ ಈಡೇರಲಿಲ್ಲ. ಬಿಜೆಪಿಯವರು ಸುಳ್ಳು ಹೇಳಿ ದಿನಗಳನ್ನು ದೂಡಿ ಜನರನ್ನು ದಿಕ್ಕು ತಪ್ಪಿಸುವಲ್ಲಿ ನಿಸ್ಸೀಮರು ಎನ್ನುವುದನ್ನು ಮತ್ತೊಮ್ಮೆ ಸಾಬೀತುಪಡಿಸಿದ್ದಾರೆ’ ಎಂದರು.

ಸುಭಾಷಿತ

ಜನರ ಬಗ್ಗೆ ಹೆಚ್ಚು ಕುತೂಹಲ ಹೊಂದುವುದನ್ನು ಬಿಡಿ ಮತ್ತು ವಿಚಾರಗಳ ಬಗ್ಗೆ ಹೆಚ್ಚು ಕುತೂಹಲಿಗಳಾಗಿರಿ.

-ಮೇರಿ ಕ್ಯೂರಿ

ರಾಹುಲ್ ಅನರ್ಹತೆ ವ್ಯವಸ್ಥೆಯ ವರ್ಚಸ್ಸು ಕುಗ್ಗಿಸಿದ ನಡೆ

ದೇಶದ ಅತ್ಯಂತ ಮುಖ್ಯ ವಿರೋಧ ಪಕ್ಷದ ನಾಯಕನನ್ನು ಸಂಸತ್ ಸದಸ್ಯತ್ವದಿಂದ ಅನರ್ಹಗೊಳಿಸಿರುವುದು ಭಾರತದ ಪ್ರಜಾಪ್ರಭುತ್ವಕ್ಕೆ ಶೋಭೆ ತರುವುದಿಲ್ಲ; ಸಾಮಾನ್ಯ ಸಂದರ್ಭಗಳಲ್ಲಿ ಅವರ ಈ ಕೃತ್ಯವು ವ್ಯವಸ್ಥೆಯಿಂದ ಇಷ್ಟೊಂದು ಗಂಭೀರವಾದ ಶಿಕ್ಷೆಗೆ ಗುರಿಯಾಗುವಂಥದ್ದಲ್ಲ. ಇದು ವ್ಯವಸ್ಥೆಯ ವರ್ಚಸ್ಸು ಮತ್ತು ವಿಶ್ವಾಸಾರ್ಹತೆಯನ್ನು ತಗ್ಗಿಸುತ್ತದೆ. ವಿರೋಧ ಪಕ್ಷಗಳ ನಾಯಕರು ಮತ್ತು ಟೀಕಾಕಾರರನ್ನು ದಮನಿಸಲು, ಅವರು ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸುವುದನ್ನು ತಡೆಯಲು ಕಾನೂನು ಮತ್ತು ಇತರ ಎಲ್ಲ ರೀತಿಯ ವ್ಯವಸ್ಥೆಗಳನ್ನು ಬಳಸಿಕೊಳ್ಳುವ ನಿರಂಕುಶಾಧಿಪತ್ಯದ ದೇಶಗಳ ಸಾಲಿಗೆ ಭಾರತವನ್ನೂ ಸೇರಿಸುತ್ತದೆ. ಈ ಹಿಂದೆ ಮಹತ್ವದ ಅನರ್ಹತೆ ಪ್ರಕರಣ ನಡೆದದ್ದು 1975ರಲ್ಲಿ– ಆಗ ಪ್ರಧಾನಿಯಾಗಿದ್ದ ಇಂದಿರಾ ಗಾಂಧಿ ಅವರನ್ನು ಚುನಾವಣಾ ಅಕ್ರಮಕ್ಕೆ ಸಂಬಂಧಿಸಿದಂತೆ ಸಂಸತ್ ಸದಸ್ಯತ್ವದಿಂದ ಅನರ್ಹಗೊಳಿಸಲಾಗಿತ್ತು. ಸಂಚಾರ ನಿಯಮ ಉಲ್ಲಂಘನೆಗೆ ಸಮಾನವಾದ ಒಂದು ತಪ್ಪಿಗೆ ಪ್ರಧಾನಿ ಹುದ್ದೆಯನ್ನೇ ಅವರು ಬೆಲೆಯಾಗಿ ತೆರಬೇಕಾಗಿತ್ತು. ರಾಹುಲ್ ಗಾಂಧಿ ಅವರು ಎಸಗಿದ್ದಾರೆ ಎಂದು ಹೇಳಲಾಗುವ ತಪ್ಪು ಅಷ್ಟೊಂದು ಗಂಭೀರವೂ ಅಲ್ಲ. ಇನ್ನೂ ಗಮನಿಸಬೇಕಾದ ವಿಚಾರ ಎಂದರೆ, ಈ ಪ್ರಕರಣದಲ್ಲಿ ಬಂದಿರುವ ಆದೇಶವು ಕಾನೂನಿನ ದೃಷ್ಟಿಯಲ್ಲಿ ಎಷ್ಟರ ಮಟ್ಟಿಗೆ ಸಶಕ್ತ ಎಂಬುದರ ಬಗ್ಗೆಯೇ ಪ್ರಶ್ನೆಗಳಿವೆ. ವಾಸ್ತವದಲ್ಲಿ ರಾಹುಲ್ ಅವರನ್ನು ಅನರ್ಹಗೊಳಿಸಲು ಅನುಸರಿಸಿದ ಪ್ರಕ್ರಿಯೆಯೇ ಪ್ರಶ್ನಾರ್ಹವಾಗಿದೆ.

ಮಾನನಷ್ಟ ಪ್ರಕರಣವೊಂದರಲ್ಲಿ ಸೂರತ್ ನ್ಯಾಯಾಲಯವೊಂದು ನೀಡಿದ ಆದೇಶದ ಆಧಾರದಲ್ಲಿ ರಾಹುಲ್ ಅವರನ್ನು ಅನರ್ಹಗೊಳಿಸಲಾಗಿದೆ. ಲೋಕಸಭೆಗೆ 2019ರಲ್ಲಿ ನಡೆದ ಚುನಾವಣಾ ಪ್ರಚಾರದಲ್ಲಿ ರಾಹುಲ್ ಅವರು ಕೋಲಾರದಲ್ಲಿ ಆಡಿದ ಮಾತು ತಮ್ಮ ಮಾನಹಾನಿ ಮಾಡಿದೆ ಎಂದು ಸೂರತ್‌ನ ಶಾಸಕ ಪೂರ್ಣೇಶ್ ಮೋದಿ ಅವರು ದೂರು ದಾಖಲಿಸಿದ್ದರು. 'ಎಲ್ಲ ಕಳ್ಳರ ಉಪನಾಮವೂ ಮೋದಿ ಎಂದೇ ಏಕಿದೆ' ಎಂದು ರಾಹುಲ್ ಪ್ರಶ್ನಿಸಿದ್ದರು. ಅದಕ್ಕೂ ಮೊದಲು, ದೇಶ ತೊರೆದು ಪರಾರಿಯಾಗಿದ್ದ ನೀರವ್ ಮೋದಿ ಮತ್ತು ಲಲಿತ್ ಮೋದಿ ಹಾಗೂ ರಫೇಲ್ ಯುದ್ಧವಿಮಾನ ಖರೀದಿ ವಿವಾದದ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಹೆಸರನ್ನು ಹೇಳಿದ್ದರು. ಮಾನಹಾನಿ ಪ್ರಕರಣದಲ್ಲಿ ನೀಡಬಹುದಾದ ಗರಿಷ್ಠ ಶಿಕ್ಷೆಯನ್ನು ಸೂರತ್ ನ್ಯಾಯಾಲಯವು ರಾಹುಲ್ ಅವರಿಗೆ ನೀಡಿದೆ. ಕಡಿಮೆ ಶಿಕ್ಷೆ ನೀಡುವುದರಿಂದ ಮಾನಹಾನಿಗೆ ಸಂಬಂಧಿಸಿದ ಕಾನೂನಿನ ಉದ್ದೇಶವೇ ಈಡೇರುವುದಿಲ್ಲ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ. ಹೀನವಲ್ಲದ ಕೃತ್ಯವನ್ನು ಮೊದಲ ಬಾರಿಗೆ ಎಸಗಿದವರಿಗೆ ನ್ಯಾಯಾಲಯಗಳು ಸಾಮಾನ್ಯವಾಗಿ ಗರಿಷ್ಠ ಶಿಕ್ಷೆ ನೀಡುವುದಿಲ್ಲ. ಗರಿಷ್ಠ ಅಂದರೆ ಎರಡು ವರ್ಷ ಶಿಕ್ಷೆ ನೀಡಿದ್ದರಿಂದಾಗಿ ಮಾತ್ರ ರಾಹುಲ್ ಅವರ ಸಂಸತ್ ಸದಸ್ಯತ್ವ ರದ್ದಾಗಿದೆ. ಎರಡು ವರ್ಷಕ್ಕಿಂತ ಕಡಿಮೆ ಶಿಕ್ಷೆ ಆಗಿದ್ದರೆ ಸದಸ್ಯತ್ವ ರದ್ದಾಗುವುದಿಲ್ಲ ಎಂಬುದು ಗಮನಿಸಬೇಕಾದ ಅಂಶ.

ಭಾಷಣದ ಸಂದರ್ಭವು ಬಳಸಿದ ಮಾತುಗಳಿಗೆ ನಿರ್ದಿಷ್ಟ ಅರ್ಥ ಕೊಡುತ್ತದೆ. ನ್ಯಾಯಾಲಯವು ಮೇಲ್ಮನವಿಯನ್ನು ಪರಿಶೀಲಿಸುವಾಗ ಈ ಅಂಶವನ್ನು ಗಣನೆಗೆ ತೆಗೆದುಕೊಳ್ಳಬೇಕು

ರಾಹುಲ್ ಅವರಿಗೆ ಜಾಮೀನು ನೀಡಲಾಗಿದೆ ಮತ್ತು ಮೇಲ್ಮನವಿ ಸಲ್ಲಿಸುವುದಕ್ಕಾಗಿ ಶಿಕ್ಷೆ ಜಾರಿಗೆ ಒಂದು ತಿಂಗಳು ತಡೆ ನೀಡಲಾಗಿದೆ. ಆದರೆ, ಅಪರಾಧಿ ಎಂದು ಘೋಷಿಸಿದ್ದಕ್ಕೆ ತಡೆ ಇಲ್ಲದ ಕಾರಣ ಅನರ್ಹತೆ ಎದುರಾಗಿದೆ. ಈ ಆದೇಶವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಗುವುದು ಎಂದು ಕಾಂಗ್ರೆಸ್ ಪಕ್ಷ ಹೇಳಿದೆ. ಆದೇಶದ ಎಲ್ಲ ಅಂಶಗಳೂ ಬಹಿರಂಗ ಆಗಿಲ್ಲ ಮತ್ತು ತಿಳಿದುಬಂದ ಅಂಶಗಳು ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿವೆ. ಹೀಗಾಗಿಯೇ ಆತುರವಾಗಿ ಕೈಗೊಂಡ ಅನರ್ಹತೆ ನಿರ್ಧಾರವು ಗಮನ ಸೆಳೆದಿದೆ. ಮಾನಹಾನಿಗೆ ಸಂಬಂಧಿಸಿದ ಕಾನೂನಿಗೆ ನ್ಯಾಯಾಲಯವು ನೀಡಿದ ವ್ಯಾಖ್ಯೆಯ ಬಗ್ಗೆಯೇ ಕಾನೂನು ತಜ್ಞರ ವಲಯದಲ್ಲಿ ಪ್ರಶ್ನೆಗಳು ಇವೆ. ಸೂರತ್‌ನಲ್ಲಿ ಈ ದೂರು ದಾಖಲಿಸಲು ದೂರುದಾರರಿಗೆ ಕಾನೂನುಬದ್ಧ ಹಕ್ಕು ಇಲ್ಲ ಎಂಬ ನಿಲುವು ಕೂಡ ವ್ಯಕ್ತವಾಗಿದೆ. ಚುನಾವಣಾ ಪ್ರಚಾರದ ಬಿರುಸಿನಲ್ಲಿ ರಾಜಕಾರಣಿಗಳು ನೀಡಿದ ಹೇಳಿಕೆಗಳಿಗೆ ಮಾನಹಾನಿಗೆ ಸಂಬಂಧಿಸಿದ ಕಾನೂನನ್ನು ಅನ್ವಯ ಮಾಡುವ ವಿಚಾರದಲ್ಲಿ ನ್ಯಾಯಾಲಯಗಳು ಹಿಂದೆಲ್ಲ ಇಷ್ಟೊಂದು ಉತ್ಸಾಹ ತೋರಿದ್ದಿಲ್ಲ. ದುರುದ್ದೇಶದಿಂದ ಒಬ್ಬ ವ್ಯಕ್ತಿಯು ಮತ್ತೊಬ್ಬ ವ್ಯಕ್ತಿಯ ಮಾನಹಾನಿ ಮಾಡಿದರೆ ಮಾತ್ರ ಮಾನನಷ್ಟ ಕಾನೂನು ಅನ್ವಯವಾಗುತ್ತದೆಯೇ ಹೊರತು ಒಂದು ಗುಂಪನ್ನು ಅವಹೇಳನ ಮಾಡಿದರೆ ಅದು ಅನ್ವಯ ಆಗದು ಎಂಬ ವಾದ ಇದೆ. ಮೋದಿ ಎಂಬ ಉಪನಾಮ ಹೊಂದಿರುವ ಎಲ್ಲರನ್ನೂ ರಾಹುಲ್ ಅವಮಾನಿಸಿದ್ದಾರೆ ಎಂಬುದು ಅತಿರೇಕದ ಚಿಂತನೆ. ರಾಹುಲ್ ಅವರ ಗುರಿಯು ಪ್ರಧಾನಿ ನರೇಂದ್ರ ಮೋದಿ ಮತ್ತು ಅವರು ಹೇಳಿಕೆಯಲ್ಲಿ ಉಲ್ಲೇಖಿಸಿದ್ದ ಇತರರು ಮಾತ್ರ. ಅವರು ಉಲ್ಲೇಖಿಸಿದ ಯಾವುದೇ ವ್ಯಕ್ತಿ ಮಾನನಷ್ಟ ಮೊಕದ್ದಮೆ ಹೂಡಿಲ್ಲ. ಭಾಷಣದ ಸಂದರ್ಭವು ಬಳಸಿದ ಮಾತುಗಳಿಗೆ ನಿರ್ದಿಷ್ಟ ಅರ್ಥ ಕೊಡುತ್ತದೆ. ಹಾಗಾಗಿ ಪ್ರಕರಣವನ್ನು ನ್ಯಾಯಾಲಯವು ಪರಿಶೀಲನೆಗೆ ಒಳಪಡಿಸುವಾಗ ಈ ಅಂಶವನ್ನು ಗಣನೆಗೆ ತೆಗೆದುಕೊಳ್ಳಬೇಕು.

ಈ ದೇಶದಲ್ಲಿ ರಾಹುಲ್ ಅವರಷ್ಟು ಲೇವಡಿ ಮತ್ತು ಅವಹೇಳನಕ್ಕೆ ಒಳಗಾದ ಬೇರೊಬ್ಬ ರಾಜಕಾರಣಿ ಇಲ್ಲ: (ಆ) ಅವರ ಮಾನಹಾನಿ ಮಾಡುವ ಅಸ್ತ್ರ ಸಂಸ್ಥೆಗಳು ಆಗಿರುವುದು ಪರಿಸ್ಥಿತಿ ಸ್ಪಷ್ಟ. ಅವರನ್ನು ಪಪ್ಪು, ಮೀರ್ ಜಾಫರ್, ದೇಶದ್ರೋಹಿ ಮತ್ತು ಇಂತಹ ಹಲವು ಹೆಸರುಗಳಿಂದ ಹಲವು ವರ್ಗಗಳಿಂದ ಕರೆಯಲಾಗುತ್ತದೆ. ಇಷ್ಟೊಂದು ವಿರೋಧಾಭಾಸವಿದ್ದರೆ, ರಾಹುಲ್ ಅವರನ್ನು ವಿಚಾರಣೆಗೆ ಒಳಪಡಿಸಿ, ಕಿರುಕುಳ ನೀಡಲಾಗಿದೆ. ಆದರೆ, ಅವರ ಹೇಳಿಕೆಗಿಂತ ಹೆಚ್ಚು ಗಂಭೀರವಾದ ಅಪರಾಧ ಎಸಗಿದವರು ಶಿಕ್ಷೆಯಿಂದ ತಪ್ಪಿಸಿಕೊಂಡಿದ್ದಾರೆ. ರಾಜಕೀಯ ನಾಯಕರು ಮತ್ತು ಧಾರ್ಮಿಕ ನಾಯಕರು ಎಂದು ತಮ್ಮನ್ನು ಕರೆದುಕೊಳ್ಳುವವರು ನರಮೇಧಕ್ಕೆ ಕರೆ ನೀಡಿಯೂ ಯಾವ ಕ್ರಮವೂ ಇಲ್ಲದೆ ತಿರುಗಾಡಿಕೊಂಡಿದ್ದಾರೆ. ದ್ವೇಷ ಭಾಷಣ ಮಾಡಿದವರು, ಸಂಘರ್ಷಕ್ಕೆ ಕರೆ ಕೊಟ್ಟವರು, ಶಾಂತಿ ಮತ್ತು ಸಮಾಜದ ಸೌಹಾರ್ದವನ್ನು ಕದಡುವ ಬೆದರಿಕೆ ಒಡ್ಡಿದವರ ಮೇಲೆ ಕೂಡ ಯಾವ ಕ್ರಮವನ್ನೂ ಕೈಗೊಳ್ಳಲಾಗಿಲ್ಲ. ಆದರೆ, ಸರ್ಕಾರವನ್ನು ಟೀಕಿಸಿದವರು, ಸರ್ಕಾರದ ಜೊತೆ ಭಿನ್ನಮತ ಇರುವವರಿಗೆ ವಿವಿಧ ಕಾನೂನುಗಳನ್ನು ಬಳಸಿಕೊಂಡು ಕಿರುಕುಳ ನೀಡಲಾಗಿದೆ. ಅತ್ಯಂತ ಕಠಿಣವಾದ ಕಾನೂನುಬಾಹಿರ ಕೃತ್ಯಗಳ ತಡೆ ಕಾಯ್ದೆಯನ್ನೂ ಅವರ ಮೇಲೆ ಪ್ರಯೋಗಿಸಲಾಗಿದೆ. ದೂರದ ರಾಜ್ಯಗಳಲ್ಲಿ ಪ್ರಕರಣ ದಾಖಲಿಸಿ, ಬೇರೆ ರಾಜ್ಯಗಳ ಪೊಲೀಸರು ಬಂಧಿಸುವಂತೆ ಮಾಡಲಾಗುತ್ತಿದೆ. ವಿರೋಧ ಪಕ್ಷಗಳ ರಾಜಕಾರಣಿಗಳು ಮತ್ತು ಟೀಕಾಕಾರರ ಮೇಲೆ ಕೇಂದ್ರ ತನಿಖಾ ಸಂಸ್ಥೆಗಳನ್ನು ಛೂಬಿಡಲಾಗುತ್ತಿದೆ. ವಿರೋಧ ಪಕ್ಷಗಳಿಗೆ ಕಿರುಕುಳ ನೀಡುವುದು ಮತ್ತು ವಿರೋಧ ಪಕ್ಷಗಳ ನಾಯಕರನ್ನು ಸುಮ್ಮನಾಗಿಸುವ ಕಾರ್ಯತಂತ್ರದ ಮುಂದುವರಿದ ಭಾಗವಾಗಿ ರಾಹುಲ್ ಅವರ ವಿರುದ್ಧ ಈಗ ಕ್ರಮ ಕೈಗೊಳ್ಳಲಾಗಿದೆ.

ರಾಹುಲ್ ಅವರು ಸಾರ್ವಜನಿಕ ವೇದಿಕೆಯೊಂದರಲ್ಲಿ ನೀಡಿದ ಹೇಳಿಕೆಯು ಸದಭಿರುಚಿಯದ್ದಲ್ಲ ಮತ್ತು ನಮ್ಮ ದೇಶದ ರಾಜಕೀಯ ಸಂವಾದವು ಯಾವ ಮಟ್ಟಕ್ಕೆ ಕುಸಿದಿದೆ ಎಂಬುದನ್ನು ಇದು ತೋರಿಸುತ್ತದೆ. ಸಾರ್ವಜನಿಕ ಸಂವಾದವನ್ನು ಪಾತಾಳಕ್ಕೆ ತಳ್ಳಿದ್ದರಲ್ಲಿ ಪ್ರಧಾನಿಯನ್ನೂ ಸೇರಿಸಿ ಎಲ್ಲ ರಾಜಕಾರಣಿಗಳ ತಪ್ಪೂ ಇದೆ. ಆದರೆ, ಕೇವಲ ಹೇಳಿಕೆಗಾಗಿ ರಾಹುಲ್ ಅವರನ್ನು ಈ ರೀತಿ ಶಿಕ್ಷಿಸಿರುವುದು ಸರಿಯಲ್ಲ. ಕೇಂದ್ರ ಸರ್ಕಾರ, ಬಿಜೆಪಿ ಮತ್ತು ಮೋದಿ ಅವರನ್ನು ನಿರಂತರವಾಗಿ ಮತ್ತು ಕಠೋರವಾಗಿ ರಾಹುಲ್ ಅವರು ಟೀಕಿಸುತ್ತಿದ್ದ ಕಾರಣ ಅವರ ವಿರುದ್ಧ ಅನರ್ಹತೆಯ ಅಸ್ತ್ರ ಬಳಸಲಾಗಿದೆ ಎಂಬ ವ್ಯಾಖ್ಯಾನ ಬಳಕೆಯಾಗಿದೆ. ರಾಹುಲ್ ಅವರು ಬಿಜೆಪಿಗೆ ಇತರ ಎಲ್ಲರಿಗಿಂತ ಮುಖ್ಯವಾದ ಗುರಿಯಾಗಿದ್ದಾರೆ. ವಿವಿಧ ರೀತಿಯಲ್ಲಿ ಅವರನ್ನು ಮೂಲೆಗುಂಪು ಮಾಡಲು ಬಿಜೆಪಿ ಯತ್ನಿಸುತ್ತಿದೆ. ಸೆರೆಮನೆಗೆ ತಳ್ಳಿ ಅವರ ರಾಜಕೀಯ ಪ್ರಕ್ರಿಯೆಯ ಭಾಗಿಯಾಗುವುದನ್ನು ತಡೆಯಲು ಯತ್ನಿಸುತ್ತಿದೆ. 2024ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ, ರಾಹುಲ್ ಅವರಿಗೆ ಶಿಕ್ಷೆ ಆಗಿರುವುದನ್ನೇ ಪ್ರಚಾರಕ್ಕೆ ಬಳಸಿಕೊಳ್ಳಬಹುದು. ನ್ಯಾಯಾಲಯವು ಅದೇಶಕ್ಕೆ ತಡೆ ಕೊಡದೇ ಇದ್ದರೆ ಸನ್ನಿವೇಶವೇ ಮುಂದುವರಿದರೆ ಲೋಕಸಭೆಗೆ 2024ರಲ್ಲಿ ನಡೆಯುವ ಚುನಾವಣೆಯಲ್ಲಿ ಅವರು ಸ್ಪರ್ಧಿಸಲು ಸಾಧ್ಯವಿಲ್ಲ. ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ, ಪ್ರಜಾಪ್ರಭುತ್ವದ ತಾಯಿ ಎಂದೆಲ್ಲ ಕರೆಸಿಕೊಳ್ಳುವ ದೇಶದ ಪ್ರಮುಖ ವಿರೋಧ ಪಕ್ಷದ ನಾಯಕನೊಬ್ಬ ಪ್ರಧಾನಿ ಕುರಿತು ಚುನಾವಣಾ ಪ್ರಚಾರ ಭಾಷಣದಲ್ಲಿ ನೀಡಿದ ಹೇಳಿಕೆಯಿಂದಾಗಿ ಸ್ಪರ್ಧಿಸಲು ಸಾಧ್ಯವಾಗದೆ ಸೆರೆಮನೆಯಲ್ಲಿ ಇರುವುದನ್ನು ಕಲ್ಪಿಸಿಕೊಳ್ಳಿ. ನಿರಂಕುಶಾಧಿಪತ್ಯದ ವ್ಯವಸ್ಥೆಯಲ್ಲಿ ಮಾತ್ರ ಇಂತಹುದು ನಡೆಯಲು ಸಾಧ್ಯ. ನಾವು ಪ್ರಜಾತಂತ್ರ ಕುರಿತ ಪಾಠವನ್ನು ರಷ್ಯಾದ ಪುಟಿನ್ ಅವರಿಂದ ಅಥವಾ ಲಂಗುಲಗಾಮು ಇಲ್ಲದ ದೇಶಗಳಿಂದ ಕಲಿಯುತ್ತಿದ್ದೇವೆಯೇ?

25 ವರ್ಷಗಳ ಹಿಂದೆ

ಬುಧವಾರ, 25-3-1998

• **ತೆಲುಗುದೇಶಂನ ಬಾಲಯೋಗಿ ಲೋಕಸಭಾಧ್ಯಕ್ಷರಾಗಿ ಆಯ್ಕೆ**

ನವದೆಹಲಿ, ಮಾರ್ಚ್ 24– ಆಳುವ ಬಿಜೆಪಿ ಬೆಂಬಲಿಸಿದ ತೆಲುಗುದೇಶಂನ ಜಿ.ಎಂ.ಸಿ ಬಾಲಯೋಗಿ ಅವರು 12ನೇ ಲೋಕಸಭೆಯ ನೂತನ ಸ್ಪೀಕರ್ ಆಗಿ ಇಂದು ಆಯ್ಕೆಗೊಂಡರು. ಇದರಿಂದಾಗಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಬಿಜೆಪಿ ಸರ್ಕಾರವು ಶುಕ್ರವಾರ ವಿಶ್ವಾಸ ಮತದಲ್ಲಿ ಪಾರಾಗುವುದು ಖಚಿತವಾದಂತಾಯಿತು.

• **ಬಿರುಗಾಳಿ: 105 ಬಲಿ, 500 ಕಣ್ಮರೆ**

ಮಿಡ್ನಾಪುರ, ಮಾರ್ಚ್ 24 (ಪಿಟಿಐ)– ಪಶ್ಚಿಮ ಬಂಗಾಳ ಮತ್ತು ಒರಿಸ್ಸಾದ ಗಡಿ ಪ್ರದೇಶವಾದ ಡಾಂಟನ್ ಮತ್ತು ಜಲ್ಲೇವಾರ್ ಪ್ರದೇಶಗಳಲ್ಲಿ ಭಾರಿ ಬಿರುಗಾಳಿಯಿಂದ 105 ಜನರು ಸತ್ತು 500 ಮಂದಿ ನಾಪತ್ತೆಯಾಗಿದ್ದಾರೆ. 1100 ಜನ ತೀವ್ರ ಗಾಯಗೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

50 ವರ್ಷಗಳ ಹಿಂದೆ

ಭಾನುವಾರ, 25-3-1973

• **ಪ್ರಸಕ್ತ ಅಧಿವೇಶನದಲ್ಲೇ ಭೂ ಸುಧಾರಣೆ ಶಾಸನ**

ಬೆಂಗಳೂರು, ಮಾರ್ಚ್ 24– ವಿಧಾನಮಂಡಲದ ಈ ಅಧಿವೇಶನದಲ್ಲೇ ಭೂ ಸುಧಾರಣೆ ವಿಧೇಯಕವನ್ನು ಮಂಡಿಸಿ, ಕಾನೂನು ಆಗುವಂತೆ ಮಾಡಲು ಪ್ರಯತ್ನಿಸುವುದಾಗಿ ಕಂದಾಯ ಸಚಿವ ಶ್ರೀ ಎನ್. ಹುಚ್ಚಮಾಸ್ತಿಗೌಡ ಅವರು ಇಂದು ವಿಧಾನ ಪರಿಷತ್ತಿನಲ್ಲಿ ಭರವಸೆ ನೀಡಿದರು.

ಸಂಯುಕ್ತ ಪರಿಶೀಲಕ ಸಮಿತಿ ವಿಧೇಯಕದ ಬಗ್ಗೆ ಶೀಘ್ರವೇ ವರದಿ ಸಲ್ಲಿಸುವ ನಿರೀಕ್ಷೆಯನ್ನು ಅವರು ವ್ಯಕ್ತಪಡಿಸಿದರು.

ಧನ ವಿನಿಯೋಗ ವಿಧೇಯಕದ ಮೇಲಿನ ಚರ್ಚೆಗೆ ಸಚಿವರು ಉತ್ತರ ನೀಡಿದರು.

ಈ ಯುದ್ಧಕ್ಕೀಗ ಎರಡು ದಶಕಗಳು ಸಂದಿದ್ದರೂ ಕೆಲವು ಪ್ರಶ್ನೆಗಳು ಹಾಗೆಯೇ ಉಳಿದುಬಿಟ್ಟಿವೆ

ಇರಾಕ್ ಯುದ್ಧ: ನೆಪ, ಮಿಥ್ಯಾರೋಪ



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಉಕ್ರೇನ್ ಯುದ್ಧ ಮುಂದುವರಿದಿದೆ. ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ಮತ್ತು ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಭೇಟಿಯಾಗಿ ದ್ವಿಪಕ್ಷೀಯ ಸಂಬಂಧವನ್ನು ಮತ್ತೊಂದು ಹಂತಕ್ಕೆ ಕೊಂಡೊಯ್ಯುವ ಮಾತನಾಡಿದ್ದಾರೆ. ರಷ್ಯಾವನ್ನು ಏಕಾಂಗಿಯಾಗಿಸಬೇಕು ಎಂದು ಅಮೆರಿಕ ನಡೆಸುತ್ತಿರುವ ಪ್ರಯತ್ನಗಳಿಗೆ ಹಿನ್ನಡೆಯಾಗಿದೆ. ಉಕ್ರೇನ್ ಯುದ್ಧದ ಅಂತ್ಯ ಹೇಗೆ ಎಂಬ ಪ್ರಶ್ನೆಗೆ ನಿಖರ ಉತ್ತರ ಮಾತ್ರ ಕಾಣುತ್ತಿಲ್ಲ.

ಇದೇ ಹೊತ್ತಿನಲ್ಲಿ, ಇರಾಕ್ ಯುದ್ಧಕ್ಕೆ ಇಪ್ಪತ್ತು ವರ್ಷಗಳು ಸಂದವು ಎಂಬ ಸುದ್ದಿ ಆ ಯುದ್ಧದ ನೆನಪುಗಳನ್ನು ಮುನ್ನೆಲೆಗೆ ತಂದಿದೆ. ಇಪ್ಪತ್ತು ವರ್ಷ ಕಳೆದರೂ ಇರಾಕ್ ಯುದ್ಧ ಕುರಿತ ಕೆಲವು ಪ್ರಶ್ನೆಗಳು ಹಾಗೆಯೇ ಉಳಿದುಬಿಟ್ಟಿವೆ. ಅಷ್ಟಕ್ಕೂ ಇರಾಕ್ ಮೇಲೆ ಅಮೆರಿಕ ಮುಗಿಬಿದ್ದದ್ದು ಏಕೆ? ಸಮೂಹ ವಿನಾಶದ ಶಸ್ತ್ರಾಸ್ತ್ರಗಳನ್ನು ಇರಾಕ್ ನಿಜಕ್ಕೂ ಶೇಖರಿಸಿ ಇಟ್ಟುಕೊಂಡಿತ್ತೇ, ಇಸ್ರೇಲ್ ಮತ್ತು ತೈಲ ಲಾಬಿಯು ಅಮೆರಿಕವನ್ನು ಇರಾಕ್ ಮೇಲೆರಗಲು ಪ್ರೇರೇಪಿಸಿತೇ ಅಥವಾ ಸಿರಿಯಾ, ಲಿಬಿಯಾ, ಇರಾನ್ ಮತ್ತು ಉತ್ತರ ಕೊರಿಯಾದ ಸರ್ವಾಧಿಕಾರಿಗಳಿಗೆ ಸಂದೇಶ ರವಾನಿಸಲು, ವಿಶ್ವದ ಪ್ರಮುಖ ಶಕ್ತಿಯಾಗಿ ತನ್ನ ಸ್ಥಾನವನ್ನು ಮರುಸ್ಥಾಪಿಸಿಕೊಳ್ಳಲು ಅಮೆರಿಕವು ಇರಾಕ್ ಯುದ್ಧವನ್ನು ಬಳಸಿಕೊಂಡಿತೇ?

1990ರ ದಶಕದ ಆರಂಭದಲ್ಲಿ ಸದ್ದಾಂ ಹುಸೇನ್, ಕುವೈತ್ ಮೇಲೆ ಯುದ್ಧ ಸಾರಿದ್ದರು. ಕುವೈತ್ ಬಗಲಿಗೆ ಅಮೆರಿಕ ನಿಂತಿತು. ವಿಶ್ವಸಂಸ್ಥೆಯ ಭದ್ರತಾ ಮಂಡಳಿ 'ರೆಸಲ್ಯೂಶನ್ 687' ಅನ್ನು ಅಂಗೀಕರಿಸಿ, ಇರಾಕ್ ಈ ಕೂಡಲೇ ಎಲ್ಲಾ ರಾಸಾಯನಿಕ, ಜೈವಿಕ ಮತ್ತು ಪರಮಾಣು ಅಸ್ತ್ರಗಳನ್ನು ಧ್ವಂಸಗೊಳಿಸಬೇಕು ಮತ್ತು ವಿಶ್ವ ಸಂಸ್ಥೆಯ ಶಸ್ತ್ರ ಪರಿವೀಕ್ಷಕರ ತಪಾಸಣೆಗೆ ಸಹಕರಿಸಬೇಕು ಎಂದಿತು. ಇರಾಕ್ ಈ ಕರಾರಿಗೆ ಒಪ್ಪಿತ್ತು. ಆದರೆ 1998ರಲ್ಲಿ ತಕರಾರು ತೆಗೆಯಿತು. ಆಗ ಇರಾಕ್ ಮೇಲೆ ಆರ್ಥಿಕ ದಿಗ್ಬಂಧನ ಹೇರಲಾಯಿತು. ಆದರೆ ಸದ್ದಾಂ ಬಗ್ಗಲಿಲ್ಲ. ಅಮೆರಿಕದ ಸಂಸತ್ತು 'ಇರಾಕ್ ವಿಮೋಚನಾ ಕಾಯ್ದೆ'ಯನ್ನು ಅಂಗೀಕರಿಸಿತು. ಸದ್ದಾಂ ಹುಸೇನ್ ಪದಚ್ಯುತಿಗೊಳಿಸುವುದು ಅಮೆರಿಕದ ಗುರಿಯಾಯಿತು.

ಜಾರ್ಜ್ ಡಬ್ಲ್ಯು ಬುಷ್ ಅವರು 2001ರ ಜನವರಿಯಲ್ಲಿ ಅಮೆರಿಕದ ಅಧ್ಯಕ್ಷರಾಗಿ ಪ್ರಮಾಣವಚನ ಸ್ವೀಕರಿಸಿದಾಗ 'ಅಮೆರಿಕದ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವುದು ನನ್ನ ಆದ್ಯತೆ' ಎಂದಿದ್ದರು. ಆದರೆ ಅಮೆರಿಕದ ಸೇನಾ ಮತ್ತು ಆರ್ಥಿಕ ಪ್ರಾಬಲ್ಯದ ದ್ಯೋತಕದಂತಿದ್ದ ಪೆಂಟಗನ್ ಮತ್ತು ವಿಶ್ವ ವಾಣಿಜ್ಯ ಕೇಂದ್ರದ ಮೇಲೆ 2001ರ ಸೆಪ್ಟೆಂಬರ್ 11ರಂದು ನಡೆದ ದಾಳಿಯು ಅಮೆರಿಕದ ಸಾಮರ್ಥ್ಯವನ್ನು ಅಣಕಿಸುವಂತಿತ್ತು. ಅಮೆರಿಕದ ಗುಪ್ತಚರ ಇಲಾಖೆ 'ರಾಸಾಯನಿಕ ಹಾಗೂ ಜೈವಿಕ ಅಸ್ತ್ರಗಳ ದಾಳಿ ನಡೆಯಬಹುದು' ಎಂದು ಎಚ್ಚರಿಸಿತು. ಉಗ್ರರಿಗೆ ಈ ಮಾರಕ ಅಸ್ತ್ರಗಳನ್ನು ನೀಡಲು ಸದ್ದಾಂ ಹುಸೇನ್ ನೇತೃತ್ವದ ಇರಾಕ್ ಮುಂದಾದರೆ ಎಂಬ ಭೀತಿ ಅಮೆರಿಕವನ್ನು ಕಾಡಿತು.

ಸೆಪ್ಟೆಂಬರ್ 11ರ ದಾಳಿಯ ಆಘಾತದಿಂದ ಹೊರಬಂದು ತನ್ನ ಪ್ರಾಬಲ್ಯವನ್ನು ಮರುಸ್ಥಾಪಿಸಲು ಅಮೆರಿಕ ಹವಣಿಸುತ್ತಿತ್ತು. ಆಗ ಕಂಡದ್ದೇ ಇರಾಕ್. ಸದ್ದಾಂ ಹುಸೇನ್ ಎಂಬ ಹುಂಬ ಸರ್ವಾಧಿಕಾರಿಯ ಇರಾಕ್. ಇರಾಕ್‌ನಲ್ಲಿ ಶಿಯಾ ಮುಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದರೂ ಆಡಳಿತದ ಚುಕ್ಕಾಣಿ ಸುನ್ನಿ ಮುಸ್ಲಿಮರ ಕೈಯಲ್ಲಿತ್ತು. ಸದ್ದಾಂ ಹುಸೇನ್ ಅವಧಿಯಲ್ಲಿ ಶಿಯಾ ಮುಸ್ಲಿಮರ ಮೇಲೆ ಜನಾಂಗೀಯ ದಾಳಿ, ಹಿಂಸಾಚಾರಗಳು ನಡೆದವು. ಸಾಮುದಾಯಿಕ ಬಿಕ್ಕಟ್ಟು ಸೃಷ್ಟಿಸಿದ್ದ, ದುರಾಡಳಿತಕ್ಕೆ ಹೆಸರಾಗಿದ್ದ ಸದ್ದಾಂ ಹುಸೇನ್ ಪದಚ್ಯುತಿಗೊಳಿಸಿದರೆ ಅಮೆರಿಕದ ವಿಶ್ವಾಸಾರ್ಹತೆ ಹೆಚ್ಚುತ್ತದೆ ಮತ್ತು ಪ್ರಾಂತೀಯವಾಗಿ ಮಧ್ಯಪ್ರಾಚ್ಯದಲ್ಲಿ ಅಮೆರಿಕದ ಪ್ರಭಾವ ಹಿರಿದಾಗುತ್ತದೆ ಎಂಬ ಲೆಕ್ಕಾಚಾರ ಅಮೆರಿಕದ ನೀತಿನಿರೂಪಕರ ತಲೆಯಲ್ಲಿತ್ತು.

ಇರಾಕ್ ಮೇಲೆರಗುವ ಮುನ್ನ ಒಂದಿಷ್ಟು ಆರೋಪಗಳನ್ನು ಅಮೆರಿಕ ಮಾಡಿತು. ಇರಾಕ್ ಸಮೂಹ ವಿನಾಶದ ಶಸ್ತ್ರಾಸ್ತ್ರಗಳನ್ನು ಹೊಂದುವ ಪ್ರಯತ್ನದಲ್ಲಿದೆ. ರಾಸಾಯನಿಕ, ಜೈವಿಕ ಮತ್ತು ಪರಮಾಣು ಅಸ್ತ್ರಗಳನ್ನು ತನ್ನ ಬತ್ತಳಿಕೆಗೆ ಸೇರಿಸಿಕೊಳ್ಳುತ್ತಿದೆ, ಇದರಿಂದಾಗಿ ಪ್ರಾಂತೀಯ ಮತ್ತು ಜಾಗತಿಕ ಶಾಂತಿಗೆ ಧಕ್ಕೆಯಾಗಲಿದೆ ಎಂದು ಆರೋಪಿಸಿತು. 2002ರ 'ಸ್ಟೇಟ್ ಆಫ್ ಯೂನಿಯನ್' ಭಾಷಣದಲ್ಲಿ ಉಗ್ರ ಚಟುವಟಿಕೆಗಳ ಬಗ್ಗೆ ಕಠಿಣ ಭಾಷೆ ಪ್ರಯೋಗಿಸಿದ ಅಧ್ಯಕ್ಷ ಬುಷ್, ಇರಾಕ್, ಇರಾನ್ ಮತ್ತು ಉತ್ತರ ಕೊರಿಯಾವನ್ನು 'Axis of Evil' ಎಂದು ಕರೆದರು.

2003ರ ಮಾರ್ಚ್ 17ರಂದು ಇರಾಕ್ ತೊರೆಯಲು ಸದ್ದಾಂಗೆ 48 ಗಂಟೆಗಳ ಕೊನೆಯ ಅವಕಾಶ ನೀಡಲಾಯಿತು. ಅದನ್ನು ಸದ್ದಾಂ ಉಪೇಕ್ಷಿಸಿದಾಗ ಮಾರ್ಚ್ 19ರಂದು ಇರಾಕ್ ಮೇಲೆ ಬುಷ್ ಯುದ್ಧ ಘೋಷಿಸಿದರು. ಇಂಗ್ಲೆಂಡ್, ಆಸ್ಟ್ರೇಲಿಯಾ ಮತ್ತು ಪೋಲೆಂಡ್ ದೇಶವು ಅಮೆರಿಕದ ಜೊತೆಯಾದವು. ಕುವೈತ್ ತನ್ನ ಮೂಲಕ ಕಾರ್ಯಾಚರಣೆ ನಡೆಸಲು ಅನುಮತಿಸಿತು. ಸ್ಪೇನ್ ಮತ್ತು ಇಟಲಿ ರಾಜತಾಂತ್ರಿಕ ಸಹಕಾರ ನೀಡಿದವು. ಅಮೆರಿಕಕ್ಕೆ ತಾಗಿಕೊಂಡಿರುವ ಕೆನಡಾ ಮತ್ತು ಮೆಕ್ಸಿಕೊ, ಐರೋಪ್ಯ ಒಕ್ಕೂಟದ ಪ್ರಮುಖ ರಾಷ್ಟ್ರಗಳಾದ ಜರ್ಮನಿ ಮತ್ತು ಫ್ರಾನ್ಸ್ ಅಮೆರಿಕದ ಜೊತೆಯಾಗಲು ನಿರಾಕರಿಸಿದವು.

ಅದು ಭಾರತ ಮತ್ತು ಅಮೆರಿಕ ದ್ವಿಪಕ್ಷೀಯವಾಗಿ ಉತ್ತಮ ಸಂಬಂಧ ಹೊಂದುವ ಹಾದಿಯಲ್ಲಿ ಮೊದಲ ಹೆಜ್ಜೆ ಇಡುತ್ತಿದ್ದ ವರ್ಷಗಳು. ಇರಾಕ್ ಯುದ್ಧದಲ್ಲಿ ಭಾರತ ನೇರವಾಗಿ ಪಾಲ್ಗೊಳ್ಳಬೇಕು ಎಂಬ ಒತ್ತಡ ಅಮೆರಿಕದಿಂದ ಬಂತು. ಅಮೆರಿಕದ ಒತ್ತಡಕ್ಕೆ ಅಂದಿನ ಪ್ರಧಾನಿ ವಾಜಪೇಯಿ ಅವರು ಮಣಿಯಲಿಲ್ಲ. ಭಾರತದ ಸೇನೆಯನ್ನು ಇರಾಕಿಗೆ ಕಳುಹಿಸುವುದು ಭಾರತದ ಹಿತಾಸಕ್ತಿಗೆ ಪೂರಕವಲ್ಲ ಎಂಬ ನಿಲುವನ್ನು ಸರ್ಕಾರ ತಳೆಯಿತು. ಈ ನಿಲುವಿಗೆ ಭಾರತದ ಒಳಗೆ ಮತ್ತು ಹೊರಗೆ ವಿರೋಧ ವ್ಯಕ್ತವಾಯಿತು. ಅಮೆರಿಕದೊಂದಿಗೆ ಸಂಬಂಧ ವೃದ್ಧಿಸಿಕೊಳ್ಳುವ ಮತ್ತು ಜಾಗತಿಕ ವೇದಿಕೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುವ ಅವಕಾಶವನ್ನು ಭಾರತ ಕಳೆದುಕೊಳ್ಳುತ್ತಿದೆ ಎಂಬ ಟೀಕೆ ಬಂತು. ಆದರೆ ಸರ್ಕಾರ ನಿಲುವು ಬದಲಿಸಲಿಲ್ಲ. ಕಾರ್ಯಾಚರಣೆ ಆರಂಭವಾದ 42 ದಿನಗಳ ಬಳಿಕ ಸದ್ದಾಂ ಹುಸೇನ್‌ನನ್ನು ಸೆರೆಹಿಡಿಯಲಾಯಿತು. ಸಾಮೂಹಿಕ ಹತ್ಯೆ ಮತ್ತು ಇತರ ಅಪರಾಧಗಳ ಕಾರಣಕ್ಕೆ ಆತನನ್ನು ಗಲ್ಲಿಗೇರಿಸಲಾಯಿತು. ಆದರೆ ರಾಸಾಯನಿಕ, ಜೈವಿಕ ಅಥವಾ ಪರಮಾಣು ಅಸ್ತ್ರಗಳು ಇರಾಕ್‌ನಲ್ಲಿ ಪತ್ತೆಯಾಗಲಿಲ್ಲ!

ಸದ್ದಾಂ ಹುಸೇನ್ ಬಳಿಕ ಇರಾಕ್ ಗವರ್ನಿಂಗ್ ಕೌನ್ಸಿಲ್ ಆಡಳಿತದ ಚುಕ್ಕಾಣಿ ಹಿಡಿಯಿತು. ನೂತನ ಸಂವಿಧಾನವನ್ನು ಇರಾಕ್ ಅಂಗೀಕರಿಸಿತು. ಚುನಾವಣೆ ನಡೆದು ಪ್ರಜಾಸರ್ಕಾರ ಅಸ್ತಿತ್ವಕ್ಕೆ ಬಂದಿತು. ಆದರೆ ಆಳದಲ್ಲಿ ಇದ್ದ ಜನಾಂಗೀಯ ದ್ವೇಷ ಮಾಸಲಿಲ್ಲ. ಸುನ್ನಿ, ಶಿಯಾ ಮತ್ತು ಕುರ್ದಿಶ್ ಮುಸಲ್ಮಾನ ಪಂಗಡಗಳ ನಡುವೆ ಅಗೋಚರ ಗೋಡೆ ಇದ್ದೇ ಇತ್ತು. 2011ರಲ್ಲಿ ಅಮೆರಿಕದ ಸೇನೆ ಇರಾಕ್‌ನಿಂದ ಕಾಲ್ತೆಗೆಯುತ್ತಿದ್ದಂತೆಯೇ ಶಿಯಾ ಮತ್ತು ಸುನ್ನಿ ಪಂಗಡಗಳ ನಡುವೆ ಸಂಘರ್ಷ ಹೆಚ್ಚಿತು. ಆಂತರಿಕ ಯುದ್ಧ ಇಸ್ಲಾಮಿಕ್ ಸ್ಟೇಟ್ ಉಗ್ರ ಸಂಘಟನೆ ವಿಸ್ತಾರಗೊಳ್ಳಲು ಜಾಗ ಒದಗಿಸಿತು. ಸದ್ದಾಂ ಹುಸೇನ್ ಸರ್ವಾಧಿಕಾರದಿಂದ ಇರಾಕ್ ಬಿಡುಗಡೆಗೊಂಡರೂ ರಾಜಕೀಯ ಸ್ಥಿರತೆ ಸಾಧ್ಯವಾಗಲಿಲ್ಲ. ಜನಜೀವನ ನೆಮ್ಮದಿ ಕಾಣಲಿಲ್ಲ.

ಇತ್ತ ಅಮೆರಿಕ ದೊಡ್ಡ ಸಂಖ್ಯೆಯ ಯೋಧರನ್ನು ಯುದ್ಧದಲ್ಲಿ ಕಳೆದುಕೊಂಡಿತು. ಇರಾಕ್ ಮತ್ತು ಅಫ್ಗಾನಿಸ್ತಾನಕ್ಕೆ ಅಮೆರಿಕದ ಸೇನೆಯನ್ನು ಕಳುಹಿಸಿ ಆತುರ ಮಾಡಿದರು ಎಂಬ ಆರೋಪ ಅಧ್ಯಕ್ಷ ಬುಷ್ ಮೇಲೆ ಬಂತು. 'ಯುದ್ಧಮೋಹಿ' ಎಂದು ಅವರನ್ನು ಟೀಕಿಸಲಾಯಿತು. ಆದರೆ ಇರಾಕ್ ಯುದ್ಧ ಚಾಲ್ತಿಯಲ್ಲಿರುವಾಗಲೇ ಬುಷ್ ಎರಡನೇ ಅವಧಿಗೆ ಅಮೆರಿಕದ ಅಧ್ಯಕ್ಷರಾಗಿ ಆಯ್ಕೆಗೊಂಡರು! 2005ರಲ್ಲಿ ಅಮೆರಿಕದ ಅಧ್ಯಕ್ಷೀಯ ನಿಯೋಗ ಇರಾಕ್ ಸಮೂಹ ವಿನಾಶದ ಶಸ್ತ್ರಾಸ್ತ್ರಗಳನ್ನು ಹೊಂದಿತ್ತೇ ಎಂಬ ಕುರಿತು ತನಿಖೆ ನಡೆಸಿ, ಗುಪ್ತಚರ ಇಲಾಖೆ ಮಿಥ್ಯಾರೋಪ ಮಾಡಿತ್ತು ಎಂದು ವರದಿ ನೀಡಿತು. ಇಂದಿಗೂ ಇರಾಕ್ ಯುದ್ಧದ ವಿಷಯ ಬಂದರೆ ಅಮೆರಿಕನ್ನರು ಹೇಳುವುದು ಹೀಗೆ 'Bush lied and people died'.

ಚುರುಮುರಿ

(ಯು)ಗಾದಿ ತೊಡಕು!

• ತುರುವೇಕೆರೆ ಪ್ರಸಾದ್

'ಯಾಕೋ ವರ್ಷ ತೊಡಕಿನ ದಿನನೇ ಹಳೇದೆಲ್ಲಾ ತಡವಿಕೊಂಡು ಕೂತಿರೋ ಹಾಗಿದೆ. ಏನೂ ಇಲ್ವಾ ಸ್ಪೆಶಲ್ಲು?' ಮಾತು ತೆಗೆದ ಗುದ್ಲಿಂಗ ಹರಟೆ ಕಟ್ಟೇಲಿ.

'ಅಯ್ಯೋ, ಯಾವ ಸ್ಪೆಶಲ್ಲೂ ಇಲ್ಲ, ತಲೆ ಮೇಲೆ ಬಿದ್ದಿದೆ ಚಪ್ಪಡಿ ಕಲ್ಲು. ವರ್ಷತೊಡಕು ಬಿಡಿಸಲಾಗದ ಸೊಡಕು ಆಗೈತೆ...! ನಮ್ ನಾಯಕ್ರು ಮುಂದಿನ ಯುಗಾದಿಗೆ ಮತ್ತೆ ಗಾದಿ ಮೇಲೆ ಕುಂತ್ಕಬೇಕು ಅಂತಾವ್ರೆ. ಅವರಿಗೆ 74 ವರ್ಷ 360 ದಿನ ಆಗೈತೆ. ಅಂಗಾಗಿ ಈ ಬಾರಿ ಕಂಟೆಸ್ಟ್ ಮಾಡಾದ್ ಬೇಡ ಅಂತ ಹೈಕಮಾಂಡ್ ತೊಡ್ರುಗಾಲು ಕೊಟ್ಟೈತೆ' ಎಂದ ಮಾಲಿಂಗ.

'ಸರಿ ಅವರ ಮಗ ಇದಾರಲ್ಲ, ಅವರಿಗೇ ಟಿಕೆಟ್ ಕೊಡ್ಸುದ್ರಾಯ್ತು'.

'ಅಯ್ಯೋ ಅವರ ಎಂಡ್ರು ನಾನೇ ನಿಂತ್ಕತೀನಿ ಅಂತ ತೊಡ್ರುಗಾಲ್ ಕೊಡ್ತಾವ್ರೆ'.

'ಅಯ್ಯೋ ಹೌದಾ? ಹಂಗಾದ್ರೆ ಎರಡೂ ದದ್ದ ಹೊರಕ್ ಹಾಕು ಅನ್ನೋಅಂಗೆ ಪರಂದಾಮಯ್ಯಂಗೇ ಸೀಟು ಸಿಗೋದು ಅನ್ಸುತ್ತೆ'.

'ಅಂಗಾಗ್‌ಬಾರ್ದು, ಜನನ್ ಸೇರ್ಸಿ ಹೈಕಮಾಂಡ್ಗೆ ಒತ್ತಡ ತರಾಣ ಅಂದ್ರೆ ಎಲೆಕ್ಷನ್ ಕಮಿಷನ್ನೋರು ತೊಡ್ರುಗಾಲು ಹಾಕ್ತಾವ್ರೆ. ಲೋಕಲ್ಲಲ್ಲೂ ಅಲ್ಲಾಡದಂಗೆ ಆಗೋಗೈತೆ. ನಾಯಕ್ರು ನನ್ ಮೇಲೆ ನಂಬ್ಕೆ ಮಡಗಿ ಭಾರೀ ಟಾಸ್ಕ್ ಕೊಟ್ಟವ್ರೆ. ಆದ್ರೆ ಸೀರೆ, ಪಂಚೆ, ಮೂಗ್‌ಬಟ್ಟು, ಲಿಖ್ಖುರು, ಕುಕ್ಕರ್ರು ಏನೂ ಹಂಚೋಕೇ ಆಯ್ತಿಲ್ಲ. ಬೇರೆ ಪಾರ್ಟಿಯೋರು ಕಣ್ ಕಿಸ್ಕೊಂಡು ಕಾಯ್ತಾವ್ರೆ. ಆ ಬದ್ಮಾಶ್ ನನ್ಮಗ ಕೊಟ್ರೇಶಿ ನಂಗ್ ಶಾನೆ ಕಾಲೆಳೀತಾವ್ನೆ'.

'ಅವ್ನು ನಿಮ್ ಪಾರ್ಟಿಲೇ ಇದ್ನಲ್ಲ...'

'ಆಪರೇಶನ್ ಕಮಲ ಆದ್ಮೇಲೆ ಆ ಕುಯ್ದೆತ್ತು ಗುಂಜಪ್ಪನ ಬಾಲ ಹಿಡ್ಕೊಂಡ್ ಹೋಗವ್ನೆ. ಐನಾತಿ ಬಡ್ಡಿಮಗಂಗೆ ನಮ್ ಪಟ್ಟು, ಜುಟ್ಟು ಎಲ್ಲಾ ಗೊತ್ತೈತೆ. ಎಲ್ ಹೋದ್ರೂ ತೊಡ್ರುಗಾಲ್ ಕೊಡ್ತಾವ್ನೆ. ಇದಕ್ಕೆ ಏನರಾ ಉಪಾಯ ಮಾಡ್ಬೇಕಲ್ಲ?'

'ಈಗ ನಿಂಗ್ ಹಂಚಕ್ಕೆ ಕೊಟ್ಟಿರೋದೆಲ್ಲಾ ಎಲ್ಲಿವೆ?'

'ನಮ್ ತ್ವಾಟದ ಮನೇಲೈತೆ'.

'ನಡೀಮತ್ತೆ, ಒಂದು ಕ್ವಾಟ್ರು ಹಾಕ್ಕಂಡು ಒಂದು ಕೋಳಿಕಾಲು ಕಡೀತಿದ್ರೆ ಎಲ್ಲ ಉಪಾಯನೂ ಉದುರ್ತಾವೆ' ಎಲ್ಲಾ ಹುರ್ರೇ ಎಂದು ಕೂಗುತ್ತಾ ಪಂಚೆ ಕೊಡವಿ ಮೇಲೆದ್ದರು.

ಸಂಗತ

ಮಗುವಿಗೊಂದು ಮಗು, ಕಳೆಯುವುದು ನಗು

ಸ್ವತಃ ಬೆಳವಣಿಗೆಯ ಹಂತದಲ್ಲಿ ಇರುವ ಹದಿಹರೆಯದ ಹುಡುಗಿ, ಇನ್ನೊಂದು ಜೀವವನ್ನು ತನ್ನ ಉದರದಲ್ಲಿ ಪೋಷಿಸುವಷ್ಟು ಶಕ್ತಳಾಗಿರಲು ಸಾಧ್ಯವೇ?

• ಡಾ. ಕೆ.ಎಸ್.ಚೈತ್ರಾ

ಮಹಾರಾಷ್ಟ್ರದ 16 ಜಿಲ್ಲೆಗಳಲ್ಲಿ ಮೂರು ವರ್ಷಗಳಲ್ಲಿ 15 ಸಾವಿರಕ್ಕೂ ಹೆಚ್ಚು ಹೆಣ್ಣುಮಕ್ಕಳು 18 ವರ್ಷ ತುಂಬುವ ಮೊದಲೇ ತಾಯಂದಿರಾಗಿದ್ದಾರೆ ಎಂದು ಪತ್ರಿಕೆಯಲ್ಲಿ ಓದಿ ಗಾಬರಿಯಾಗಿದ್ದೆ. ಅಷ್ಟರಲ್ಲಿ 'ನಾಲ್ಕು ದಿವಸ ಕೆಲಸಕ್ಕೆ ರಜಾ ಬೇಕು, ಅಕ್ಕನ ಮಗಳ ಸೀಮಂತಕ್ಕೆ' ಎಂಬ, ಮನೆಯ ಸಹಾಯಕಿಯ ಬೇಡಿಕೆ ಕೇಳಿ ಆಶ್ಚರ್ಯವಾಯಿತು.

ನಾಲ್ಕು ವರ್ಷಗಳ ಹಿಂದೆ ರಜೆಗೆ ಬಂದಿದ್ದ, ಆರನೇ ತರಗತಿ ಓದುತ್ತಿದ್ದ, ಎರಡು ಜಡೆ ಹಾಕಿದ್ದ ಪುಟ್ಟ ಹುಡುಗಿಯ ನೆನಪಿತ್ತು. ಸಂಶಯದಿಂದಲೇ ಆ ಪುಟ್ಟ ಹುಡುಗಿಗೆ ಸೀಮಂತವೇ ಎಂದು ಕೇಳಿದಾಗ ಹೌದೆಂದಳು. ಸಿಟ್ಟಿನಿಂದ 'ಹದಿನೆಂಟೂ ದಾಟದ ಹುಡುಗಿ ತಾಯಿಯಾಗುವುದೇ' ಎಂದೆ. 'ಅಯ್ಯೋ, ಕರೋನಾ ಸಮಯದಲ್ಲಿ ಶಾಲೆಯೇ ಇರಲಿಲ್ಲ. ಇದ್ರೂ ಹುಡ್ಗಿ ಓದಿ ನಮ್ಮನ್ನು ಸಾಕಬೇಕೇ ಅಂತಾರೆ ಅವ್ರು. ಹೊಲದ ದುಡಿಮೆಯೂ ಅಷ್ಟಕ್ಕಷ್ಟೇ. ಅಷ್ಟರಲ್ಲಿ ನಮ್ಮ ಸಂಬಂಧಿಕರೇ ಆದ ಹುಡುಗ ಮದುವೆಯಾಗ್ತೀನಿ ಅಂತ ಕೇಳಿದ. ಒಳ್ಳೆ ಆಸ್ತಿಪಾಸ್ತಿ ಇದ್ದಂವ. ಕರೋನಾ ಅಂದ್ರೆ ಯಾರೂ ಬರೋಕ್ಕಿಲ್ಲ, ಖರ್ಚೂ ಉಳೀತು. ಹಂಗಾಗಿ, ಅವ್ನಿಗೆ ಮೂವತ್ತು ವರ್ಷವಾದ್ರೂ ಪರವಾಗಿಲ್ಲ ಅಂತ ಊರವರೆಲ್ಲಾ ತೀರ್ಮಾನಿಸಿ ಮದುವೆ ಮಾಡಿಬಿಟ್ರು. ಕರೋನ ಇದ್ದಿದ್ದರಿಂದ ನಮಗೂ ವಿಷ್ಯ ತಿಳಿಸಲಿಲ್ಲ. ತಡೆಯುವವರು ಯಾರೂ ಇರಲಿಲ್ಲ. ಈಗ ಅವಳದ್ದೇ ಸೀಮಂತ' ಎಂದು ಸ್ವಲ್ಪ ಬೇಸರದಿಂದಲೇ ಹೇಳಿದಳು.

ಕೋವಿಡ್ ಸಮಯದಲ್ಲಿ 2020-21ರಲ್ಲಿ ರಾಜ್ಯದಲ್ಲಿ 296 ಬಾಲ್ಯವಿವಾಹಗಳು ವರದಿಯಾಗಿದ್ದು, ಇದು ಹಿಂದಿನ ವರ್ಷಕ್ಕಿಂತ ದುಪ್ಪಟ್ಟು. ವರ್ಷದಿಂದ ವರ್ಷಕ್ಕೆ ಈ ಸಂಖ್ಯೆ ಏರಿಕೆಯಾಗುತ್ತಲೇ ಇದೆ! ಹಾಗೆ ನೋಡಿದರೆ ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ ಪ್ರಕಾರ, 2020ರಲ್ಲಿ ಬಾಲ್ಯವಿವಾಹದ ವಿಷಯಕ್ಕೆ ಬಂದರೆ ಕರ್ನಾಟಕವು, ಭಾರತದ ರಾಜ್ಯಗಳ ಪಟ್ಟಿಯಲ್ಲಿ ಅಗ್ರ ಸ್ಥಾನದಲ್ಲಿದೆ! ಬಡತನ, ಶಿಕ್ಷಣದ ಕೊರತೆ, ಮನೆಯಲ್ಲಿನ ಜವಾಬ್ದಾರಿ, ತಮ್ಮ ಕರ್ತವ್ಯ ಮುಗಿಸುವ ಆತುರ, ಹೆಣ್ಣು ಪರರ ವಸ್ತು ಎಂಬ ಮೌಢ್ಯ, ಕಾನೂನಿನ ಬಗ್ಗೆ ಅಜ್ಞಾನ ಇವೆಲ್ಲವೂ ಬಾಲ್ಯವಿವಾಹಕ್ಕೆ ಕಾರಣಗಳು.

ಬಾಲ್ಯವಿವಾಹದ ಪ್ರಮುಖ ದುಷ್ಪರಿಣಾಮಗಳಲ್ಲೊಂದು ಹದಿಹರೆಯದಲ್ಲೇ ತಾಯ್ತನ. ತಾಯಿಯಾಗಲು ದೇಹ ಮತ್ತು ಮನಸ್ಸು ಎರಡೂ ಆರೋಗ್ಯವಾಗಿರಬೇಕು. ಪ್ರಪಂಚಜ್ಞಾನವೇ ಅಷ್ಟಾಗಿ ಇರದ, ಆಡುವ, ಶಾಲೆಗೆ ಹೋಗುವ ಮಕ್ಕಳಿಗೆ ಮದುವೆ ಮಾಡಿದಾಗ ಲೈಂಗಿಕ ಜ್ಞಾನ ಇರುವುದು ಸಾಧ್ಯವೇ? ಭಾರತದಲ್ಲಿ ಶೇಕಡ 70ಕ್ಕೂ ಹೆಚ್ಚು ಹದಿಹರೆಯದ ಹೆಣ್ಣುಮಕ್ಕಳು ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಹದಿಹರೆಯದ ಹುಡುಗಿ ಸ್ವತಃ ಬೆಳವಣಿಗೆಯ ಹಂತದಲ್ಲಿ ಇರುತ್ತಾಳೆ. ಇನ್ನೂ ಸಂಪೂರ್ಣವಾಗಿ ಬೆಳೆಯದ ಗರ್ಭಕೋಶ ಮತ್ತು ಇತರ ಅಂಗಾಂಗಗಳು, ಸೂಕ್ಷ್ಮ ಮನಸ್ಸಿನ ಆಕೆ ಇನ್ನೊಂದು ಜೀವವನ್ನು ತನ್ನ ಉದರದಲ್ಲಿ ಪೋಷಿಸಲು ಶಕ್ತಳಲ್ಲ. ಆದರೂ ಗರ್ಭಿಣಿಯಾದಾಗ, ದೇಹದಲ್ಲಿ ಪೌಷ್ಟಿಕಾಂಶಗಳ ಕೊರತೆ ಉಂಟಾಗುತ್ತದೆ. ಇದು ತಾಯಿ ಮತ್ತು ಮಗು ಇಬ್ಬರ ಮೇಲೂ ವ್ಯತಿರಿಕ್ತ ಪರಿಣಾಮ ಬೀರುತ್ತದೆ.

ಅವಧಿಗೆ ಮುನ್ನವೇ ಹೆರಿಗೆ, ಕಷ್ಟಕರ ಹೆರಿಗೆ, ಹೆರಿಗೆಯ ವೇಳೆಗೆ ಅಧಿಕ ರಕ್ತಸ್ರಾವ, ನಂತರ ಸೋಂಕು, ಖಿನ್ನತೆ, ಹಾಲೂಡಿಸಲು ತೊಂದರೆ ಇವೆಲ್ಲವೂ ಸಾಮಾನ್ಯ. ಹಾಗೆಯೇ ಹುಟ್ಟಿದ ಮಕ್ಕಳಲ್ಲಿ ಕಡಿಮೆ ತೂಕ, ಬೆಳವಣಿಗೆಯ ತೊಂದರೆ ಇರುವ ಸಾಧ್ಯತೆಯೂ ಹೆಚ್ಚು. ಇವೆಲ್ಲವೂ ತಾಯಿ ಮತ್ತು ಶಿಶುವಿನ ಮರಣಕ್ಕೆ ಕಾರಣವಾಗಬಹುದು.



ಈ ಸಾಮಾಜಿಕ ಪಿಡುಗನ್ನು ತಡೆಗಟ್ಟಲು ಅರಿವು, ತಿಳಿವಳಿಕೆಯ ಜೊತೆ ಭಯವನ್ನು ಮೂಡಿಸಲು ಸರ್ಕಾರ ಬಹಳಷ್ಟು ಕಠಿಣ ಕ್ರಮಗಳನ್ನು ಕೈಗೊಂಡಿದೆ. ಬಾಲ್ಯವಿವಾಹವನ್ನು ಅಪರಾಧ ಎಂದು ಪರಿಗಣಿಸಿ, ಅದನ್ನು ಮಾಡುವ ಪೋಷಕರಿಗಲ್ಲದೆ ಪ್ರೋತ್ಸಾಹಿಸುವವರಿಗೂ ಶಿಕ್ಷೆಯನ್ನು ನೀಡುತ್ತಿದೆ. ಆದರೂ ಈ ಬಾಲ್ಯವಿವಾಹ ವಿಶೇಷವಾಗಿ ಗಡಿ ಜಿಲ್ಲೆಗಳಲ್ಲಿ ಹೆಚ್ಚುತ್ತಿರುವುದು ಆತಂಕ ಮೂಡಿಸುತ್ತಿದೆ. ಕಾನೂನುಪಾಲನೆಯಲ್ಲಿ ಸಮಸ್ಯೆಯೇ ಅಥವಾ ಇಲಾಖೆಗಳಲ್ಲಿ ಸರಿಯಾಗಿ ಕಾರ್ಯನಿರ್ವಹಣೆ ಆಗುತ್ತಿಲ್ಲವೇ ಎಂದು ವಿಚಾರಿಸಿದರೆ ಅಧಿಕಾರಿಗಳ ಉತ್ತರ ಹೀಗಿದೆ 'ಸತತ ಪ್ರಯತ್ನ ಮಾಡುತ್ತಲೇ ಇದ್ದೇವೆ. ದುಃಖಕರ ವಿಷಯವೆಂದರೆ, ಗ್ರಾಮಸ್ಥರೇ ಒಟ್ಟಾಗಿ ಬಂದು, ನೀವು ಯಾರು ಕೇಳೋಕೆ ಅಂತಾರೆ. ತಂದೆ ತಾಯಿಯು ಹುಡುಗಿಯ ವಯಸ್ಸಿನ ಬಗ್ಗೆ ಸುಳ್ಳು ಹೇಳುತ್ತಾರೆ. ಶಾಲೆ ಬಿಡಿಸುತ್ತಾರೆ. ಮಕ್ಕಳಿಗೆ ಏನೇನೋ ಆಸೆ ತೋರಿಸಿ, ಮದುವೆ ಎಂದರೆ ಸುಖ ಎಂದು ನಂಬಿಸುತ್ತಾರೆ. ಇದರ ಜತೆ ಬೇಸರವೆಂದರೆ ಜನರ ಬೆಂಬಲ, ಆ ಮೂಲಕ ವೋಟು ಗಳಿಸಲು ಸ್ವತಃ ರಾಜಕಾರಣಿಗಳು, ಪ್ರಭಾವಿ ವ್ಯಕ್ತಿಗಳೂ ಇಂಥ ಮದುವೆಗಳಲ್ಲಿ ಪಾಲ್ಗೊಳ್ಳುತ್ತಾರೆ. ಇನ್ನಂತೂ ಎಲೆಕ್ಷನ್ ಟೈಮ್. ಸರಿ-ತಪ್ಪು ಎಂಬುದಿಲ್ಲ. ವೋಟಿಗಾಗಿ ಎಲ್ಲವೂ ಸರಿ. ಆ ವಿಷಯದಲ್ಲಿ ನಾವು ಅಸಹಾಯಕರು. ಜನರ ಬೆಂಬಲ ಇಲ್ಲದೆ ನಾವು ಏನನ್ನೂ ಮಾಡುವಂತಿಲ್ಲ'.

ಅಂತರರಾಷ್ಟ್ರೀಯ ಮಹಿಳಾ ದಿನದ ಈ ವರ್ಷದ ಘೋಷಣೆ 'ಎಂಬ್ರೇಸ್ ಈಕ್ವಿಟಿ' ಅಂದರೆ ಸಮತೆ, ನ್ಯಾಯಪರತೆಯನ್ನು ನಮ್ಮದಾಗಿಸಿಕೊಳ್ಳೋಣ ಎಂಬುದಾಗಿದೆ. ತಾಯಿಯ ಗರ್ಭದಲ್ಲಿರುವ ಸಮಯದಿಂದ ಮಣ್ಣಾಗುವತನಕ ಮಹಿಳೆ ಸವಾಲುಗಳನ್ನು ಎದುರಿಸುತ್ತಲೇ ಇರುತ್ತಾಳೆ. ಅವುಗಳಲ್ಲೊಂದು ಈ ಬಾಲ್ಯವಿವಾಹ ಮತ್ತು ಹದಿಹರೆಯದ ತಾಯ್ತನ. ಅವನ್ನು ತಡೆಗಟ್ಟಲು ಹೆಣ್ಣುಮಕ್ಕಳಿಗೆ ಶಿಕ್ಷಣ ಸಿಗಬೇಕು. ತಮಗಿರುವ ಹಕ್ಕುಗಳ ಕುರಿತಾದ ಅರಿವು ಮೂಡಬೇಕು. ಸ್ವಾವಲಂಬಿ ಬದುಕನ್ನು ನಡೆಸಲು, ತನ್ನ ಆರೋಗ್ಯದ ಬಗ್ಗೆ ಮಹಿಳೆ ಹೆಚ್ಚಿನ ತಿಳಿವಳಿಕೆ ಪಡೆಯಲು ಸಾಧ್ಯವಾಗಬೇಕು. ಅದರಲ್ಲಿ ನಮ್ಮೆಲ್ಲರ ಪಾತ್ರವೂ ಇದೆ!

ವಾಚಕರ ವಾಣಿ

ಇದು ಗ್ರಾಹಕರ ಹಕ್ಕಿನ ಉಲ್ಲಂಘನೆ

ಸ್ಮಾರ್ಟ್‌ಫೋನ್‌ಗಳಲ್ಲಿ ಕಂಪನಿಗಳು ಮೊದಲೇ ಇನ್‌ಸ್ಟಾಲ್ ಮಾಡಿರುವ ಆ್ಯಪ್‌ಗಳನ್ನು ತೆಗೆದುಹಾಕುವ ಆಯ್ಕೆಯನ್ನು ಕಡ್ಡಾಯ ಮಾಡಲು ಸರ್ಕಾರ ಚಿಂತನೆ ನಡೆಸಿರುವುದು (ಪ್ರ.ವಾ., ಮಾರ್ಚ್ 15) ಸ್ವಾಗತಾರ್ಹ. ಈಗ ಫೋನ್‌ಗಳಲ್ಲಿ ದಿನಬೆಳಗಾಗುವಷ್ಟರಲ್ಲಿ ಹೊಸ ಹೊಸ ಆ್ಯಪ್‌ಗಳು ಸೇರಿಕೊಳ್ಳುತ್ತಿವೆ. ಬಹಳಷ್ಟು ವೇಳೆ ಈ ಆ್ಯಪ್‌ಗಳು ಪ್ರತ್ಯಕ್ಷವಾಗಿ ಇನ್‌ಸ್ಟಾಲ್ ಮಾಡಲು ಕೋರುತ್ತವೆ. ಪ್ರೆಸ್ 'ಓಕೆ' ಎಂದು ಬರುತ್ತದೆ. ಆದರೆ ಅದನ್ನು ಬೇಡ ಎನ್ನಲು ಆಯ್ಕೆಯೇ ಇರದೆ ಅನಿವಾರ್ಯವಾಗಿ ಇನ್‌ಸ್ಟಾಲ್ ಮಾಡಬೇಕಾದ ಪ್ರಮೇಯ ಬರುತ್ತದೆ (ಆಗ ಫೋನ್ ಅನ್ನು ಸ್ವಿಚ್ ಆಫ್ ಮಾಡಬೇಕಾಗುತ್ತದೆ). ನಮಗೆ ಈ ಆ್ಯಪ್‌ಗಳ ಅಗತ್ಯವೇ ಇರುವುದಿಲ್ಲ. ಅಲ್ಲದೆ ಇಂತಹ ಬಹಳಷ್ಟು ಆ್ಯಪ್‌ಗಳನ್ನು ಅನ್‌ಇನ್‌ಸ್ಟಾಲ್ ಮಾಡಲು ಆಗುವುದೇ ಇಲ್ಲ. ಇದು ಹೆಚ್ಚಿನ ಗ್ರಾಹಕರಿಗೆ ತಲೆನೋವು ಕೂಡ.

ಇಷ್ಟೇ ಅಲ್ಲದೆ ಈ ಆ್ಯಪ್‌ಗಳು ಸ್ಟೋರೇಜ್ ಸ್ಪೇಸ್ ಅನ್ನು ಆಕ್ರಮಿಸಿಕೊಳ್ಳುತ್ತವೆ. ಅಲ್ಲದೆ ಇವುಗಳಿಂದಾಗಿ ಇಂಟರ್ನೆಟ್ ಡೇಟಾ ಕೂಡ ಅನವಶ್ಯಕವಾಗಿ ಪೋಲಾಗುತ್ತದೆ. ಖಾಸಗಿತನಕ್ಕೆ ಧಕ್ಕೆಯಾಗುತ್ತದೆ ಎಂಬ ಕಾರಣಕ್ಕೆ ಸರ್ಕಾರವು ಇವುಗಳನ್ನು ಅನ್‌ಇನ್‌ಸ್ಟಾಲ್ ಮಾಡುವ ಆಯ್ಕೆಯನ್ನು ಗ್ರಾಹಕರಿಗೆ ನೀಡಲು ಚಿಂತನೆ ನಡೆಸಿರುವುದು ಸರಿಯಾದ ಕ್ರಮವಾಗಿದೆ. ತನಗೆ ಏನು ಬೇಕು ಎನ್ನುವುದನ್ನು ನಿರ್ಧರಿಸುವ ಹಕ್ಕು ಹಣ ಕೊಟ್ಟು ಖರೀದಿಸಿದ ಗ್ರಾಹಕನದಾಗಬೇಕೆ ವಿನಾ ಹಣ ಪಡೆದ ಕಂಪನಿಯದಾಗಬಾರದು. ಇದು ಗ್ರಾಹಕನ ಹಕ್ಕಿನ ಉಲ್ಲಂಘನೆ ಕೂಡ.

ಮುಳ್ಳೂರು ಪ್ರಕಾಶ್, ಮೈಸೂರು

ಅಕ್ರಮಗಳ ಆಗರವಾದ ಯೋಜನೆ

ಮನೆ ಮನೆಗೂ ನಲ್ಲಿಯ ಮೂಲಕ ಕುಡಿಯುವ ನೀರು ಒದಗಿಸುವ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆ ಜಲಜೀವನ್ ಮಿಷನ್ ಅಕ್ರಮಗಳ ಗೂಡಾಗಿದೆ. ರಾಜ್ಯದಲ್ಲಿ ಮೊದಲ ಹಂತದಲ್ಲಿ ಆಯ್ದ ಗ್ರಾಮ ಪಂಚಾಯಿತಿಗಳಲ್ಲಿ ಈ ಯೋಜನೆಯಡಿ ಮನೆ ಮನೆಗೂ ನಲ್ಲಿ ಅಳವಡಿಸಿ ನೀರು ಪೂರೈಸುವ ಈ ಯೋಜನೆಯಲ್ಲಿ ಅಧಿಕಾರಿಗಳ ಭ್ರಷ್ಟಾಚಾರದಿಂದ ಭಾರಿ ಪ್ರಮಾಣದಲ್ಲಿ ಹಣ ಪೋಲಾಗುತ್ತಿದೆ.

ಪೈಪ್‌ಲೈನ್ ಅನ್ನು ಭೂಮಿಯಲ್ಲಿ ಮೂರು ಅಡಿಗಿಂತಲೂ ಮೇಲೆ ಹಾಕಿರುವುದು, ಓವರ್‌ಹೆಡ್ ಟ್ಯಾಂಕ್‌ನಲ್ಲಿ ನೀರು ಸೋರಿಕೆಯಾಗುವಷ್ಟು ಕಳಪೆ ಗುಣಮಟ್ಟದ ಪೈಪ್ ಬಳಕೆ, ನಿರ್ಮಿಸಿದ ಪೈಪ್‌ಲೈನ್ ಉದ್ದಕ್ಕಿಂತ ಮೂರ್ನಾಲ್ಕು ಪಟ್ಟು ಹೆಚ್ಚು ಪೈಪ್‌ಲೈನ್ ಲೆಕ್ಕವನ್ನು ಬಿಲ್ ಫಾರ್ಮ್‌ನಲ್ಲಿ ನಮೂದಿಸಿ ಸರ್ಕಾರದ ಹಣ ಲೂಟಿ ಮಾಡಲಾಗುತ್ತಿದೆ. ಜಲಜೀವನ್ ಮಿಷನ್ ಯೋಜನೆಯಡಿ ಗ್ರಾಮವೊಂದರಲ್ಲಿ ಗುತ್ತಿಗೆದಾರರು ಮಾಡಿರುವ ಕಾಮಗಾರಿಯ ಬಿಲ್ ಫಾರ್ಮ್ ಹಿಡಿದು, ನಿರ್ಮಿಸಿರುವ ಪೈಪ್‌ಲೈನ್ ಕಾಮಗಾರಿಯನ್ನು ಅಳತೆ ಮಾಡಿದರೆ, ಕಿರಿಯ ಅಧಿಕಾರಿಯಿಂದ ಹಿಡಿದು ಹಿರಿಯ ಅಧಿಕಾರಿಗಳವರೆಗೆ ತಲೆದಂಡವಾಗುವುದು ಖಚಿತ.

ಲಕ್ಷ್ಮೀಕಾಂತರಾಜು ಎಂ.ಜಿ., ಮಠಗ್ರಾಮ

ಠೇವಣಿದಾರರ ಹಕ್ಕಿನ ನಿರಾಕರಣೆ

ಆಧಾರ್ ಕಾರ್ಡ್ ಹೊಂದುವುದು ಐಚ್ಛಿಕ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಸರ್ಕಾರಿ ನೆರವು, ಸಹಾಯಧನ ಯೋಜನೆಗಳ ವಿನಾ ಅನ್ಯಸೇವೆಗಳಿಗೆ ಆಧಾರ್ ಕಡ್ಡಾಯವಲ್ಲ ಎಂದು ಸಹ ತಿಳಿಸಿದೆ. ಹೀಗಿರುವಾಗ, ಆಧಾರ್ ಜೊತೆ ಜೋಡಿಸದಿದ್ದರೆ ಪ್ಯಾನ್ ಕಾರ್ಡ್ ನಿಷ್ಕ್ರಿಯವಾಗುವುದೆಂದು ಸರ್ಕಾರ ಆದೇಶ ಹೊರಡಿಸಿರುವುದು ಕೋರ್ಟ್ ತೀರ್ಪಿಗೆ ವಿರುದ್ಧವಾಗಿದೆ. ಅದಕ್ಕಾಗಿ ಶುಲ್ಕ ಅಥವಾ ದಂಡ ವಿಧಿಸುವ ಅಧಿಕಾರವೂ ಸರ್ಕಾರಕ್ಕಿಲ್ಲ. ಆಧಾರ್ ಕಾರ್ಡ್ ಹೊಂದುವುದು ಐಚ್ಛಿಕವಾಗಿರುವಾಗ, ಅದರ ಜೋಡಣೆ ಹೊಂದಿರದ ಪ್ಯಾನ್ ನಿಷ್ಕ್ರಿಯವಾಗುವ ಮೂಲಕ ಬ್ಯಾಂಕ್ ಠೇವಣಿ ವ್ಯವಹಾರಗಳಿಗೆ ತಡೆಯುಂಟಾದರೆ ಅದು ಠೇವಣಿದಾರರ ಹಕ್ಕಿನ ನಿರಾಕರಣೆ ಆಗುತ್ತದೆ. ಸರ್ಕಾರ ಈ ಸೂಕ್ಷ್ಮವನ್ನು ಗಮನಿಸಲಿ. ನಮ್ಮ ರಾಜ್ಯ ನಾಯಕರು ಕೇಂದ್ರ ಸರ್ಕಾರವನ್ನು ಸಂಪರ್ಕಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಮಾಡಲಿ.

ಎ.ಆರ್.ಸೋಮಯಾಜಿ, ಬೆಂಗಳೂರು

ವಿವಾಹ ಮಾಹಿತಿಗೆ ಸೃಷ್ಟಿಯಾಗಲಿ ವೆಬ್‌ಸೈಟ್

ಇತ್ತೀಚಿನ ದಿನಗಳಲ್ಲಿ ವಿವಾಹ ವಿಚ್ಛೇದನಗಳು ಹೆಚ್ಚಾಗುತ್ತಿರುವುದಕ್ಕೆ, ಮದುವೆಯ ಏಜೆಂಟರು 'ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡು' ಎಂಬ ಒಂದೇ ಸಾಲಿನ ನೀತಿಗೆ ಅಂಟಿಕೊಂಡಿರುವುದೇ ಕಾರಣ. ಸಾಮಾನ್ಯ ಕೆಲಸ ನಿರ್ವಹಿಸುವ ಗಂಡುಗಳಿಗೆ ಹೆಣ್ಣು ಕೊಡಲು ಹೆಣ್ಣಿನ ತಂದೆ ತಾಯಿ ಸುತರಾಂ ಒಪ್ಪುತ್ತಿಲ್ಲ. ಹೆಣ್ಣುಮಕ್ಕಳೇ ಶಿಕ್ಷಣದಲ್ಲಿ ಗಂಡುಮಕ್ಕಳಿಗಿಂತ ಮುಂದಿದ್ದಾರೆ. ಕೆಲವು ಗಂಡುಮಕ್ಕಳು ದುಶ್ಚಟಗಳಿಗೆ ದಾಸರಾಗಿರುತ್ತಾರೆ. ಇಂತಹ ಕಾರಣಗಳಿಂದ ಗಂಡಿಗೆ ಹೆಣ್ಣು ಹೊಂದಿಸುವುದೇ ಸವಾಲಾಗಿದೆ. ಇಂತಹ ನ್ಯೂನತೆಗಳನ್ನು ಬಳಸಿಕೊಳ್ಳುವ ಬ್ರೋಕರ್‌ಗಳು ಸುಳ್ಳುಗಳನ್ನು ವೈಭವೀಕರಿಸಿ ಮದುವೆ ಮಾಡಿಸಿಬಿಡುತ್ತಾರೆ. ಅದಕ್ಕೆ ಪೂರಕವಾಗಿ ಜಾತಕ, ಗಣಕೂಟ, ಅಷ್ಟೇ ಏಕೆ ಹೆಸರನ್ನೇ ಬದಲಿಸಿ ಮನವೊಲಿಸುವ ಕೆಲವು ಪುರೋಹಿತರು ಏಜೆಂಟುಗಳ ಮರ್ಜಿಯಲ್ಲಿರುತ್ತಾರೆ. ಈ ರೀತಿ ದಂಪತಿಗಳಾದವರು ನಂತರ ಪರಸ್ಪರ ವಿರೋಧಾಭಾಸಗಳಿಂದ ಜಗಳವಾಡಿಕೊಂಡು ಬೇರೆಯಾಗುತ್ತಾರೆ. ಒಗ್ಗೂಡಿಸುವ ಕೌಟುಂಬಿಕ ಸಂಧಾನಗಳು ಯಶಸ್ವಿಯಾಗುತ್ತಿಲ್ಲ.

ಹಾಗಾಗಿ ಮದುವೆಗಳು ಎಷ್ಟು ವಿಜೃಂಭಣೆಯಿಂದಾದರೂ ನಡೆಯಲಿ ಅದಕ್ಕೂ ಮುನ್ನ ಸ್ಥಳೀಯ ಸಂಸ್ಥೆಗಳಾದ ಗ್ರಾಮ ಪಂಚಾಯಿತಿ, ನಗರಸಭೆ, ಪುರಸಭೆಗಳಲ್ಲಿ ನೋಂದಣಿ ಮಾಡಿಸಲಿ. ಅದಕ್ಕಾಗಿ ಒಂದು ವೆಬ್‌ಸೈಟ್ ಸೃಷ್ಟಿಯಾಗಲಿ. ರಾಜ್ಯದಾದ್ಯಂತ ಅದು ಪರಿಶೀಲನೆಗೆ ಲಭ್ಯವಿರಲಿ. ಆಗಿರುವ ಮದುವೆಗಳು, ಮುಂದಿನ ಹದಿನೈದು ದಿನಗಳಲ್ಲಿ ಆಗಲಿರುವ ಮದುವೆಗಳು, ವಿಚ್ಛೇದಿತ ದಂಪತಿ, ವಿಚ್ಛೇದನಕ್ಕಾಗಿ ನ್ಯಾಯಾಲಯದಲ್ಲಿರುವ ದಂಪತಿ ಎಲ್ಲದರ ಬಗ್ಗೆಯೂ ಆ ವೆಬ್‌ಸೈಟ್‌ನಲ್ಲಿ ಮಾಹಿತಿ ಸಿಗಲಿ. ಇದರಿಂದ ಮದುವೆ ಆಗಿದ್ದರೂ ಮುಚ್ಚಿಟ್ಟು ಮತ್ತೊಂದು ಮದುವೆ ಆಗುವ ಪ್ರಕರಣಗಳಿಗೆ ಕಡಿವಾಣ ಬೀಳುತ್ತದೆ. ಬಾಲ್ಯವಿವಾಹಗಳಿಗೆ ಆಸ್ಪದವೇ ಇರುವುದಿಲ್ಲ. ನೋಂದಣಿ ಆಗದ ವಿವಾಹಗಳಿಗೆ ಕಾನೂನಿನ ಮಾನ್ಯತೆ ಬೇಡ. ನೋಂದಣಿ ಮಾಡಿಸಿಕೊಂಡು ಸರಳ ವಿವಾಹ ಮಾಡಿಕೊಳ್ಳುವವರಿಗೆ ಸರ್ಕಾರ ಪ್ರೋತ್ಸಾಹಧನ ನೀಡಲಿ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇತ್ತ ಗಮನಹರಿಸಲಿ ಅಥವಾ ವಿವಾಹಗಳಿಗೆ ಸಂಬಂಧಿಸಿದ ಸಚಿವಾಲಯ ಇದ್ದರೂ ಒಳ್ಳೆಯದೆ.

ಮಲ್ಲಿಕಾರ್ಜುನ, ಸುರಧೇನುಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಾಹುಲ್‌ಗೆ ಶಿಕ್ಷೆ ಮತ್ತು ಅನರ್ಹತೆ ಖಂಡನೆ • ಜೆಪಿಸಿಗೆ ಒತ್ತಾಯಿಸಿ ವಿರೋಧ ಪಕ್ಷಗಳ ಸಂಸದರ ಪ್ರತಿಭಟನೆ

‘ಪ್ರಜಾಪ್ರಭುತ್ವ ಅಪಾಯದಲ್ಲಿದೆ’

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ಪ್ರಜಾಪ್ರಭುತ್ವ ಅಪಾಯದಲ್ಲಿದೆ ಎಂದು ವಿರೋಧ ಪಕ್ಷಗಳು ಕಳವಳ ವ್ಯಕ್ತಪಡಿಸಿವೆ. ಮಾನಹಾನಿ ಪ್ರಕರಣದಲ್ಲಿ ರಾಹುಲ್ ಗಾಂಧಿ ಅವರಿಗೆ ಎರಡು ವರ್ಷ ಜೈಲುಶಿಕ್ಷೆ ವಿಧಿಸಿದ್ದನ್ನು ಖಂಡಿಸಿ, 14 ವಿರೋಧ ಪಕ್ಷಗಳ ಹಲವು ನಾಯಕರು ಶುಕ್ರವಾರ ಇಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದರು.

ರಾಹುಲ್‌ಗೆ ಶಿಕ್ಷೆ ಪ್ರಕಟವಾದ ಬೆನ್ನಲ್ಲೇ, ಶುಕ್ರವಾರ ಬೆಳಿಗ್ಗೆ ವಿರೋಧ ಪಕ್ಷಗಳ ಸಭೆ ನಡೆಸಲು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಗುರುವಾರ ರಾತ್ರಿ ಕರೆ ನೀಡಿದ್ದರು. ಶುಕ್ರವಾರ ಬೆಳಿಗ್ಗೆ ಸಭೆ ನಡೆಸಿದ ವಿರೋಧ ಪಕ್ಷಗಳ ನಾಯಕರು ಸಂಸತ್ ಭವನದ ಆವರಣದಿಂದ ರಾಷ್ಟ್ರಪತಿ ಭವನದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು. ಅದಾನಿ ಸಮೂಹದ ಷೇರುಗಳ ಮೌಲ್ಯ ತಿರುಚಿದ ಆರೋಪದ ತನಿಖೆಗೆ ಜಂಟಿ ಸಂಸದೀಯ ಸಮಿತಿ ರಚಿಸಬೇಕು ಎಂದು ಒತ್ತಾಯಿಸಿದರು.

ವಿಜಯ್ ಚೌಕ್‌ನಲ್ಲಿ ಪೊಲೀಸರು ನಿಷೇಧಾಜ್ಞೆ ಜಾರಿ ಮಾಡಿದ್ದರು. ಮೆರವಣಿಗೆಯಲ್ಲಿ ಭಾಗಿಯಾಗಿದ್ದ ಸಂಸದರನ್ನು ಪೊಲೀಸರು ವಶಕ್ಕೆ ಪಡೆದರು.

ಮೋದಿ ಅವರೇ ನನ್ನ ಕುಟುಂಬವನ್ನು ನೀವು ಪರಿವಾರವಾದಿ ಎಂದು ಕರೆಯುತ್ತೀರಿ. ನನ್ನ ಕುಟುಂಬ ದೇಶಕ್ಕಾಗಿ ರಕ್ತ ನೀಡಿದೆ. ಅಂತಹ ಕುಟುಂಬವನ್ನು ಮುಗಿಸಲು ನೀವು ಹೊರಟಿದ್ದೀರಿ. ಒಬ್ಬ ಹುತಾತ್ಮ ಪ್ರಧಾನಿಯ ಮಗನನ್ನು ಬಿಜೆಪಿ ನಾಯಕರು ‘ಮೀರ್ ಜಾಫರ್’ ಎಂದು ಕರೆದಿದ್ದರು. ನೆಹರೂ ಹೆಸರು ಏಕೆ ಇಟ್ಟುಕೊಳ್ಳುವುದಿಲ್ಲ ಎಂದು ಪ್ರಶ್ನಿಸಿ ಸಂಸತ್ತಿನಲ್ಲೇ ಕಾಶ್ಮೀರಿ ಪಂಡಿತರಿಗೆ ನೀವು ಅಪಮಾನ ಮಾಡಿದ್ದಿರಿ. ಆದರೆ, ನಿಮಗ್ಯಾಕೆ ಯಾರೂ ಎರಡು ವರ್ಷ ಜೈಲುಶಿಕ್ಷೆ ನೀಡಲಿಲ್ಲ?
ಪ್ರಿಯಾಂಕಾ ಗಾಂಧಿ ವಾದ್ರಾ, ಕಾಂಗ್ರೆಸ್ ನಾಯಕಿ

ವಿರೋಧ ಪಕ್ಷಗಳ ಸಂಸದರು ‘ಪ್ರಜಾಪ್ರಭುತ್ವ ಅಪಾಯದಲ್ಲಿದೆ’ ಎಂಬ ಬ್ಯಾನರ್ ಹಿಡಿದು ಶುಕ್ರವಾರ ಪ್ರತಿಭಟನಾ ಮೆರವಣಿಗೆ ನಡೆಸಿದರು – ಪಿಟಿಐ ಚಿತ್ರ

‘ನೀರವ್ ಮೋದಿ, ಲಲಿತ್ ಮೋದಿ ಕಳ್ಳರಲ್ಲವೇ?’

‘ನೀರವ್ ಮೋದಿ, ಲಲಿತ್ ಮೋದಿ ಕಳ್ಳರಲ್ಲವೇ?’. ಸಾಮಾಜಿಕ ಜಾಲತಾಣಗಳಲ್ಲಿ ವಿರೋಧ ಪಕ್ಷಗಳ ನಾಯಕರು ಕೇಳುತ್ತಿರುವ ಪ್ರಶ್ನೆ ಇದು.

ಲೋಕಸಭೆ ಸದಸ್ಯತ್ವದಿಂದ ರಾಹುಲ್ ಗಾಂಧಿ ಅವರನ್ನು ಅಮಾನತು ಮಾಡಿದ ಆದೇಶ ಹೊರಬಿದ್ದ ಕೂಡಲೇ, ವಿವಿಧ ವಿರೋಧ ಪಕ್ಷಗಳ ನಾಯಕರು ಈ ಕ್ರಮವನ್ನು ಖಂಡಿಸಿ ಟ್ವೀಟ್ ಮಾಡಿದ್ದಾರೆ. ಜತೆಗೆ, ಟ್ವಿಟರ್ ಮತ್ತು ಫೇಸ್‌ಬುಕ್‌ನಲ್ಲಿ "ललित मोदी" (ಲಲಿತ್ ಮೋದಿ) ಮತ್ತು "नीरव मोदी" (ನೀರವ್ ಮೋದಿ) ಹೆಸರನ್ನು ಬಳಸಿ ಟ್ವೀಟ್ ಮತ್ತು ಪೋಸ್ಟ್ ಮಾಡುತ್ತಿದ್ದಾರೆ. ಎರಡೂ ಹೆಸರುಗಳು ಸಾಮಾಜಿಕ ಜಾಲತಾಣಗಳಲ್ಲಿ ಟ್ರೆಂಡ್‌ನಲ್ಲಿವೆ.

‘ನೀರವ್ ಮೋದಿ ಕಳ್ಳನಲ್ಲವೇ? ಲಲಿತ್ ಮೋದಿ ಕಳ್ಳನಲ್ಲವೇ? ಇವರನ್ನು ರಕ್ಷಿಸಲು ಬಿಜೆಪಿ ಮುಂದಾಗುತ್ತಿರುವುದೇಕೆ? ಕಳ್ಳರನ್ನು ಕಳ್ಳರು ಎಂದು ಕರೆಯಲು ಇವರ ಆಕ್ಷೇಪವೇಕೆ? ಅದಾನಿ ವಿಚಾರದಿಂದ ಗಮನ ಬೇರೆಡೆಗೆ ಸೆಳೆಯಲೆಂದೇ ಇದನ್ನೆಲ್ಲಾ ಮಾಡಲಾಗುತ್ತಿದೆ. ಆದರೆ ಅದು ಸಾಧ್ಯವಾಗುವುದಿಲ್ಲ’ ಎಂದು ಕಾಂಗ್ರೆಸ್ ವಕ್ತಾರೆ ಸುಪ್ರಿಯಾ ಶ್ರೀನಾತೆ ಟ್ವೀಟ್‌ನಲ್ಲಿ ಪ್ರಶ್ನಿಸಿದ್ದಾರೆ.

ರಾಹುಲ್ ಎಲ್ಲ ಮೋದಿಗಳೂ ಕಳ್ಳರು ಎಂದಿರಲಿಲ್ಲ ಎಂದು ಸಾಮಾಜಿಕ ಕಾರ್ಯಕರ್ತ ಪ್ರಶಾಂತ್ ಭೂಷಣ್ ಟ್ವೀಟ್ ಮಾಡಿದ್ದಾರೆ. ‘ರಾಹುಲ್ ಗಾಂಧಿ ಅವರು ನೀರವ್ ಮೋದಿ, ಲಲಿತ್ ಮೋದಿ, ಮೆಹುಲ್ ಚೋಕ್ಸಿಯನ್ನು ಕಳ್ಳರು ಎಂದಿದ್ದರು. ರಾಹುಲ್, ‘ಎಲ್ಲಾ ಕಳ್ಳರ ಹೆಸರಿನಲ್ಲಿ ಮೋದಿ ಉಪನಾಮ ಏಕೆ ಇದೆ’ ಎಂದು ಕೇಳಿದ್ದರು. ‘ಎಲ್ಲಾ ಮೋದಿಗಳೂ ಕಳ್ಳರು’ ಎಂದಿರಲಿಲ್ಲ. ಆದರೂ ಯಾವುದೋ ಮೋದಿಯ ಮಾನಕ್ಕೆ ಹಾನಿಯಾಗಿದೆ ಎಂದು ರಾಹುಲ್ ವಿರುದ್ಧ ದೂರು ನೀಡಲಾಗಿದೆ ಮತ್ತು ಎರಡು ವರ್ಷ ಜೈಲುಶಿಕ್ಷೆ ನೀಡಲಾಗಿದೆ. ಅವರ ಸಂಸದನ ಸ್ಥಾನವನ್ನೂ ತೆರವು ಮಾಡಲಾಗಿದೆ. ಇದು ಭಾರತದ ಪ್ರಜಾಪ್ರಭುತ್ವದ ಇಂದಿನ ಸ್ಥಿತಿ’ ಎಂದು ಅವರು ಟ್ವೀಟ್ ಮಾಡಿದ್ದಾರೆ.

‘ಮೋದಿ ಸರ್ಕಾರದ ಆತ್ಮೀಯ ಮೋದಿ ಸೋದರರಾದ ನೀರವ್ ಮೋದಿ–ಲಲಿತ್ ಮೋದಿ, ವಿಜಯ್ ಮಲ್ಯ, ಮೆಹುಲ್ ಚೋಕ್ಸಿ ದೇಶದ ಬಡಜನರ ಹಣ ದೋಚಿ ವಿದೇಶಕ್ಕೆ ಓಡಿಹೋಗಿದ್ದಾರೆ. ತನಿಖಾ ಸಂಸ್ಥೆಗಳಿಗೆ ಈ ಜನರು ಕಾಣುವುದಿಲ್ಲ. ಸರ್ಕಾರವನ್ನು ಪ್ರಶ್ನಿಸುವವರಷ್ಟೇ ಈ ಸಂಸ್ಥೆಗಳಿಗೆ ಕಾಣುತ್ತಾರೆ’ ಎಂದು ಆರ್‌ಜೆಡಿ ಟ್ವೀಟ್ ಮಾಡಿದೆ.

‘ಮೋದಿಗಳೆಲ್ಲಾ ಸಂತರು’

ಮೋದಿ ಉಪನಾಮ ಇರುವವರೆಲ್ಲಾ ಸಂತರು ಎಂದು ಜನಅಧಿಕಾರ್ ಪಾರ್ಟಿಯ ಪಪ್ಪು ಯಾದವ್ ಅವರು ಲೇವಡಿ ಮಾಡಿದ್ದಾರೆ.

‘ನೀರವ್ ಮೋದಿ, ಲಲಿತ್ ಮೋದಿ ಎಲ್ಲರೂ ಮಹಾನ್ ಸಂತರು. ಅವರು ದೇಶದ ಹಣವನ್ನು ಲೂಟಿ ಮಾಡಲಿಲ್ಲ. ಬದಲಿಗೆ ದೇಶದ ಮೇಲಿದ್ದ ಹಣದ ಹೊರೆಯನ್ನು ಕಡಿಮೆ ಮಾಡಲು, ಹಣ ತೆಗೆದುಕೊಂಡು ವಿದೇಶಕ್ಕೆ ಹೋದರು. ನರೇಂದ್ರ ಮೋದಿ ಅವರು ಸತ್ಯ ಹರಿಶ್ಚಂದ್ರ. ಮೋದಿ ಉಪನಾಮ ಇರುವ ವ್ಯಕ್ತಿಗಳೆಲ್ಲರೂ ಪೂಜನೀಯ ಮಹಾತ್ಮರು. ಬಿಹಾರದಲ್ಲೂ ಅಂತಹ ಒಬ್ಬರಿದ್ದಾರೆ, ಅವರು ಬಹಳ ಸುಶೀಲವಂತರು’ ಎಂದು ಪಪ್ಪು ಯಾದವ್ ಟ್ವೀಟ್ ಮಾಡಿದ್ದಾರೆ.

ನರೇಂದ್ರ ಮೋದಿ ನಾಯಕತ್ವದ ಈ ಸರ್ಕಾರವು, ಬ್ರಿಟಿಷ್ ಸರ್ಕಾರಕ್ಕಿಂತ ಅಪಾಯಕಾರಿ. ಇದು ಕಾಂಗ್ರೆಸ್‌ನ ಹೋರಾಟ ಮಾತ್ರವಲ್ಲ. ದೇಶದ ರಕ್ಷಣೆಗಾಗಿನ ಹೋರಾಟ
ಅರವಿಂದ ಕೇಜ್ರಿವಾಲ್, ದೆಹಲಿ ಸಿ.ಎಂ

ರಾಹುಲ್ ಮೇಲ್ಮನವಿ ಸಲ್ಲಿಸುವ ಮುನ್ನವೇ ಅವರನ್ನು ಅನರ್ಹಗೊಳಿಸಿ, ಅವರ ಹಕ್ಕನ್ನು ಕಸಿದುಕೊಳ್ಳಲಾಗಿದೆ. ಬಿಜೆಪಿ ಇದಕ್ಕೇ ಕಾದಿತ್ತು ಎನಿಸುತ್ತಿದೆ
ಎಂ.ಕೆ.ಸ್ಟಾಲಿನ್, ತಮಿಳುನಾಡು ಸಿ.ಎಂ

ಇದು ಪ್ರಜಾಪ್ರಭುತ್ವದ ಕಗ್ಗೊಲೆ. ನಿರಂಕುಶ ಅಧಿಕಾರದ ಅಂತ್ಯ ಇಲ್ಲಿಂದಲೇ ಆರಂಭವಾಗಲಿದೆ. ಈ ಹೋರಾಟಕ್ಕೆ ಈಗ ಒಂದು ದಿಕ್ಕು ಬೇಕಷ್ಟೆ
ಉದ್ಧವ್ ಠಾಕ್ರೆ, ಶಿವಸೇನಾ (ಉದ್ಧವ್ ಬಣ) ಮುಖ್ಯಸ್ಥ

ಮಾನಹಾನಿಯ ಕಾರಣಕ್ಕೆ ಅನರ್ಹರಾಗುವುದಾದರೆ, ಸಂಸತ್ತಿನ ಶೇ 70ರಷ್ಟು ಮಂದಿ ಅದಕ್ಕೆ ಅರ್ಹರು. ಅವರಲ್ಲಿ ಬಹುತೇಕ ಮಂದಿ ಬಿಜೆಪಿ ಸಂಸದರು
ಡ್ಯಾನಿಷ್ ಅಲಿ, ಬಿಎಸ್‌ಪಿ ಸಂಸದ

ಈ ಅನರ್ಹತೆಯು, ಪ್ರಜಾಪ್ರಭುತ್ವದ ಮೇಲಿನ ಹಿಂಸಾತ್ಮಕ ದಾಳಿಯಾಗಿದೆ. ಪ್ರಜಾಪ್ರಭುತ್ವದ ಮೇಲೆ ಬಿಜೆಪಿ ನಡೆಸುತ್ತಿರುವ ದಾಳಿಗಳಲ್ಲಿ ಇದು ಹೊಸ ಅಧ್ಯಾಯವಷ್ಟೆ
ಪಿಣರಾಯಿ ವಿಜಯನ್, ಕೇರಳ ಸಿ.ಎಂ

ಅಪರಾಧ ಹಿನ್ನೆಲೆಯವರು ಬಿಜೆಪಿಯ ಸಂಪುಟದಲ್ಲಿ ಸಚಿವರಾಗಿದ್ದಾರೆ. ವಿಪಕ್ಷಗಳ ನಾಯಕರನ್ನು ಅವರ ಭಾಷಣದ ಕಾರಣಕ್ಕೆ ಜೈಲಿಗೆ ಹಾಕಲಾಗುತ್ತಿದೆ
ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಸುಗ್ರೀವಾಜ್ಞೆ ಹರಿದು ಹಾಕಿದ್ದ ರಾಹುಲ್

ಎರಡು ವರ್ಷ ಜೈಲುಶಿಕ್ಷೆಗೆ ಗುರಿಯಾದ ಜನಪ್ರತಿನಿಧಿಗಳ ಸದಸ್ಯತ್ವವನ್ನು ಅನರ್ಹಗೊಳಿಸುವುದರಿಂದ ರಕ್ಷಿಸಲು ಯುಪಿಎ–2 ಸರ್ಕಾರವು 2013ರಲ್ಲಿ ತರಲು ಹೊರಟಿದ್ದ ಸುಗ್ರೀವಾಜ್ಞೆಯ ಪ್ರತಿಯನ್ನು ಸ್ವತಃ ರಾಹುಲ್ ಗಾಂಧಿ ಸಾರ್ವಜನಿಕವಾಗಿ ಹರಿದುಹಾಕಿದ್ದರು. ಆ ಸುಗ್ರೀವಾಜ್ಞೆ ಅಸಂಬದ್ಧ ಎಂದು ಹೇಳಿದ್ದರು. ಈಗ ಮಾನಹಾನಿ ಪ್ರಕರಣದಲ್ಲಿ ರಾಹುಲ್ ಅವರಿಗೆ ಎರಡು ವರ್ಷ ಜೈಲುಶಿಕ್ಷೆ ಘೋಷಣೆಯಾಗಿದೆ. ಕಾನೂನಿನ ಪ್ರಕಾರ, ಅವರ ಸದಸ್ಯತ್ವ ಅನರ್ಹವಾಗಿದೆ. ರಾಹುಲ್ ಅಂದು ಸುಗ್ರೀವಾಜ್ಞೆಗೆ ವಿರೋಧ ವ್ಯಕ್ತಪಡಿಸದೇ ಇದ್ದು, ಅದು ಜಾರಿಯಾಗಿದ್ದಿದ್ದರೆ ಈಗ ರಾಹುಲ್ ಅವರ ಸದಸ್ಯತ್ವ ರದ್ದಾಗುತ್ತಿರಲಿಲ್ಲ.

‘ಚುನಾಯಿತ ಜನಪ್ರತಿನಿಧಿಗಳಾದ ಸಂಸದರು (ರಾಜ್ಯಸಭೆ ಸದಸ್ಯರೂ ಸೇರಿ) ಮತ್ತು ಶಾಸಕರಿಗೆ (ವಿಧಾನ ಪರಿಷತ್ ಸದಸ್ಯರೂ ಸೇರಿ) ಯಾವುದೇ ಕ್ರಿಮಿನಲ್ ಪ್ರಕರಣಗಳಲ್ಲಿ ಎರಡು ವರ್ಷ ಶಿಕ್ಷೆಯಾದರೂ ತಕ್ಷಣವೇ ಅವರ ಸದಸ್ಯತ್ವ ಅನರ್ಹವಾಗುವುದಿಲ್ಲ. ಅನರ್ಹತೆ ಜಾರಿಗೆ ಮೂರು ತಿಂಗಳವರೆಗೆ ಸಮಯಾವಕಾಶವಿದೆ. ತಪ್ಪಿತಸ್ಥ ಎಂದು ಪ್ರಕಟವಾದ ತೀರ್ಪಿನ ವಿರುದ್ಧ ಉನ್ನತ ನ್ಯಾಯಾಲಯಗಳಲ್ಲಿ ಮನವಿ ಸಲ್ಲಿಸಲು ಅವಕಾಶವಿದ್ದು, ತೀರ್ಪು ಪ್ರಕಟವಾಗುವವರೆಗೂ ಅನರ್ಹತೆ ಜಾರಿಯಾಗುವುದಿಲ್ಲ’ ಎಂದು 1951 ಜನಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 8(4) ಹೇಳುತ್ತದೆ.

ಈ ಕಾಯ್ದೆಯ 8(4)ನೇ ಸೆಕ್ಷನ್ ನೀಡುವ ರಕ್ಷಣೆಯನ್ನು, ಲಿಲ್ಲಿ ಥಾಮಸ್ ಮತ್ತು ಲೋಕ ಪ್ರಹಾರಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನಿಷ್ಕ್ರಿಯಗೊಳಿಸಿ 2013ರಲ್ಲಿ ಆದೇಶ ನೀಡಿತ್ತು. ‘ಶಿಕ್ಷೆ ಪ್ರಕಟವಾದ ಕೂಡಲೇ ಜನಪ್ರತಿನಿಧಿಗಳ ಸದಸ್ಯತ್ವ ಅನರ್ಹವಾಗುತ್ತದೆ’ ಎಂದು ಸುಪ್ರೀಂ ಕೋರ್ಟ್ ಹೇಳಿತ್ತು.

ಯುಪಿಎ ಮಿತ್ರಪಕ್ಷಗಳಲ್ಲಿ ಒಂದಾಗಿದ್ದ ಆರ್‌ಜೆಡಿಯ ಮುಖ್ಯಸ್ಥ ಲಾಲು ಪ್ರಸಾದ್ ಅವರ ಸದಸ್ಯತ್ವ ಅನರ್ಹವಾಗಬೇಕಿತ್ತು. ಅದೇ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್‌ನ ತೀರ್ಪನ್ನು ನಿಷ್ಕ್ರಿಯಗೊಳಿಸುವಂತಹ ಸುಗ್ರೀವಾಜ್ಞೆಯನ್ನು ಸರ್ಕಾರವು ತರಲು ಹೊರಟಿತ್ತು. ಸುಗ್ರೀವಾಜ್ಞೆಗೆ ರಾಷ್ಟ್ರಪತಿಯ ಅಂಕಿತವಷ್ಟೇ ಬೀಳಬೇಕಿತ್ತು. ಆ ಸಂದರ್ಭದಲ್ಲಿ ದೆಹಲಿ ಪ್ರೆಸ್‌ಕ್ಲಬ್‌ನಲ್ಲಿ ಕಾಂಗ್ರೆಸ್ ನಾಯಕರೊಂದಿಗೆ ನಡೆಯುತ್ತಿದ್ದ ಸಂವಾದಕ್ಕೆ ರಾಹುಲ್ ಗಾಂಧಿ ದಿಢೀರ್ ಭೇಟಿ ನೀಡಿದ್ದರು.

‘ಇಂತಹ ವಿಚಾರದಲ್ಲಿ ಸರ್ಕಾರ ಮಾಡಿದ್ದು ಸರಿಯಲ್ಲ. ಇದು ಶುದ್ಧ ಅಸಂಬದ್ಧ. ಇಂಥ ಸಣ್ಣ ವಿಷಯದಲ್ಲಿ ರಾಜಿಯಾದರೆ, ಮುಂದೆ ಎಲ್ಲಾ ವಿಷಯದಲ್ಲೂ ಬಾಗುತ್ತಲೇ ಹೋಗಬೇಕಾಗುತ್ತದೆ’ ಎಂದು ಹೇಳಿದ್ದರು. ಸುಗ್ರೀವಾಜ್ಞೆಯ ಪ್ರತಿಯನ್ನು ಹರಿದುಹಾಕಿದ್ದರು. ನಂತರ ಸರ್ಕಾರವು ಸುಗ್ರೀವಾಜ್ಞೆಯನ್ನು ವಾಪಸ್ ಪಡೆದಿತ್ತು.

2013ರಲ್ಲಿ ರಾಹುಲ್ ಅವರ ಕಾರಣದಿಂದಲೇ ಉಳಿದುಕೊಂಡಿದ್ದ ಕಾನೂನು, ಈಗ ರಾಹುಲ್ ವಿರುದ್ಧವೇ ಬಳಕೆಯಾಗಿದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಯಾಗುತ್ತಿದೆ.

ಬಿಜೆಪಿಯ ಪಾಪದ ಕೊಡ ತುಂಬಿದೆ. ತನ್ನ ನಾಶದ ಶವ ಪೆಟ್ಟಿಗೆಗೆ ತಾನೇ ಕೊನೆಯ ಮೊಳೆ ಬಡಿದಿದೆ. ಈ ಫ್ಯಾಸಿಸ್ಟ್ ನಡವಳಿಕೆಗೆ ಹೆದರುವ, ಹಿಂಜರಿಯುವ ಪ್ರಶ್ನೆಯೇ ಇಲ್ಲ. ಈ ಅನ್ಯಾಯದ ವಿರುದ್ಧ ನ್ಯಾಯಾಲಯ ಮತ್ತು ಬೀದಿಗಳಲ್ಲಿ ಹೋರಾಟ ಮಾಡುತ್ತೇವೆ. ನರೇಂದ್ರ ಮೋದಿ, ಬಿಜೆಪಿ ಮತ್ತು ಎನ್‌ಡಿಎ ಸರ್ಕಾರದ ವಿರುದ್ಧ ಮಾತನಾಡುವ ಎಲ್ಲರಿಗೂ ಎಚ್ಚರಿಕೆಯ ರೂಪದಲ್ಲಿ ರಾಹುಲ್ ಗಾಂಧಿಯವರ ಬಗ್ಗೆ ಕೇಂದ್ರ ಸರ್ಕಾರ ನಿರ್ಧಾರ ಕೈಗೊಂಡಿದೆ
ಸಿದ್ದರಾಮಯ್ಯ, ವಿಧಾನಸಭೆ ವಿರೋಧ ಪಕ್ಷದ ನಾಯಕ

‘ಶಿಕ್ಷೆ ನ್ಯಾಯೋಚಿತವಾಗಿದೆ’

ಸಂಸದ ರಾಹುಲ್ ಗಾಂಧಿ ಅವರಿಗೆ ಗುಜರಾತ್‌ನ ನ್ಯಾಯಾಲಯವು 2019ರಲ್ಲಿ ದಾಖಲಾಗಿದ್ದ ಮಾನನಷ್ಟ ಮೊಕದ್ದಮೆಯಲ್ಲಿ ಎರಡು ವರ್ಷಗಳ ಜೈಲು ಶಿಕ್ಷೆ ವಿಧಿಸಿ ತೀರ್ಪು ನೀಡಿರುವುದು ಸರಿಯಾಗಿಯೇ ಇದೆ. ಅಪರಾಧಿ ರಾಹುಲ್ ಗಾಂಧಿ ಹೇಳಿಕೆ ಮುಗ್ಧತೆಯಿಂದ ಕೂಡಿದೆಯೆಂದು ಭಾವಿಸಲು ಸಾಧ್ಯವಿಲ್ಲ. ಅದು ಮೋದಿ ಹೆಸರಿನವರನ್ನು ಅವಮಾನಿಸುವ ಉದ್ದೇಶದಿಂದಲೇ ಕೂಡಿರುವ ಕಾರಣ, ಅವರಿಗೆ ನ್ಯಾಯಾಲಯ ನೀಡಿರುವ ಶಿಕ್ಷೆ ನ್ಯಾಯೋಚಿತವಾಗಿದೆ ಎಂದು ನಿಸ್ಸಂದಿಗ್ಧವಾಗಿ ಹೇಳಬಹುದು.

ರಾಹುಲ್ ಗಾಂಧಿ ಕೆಲವು ಆರೋಪಿಗಳ ಹೆಸರುಗಳನ್ನು ಉಚ್ಚರಿಸಿ, ಆ ಹೆಸರುಗಳಲ್ಲಿನ ಮೋದಿ ಎಂಬ ಎರಡಕ್ಷರಗಳನ್ನು ನೇರವಾಗಿ ಗಮನದಲ್ಲಿರಿಸಿಕೊಂಡು ಅದನ್ನು ಪ್ರಧಾನಿಯ ಹೆಸರಿಗೂ ಅನ್ವಯಿಸಿದ್ದಾರೆ. ಪ್ರಧಾನಿಯವರನ್ನು ಉದ್ದೇಶಪೂರ್ವಕವಾಗಿ ಅವಹೇಳನ, ನಗೆಪಾಟಲು ಮಾಡುವ ಅದಕ್ಕೂ ಮೀರಿದಂತೆ ಅವಮಾನ ಮಾಡುವುದನ್ನು ಗುರಿಯಾಗಿರಿಸಿಕೊಂಡಿದ್ದಾರೆ.

ಸಿ.ಎಚ್. ಹನುಮಂತರಾಯ, ಹಿರಿಯ ವಕೀಲ, ಹೈಕೋರ್ಟ್

ಶಿಕ್ಷೆ ಬೇರೆ, ತೀರ್ಪು ಬೇರೆ



ಜನಪ್ರಾತಿನಿಧ್ಯ ಕಾಯ್ದೆಯ ಕಲಂ 4ರ ಅನುಸಾರ ಶಿಕ್ಷೆ ಪ್ರಕಟವಾದ ಕೂಡಲೇ ಅನರ್ಹತೆ ಜಾರಿಗೆ ಬರುತ್ತದೆ. ಇದು ಲಿಲ್ಲಿ ಥಾಮಸ್ ಪ್ರಕರಣದಲ್ಲಿ ತೀರ್ಮಾನವಾಗಿದೆ. ತೀರ್ಪು ಮತ್ತು ಶಿಕ್ಷೆ ಬೇರೆ ಬೇರೆ. ಅಪರಾಧಿ ರಾಹುಲ್ ಗಾಂಧಿ ಈ ಪ್ರಕರಣದಲ್ಲಿ ಶಿಕ್ಷೆ ಮತ್ತು ತೀರ್ಪು ಎರಡಕ್ಕೂ ತಡೆ ಕೋರಿ ಮೇಲ್ಮನವಿ ಸಲ್ಲಿಸಬೇಕು. ಕೋರ್ಟ್ ಎರಡಕ್ಕೂ ತಡೆ ಆದೇಶ ಕೊಟ್ಟರೆ ಅವರು ಅನರ್ಹತೆಯಿಂದ ಪಾರಾಗಬಹುದು. ಅನರ್ಹತೆ ಪರಾಮರ್ಶೆಯ ಹಕ್ಕು ರಾಷ್ಟ್ರಪತಿ ಅವರಿಗೆ ಇದ್ದು ಇದನ್ನು ರಾಹುಲ್ ಗಾಂಧಿ, ರಾಷ್ಟ್ರಪತಿ ಅವರಿಗೆ ಮನವಿ ಮಾಡಿ ಕೇಳಬಹುದು.

ಅಶೋಕ ಹಾರನಹಳ್ಳಿ, ಹಿರಿಯ ವಕೀಲರು, ಹೈಕೋರ್ಟ್

‘ಅದಾನಿ ವಿರುದ್ಧ ಭಾಷಣದ ನಂತರವೇ ಸಂಕಷ್ಟ’

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಹುಲ್ ಗಾಂಧಿ ಅವರು ಲೋಕಸಭೆಯಲ್ಲಿ ಅದಾನಿ ಪ್ರಕರಣದ ಕುರಿತು ಮಾಡಿದ ಭಾಷಣದ ನಂತರ ಮಾನನಷ್ಟ ತಡೆ ಪ್ರಕರಣದ ವಿಚಾರಣೆ ಹೇಗೆ ಬಿರುಸು ಪಡೆದುಕೊಂಡಿತು ಎಂಬುದನ್ನು ಜನರಿಗೆ ತಿಳಿಸುವುದು, ಶಿಕ್ಷೆ ತಡೆ ಕೋರಿ ಸೆಷನ್ಸ್ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸುವುದು, ಬಿಜೆಪಿ ವಿರೋಧಿ ಪಕ್ಷಗಳನ್ನು ಒಂದೆಡೆ ತರುವುದು ಈಗ ಕಾಂಗ್ರೆಸ್ ಪಕ್ಷದ ಮುಂದೆ ಇರುವ ಪ್ರಮುಖ ಕಾರ್ಯಸೂಚಿಗಳಾಗಿವೆ.

ಪ್ರಧಾನಿ ನರೇಂದ್ರ ಮೋದಿ ಅವರು ಅದಾನಿ ಸಮೂಹಕ್ಕೆ ಅನುಕೂಲಕರವಾಗಿ ನಡೆದುಕೊಂಡಿದ್ದಾರೆ ಎಂದು ರಾಹುಲ್ ಗಾಂಧಿ ಅವರು ಸತತವಾಗಿ ಆರೋಪಿಸಿದ ಬಳಿಕವೇ ರಾಹುಲ್ ಅವರಿಗೆ ‘ಸಂಕಷ್ಟಗಳು’ ಬರತೊಡಗಿವೆ ಎಂಬುದು ಕಾಕತಾಳೀಯ ಅಲ್ಲ ಎಂಬ ನಂಬಿಕೆ ಕಾಂಗ್ರೆಸ್‌ನದ್ದಾಗಿದೆ.

ರಾಹುಲ್ ಅವರು ಸೆಷನ್ಸ್ ನ್ಯಾಯಾಲಯದಲ್ಲಿ ಸದ್ಯವೇ ಮೇಲ್ಮನವಿ ಸಲ್ಲಿಸಲಿದ್ದಾರೆ ಎಂದು ಕಾಂಗ್ರೆಸ್ ಸಂಸದ ಮತ್ತು ವಕೀಲ ಅಭಿಷೇಕ್ ಮನು ಸಿಂಘ್ವಿ ಹೇಳಿದ್ದಾರೆ.

ಮಾನನಷ್ಟ ಪ್ರಕರಣವು ರಾಜಕೀಯ ಪ್ರೇರಿತ ಎಂದು ಅವರು ಪ್ರತಿಪಾದಿಸಿದ್ದಾರೆ. ಪ್ರಕರಣದ ವಿವರಗಳನ್ನು ಅವರು ಹಂಚಿಕೊಂಡಿದ್ದಾರೆ. 2019ರ ಏಪ್ರಿಲ್ 16ರಂದು ಮಾನಹಾನಿ ಪ್ರಕರಣ ದಾಖಲಿಸಲಾಗಿದೆ. 2021ರ ಮಾರ್ಚ್‌ನಲ್ಲಿ ರಾಹುಲ್ ಹೇಳಿಕೆ ದಾಖಲಿಸಿದ್ದರು. ಆದರೆ, ದೂರುದಾರರು ಹೈಕೋರ್ಟ್‌ಗೆ ಅರ್ಜಿ ಹಾಕಿ ಪ್ರಕರಣಕ್ಕೆ ತಡೆ ಕೊಡಬೇಕು ಎಂದು ಕೋರಿದ್ದರು. 2022ರ ಮಾರ್ಚ್ 7ರಂದು ತಡೆ ಸಿಕ್ಕಿತು. ಕಳೆದ ತಿಂಗಳು ಅಗತ್ಯ ಸಾಕ್ಷ್ಯಗಳು ಸಿಕ್ಕಿವೆ ಎಂದು ಹೇಳಿದ ದೂರುದಾರರು ತಡೆ ತೆರವಿಗೆ ಕೋರಿದ್ದರು. ಹೊಸ ನ್ಯಾಯಾಧೀಶರು ನೇಮಕವಾದ ನಂತರವೇ ವಿಚಾರಣೆ ಆರಂಭವಾಗುವಂತೆ ನೋಡಿಕೊಂಡರು. ಆನಂತರವೇ ತಡೆ ತೆರವು ಆದೇಶ ದೊರೆಯಿತು ಮತ್ತು ವಿಲೇವಾರಿ ತ್ವರಿತವಾಗಿ ನಡೆಯಿತು ಎಂದು ಅವರು ಹೇಳಿದ್ದಾರೆ.

‘ಅದಾನಿ ಕುರಿತು ರಾಹುಲ್ ಲೋಕಸಭೆಯಲ್ಲಿ ಮಾತನಾಡಿದ್ದು ಫೆಬ್ರುವರಿ 7ರಂದು. ಹೈಕೋರ್ಟ್‌ನಲ್ಲಿ ದೂರುದಾರ ತಾನೇ ತಂದಿದ್ದ ತಡೆ ತೆರವಾಗಿದ್ದು ಫೆ.16ರಂದು. ಮತ್ತೆ ವಿಚಾರಣೆ ಆರಂಭವಾಗಿದ್ದು ಫೆ.27ಕ್ಕೆ ಮತ್ತು ತೀರ್ಪು ಕಾಯ್ದಿರಿಸಿದ್ದು ಮಾರ್ಚ್ 17ರಂದು’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಟ್ವೀಟ್ ಮಾಡಿದ್ದಾರೆ.

ರಾಹುಲ್ ಅವರ ಮೇಲ್ಮನವಿಗೆ ಸಂಬಂಧಿಸಿದಂತೆ ಅಂತಿಮ ತೀರ್ಪು ಬರುವುದು ತಡವಾಗಬಹುದು. ಈ ಪ್ರಕರಣದಲ್ಲಿ ಸದ್ಯಕ್ಕೆ ತೀರ್ಪಿಗೆ ತಡೆ ಪಡೆದುಕೊಳ್ಳುವುದೇ ನಮ್ಮ ಆದ್ಯತೆ. ಆ ಮೂಲಕ ರಾಹುಲ್ ಅವರ ಸದಸ್ಯತ್ವವನ್ನು ಉಳಿಸಿಕೊಳ್ಳಬಹುದು. ರಾಹುಲ್ ಅವರ ಅನರ್ಹತೆ ಮುಂದುವರಿದರೆ, ಚುನಾವಣಾ ಆಯೋಗವು ವಯನಾಡ್ ಲೋಕಸಭಾ ಕ್ಷೇತ್ರಕ್ಕೆ ಉಪಚುನಾವಣೆಯನ್ನು ಘೋಷಿಸಿಬಿಡಬಹುದು. ಅದರಲ್ಲಿ ಯಾವುದೇ ಆಶ್ಚರ್ಯವಿಲ್ಲ ಎಂದು ಸಿಂಘ್ವಿ ಹೇಳಿದ್ದಾರೆ.

ಈ ಬೆಳವಣಿಗೆಯು ಎಲ್ಲಾ ವಿರೋಧ ಪಕ್ಷಗಳನ್ನು ಒಂದೇ ವೇದಿಕೆಗೆ ಕರೆತಂದಿದೆ. ರಾಹುಲ್ ಅವರ ಅನರ್ಹತೆ ಕ್ರಮವನ್ನು ಖಂಡಿಸಿ ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಟ್ವೀಟ್ ಮಾಡಿದ್ದಾರೆ. ಎಎಪಿ, ಸಮಾಜವಾದಿ ಪಕ್ಷಗಳೂ ಈ ಕ್ರಮವನ್ನು ಖಂಡಿಸಿವೆ.

ತಮ್ಮ ದೂರಿಗೇ ತಡೆಯಾಜ್ಞೆ ತಂದಿದ್ದ ಬಿಜೆಪಿ ಶಾಸಕ ಪೂರ್ಣೇಶ್ ಮೋದಿ

ರಾಹುಲ್ ಅವರು ಕೋಲಾರದಲ್ಲಿ ನೀಡಿದ್ದ ಹೇಳಿಕೆ ವಿರುದ್ಧ ಗುಜರಾತಿನ ಬಿಜೆಪಿ ಶಾಸಕ ಪೂರ್ಣೇಶ್ ಮೋದಿ ಅವರು 2019ರಲ್ಲಿ ದೂರು ದಾಖಲಿಸಿದ್ದರು.

ದೂರಿನ ಅನ್ವಯ ಪ್ರಕರಣ ದಾಖಲಾಗಿ, ಸೂರತ್‌ನ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ವಿಚಾರಣೆ ಆರಂಭವಾಗಿತ್ತು. ರಾಹುಲ್ ಗಾಂಧಿ ಸಹ ಮೂರು ಬಾರಿ ವಿಚಾರಣೆಗೆ ಹಾಜರಾಗಿದ್ದರು.

2021ರಲ್ಲಿ ಪೂರ್ಣೇಶ್ ಮೋದಿ ಅವರು, ‘ರಾಹುಲ್ ಅವರ ಹೇಳಿಕೆ ಇರುವ ವಿಡಿಯೊಗಳನ್ನು ನ್ಯಾಯಾಲಯದಲ್ಲಿ ತೋರಿಸಬೇಕು. ಆ ಹೇಳಿಕೆಗಳ ಬಗ್ಗೆ ರಾಹುಲ್ ಸ್ಪಷ್ಟನೆ ನೀಡಬೇಕು’ ಎಂದು ಕೋರಿದ್ದರು. ಈ ಕೋರಿಕೆಯನ್ನು ಅಂದಿನ ನ್ಯಾಯಾಧೀಶರು ವಜಾ ಮಾಡಿದ್ದರು. ಅದರ ಬೆನ್ನಲ್ಲೇ ಪೂರ್ಣೇಶ್ ಮೋದಿ ಅವರು ಗುಜರಾತ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ‘ಸಾಕ್ಷ್ಯ ಸಂಗ್ರಹಕ್ಕೆ ಸಮಯಾವಕಾಶ ಬೇಕು. ಇದಕ್ಕಾಗಿ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ನಡೆಯುತ್ತಿರುವ ವಿಚಾರಣೆಗೆ ತಡೆ ನೀಡಬೇಕು’ ಎಂದು ಕೋರಿದ್ದರು. ಅವರ ಕೋರಿಕೆಯನ್ನು ಮಾನ್ಯ ಮಾಡಿದ್ದ ಹೈಕೋರ್ಟ್, ವಿಚಾರಣೆಗೆ ತಡೆ ನೀಡಿತ್ತು.

2021ರಲ್ಲಿ ಸೂರತ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿದ್ದ ನ್ಯಾಯಾಧೀಶರು ಈಚೆಗಷ್ಟೇ ವರ್ಗಾವಣೆಯಾಗಿದ್ದರು. ತಿಂಗಳ ಹಿಂದಷ್ಟೇ ಮತ್ತೆ ಹೈಕೋರ್ಟ್ ಮೊರೆ ಹೋಗಿದ್ದ ಪೂರ್ಣೇಶ್ ಮೋದಿ, ‘ಸಾಕ್ಷ್ಯ ದೊರೆತಿದೆ. ವಿಚಾರಣೆ ಆರಂಭಕ್ಕೆ ಅನುಮತಿ ನೀಡಿ. ತಡೆಯಾಜ್ಞೆ ತೆರವು ಮಾಡಿ’ ಎಂದು ಕೋರಿದ್ದರು. ತಡೆಯಾಜ್ಞೆಯನ್ನು ಹೈಕೋರ್ಟ್ ತೆರವು ಮಾಡಿತ್ತು.

‘ನನ್ನ ಹೋರಾಟಕ್ಕೆ ಸಂದ ಜಯ’

ಕೋಲಾರ: ರಾಹುಲ್ ಗಾಂಧಿ ಅವರಿಗೆ ಜೈಲು ಶಿಕ್ಷೆ ಹಾಗೂ ಸಂಸತ್ ಸದಸ್ಯತ್ವದಿಂದ ಅನರ್ಹಕ್ಕೆ ಕಾರಣವಾದ ಮೂಲ ವ್ಯಕ್ತಿ ಕೋಲಾರ ಜಿಲ್ಲೆಯ ಮುಳಬಾಗಿಲು ನಗರದ ಪಿ.ಎಂ.ರಘುನಾಥ್.

ಲೋಕಸಭಾ ಚುನಾವಣೆ ನಿಮಿತ್ತ 2019ರ ಏಪ್ರಿಲ್ 13ರಂದು ನಗರದ ಸರ್ ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಕೆ.ಎಚ್.ಮುನಿಯಪ್ಪ ಪರ ರಾಹುಲ್ ಗಾಂಧಿ ಪ್ರಚಾರಕ್ಕೆ ಬಂದಿದ್ದರು.

ಈ ಸಂದರ್ಭದಲ್ಲಿ ರಾಜ್ಯ ಬಿಜೆಪಿ ಒಬಿಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿಯಾಗಿದ್ದ ಪಿ.ಎಂ.ರಘುನಾಥ್ ಚುನಾವಣಾ ಕೆಲಸದ ನಿಮಿತ್ತ ರಾಹುಲ್ ಕಾರ್ಯಕ್ರಮದ ಬಳಿಯೇ ಇದ್ದರು.

‘ಅಂದು ನಾನು ರಾಹುಲ್ ಭಾಷಣ ಕೇಳಿಸಿಕೊಂಡಿದ್ದೆ. ನಾನು ಗುಜರಾತ್‌ನ ಸೂರತ್ ಶಾಸಕ, ನನ್ನ ಸ್ನೇಹಿತ ಪೂರ್ಣೇಶ್ ಮೋದಿ ಗಮನಕ್ಕೆ ತಂದು ಚರ್ಚಿಸಿದೆ. ಪೂರ್ಣೇಶ್ ಕೋರ್ಟ್‌ಗೆ ಅರ್ಜಿ ಸಲ್ಲಿಸಿದರು’ ಎಂದು ರಘುನಾಥ್ ‘ಪ್ರಜಾವಾಣಿ’ಗೆ ತಿಳಿಸಿದರು.

ಗುಜರಾತ್‌ನ ಸೂರತ್ ಕ್ಷೇತ್ರದ ಶಾಸಕ ಪೂರ್ಣೇಶ್ ಮೋದಿ ಜೊತೆ ಕೋಲಾರದ ಬಿಜೆಪಿ ಮುಖಂಡ ಪಿ.ಎಂ. ರಘುನಾಥ್ (ಬಲಬದಿಯಲ್ಲಿ) ಸಂಗ್ರಹ ಚಿತ್ರ

ಪದಬಂಧ 5268

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
4. ಸಂಸಾರದ ಸೆರೆಯಿದು (5)
5. ಬೇಡಿಕೆಗೊಂದು ಪರ್ಯಾಯ ಪದ (3)
7. ಏರುತಗ್ಗಿಲ್ಲದಿರುವುದು (3)
9. ಮಣ ಭಾರ ಹೊತ್ತಿರುವ ನಲ್ಲ (3)
10. ವಿಕ್ರಯಿಸು ಎಂದಾಗ ಬೀಸಿದ ಗಾಳಿ (3)
11. ಶ್ರೀಗಂಧ ಇಲ್ಲಿದೆ (3)
12. ಮರದೊಳಗೆ ಸವಿಯಾದುದು ಬಂದಿದೆ (3)
14. ಆನೆಯ ದಾಡೆ (3)
15. ಬೆಳ್ಳಿ ಹಬ್ಬವಿದು (5)

ಮೇಲಿಂದ ಕೆಳಕ್ಕೆ
1. ಅದೇತಾನೆ ಬಿರಿದ ಹೂವು (4)
2. ಮಾತಿಲ್ಲದ ನೀರವತೆ (2)
3. ಈ ಪರಿ ಬಂದಿರುವ ಅಳತೆ (4)
6. ಈ ತರ ತಮ್ಮನಿಗೆ ತೋರಿದ ಭೇದಭಾವ (4)
8. ಮಾನ ನಡುವಿಟ್ಟುಕೊಂಡು ಸರಿಸಮನಾಗಿರುವಿಕೆ (4)
11. ಚಂದ್ರ ಹುಟ್ಟುವಿಕೆ (4)
13. ದೇವರನ್ನು ರಥದಲ್ಲಿಟ್ಟು ಮಾಡುವ ಮೆರವಣಿಗೆ (4)
15. ವಿರಕ್ತನ ಮೈಯಲ್ಲಿರುವ ನೆತ್ತರು (2)



5267ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮುತ್ತು 2.ಕಾಯಕ
4.ಕಡಿವಾಣ
6.ರುದ್ರಭೂಮಿ
8.ರಾಜಕಾರ್ಯ 9.ತತ್ವಜ್ಞಾನಿ
11.ಸಮಂಜಸ 13.ಮಧುಕರ
15.ತಿಕ್ಕಲು 16.ಗಣಿ

ಮೇಲಿಂದ ಕೆಳಕ್ಕೆ:
1.ಮುದುಕ 2.ಕಾರಣ
3.ಕರಾರು 5.ಡಿರಜ
7.ಮಿಸುನಿ 8.ರಾಯಸ
10.ಜ್ಞಾಪಕ 12.ಸವತಿ
13.ಮಹಲು 14.ರಮಣಿ

ಸುಡೊಕು 5654

	5			7			3	
7			2		3	6		8
		6		4			2	
4		3		1		8		6
	1		9		4		7	
9		8		3		4		1
1		9	3		5		8	7
	6			9			1	
5		7	4		1	9		3

5653 ಸುಡೊಕು

2	4	1	6	8	3	9	7	5
9	8	5	2	4	7	6	1	3
7	6	3	1	9	5	8	4	2
4	5	9	8	2	1	7	3	6
6	1	7	3	5	4	2	9	8
8	3	2	9	7	6	4	5	1
3	2	4	7	1	8	5	6	9
5	9	6	4	3	2	1	8	7
1	7	8	5	6	9	3	2	4

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ
ಶನಿವಾರ ಮಾರ್ಚ್ 25, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ಚೈತ್ರ ಶುದ್ಧ ಚತುರ್ಥಿ ಗಂ. 16-24
ನಕ್ಷತ್ರ: ಭರಣಿ ಗಂ. 13-19 ಯೋಗ: ವಿಷ್ಕಂಭ ಗಂ. 24-19, ಕರಣ: ವಿಷ್ಟಿ ಗಂ. 16-24, ಮೀನ ಮಾಸದ 10 ನೇ ದಿನ. ರಾಹುಕಾಲ : ಬೆಳಿಗ್ಗೆ 09-00 – 10-30 ಸೂರ್ಯೋದಯ : 06-35 ಸೂರ್ಯಾಸ್ತ : 06-38
ಮುಸ್ಲಿಂ ದಿನಾಂಕ : 02 ರಂಜಾನ್
ಅದೃಷ್ಟ ಸಂಖ್ಯೆ : 9, 5

ಮೇಷ: ಉತ್ಸವಾದಿಗಳಲ್ಲಿ ಭಾಗವಹಿಸುವ ಮೂಲಕ ಮನಸ್ಸಿಗೆ ದಿವ್ಯ ಅನುಭೂತಿ ದೊರೆಯುತ್ತದೆ. ಮುಖ್ಯವಾದ ಕೆಲಸಕ್ಕಾಗಿ ಪ್ರಯಾಣ ಬೆಳೆಸುವಿರಿ.

ವೃಷಭ: ಯಾವುದೋ ಯೋಚನೆ ಮಾಡುತ್ತಾ ಇನ್ನಾವುದೋ ಕೆಲಸವನ್ನು ಮಾಡಿ ಅಪಘಾತಗಳನ್ನು ಮಾಡಿಕೊಳ್ಳಬೇಡಿ. ದೂಳು ಹಾಗೂ ಸಣ್ಣ ಕಸಗಳಿಂದ ಶ್ವಾಸಕೋಶ ಹಾಗು ಶ್ವಾಸನಾಳಕ್ಕೆ ತೊಂದರೆ ಉಂಟಾಗಬಹುದು.

ಮಿಥುನ: ಮನೆಯ ಸಮೀಪದಲ್ಲಿರುವ ಸ್ಥಳದಲ್ಲಿ ನಡೆಯುವ ಕಾರ್ಯಕ್ರಮಗಳ ವ್ಯವಸ್ಥೆಯ ಜವಾಬ್ದಾರಿ ನಿಮ್ಮದಾಗಬಹುದು. ಮಕ್ಕಳ ಸಹಕಾರದಿಂದ ಕೆಲಸಗಳು ಅಚ್ಚುಕಟ್ಟಾಗಿ ಮುಗಿಯುವುದು.

ಕರ್ಕಾಟಕ: ಸಾಲ ವಸೂಲಿ ಕಾರ್ಯಕ್ರಮಕ್ಕೆ ಹಲವಾರು ಅಡ್ಡಿ ಆತಂಕಗಳು ಎದುರಾಗುವ ಸಂಭವವಿದೆ. ಅತಿಯಾದರೆ ಅಮೃತವು ವಿಷ ಎಂಬುವಂತೆ ಮಕ್ಕಳ ಮೇಲಿನ ಅತಿಯಾದ ಪ್ರೀತಿ ಮಾರಕವಾಗಿ ಪರಿಣಮಿಸಬಹುದು.

ಸಿಂಹ: ದೂರದ ಪ್ರಯಾಣದ ಆಯಾಸವನ್ನು ಆರಾಮವಾಗಿ ಇರುವುದರಿಂದ ನೀಗಿಸಿಕೊಳ್ಳುವಿರಿ. ಮಕ್ಕಳ ಅಗತ್ಯ ಪೂರೈಸುವುದರಲ್ಲಿ ಆಸಕ್ತರಾದ ನೀವು ಸಂಜೆ ಮಕ್ಕಳೊಂದಿಗೆ ತಿರುಗಾಟ ಮಾಡುವಂತಹರಾಗುವುವಿರಿ.

ಕನ್ಯಾ: ಪ್ರತಿ ವಿಷಯವನ್ನು ತುಂಬಾ ಗಹನವಾಗಿ ಚಿಂತಿಸುತ್ತಾ ಕುಳಿತಲ್ಲಿ ಎಲ್ಲಾ ವಿಷಯಗಳಲ್ಲಿ ಲೋಪ ದೋಷಗಳೇ ಕಂಡು ಬರುವವು. ವಿದ್ಯುತ್ ಉಪಕರಣಗಳಿಂದ ಅಪಾಯ ಸಾಧ್ಯತೆ ಇದ್ದು, ಎಚ್ಚರವಾಗಿರಿ.

ತುಲಾ: ಇಂದು ನಿಮ್ಮ ವಿಮರ್ಶಾತ್ಮಕ ಆಲೋಚನೆಗೆ ಹಾಗೂ ಸಂದರ್ಭೋಚಿತ ಮಾತುಗಳಿಗೆ ಎಲ್ಲರೂ ಪ್ರಶಂಸಿಸುವರು. ಸುಸ್ಥಿರವಾಗಿರುವ ಆಸ್ತಿಯ ಮೇಲೆ ಇತರರ ಕಣ್ಣು ಬೀಳದಂತೆ ಎಚ್ಚರವಹಿಸಿ.

ವೃಶ್ಚಿಕ: ಮೊದಲು ಕೊಟ್ಟ ಮಾತಿನಂತೆ ಕಾರಣಾಂತರದಿಂದ ನಡೆದುಕೊಳ್ಳಲಾಗದೆ ನೋವಾಗಬಹುದು. ಮಗಳ ಅನಾರೋಗ್ಯವು ಹಂತ ಹಂತವಾಗಿ ಸರಿಯಾಗುತ್ತಾ ಬರುವುದು ಸಮಾಧಾನಕರವೆನ್ನಿಸುವುದು.

ಧನು: ಮನೆಯಲ್ಲಿನ ಸಣ್ಣ ಮಕ್ಕಳ ಆರೋಗ್ಯದಲ್ಲಿನ ಏರುಪೇರು ಕಳವಳ ತಂದೊಡ್ಡಬಹುದು. ನಿಯಮಿತ ಯೋಗಾಸನ ಹಾಗೂ ಪ್ರಾಣಾಯಮದ ಅಭ್ಯಾಸದಿಂದ ದಿನವು ಲವಲವಿಕೆಯಿಂದಿರುವುದು.

ಮಕರ: ನವದಂಪತಿಗೆ ಉಲ್ಲಾಸಕರ ಸಮಯ ಅನುಭವಿಸಲು ಕಾಲಾವಕಾಶ ಸಿಗಲಿದೆ. ಕಳೆದು ಹೋದ ದ್ರವ್ಯದ ಲಭ್ಯವು ಇಂದು ಹರ್ಷವನ್ನುಂಟು ಮಾಡಲಿದೆ. ತಾಯಿಯ ಆರೈಕೆಯಿಂದಾಗಿ ಸುಖಕರವೆನಿಸುತ್ತದೆ.

ಕುಂಭ: ಬಿಡುವಿಲ್ಲದ ದಿನಚರಿಯಲ್ಲಿ ಎಷ್ಟೇ ಆಯಾಸವಾಗಿದ್ದರೂ ಮನೆಯವರಿಗೆ ನೀಡುವ ಸಮಯವು ಅತ್ಯಂತ ಪ್ರಮುಖವಾಗಿರುತ್ತದೆ. ಅನಿವಾರ್ಯವಾಗಿ ಕೆಲ ಜವಾಬ್ದಾರಿಗಳು ಬೆನ್ನು ಹತ್ತಲಿವೆ.

ಮೀನ: ಇಷ್ಟು ದಿನ ನೀವು ಲೀಲಾಜಾಲವಾಗಿ ಮಾಡುತ್ತಿದ್ದ ಕೆಲಸಗಳು ಇವತ್ತಿನ ಕಾರ್ಯ ಒತ್ತಡದಿಂದ ಕೈಕಟ್ಟುವಂತಾಗುತ್ತದೆ. ಎಷ್ಟೇ ಒತ್ತಡವಿದ್ದರೂ ಮುಖದಲ್ಲಿನ ನಗುವು ಮಾಸದೇ ಇರಲಿ.

ಸ್ಪಂದನ

ಡಾ. ವೀಣಾ ಎಸ್. ಭಟ್

‘ಸ್ಪಂದನ’ ಅಂಕಣಕ್ಕಾಗಿ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು **bhoomika@prajavani.co.in**

ನನ್ನ ಸಮಯ ನನ್ನದು!

ತಮ್ಮ ಪ್ರತಿಭೆಗೆ ನೀರೆರೆದು ಪೋಷಿಸಿಕೊಳ್ಳುವ ಜವಾಬ್ದಾರಿಯನ್ನು ಮಹಿಳೆಯರೇ ತೆಗೆದುಕೊಳ್ಳಬೇಕು. ಸಮಯ ಹೊಂದಾಣಿಕೆ ಬಗ್ಗೆ ಗಟ್ಟಿಯಾಗಿ ಮಾತಾಡಬೇಕು.

ಶಾಲಿನಿ ಶೆಟ್ಟಿ

ಸುಜಾತಾ ಒಳ್ಳೆಯ ಹಾಡುಗಾರ್ತಿ. ಆದರೆ ಹಾಡುವ ಈ ಕಲೆಯನ್ನು ಹವ್ಯಾಸವನ್ನಾಗಿ ಪೋಷಿಸಿಕೊಳ್ಳುವುದು ಅವಳಿಗ್ಯಾಕೋ ಸಾಧ್ಯವಾಗಲಿಲ್ಲ. ಕಾರ್ಯಕ್ರಮದಲ್ಲಿ ಒಂದೆರಡು ಹಾಡುಗಳನ್ನು ಹಾಡುವಂತೆ ಕೋರಿ, ಮೊನ್ನೆ ಆಯೋಜಕರು ಅವಳಿಗೆ ಫೋನ್ ಮಾಡಿ ಮನವಿ ಮಾಡಿಕೊಂಡರು. ಅಪರೂಪಕ್ಕಾದರೂ ಹಾಡೋಣ ಎಂದು ಅವಳೂ ಹುಮ್ಮಸ್ಸಿನಿಂದ ಒಪ್ಪಿಗೆ ಸೂಚಿಸಿದಳು.

ಭಕ್ತಿಗೀತೆಗಳನ್ನೇ ಹಾಡಬೇಕು ಎಂದು ಆಯೋಜಕರು ಹೇಳಿದ್ದರಿಂದ ಸುಜಾತಾಳಿಗೆ ಸ್ವಲ್ಪವಾದರೂ ಅಭ್ಯಾಸದ ಅಗತ್ಯವಿತ್ತು. ಇಬ್ಬರು ಮಕ್ಕಳನ್ನು ಶಾಲೆಗೆ ಸಿದ್ಧಮಾಡಿ, ಮನೆಮಂದಿಯ ಊಟ ತಿಂಡಿಯ ವ್ಯವಸ್ಥೆಯನ್ನು ಮಾಡಿದ ಬಳಿಕ ತನಗಾಗಿ ಒಂದಿಷ್ಟು ಸಮಯ ಹೊಂದಿಸಿಕೊಳ್ಳುವುದು ಸಾಧ್ಯವಾಗದೇ ಅವಳಿಗೆ ಉಸಿರು ಕಟ್ಟಿದಂತೆ ಆಗಿತ್ತು. ಪ್ರಶಾಂತವಾದ ವಾತಾವರಣದಲ್ಲಿ ಹಾಡನ್ನು ಅಭ್ಯಾಸ ಮಾಡಿಕೊಳ್ಳಲು ಮೂರು ದಿನಗಳಿಂದ ಹರಸಾಹಸ ಪಟ್ಟರೂ ಕೆಲಸಗಳೇ ಮುಗಿಯದಂತಾಗಿದ್ದವು. ಮಾವನಿಗೆ ಬೇಕಾದ ಅಡುಗೆಯೊಂದು ಕಡೆ, ಗಂಡ ಮಕ್ಕಳ ಬೇಕು ಬೇಡಗಳನ್ನು ನಿಭಾಯಿಸುವುದು ಮತ್ತೊಂದು ಕಡೆ...ಎಂದು ನಿರಂತರ ಒತ್ತಡದಲ್ಲಿದ್ದಳು.

‘ಹಾಡುವುದಕ್ಕೆ ಒಪ್ಪಿಕೊಂಡಿದ್ದರಿಂದಲೇ ನನಗೆ ಇಷ್ಟು ಟೆನ್ಶನ್ ಆಗುತ್ತಿದೆ. ಅದೊಂದು ಕೆಲಸ ಒಪ್ಪಿಕೊಳ್ಳದೇ ಇದ್ದಿದ್ದರೆ ಎಂದಿನಂತೆ ಕೆಲಸಗಳನ್ನು ಮಾಡುತ್ತಾ ಹೋಗಬಹುದಿತ್ತು. ಈ ಟೆನ್ಶನ್ನೇ ಇರುತ್ತಿರಲಿಲ್ಲ...’ ಎಂದು ಹತ್ತಾರು ಬಾರಿ ತನ್ನನ್ನೇ ತಾನು ಶಪಿಸಿಕೊಂಡಳು.

ಹೌದು. ಈ ತಪ್ಪಿತಸ್ಥ ಭಾವನೆಯನ್ನು ಕೇವಲ ಮಹಿಳೆಯರು ಮಾತ್ರ ಪದೇ ಪದೇ ತಮ್ಮ ಮನಸ್ಸಿಗೆ ತಂದುಕೊಳ್ಳುತ್ತಾರೆ ಅಥವಾ ಅವರು ಹಾಗೆ ಯೋಚನೆ ಮಾಡುವಂತೆ ಮನೆಯ ಸದಸ್ಯರು ವರ್ತಿಸುತ್ತಾರೆ ಎಂದರೂ ತಪ್ಪೇನೂ ಆಗದು. ‘ನೀನು ಹಾಡುವುದಕ್ಕೆ ಒಪ್ಪಿಕೊಂಡಿದ್ದೀಯಲ್ಲ..ಸ್ವಲ್ಪ ಅಭ್ಯಾಸ ಮಾಡಿಕೊ. ಇದಿಷ್ಟು ಕೆಲಸವನ್ನು ನಾನು ಮಾಡುತ್ತೇನೆ’ ಎಂದು ಮನೆಯ ಇತರ ಸದಸ್ಯರು ಯಾಕೆ ಕೈ ಜೋಡಿಸುವುದಿಲ್ಲ ಎಂದು ಅನೇಕ ಬಾರಿ ಅನಿಸುತ್ತದೆ. ಅಥವಾ ಅದು ಹೀಗಿರಬಹುದು: ತನ್ನ ಆಸಕ್ತಿ ಮತ್ತು ಪ್ರತಿಭೆಗೆ ಒಂದಿಷ್ಟು ಸ್ಪೇಸ್ ಬೇಕು ಎಂದು ಆಗ್ರಹಿಸುವ ಪ್ರವೃತ್ತಿಯನ್ನು ಮಹಿಳೆಯರು ಯಾಕೆ ರೂಢಿಸಿಕೊಳ್ಳುವುದಿಲ್ಲ? ತನಗೆ ಹಾಡುವುದಕ್ಕಿದೆ, ಚಿತ್ರಬಿಡಿಸುವುದಕ್ಕಿದೆ, ಯಾವುದೋ ಫೆಲೋಶಿಪ್‌ಗೆ ಅರ್ಜಿ ತುಂಬುವುದಕ್ಕಿದೆ. ಆದ್ದರಿಂದ ಇವತ್ತು ಮನೆಯ ಈ ಕೆಲಸವನ್ನು ನಾನು ನಿಭಾಯಿಸಲಾರೆ ಎಂದು ಹೇಳುವುದಕ್ಕೆ ಎಷ್ಟೋ ಮನೆಗಳಲ್ಲಿ ಮಹಿಳೆಯರು ಹಿಂದೇಟು ಹಾಕುತ್ತಾರೆ. ಯಾಕೆ ಹೀಗೆ ?

‘ನಿನಗೆ ಇಷ್ಟವಾದ ಯಾವುದೇ ಸಾಧನೆಯನ್ನು ಮಾಡುವುದಕ್ಕೆ ಬೆಂಬಲವಿದೆ’ ಎಂಬ ಮಾತುಗಳು ಅನೇಕರ ಮನೆಯಲ್ಲಿ ಕೇಳಿಬರುತ್ತವೆ. ಆದರೆ ನಿಜವಾಗಿಯೂ ಆಕೆ ಪೆನ್ನು ಪೇಪರು ಹಿಡಿದು ಕುಳಿತಾಗಲಷ್ಟೇ ಬೆಂಬಲದ ಪ್ರಮಾಣವು ಎಷ್ಟರಮಟ್ಟಿಗಿದೆ ಎನ್ನುವುದು ಅರ್ಥವಾಗುತ್ತದೆ. ಈ ವಿಚಾರದ ಇನ್ನೊಂದು ಆಯಾಮವನ್ನೂ ಮರೆಯುವಂತಿಲ್ಲ. ‘ನಿನಗಾಗಿ ಸಮಯವನ್ನು ನೀನೇ ಹೊಂದಿಸಿಕೊಳ್ಳಬೇಕು. ನಾವ್ಯಾರಾದ್ರೂ ಬಂದು ಪೆನ್ನು ಪೇಪರು ಹಿಡಿದು ಈ ಬರೆಯಮ್ಮಾ ಎಂದು ಮುದ್ದು ಮಾಡುವುದಕ್ಕಾಗುತ್ಯೇ...’ ಎಂಬ ಒರಟು ಮಾತುಗಳನ್ನು ಕೇಳಬೇಕಾದ ಪರಿಸ್ಥಿತಿಗಳೂ ಇವೆ.

ಒಟ್ಟಿನಲ್ಲಿ ತಮ್ಮ ಪ್ರತಿಭೆಗೆ ನೀರೆರೆದು ಪೋಷಿಸಿಕೊಳ್ಳುವ ಜವಾಬ್ದಾರಿಯನ್ನು ಮಹಿಳೆಯರೇ ವಹಿಸಿಕೊಳ್ಳಬೇಕಾಗುತ್ತದೆ. ಆದ್ದರಿಂದ ತಮಗಾಗಿ ಸಮಯ ಹೊಂದಿಸಿಕೊಳ್ಳುವ ಮುನ್ನ, ಮನೆಯಲ್ಲಿ ಗಟ್ಟಿಯಾಗಿ ತಮ್ಮ ವಿಚಾರವನ್ನು ಮಂಡನೆ ಮಾಡಬೇಕಾಗುತ್ತದೆ. ನಾನು ಹಾಡಬೇಕಾಗಿದೆ. ಆದ್ದರಿಂದ ಮನೆಕೆಲಸಕ್ಕೆ ಸಹಾಯ ಬೇಕು. ಸಂಜೆಯ ಕೆಲಸಗಳನ್ನು ಮನೆಯವರೇ ನಿರ್ವಹಿಸಬೇಕು ಅಥವಾ ನಿರ್ವಹಣೆಗೆ ಸಹಾಯಕರನ್ನು ನೇಮಿಸಿಕೊಳ್ಳಬೇಕು ಎಂದು ಮುಕ್ತವಾಗಿ ಹೇಳುವಷ್ಟು ಗಟ್ಟಿಗಿತ್ತಿಯರಾಗಬೇಕಾಗುತ್ತದೆ.

ಸಾಮಾನ್ಯವಾಗಿ ಮನೆಯಲ್ಲಿನ ಹಲವು ಜವಾಬ್ದಾರಿಗಳನ್ನು ಮಹಿಳೆಯರು ನಿರ್ವಹಿಸುತ್ತಾರೆ. ಹಾಗಾಗಿ ಪ್ರತೀ ದಿನವನ್ನೂ ಯೋಜಿಸಿ ಕೆಲಸಗಳನ್ನು ನಿರ್ವಹಿಸುವುದು ಕೂಡ ಆಕೆಯೇ. ಅಪವಾದಗಳು ಇರಬಹುದೇನೋ. ಆದರೆ ಯೋಜನೆ ರೂಪಿಸುವ ಸೂತ್ರವು ತಮ್ಮ ಕೈಯ್ಯಲ್ಲಿದ್ದಾಗಲೂ ಮಹಿಳೆಯರೇಕೆ ತಮಗಾಗಿ ಒಂದಿಷ್ಟು ಸಮಯ ಮೀಸಲಿಟ್ಟುಕೊಳ್ಳುವುದಿಲ್ಲ ಎನ್ನುವುದೂ ಸೋಜಿಗ ಅನಿಸುತ್ತದೆ. ತನಗಾಗಿ ಸಮಯ ಹೊಂದಿಸಿಕೊಳ್ಳುವುದು ಅಪರಾಧ ಎಂಬ ಭಾವನೆ ಎಷ್ಟೋ ಮಂದಿ ಮಹಿಳೆ ಯರ ಮನದಲ್ಲಿದೆ. ಅದನ್ನು ಮೊದಲು ಕಿತ್ತೆಸೆದು, ತನ್ನ ವ್ಯಕ್ತಿತ್ವವನ್ನು ಅರಳಿಸಿಕೊಳ್ಳುವುದಕ್ಕೆ ಸಮಯ ಹೊಂದಿಸಿಕೊಳ್ಳುವುದು ತಪ್ಪಲ್ಲ ಎಂಬ ಭಾವನೆಯನ್ನು ಮೂಡಿಸಿಕೊಳ್ಳಬೇಕಾಗಿದೆ.

ಯೋಜನೆಗಳನ್ನು ರೂಪಿಸುವಾಗ, ಇಡೀ ವಾರದ ಆಹಾರ ಪಟ್ಟಿಯನ್ನು ಸಿದ್ಧಪಡಿಸಿಕೊಳ್ಳಬಹುದು. ಆಗ ನಾಳೆ ’ಬೆಳಿಗ್ಗೆಗೆ ಏನು ತಿಂಡಿ ಮಾಡಬೇಕು‘ ಎಂದು ಯೋಚಿಸುತ್ತಾ ಸಮಯ ವ್ಯಯ ಮಾಡಬೇಕಾಗಿಲ್ಲ. ಹಾಗೆ ವಾರದ ಅಡುಗೆ ಪ್ಲಾನ್ ಸಿದ್ಧ ಮಾಡುವಾಗಲೇ, ಕೆಲವು ದಿನ ಹಗುರವಾದ ತಿಂಡಿಯನ್ನು, ಮತ್ತೆ ಕೆಲವು ದಿನ ಹಗುರವಾದ ಊಟದ ವ್ಯವಸ್ಥೆಯನ್ನು ಮಾಡಿಕೊಂಡು ತಮ್ಮ ಅಭ್ಯಾಸಗಳಿಗಾಗಿ, ಚಟುವಟಿಕೆಗಳಿಗಾಗಿ ಸಮಯವನ್ನು ತೆಗೆದಿಟ್ಟುಕೊಳ್ಳಬಹುದು. ಅಥವಾ ತಮ್ಮ ಪ್ರತಿಭೆಯನ್ನುಪೋಷಿಸಿಕೊಳ್ಳಲು, ಕೆಲಸಗಳನ್ನು ನಿರ್ವಹಿಸಲು ಅಗತ್ಯವೆನಿಸಿದಾಗ ಸಹಾಯದ ಅಗತ್ಯವಿದೆ ಎನ್ನುವುದನ್ನು ಮನೆಮಂದಿಗೆ ಮನದಟ್ಟು ಮಾಡುವುದು ಮುಖ್ಯ.

ಮಕ್ಕಳ ಪ್ರತಿಭೆಗೆ ಹೇಗೆ ಪ್ರೋತ್ಸಾಹ ಕೊಡುವುದು ಮುಖ್ಯವೋ, ತನ್ನ ಪ್ರತಿಭೆಗೆ ಪ್ರೋತ್ಸಾಹ ಕೊಡುವುದೂ ಅಷ್ಟೇ ಮುಖ್ಯ ಎನ್ನುವುದನ್ನು ಮೊದಲು ಅಮ್ಮನೇ ಅರಿಯುವುದು ಅನಿವಾರ್ಯ. ‘ನೀನಿನ್ನು ಹಾಡಿ ಏನು ಸಾಧನೆ ಮಾಡಬೇಕಾಗಿದೆ ?’ ಎಂದು ಒರಟಾಗಿ ಎದುರಾಗುವ ಪ್ರಶ್ನೆಯನ್ನು ಸಾರಾಸಗಟಾಗಿ ತಳ್ಳಿ ಹಾಕಿ, ‘ನಾನು ಹಾಡುವುದು ಸಾಧನೆಗಾಗಿ ಅಲ್ಲ, ಸಂತೋಷಕ್ಕಾಗಿ’ ಎಂಬುದನ್ನು ಸ್ಪಷ್ಟವಾಗಿ ಹೇಳುವುದಕ್ಕೆ ಮುಜುಗರವೇಕೆ... ❖

JOCKEY

FACTORY SECONDS UP TO 50% OFF*

* T & C apply

• 10 am to 8 pm • Open All Days • Master/Visa Card Accepted

INNERWEAR | LEISUREWEAR | ACTIVEWEAR | KIDSWEAR | SOCKS

Venues in Bangalore

- **Infantry Road:** Safina Plaza, No.84/85 - 01
- **Banashankari:** Sri Hari Kalyana Mantap, 30th Main, B.S.K. 3rd Stage, Near K.I.M.S. Hospital - 85
- **Bannerghatta Road:** Santhome Parish Church Hall, Hulimavu, Near Meenakshi Mall - 76
- **Jayanagar:** Premchandra Kalyana Mahal, 2nd Block, (Near Ashoka Pillar) - 11
- **Koramangala:** P.M.R. Memorial Hall, No.137,1st Cross,5th Block, Koramangala Lay Out, (Near Jyothi Nivas College) - 95
- **Mahalaxmipuram:** Sri Vidyaranya Prarthana Mandira, (Sri Avani Sringeri Shankar Mutt), West Of Chord Road, Next To Anupama English School - 86
- **Malleswaram:** The Canara Union, No.42, 8th Main, Canara Union Road - 03
- **Domlur:** Domlur Club, 3, 4th Main Road, 2nd Stage - 71
- **Vijay Nagar:** Five O Gallery 17th Cross, M.C. Road, Near Vijay Nagar Bus Stop - 40
- **Rajarajeswari Nagar:** Vasavi Mahal Kalyana Mantapa, Next To Reliance Digital, Ideal Homes I Phase - 98
- **Kundalahalli:** S K R Convention Hall, Thubarahalli, Kundalahalli Gate, Varthur Main Road - 66
- **M.S.R. Nagar:** Ramachandra Convention Hall, 8th Cross, New BEL Road, Behind Punjab National Bank, Near Mayuri Hotel - 54
- **Koramangala:** Apoorva International, #35A, Raheja Arcade, Opp Star Box - 95
- **Basavanagudi:** Amolak Apparels, #104, Bull Temple Road, Near Ramakrishna Ashram - 19

Org. by: Surya Agency Pvt. Ltd.

On the Occasion of Wedding Presenting

New Crafts ನ್ಯೂ ಕ್ರಾಫ್ಟ್ಸ್ ಸಿಲ್ಕ್ ಇಂಡಿಯಾ

Silk India®

Exhibition & Sale 2023

An opulent show of Ethnic & Traditional Silk, Cotton Handloom Products made by master 100 Weavers from all over India

Silk Saree | Suits | Dress Material | Stoles | Dupattas | Kurtas | Kurties | Pure & Probable Silk | Tussar Silk | Shanthipur Silk

WHITE HOUSSE Full A/c

Next to BDA Complex, Sector 6, HSR Layout, Bengaluru.

From : 23rd to 29th Mar. 2023

Products on Display - **Orissa :** Sambhalpuri Ikkat Silk Saree, **Bihar :** Oragnic Tassar Silk Sarees, Suit & Stoles, **Assam :** Muga & Eri Silk Sarees, **Karnataka :** Creap Silk, Georgette Silk, Arini Silk & Printed Sarees, **Tamilnadu :** Kanjeevaram Silk Sarees & Designer Fancy Sarees, **Andra Pradesh :** Dharmavara, Uppada, Gadwal, Mangalagiri & Pochampalli Sarees, **Uttar Pradesh :** Mulbari Silk, Jamdani, Jamawar Silk Sarees & Chiffon Silk, **Maharashtra :** Designer Dress materials, **Chhatisgarh :** Exclusive Raw Silk Sarees, Kosa Silk, Tassar Suit & Duppatta, **Madhya Pradesh :** Maheswari, Chanderi Silk Sarees & Suit, **West Bengal :** Baluchari, Dhaka Masli, Gicha Sarees, Boutique Sarees, Kantha Sarees, Zordoshi, **Jammu & Kashmir :** Chinon Silk, Tady Silk Printed Sarees, Pashmina Shawls & Suit, **Rajasthan :** Kota Silk, Hand Block Print Dress & Sarees, **Punjab :** Fulkari Dress and many more...

5 Days Only

Don't miss it

Time : 10.30 am - 8.30 pm Call: 094116 50346

All Credit & Debit Cards Accepted

Entry & Parking Free

GRT JEWELLERS Since 1964

ಯಲಹಂಕದ ಅತಿದೊಡ್ಡ ಆಭರಣ ಶೋರೂಂ

ಈಗ ತೆರೆದಿದೆ

ಪ್ರತಿ ಗ್ರಾಂಗೆ ₹50* ಕಡಿಮೆ ಚಿನ್ನಾಭರಣವನ್ನು ಖರೀದಿಸುವಾಗ	ಪ್ರತಿ ಗ್ರಾಂಗೆ ₹50* ಅಧಿಕ ಹಳೆಯ ಚಿನ್ನವನ್ನು ಎಕ್ಸ್‌ಚೇಂಜ್ ಮಾಡುವಾಗ	10% ರಿಯಾಯಿತಿ* ವಜ್ರ ಮತ್ತು ಅನ್‌ಕಟ್ ವಜ್ರದ ಮೌಲ್ಯದ ಮೇಲೆ
25% ರಿಯಾಯಿತಿ* ಬೆಳ್ಳಿ ಸಾಮಾಗ್ರಿಗಳ ಮಜೂರಿಯ ಮೇಲೆ	10% ರಿಯಾಯಿತಿ* ಬೆಳ್ಳಿ ಆಭರಣಗಳ MRPಯ ಮೇಲೆ	

*ಈ ಆಫರ್ ಯಲಹಂಕ ಶೋರೂಮ್‌ನಲ್ಲಿ ಸೀಮಿತ ಅವಧಿಗೆ ಮಾತ್ರ ಲಭ್ಯ. ಇದು ಚಿನ್ನದ ನಾಣ್ಯಗಳು ಹಾಗೂ ಬಾರ್‌ಗಳಿಗೆ ಅನ್ವಯಿಸುವುದಿಲ್ಲ. ಇದನ್ನು ಬೇರೆ ಯಾವುದೇ ಆಫರ್‌ಗಳ ಜೊತೆ ಸೇರಿಸಲಾಗುವುದಿಲ್ಲ.

ಆಭರಣ ಖರೀದಿ ಯೋಜನೆಗೆ ಇಂದೇ ಸೇರಿಕೊಳ್ಳಿ
&
ಗಿಫ್ಟ್ + ಗಿಫ್ಟ್ ಬೋನಾಂಜಾವನ್ನು ಆನಂದಿಸಿ
ಯಲಹಂಕದ ಶೋರೂಂನಲ್ಲಿ ಮಾತ್ರ
ಕೊಡುಗೆ ಅವಧಿ : ಮಾರ್ಚ್ 10 ರಿಂದ ಏಪ್ರಿಲ್ 10 ರವರೆಗೆ

*ನಿಯಮ ನಿಬಂಧನೆಗಳು ಅನ್ವಯಿಸುತ್ತವೆ.

UPI ಸಂದಾಯಗಳ ಮೇಲೆ ಆಕರ್ಷಕವಾದ ಉಡುಗೊರೆಗಳನ್ನು ಪಡೆಯಿರಿ.

ನಂ. 1195/1, B.B. ರಸ್ತೆ, ಮಹೇಶ್ವರಿ ನಗರ, ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನದ ಹತ್ತಿರ, ಯಲಹಂಕ ಓಲ್ಡ್ ಟೌನ್ ವೃತ್ತ, ಯಲಹಂಕ, ಬೆಂಗಳೂರು - 560064. PH: 080 - 2990 8415.

Store Locator

Shop online at: www.oriana.com | mail@grtjewels.com

GRT LIVE VIDEO SHOPPING Shop from the comfort of your home

ಸಾಗರದಿಂದ ಶ್ರವಣಬೆಳಗೊಳಕ್ಕೆ ಆಗಮ ಇಂದ್ರ

ಪ್ರಜಾವಾಣಿ ವಾರ್ತೆ

ಹಾಸನ: ಶ್ರವಣಬೆಳಗೊಳ ದಿಗಂಬರ ಜೈನ ಮಠದ ಪೀಠಾಧಿಪತಿಯಾಗಿ ಶಿವಮೊಗ್ಗ ಜಿಲ್ಲೆಯ ಸಾಗರದ ಆಗಮ ಕೀರ್ತಿ ಅವರ ಪಟ್ಟಾಭಿಷೇಕ ಮಹೋತ್ಸವ ಮಾರ್ಚ್ 27 ರಂದು ಬೆಳಿಗ್ಗೆ 9.15ಕ್ಕೆ ಶ್ರೀಜೈನ ಮಠದ ಬಸದಿಯಲ್ಲಿ ನಡೆಯಲಿದೆ.

ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರಿಗೆ ಮಠದಲ್ಲಿ ಶುಕ್ರವಾರ ಏರ್ಪಡಿಸಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಹೊಂಬುಜ ಜೈನ ಮಠದ ದೇವೇಂದ್ರ ಕೀರ್ತಿ ಭಟ್ಟಾರಕ ಸ್ವಾಮೀಜಿ ಅವರು ಈ ವಿಷಯ ತಿಳಿಸಿದರು.

‘ಪೂರ್ವಾಶ್ರಮದಲ್ಲಿ ಆಗಮ ಇಂದ್ರ ಆಗಿದ್ದ ಅವರು ಅಭಿನವ ಸ್ವಸ್ತಿಶ್ರೀ ಆಗಮ ಕೀರ್ತಿ ಭಟ್ಟಾರಕ ಸ್ವಾಮೀಜಿಯಾಗಿ ಪೀಠಾರೋಹಣ ಮಾಡುವರು. ನಾಲ್ಕು ತಿಂಗಳ ಹಿಂದೆಯೇ ಅವರಿಗೆ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರು ವಿಚಾರಪಟ್ಟ ಕ್ಷುಲ್ಲಕ ದೀಕ್ಷೆ ನೀಡಿದ್ದು, ಆಗಮ ಕೀರ್ತಿ ಎಂದು ನಾಮಕರಣ ಮಾಡಿದ್ದರು. ತಮ್ಮ ಜೊತೆಗೆ ಇರಿಸಿಕೊಂಡು ಮಠದ ಪರಂಪರೆ, ಸಂಸ್ಕಾರ, ಕ್ಷೇತ್ರದ ಪರಿಚಯ ಮಾಡಿಸಿದ್ದರು’ ಎಂದರು.

‘ಚಾರುಕೀರ್ತಿ ಸ್ವಾಮೀಜಿ ಅವರು ಉತ್ತರಾಧಿಕಾರಿಯಾಗಿ ಆಗಮ ಕೀರ್ತಿಗಳ ಹೆಸರು ವಿಲ್ ಮಾಡಿದ್ದರು. ಸಮಾಜದ ಪ್ರಮುಖರು, ಆಡಳಿತ ಮಂಡಳಿಯ ಸದಸ್ಯರ ಸಭೆ ಕರೆದು ಲಿಖಿತ ರೂಪದಲ್ಲಿಯೂ ತಿಳಿಸಿದ್ದರು. ಪಟ್ಟಾಭಿಷೇಕದ ನಂತರವೇ ಕ್ಷೇತ್ರದ ಆಡಳಿತ ಜಾರಿಗೆ ಬರಲಿದ್ದು, ಅಲ್ಲಿಯವರೆಗೆ ಕ್ಷೇತ್ರದ ನಿರ್ವಹಣೆಯ ಖರ್ಚುವೆಚ್ಚಗಳನ್ನು ಶಿಷ್ಯವರ್ಗ ಮತ್ತು ಭಕ್ತರು ನಿರ್ವಹಿಸುವರು. ಪಟ್ಟಾಭಿಷೇಕದ ನಿರ್ವಹಣೆಗೆ ತಾತ್ಕಾಲಿಕ ಬ್ಯಾಂಕ್ ಖಾತೆ ತೆರೆಯಲಾಗಿದೆ. ನಂತರ ಸಾರ್ವಜನಿಕ ಸಮಾರಂಭ ಆಯೋಜಿಸಲಾಗುವುದು’ ಎಂದರು.

ಆಗಮ ಇಂದ್ರ ಅವರ ಪರಿಚಯ


ಆಗಮ ಕೀರ್ತಿ ಭಟ್ಟಾರಕ ಸ್ವಾಮೀಜಿ

2001ರ ಫೆಬ್ರುವರಿ 2 ರಂದು ಜನಿಸಿರುವ ಆಗಮ ಇಂದ್ರ ಅವರು, ಸಾಗರದ ಅಶೋಕ್‌ಕುಮಾರ್ ಇಂದ್ರ ಹಾಗೂ ಅನಿತಾ ದಂಪತಿಯ ಪುತ್ರ.

ಪ್ರಾಥಮಿಕ, ಪ್ರೌಢಶಿಕ್ಷಣ ಹಾಗೂ ಪದವಿ ಶಿಕ್ಷಣವನ್ನು ಸಾಗರದಲ್ಲಿ, ಪದವಿಪೂರ್ವ ಶಿಕ್ಷಣವನ್ನು ದಕ್ಷಿಣ ಕನ್ನಡ ಜಿಲ್ಲೆಯ ಉಜಿರೆಯಲ್ಲಿ ಪಡೆದಿದ್ದಾರೆ.

ಅವರು ಇಂಗ್ಲಿಷ್, ಕನ್ನಡ, ಹಿಂದಿ ಬಲ್ಲವರಾಗಿದ್ದು, ಎನ್‌ಸಿಸಿ ಕೆಡೆಟ್ ಬಿ ಮತ್ತು ಸಿ. ಪ್ರಮಾಣಪತ್ರವನ್ನು ಹೊಂದಿದ್ದಾರೆ.

ರಾಹುಲ್ ಸದಸ್ಯತ್ವಕ್ಕೆ ಕುತ್ತು

ಒಂದನೇ ಪುಟದಿಂದ

ಮಾನನಷ್ಟ ಪ್ರಕರಣದ ಮೇಲ್ಮನವಿಯಲ್ಲಿ ರಾಹುಲ್ ಪರ ತೀರ್ಪು ಬಂದರೆ, ತಮ್ಮ ಸ್ಥಾನವನ್ನು ಮರಳಿ ನೀಡುವಂತೆ ಲೋಕಸಭಾ ಕಾರ್ಯಾಲಯವನ್ನು ಕೋರುವುದಕ್ಕೆ ಅವಕಾಶ ಇದೆ.

ತೀರ್ಪು ಮತ್ತು ಅನರ್ಹತೆಯ ಕುರಿತಂತೆ ಕಾಂಗ್ರೆಸ್ ಮುಖಂಡರು ಬಹಿರಂಗವಾಗಿ ಏನನ್ನೂ ಹೇಳಿಲ್ಲ. ಆದರೆ, ಈಗಿನ ನಡೆಯು ರಾಹುಲ್ ಗಾಂಧಿ ಮತ್ತು ಕಾಂಗ್ರೆಸ್ ಪಕ್ಷಕ್ಕೆ ಪೂರಕವಾಗಿ ಪರಿವರ್ತನೆ ಆಗಬಹುದು ಎಂಬ ಭಾವನೆ ಕಾಂಗ್ರೆಸ್‌ನ ಕೆಲವು ನಾಯಕರಲ್ಲಿ ಇದೆ.

ರಾಹುಲ್ ವಿರುದ್ಧ ಕೈಗೊಂಡಿರುವ ಕ್ರಮವು ಬಿಜೆಪಿ ವಿರೋಧಿ ಪಕ್ಷಗಳ ನಡುವಣ ಸಮೀಕರಣವನ್ನೇ ಬದಲಾಯಿಸಿದೆ. ಈತನಕ ಕಾಂಗ್ರೆಸ್‌ನಿಂದ ಅಂತರ ಕಾಯ್ದುಕೊಂಡಿದ್ದ ಟಿಎಂಸಿ, ಎಎಪಿ, ಭಾರತ ರಾಷ್ಟ್ರ ಸಮಿತಿ ಮತ್ತು ಸಮಾಜವಾದಿ ಪಕ್ಷ ರಾಹುಲ್ ಬೆಂಬಲಕ್ಕೆ ನಿಂತಿವೆ. ಬಿಜೆಪಿ ವಿರೋಧಿ ಇತರ ಪಕ್ಷಗಳು ಕೂಡ ರಾಹುಲ್ ಬೆಂಬಲಕ್ಕೆ ಗಟ್ಟಿಯಾಗಿ ನಿಂತಿವೆ.

ಅಧಿಸೂಚನೆ ಪ್ರಕಟವಾಗುವುದಕ್ಕೆ ಮುನ್ನ, ರಾಹುಲ್ ಅವರು ಲೋಕಸಭಾ ಕಲಾಪಕ್ಕೆ ಹಾಜರಾಗಿದ್ದರು. ಕಲಾಪ ಆರಂಭಕ್ಕೆ ಮುನ್ನ ಅವರು ಸಂಸತ್ ಭವನದಲ್ಲಿ ನಡೆದ ಪಕ್ಷದ ಸಂಸದರ ಸಭೆಯಲ್ಲಿಯೂ ಭಾಗವಹಿಸಿದ್ದರು.

ಅನರ್ಹತೆಗೆ ಪ್ರತಿಕ್ರಿಯೆ ನೀಡಿದ ಕಾಂಗ್ರೆಸ್, ಇದು ಭಾರತದ ಪ್ರಜಾಪ್ರಭುತ್ವದ ಕರಾಳ ದಿನ ಎಂದಿದೆ. ರಾಹುಲ್ ಅವರು ಸತ್ಯವನ್ನು ಹೇಳುತ್ತಿದ್ದಾರೆ. ಸಂವಿಧಾನ ಮತ್ತು ಜನರ ಹಕ್ಕುಗಳಿಗಾಗಿ ಹೋರಾಡುತ್ತಿದ್ದಾರೆ. ಹಾಗಾಗಿ, ಅವರನ್ನು ಅನರ್ಹಗೊಳಿಸಲು ಬಿಜೆಪಿ ಎಲ್ಲ ಪ್ರಯತ್ನವನ್ನೂ ಮಾಡಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

‘ಇಲ್ಲಿ ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದ ಪ್ರಶ್ನೆಯೇ ಇಲ್ಲ. ಲಲಿತ್ ಮೋದಿ ಮತ್ತು ನೀರವ್ ಮೋದಿ ಹಿಂದುಳಿದ ವರ್ಗಗಳಿಗೆ ಸೇರಿದವರು ಅಲ್ಲ. ರಾಹುಲ್ ಅವರು ಹಿಂದುಳಿದ ವರ್ಗಗಳ ವಿರುದ್ಧ ಮಾತನಾಡಿದ್ದಾರೆ ಎಂದು ಬಿಂಬಿಸುವ ಯತ್ನ ನಡೆದಿದೆ. ರಾಹುಲ್ ಅವರು ದೇಶದ ಮುಂದೆ ಸತ್ಯವನ್ನು ತೆರೆದಿಡಲು ಯತ್ನಿಸಿದ್ದಾರೆ. ಆದರೆ, ಕೆಲವರಿಗೆ ಅದು ಇಷ್ಟ ಆಗಿಲ್ಲ’ ಎಂದು ಖರ್ಗೆ ವಿವರಿಸಿದ್ದಾರೆ.

ಹಿಂದುಳಿದ ವರ್ಗಗಳವರು ಕಳ್ಳರು ಎಂದು ರಾಹುಲ್ ಅವರು ಹೇಳಿದ್ದಾರೆ ಎಂದು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಹೇಳಿದ್ದಾರೆ. ಅದಕ್ಕೆ ಪ್ರತಿಕ್ರಿಯೆಯಾಗಿ ಖರ್ಗೆ ಹೀಗೆ ಹೇಳಿದ್ದಾರೆ.

ರಾಹುಲ್ ಅನರ್ಹತೆಯಿಂದಾಗಿ ವಯನಾಡ್ ಲೋಕಸಭಾ ಕ್ಷೇತ್ರ ತೆರವಾಗಿದೆ. ಈ ಲೋಕಸಭೆಯ ಅವಧಿಯು ಮುಂದಿನ ಜೂನ್‌ಗೆ ಕೊನೆಗೊಳ್ಳುತ್ತದೆ. ತೆರವಾದ ವಯನಾಡ್ ಕ್ಷೇತ್ರಕ್ಕೆ ಆರು ತಿಂಗಳೊಳಗೆ ಉಪಚುನಾವಣೆ ನಡೆಸಬೇಕಾಗುತ್ತದೆ. ಅಂದರೆ, ಮುಂದಿನ ಲೋಕಸಭಾ ಚುನಾವಣೆಯು 2024ರಲ್ಲಿ ನಡೆಯಲಿದೆ. ಅದಕ್ಕೆ ಕೆಲವೇ ತಿಂಗಳ ಮೊದಲು ಈ ಉಪಚುನಾವಣೆ ನಡೆಯಬೇಕಾಗುತ್ತದೆ.

ಕಾಂಗ್ರೆಸ್‌ನಿಂದ ‘ರಾಜಭವನ ಚಲೋ’ • ಪ್ರತಿಭಟನಕಾರರು ವಶಕ್ಕೆ

ಪರಿಶಿಷ್ಟರಿಗೆ ದ್ರೋಹ ಆರೋಪ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೀಸಲಾತಿ ಹೆಚ್ಚಳ ವಿಚಾರದಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡದ ಸಮುದಾಯಗಳಿಗೆ ರಾಜ್ಯ ಬಿಜೆಪಿ ಸರ್ಕಾರ ದ್ರೋಹ ಮಾಡುತ್ತಿದೆ’ ಎಂದು ಆರೋಪಿಸಿ ಶುಕ್ರವಾರ ‘ರಾಜಭವನ ಚಲೋ’ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ನಾಯಕರು ಮತ್ತು ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದು, ಬಳಿಕ ಬಿಡುಗಡೆ ಮಾಡಿದರು.

ನಂತರ ರಾಜ್ಯಪಾಲರನ್ನು ಭೇಟಿ ಮಾಡಿದ ಕಾಂಗ್ರೆಸ್ ನಾಯಕರು, ‘ಶೋಷಿತ ಸಮುದಾಯಗಳಿಗೆ ಮೋಸ ಮಾಡಿರುವ ಬಿಜೆಪಿ ಸರ್ಕಾರವನ್ನು ವಜಾಗೊಳಿಸಬೇಕು’ ಎಂದು ಆಗ್ರಹಿಸಿ ಮನವಿ ಸಲ್ಲಿಸಿದರು.

ಕ್ವೀನ್ಸ್ ರಸ್ತೆಯ ಕೆಪಿಸಿಸಿ ಕಚೇರಿಯಿಂದ ಆರಂಭವಾದ ಪ್ರತಿಭಟನಾ ಯಾತ್ರೆ ಬಾಳೆಕುಂದ್ರಿ ವೃತ್ತದ ಬಳಿ ತಲುಪುತ್ತಿದ್ದಂತೆ ತಡೆದ ಪೊಲೀಸರು, ಕಾಂಗ್ರೆಸ್ ನಾಯಕರನ್ನು ವಶಕ್ಕೆ ಪಡೆದರು.

ರಾಜಭವನ ಚಲೋ ಪ್ರತಿಭಟನೆಯಲ್ಲಿ ಡಿ.ಕೆ. ಶಿವಕುಮಾರ್, ಜಿ. ಪರಮೇಶ್ವರ, ಸಿದ್ದರಾಮಯ್ಯ, ಸಲೀಂ ಅಹ್ಮದ್ ಇದ್ದರು

ರಾಜ್ಯಪಾಲರಿಗೆ ಮನವಿ ಸಲ್ಲಿಸಿದ ಬಳಿಕ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ‘ರಾಜ್ಯದ ಜನರಿಗೆ ದ್ರೋಹ ಬಗೆದಿರುವ ರಾಜ್ಯ ಬಿಜೆಪಿ ಸರ್ಕಾರ ಅಧಿಕಾರದಲ್ಲಿ ಮುಂದುವರಿಯಬಾರದು. ಸರ್ಕಾರವನ್ನು ತಕ್ಷಣ ವಜಾಗೊಳಿಸಬೇಕು ಎಂದು ರಾಜ್ಯಪಾಲರಿಗೆ ಮನವಿ ಸಲ್ಲಿಸಿದ್ದೇವೆ’ ಎಂದರು.

‘ಮೀಸಲಾತಿ ಹೆಚ್ಚಿದ ಪ್ರಸ್ತಾವವನ್ನು ಕೇಂದ್ರಕ್ಕೆ ಕಳುಹಿಸಿದ ಕಾರಣಕ್ಕೆ ನಾವು ಹೋರಾಟಕ್ಕೆ ಮುಂದಾಗಿರುವ ಮಾಹಿತಿ ಸಿಗುತ್ತಿದ್ದಂತೆ ಗುರುವಾರ ರಾತ್ರಿ ಮುಖ್ಯ ಕಾರ್ಯದರ್ಶಿ ಮೂಲಕ ರಾಜ್ಯ ಸರ್ಕಾರ ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸಲು ಪತ್ರ ಬರೆದಿದೆ. ಈ ಸರ್ಕಾರಕ್ಕೆ ಚುನಾವಣೆಗಿಂತ ಈ ದಲಿತ ಸಮುದಾಯದವರ ಬಗ್ಗೆ ಕಾಳಜಿ ಇದ್ದರೆ, ಮೀಸಲಾತಿ ಹೆಚ್ಚಳದ ಕಾಯ್ದೆಗೆ ರಾಜ್ಯಪಾಲರು ಸಹಿ ಹಾಕಿದ ತಕ್ಷಣವೇ 26 ಸಂಸದರನ್ನು ಕರೆದುಕೊಂಡು ಡಬಲ್ ಎಂಜಿನ್ ಸರ್ಕಾರದ ಮೂಲಕ ಒತ್ತಡ ಹಾಕಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿ, ಸಂವಿಧಾನ 9ನೇ ಶೆಡ್ಯೂಲ್‌ನಲ್ಲಿ ಸೇರಿಸಬೇಕಿತ್ತು. ಆದರೆ, ಈಗ ನಮ್ಮ ಹೋರಾಟಕ್ಕೆ ಹೆದರಿ ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ’ ಎಂದರು.

ಪರಿಶಿಷ್ಟ ಜಾತಿಗೆ ಒಳ ಮೀಸಲಾತಿ

ಒಂದನೇ ಪುಟದಿಂದ

ರಾಜಕೀಯ ಮೀಸಲಾತಿ ಅನ್ವಯವಾಗುವ ಪ್ರವರ್ಗ 2 ಎ ಪಟ್ಟಿಗೆ ಸೇರಿಸಬೇಕು ಎಂದು ಲಿಂಗಾಯತ ಪಂಚಮಸಾಲಿ ಸಮುದಾಯದ ಒಂದು ಗುಂಪು ಆಗ್ರಹಿಸಿತ್ತು. 2 ಎ ಪಟ್ಟಿಯನ್ನು ಮುಟ್ಟದ ಸರ್ಕಾರ, ಪಂಚಮಸಾಲಿ ಸೇರಿದಂತೆ ಲಿಂಗಾಯತರ ಮೀಸಲಾತಿಯನ್ನು(ಈಗ ಪ್ರವರ್ಗ 2 ಡಿ- ಮೊದಲು ಪ್ರವರ್ಗ 3 ಬಿ) ಶೇ 5ರಿಂದ ಶೇ 7ಕ್ಕೆ ಹಾಗೂ ಶೇ 12ರ ಮೀಸಲಾತಿಗೆ ಬೇಡಿಕೆ ಇಟ್ಟದ್ದ ಒಕ್ಕಲಿಗರಿಗೆ (ಈಗ ಪ್ರವರ್ಗ 2 ಸಿ-ಮೊದಲು ಪ್ರವರ್ಗ 3 ಎ) ಶೇ 4ರಿಂದ ಶೇ 6ಕ್ಕೆ ಹೆಚ್ಚಿಸುವ ನಿರ್ಣಯ ಕೈಗೊಂಡಿದೆ.

ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ನೀಡುವ ಮೂಲಕ ಇಲ್ಲಿಯವರೆಗೆ ಮೀಸಲಾತಿ ಸೌಲಭ್ಯದಿಂದ ವಂಚಿತರಾದ ಅಸ್ಪೃಶ್ಯ ಜಾತಿಗಳಿಗೆ ಸೇರಿದವರಿಗೆ ನ್ಯಾಯ ಒದಗಿಸಬೇಕು ಎಂದು ಮೂರು ದಶಕಗಳಿಂದ ಹೋರಾಟ ನಡೆಯುತ್ತಲೇ ಇದೆ. ಎಸ್.ಎಂ. ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಒಳಮೀಸಲಾತಿ ಬಗ್ಗೆ ಬೇಡಿಕೆ ತೀವ್ರಗೊಂಡಿತ್ತು. ಇದಕ್ಕಾಗಿ ಪ್ರತ್ಯೇಕ ಆಯೋಗ ರಚಿಸುವ ಪ್ರಸ್ತಾವ ಸರ್ಕಾರದ ಮುಂದೆ ಇತ್ತು. ಬಳಿಕ ಅಸ್ತಿತ್ವಕ್ಕೆ ಬಂದ ಎನ್. ಧರ್ಮಸಿಂಗ್ ನೇತೃತ್ವದ ಕಾಂಗ್ರೆಸ್–ಜೆಡಿಎಸ್ ಮೈತ್ರಿ ಸರ್ಕಾರ, 2005ರಲ್ಲಿ ಈ ಬಗ್ಗೆ ಅಧ್ಯಯನ ನಡೆಸಿ ಶಿಫಾರಸು ಮಾಡಲು ನ್ಯಾಯಮೂರ್ತಿ ಎ.ಜೆ. ಸದಾಶಿವ ನೇತೃತ್ವದಲ್ಲಿ ಆಯೋಗವನ್ನು ರಚಿಸಲಾಗಿತ್ತು. ಆಗ ಪರಿಶಿಷ್ಟ ಜಾತಿಗಳಿಗೆ ಇದ್ದ ಶೇ 15ರ ಮೀಸಲಾತಿಯನ್ನು ಎಡಗೈಗೆ ಶೇ 6, ಬಲಗೈಗೆ ಶೇ 5.5, ಸ್ಪೃಶ್ಯ ಉಪಜಾತಿಗಳಿಗೆ ಶೇ 3 ಹಾಗೂ ಈ ಮೂರೂ ಗುಂಪುಗಳಿಗೆ ಸೇರದ ಜಾತಿಗಳವರಿಗೆ ಶೇ 1ರಷ್ಟು ಮೀಸಲಾತಿ ನೀಡಬಹುದು ಎಂದು ಸದಾಶಿವ ಆಯೋಗವು 2012ರಲ್ಲಿದ್ದ ಡಿ.ವಿ. ಸದಾನಂದಗೌಡ ನೇತೃತ್ವದ ಬಿಜೆಪಿ ಸರ್ಕಾರಕ್ಕೆ ಸಲ್ಲಿಸಿದ್ದ ವರದಿಯಲ್ಲಿ ಶಿಫಾರಸು ಮಾಡಿತ್ತು.

ಒಳಮೀಸಲಾತಿ ಕಲ್ಪಿಸಬೇಕೆಂದು ಎಡಗೈ-ಬಲಗೈ ಸಮುದಾಯದವರು ಆಗ್ರಹಿಸುತ್ತಲೇ ಬಂದಿದ್ದರು. ಸಿದ್ದರಾಮಯ್ಯ ನೇತೃತ್ವದ ಸಚಿವ ಸಂಪುಟ ಸಭೆಯಲ್ಲಿ ಅನೇಕ ಬಾರಿ ಚರ್ಚೆ ನಡೆದಿತ್ತು. ಸಂಪುಟ ಸಭೆಯಲ್ಲೇ ಭಿನ್ನಮತ ಉಂಟಾಗಿದ್ದರಿಂದಾಗಿ, ಅನುಮೋದನೆ ನೀಡಿರಲಿಲ್ಲ. 2018ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಹಿನ್ನಡೆ ಅನುಭವಿಸಲು ಇದೂ ಒಂದು ಕಾರಣವಾಗಿತ್ತು.

ಚುನಾವಣೆ ಎದುರಾಗುತ್ತಿರುವ ಹೊತ್ತಿನಲ್ಲಿ ಸದಾಶಿವ ಆಯೋಗದ ವರದಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕೇಂದ್ರಕ್ಕೆ ಶಿಫಾರಸು ಮಾಡಲು ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ನಿರ್ಣಯ ಕೈಗೊಂಡಿದೆ.

ಕ್ರಾಂತಿಕಾರಕ ನಿರ್ಧಾರ: ಬೊಮ್ಮಾಯಿ

‘ಎರಡು–ಮೂರು ದಶಕಗಳಿಂದಲೂ ಮೀಸಲಾತಿ ಪಟ್ಟಿಗೆ ಸೇರಿಸಬೇಕು, ಒಳಮೀಸಲಾತಿ ನೀಡಬೇಕು ಎಂಬ ಬೇಡಿಕೆ ಇದೆ. ಎಲ್ಲ ಸಮುದಾಯಗಳ ಆಶೋತ್ತರ ಈಡೇರಿಸಲು ಮುಂದಾದರೆ ಜೇನುಗೂಡಿಗೆ ಕೈ ಹಾಕಿದಂತೆ ಎಂದು ಅನೇಕರು ಎಚ್ಚರಿಸಿದ್ದರು. ಸಮುದಾಯಗಳ ಬೇಡಿಕೆ ಹಾಗೂ ಹಿತವನ್ನು ಗಮನದಲ್ಲಿಟ್ಟುಕೊಂಡು ಒಳಮೀಸಲಾತಿ ನೀಡುವ ಕ್ರಾಂತಿಕಾರಕ ನಿರ್ಧಾರವನ್ನು ನಮ್ಮ ಸರ್ಕಾರ ಕೈಗೊಂಡಿದೆ’ ಎಂದು ಬೊಮ್ಮಾಯಿ ಅವರು ಸುದ್ದಿಗೋಷ್ಠಿಯಲ್ಲಿ ಪ್ರತಿಪಾದಿಸಿದರು.

‘ಮೀಸಲಾತಿಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಸಮಿತಿ ರಚಿಸಲಾಗಿದ್ದರೂ ಕೆಲವು ಸಮಿತಿಯ ಶಿಫಾರಸುಗಳನ್ನು ಒಪ್ಪಿಕೊಂಡಿದ್ದರೆ ಕೆಲವನ್ನು ಜಾರಿ ಮಾಡಲು ಮುಂದಾಗಿರಲಿಲ್ಲ. ನಮ್ಮ ಸರ್ಕಾರ ಬಂದ ಮೇಲೆ ಪರಿಶಿಷ್ಟ ಜಾತಿಯವರಿಗೆ ಇದ್ದ ಶೇ 15ರ ಮೀಸಲಾತಿಯನ್ನು ಶೇ 17ಕ್ಕೆ ಹಾಗೂ ಪರಿಶಿಷ್ಟ ಪಂಗಡದವರ ಮೀಸಲಾತಿಯನ್ನು ಶೇ 3ರಿಂದ ಶೇ 7ಕ್ಕೆ ಏರಿಸಲಾಗಿತ್ತು. ಇದೀಗ ಮಹತ್ವದ ಮತ್ತೊಂದು ತೀರ್ಮಾನವನ್ನು ಕೈಗೊಂಡಿದ್ದೇವೆ. ಸರ್ಕಾರದ ನೇಮಕಾತಿ ಹಾಗೂ ಬಡ್ತಿಯಲ್ಲಿ ಈ ಮೀಸಲಾತಿ ಅನ್ವಯವಾಗಲಿದೆ’ ಎಂದರು.

‘ಪರಿಶಿಷ್ಟ ಜಾತಿ ಪಟ್ಟಿಯಲ್ಲಿ 101 ಜಾತಿಗಳಿವೆ. ಸಾಮಾಜಿಕವಾಗಿ ಶೈಕ್ಷಣಿಕವಾಗಿ ಹಿಂದುಳಿದವರಿಗೆ ಒಳ ಮೀಸಲಾತಿ ನೀಡಬೇಕು ಎಂಬ ಬೇಡಿಕೆ ಇತ್ತು. ಈ ಸಮುದಾಯದಲ್ಲಿ ಸ್ಪೃಶ್ಯರಾದ ಬಂಜಾರ, ಬೋವಿ, ಕೊರಮ, ಕೊರಚ ಸಮುದಾಯಯವರಲ್ಲಿ ತಮಗಿರುವ ಮೀಸಲಾತಿಯನ್ನೇ ತೆಗೆದು, ಅತಂತ್ರವಾಗುತ್ತೇವೆ ಎಂಬ ಭಯವಿತ್ತು. ಒಳಮೀಸಲಾತಿಗೆ ಸಂಬಂಧಿಸಿದ ವರದಿ ಪರಿಶೀಲಿಸಿ, ವರದಿ ನೀಡಲು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪ ಸಮಿತಿ ರಚಿಸಿದ್ದೆವು. ಸದಾಶಿವ ಆಯೋಗದ ವರದಿಯನ್ನು ಆಧರಿಸಿ, ಸಚಿವ ಸಂಪುಟ ಉಪ ಸಮಿತಿಯ ಶಿಫಾರಸಿನ ಆಧಾರದ ಮೇಲೆ ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ಹಂಚಿಕೆ ಮಾಡಿದ್ದೇವೆ. 2011ರ ಜನಗಣತಿ ಆಧಾರದ ಮೇಲೆ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿಯನ್ನು ನಾಲ್ಕು ಹಂತಗಳಲ್ಲಿ ವರ್ಗೀಕರಣ ಮಾಡಲಾಗಿದೆ’ ಎಂದು ಅವರು ವಿವರಿಸಿದರು.

ಒಬಿಸಿ ಮೀಸಲಾತಿಯೂ ಬದಲು: ‘ಇತರೆ ಹಿಂದುಳಿದ ವರ್ಗಗಳ (ಒಬಿಸಿ) ಪಟ್ಟಿಯನ್ನು 10 ವರ್ಷಗಳಿಗೊಮ್ಮೆ ಪರಿಶೀಲಿಸಬೇಕು ಎಂಬ ನಿಯಮವಿದೆ. ಕರ್ನಾಟಕದಲ್ಲಿ ಕಳೆದ 20 ವರ್ಷಗಳಿಂದಲೂ ಇದು ನಡೆದಿರಲಿಲ್ಲ. ಒಬಿಸಿ ಪಟ್ಟಿಯ ಪರಿಷ್ಕರಣೆಯ ಅಧಿಕಾರವನ್ನು ಹಿಂದುಳಿದ ವರ್ಗಗಳ ಆಯೋಗಕ್ಕೆ ನೀಡಲಾಗಿದೆ. ಈ ಮೀಸಲಾತಿಯನ್ನು ಪರಿಷ್ಕರಿಸಲು ಆಯೋಗದ ಮಧ್ಯಂತರ ವರದಿ ಕೆಲವು ಶಿಫಾರಸು ಮಾಡಿತ್ತು. ಅಲ್ಲದೇ, ಎರಡೇ ವರ್ಗೀಕರಣ ಮಾಡುವಂತೆಯೂ ಹೇಳಿತ್ತು. ಅದನ್ನು ಆಧರಿಸಿ ಕೆಲವು ಬದಲಾವಣೆಗಳನ್ನು ಮಾಡಲಾಗಿದೆ’ ಎಂದು ಬೊಮ್ಮಾಯಿ ಅವರು ಹೇಳಿದರು.

‘2 ಬಿಯಲ್ಲಿ ಮುಸ್ಲಿಮರಿದ್ದರು. ಧಾರ್ಮಿಕ ಅಲ್ಪಸಂಖ್ಯಾತರಿಗೆ ಮೀಸಲಾತಿ ನೀಡಲು ಸಂವಿಧಾನದಲ್ಲಿ ಅವಕಾಶ ಇಲ್ಲ. ಆದರೆ, ಈ ಸಮುದಾಯದವರನ್ನು ಕೈಬಿಟ್ಟರೆ ಅವರು ನ್ಯಾಯಾಲಯದ ಮೊರೆ ಹೋಗುವ ಸಾಧ್ಯತೆ ಇದೆ. ಅದಕ್ಕಾಗಿ, ಮುಸ್ಲಿಮರನ್ನು ಆರ್ಥಿಕವಾಗಿ ದುರ್ಬಲ ವರ್ಗದ ಪಟ್ಟಿಗೆ ಸೇರಿಸಲಾಗಿದೆ. 2 ಬಿಯಲ್ಲಿ ಶೇ 4ರಷ್ಟಿದ್ದ ಮೀಸಲಾತಿಯನ್ನು ಶೇ 2ರಷ್ಟು ಒಕ್ಕಲಿಗರಿಗೆ, ಶೇ 2ರಷ್ಟನ್ನು ಲಿಂಗಾಯತರಿಗೆ ಹಂಚುವ ತೀರ್ಮಾನ ಮಾಡಲಾಗಿದೆ’ ಎಂದರು.

ಕುರುಬರು ಎಸ್‌ಟಿ ಪಟ್ಟಿಗೆ: ‘ಕಾಡು ಕುರುಬ, ಬಂಡೆ ಕುರುಬ ಉಪಜಾತಿಗಳನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಬೇಕು ಎಂಬ ಬೇಡಿಕೆ ಇದೆ. ಅದರ ಬಗ್ಗೆಯೂ ಚರ್ಚೆ ನಡೆದಿದೆ. ನಾಲ್ಕು ಜಿಲ್ಲೆಗಳಲ್ಲಿ ಕುಲಶಾಸ್ತ್ರೀಯ ಅಧ್ಯಯನ ನಡೆದಿದ್ದು, ಇನ್ನೂ ಕೆಲವು ಜಿಲ್ಲೆಗಳಲ್ಲಿ ನಡೆಯಬೇಕಿದೆ. ಶಿಫಾರಸು ಬಂದ ಬಳಿಕ ಸೂಕ್ತ ಕ್ರಮ ಕೈಗೊಳ್ಳಲಾಗುವುದು’ ಎಂದು ಬೊಮ್ಮಾಯಿ ಹೇಳಿದರು.

ಪಿಂಜಾರ, ನದಾಫರಿಗೆ ನಿಗಮ

ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಪಿಂಜಾರ, ನದಾಫ, ಚಪ್ಪರ್‌ಬಂದ್ ಸೇರಿದಂತೆ 12 ಉಪಜಾತಿಗಳಿಗೆ ಪ್ರತ್ಯೇಕ ಅಭಿವೃದ್ಧಿ ನಿಗಮ ಸ್ಥಾಪಿಸುವ ನಿರ್ಣಯ ಕೈಗೊಳ್ಳಲಾಗಿದೆ ಎಂದು ಬೊಮ್ಮಾಯಿ ಹೇಳಿದರು.

‘ನಿಷೇಧಿತ ಸಂಘಟನೆ ಸದಸ್ಯತ್ವ ಹೊಂದಿದ ವ್ಯಕ್ತಿ ಅಪರಾಧಿ’

ನವದೆಹಲಿ (ಪಿಟಿಐ): ‘ನಿಷೇಧಿತ ಸಂಘಟನೆಯ ಸದಸ್ಯತ್ವ ಹೊಂದಿದ ವ್ಯಕ್ತಿಯು ಕಾನೂನಿನ ಪ್ರಕಾರ ಅಪರಾಧಿ. ಅಂತಹ ವ್ಯಕ್ತಿಯನ್ನು ಕಾನೂನುಬಾಹಿರ ಚಟುವಟಿಕೆಗಳ ನಿಯಂತ್ರಣ ಕಾಯ್ದೆ ಅಡಿ ವಿಚಾರಣೆಗೆ ಒಳಪಡಿಸಬಹುದು’ ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.

ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ನ್ಯಾಯಪೀಠವು 2011ರಲ್ಲಿ ಹೊರಡಿಸಿದ್ದ ತೀರ್ಪನ್ನು ಪರಿಷ್ಕರಿಸುವಂತೆ ಕೋರಿ ಕೇಂದ್ರ ಹಾಗೂ ಅಸ್ಸಾಂ ಸರ್ಕಾರ ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಎಂ.ಆರ್.ಶಾ, ಸಿ.ಟಿ.ರವಿಕುಮಾರ್ ಮತ್ತು ಸಂಜಯ್ ಕರೋಲ್ ಅವರನ್ನೊಳಗೊಂಡ ತ್ರಿಸದಸ್ಯ ನ್ಯಾಯಪೀಠ ‘ನ್ಯಾಯಾಲಯದ ಹಿಂದಿನ ಆದೇಶವು ಕಾನೂನಿಗೆ ತಕ್ಕುದಾದುದ್ದಲ್ಲ’ ಎಂದು ಅಭಿಪ್ರಾಯಪಟ್ಟಿದೆ.

ಸುಧಾ ಓದಿರಿ

ಖಜಾನೆ ಇಲಾಖೆ
5ನೇ & 6ನೇ ಮಹಡಿ, ಕೆ.ಪಿ.ಸಿ.ಎಲ್. ಗ್ರೀನ್ ಕಟ್ಟಡ,
ಅರಮನೆ ರಸ್ತೆ, ಬೆಂಗಳೂರು–560 001. ದೂರವಾಣಿ ಸಂ: 080–22867700
ಫ್ಯಾಕ್ಸ್: 080–22860142.
ಸಂ. ಖ.ಆ/ಸಂಗ್ರಹಣೆ/43/2022–23 ದಿನಾಂಕ: 18–03–2023
“ಫೈರ್ವಾಲ್” ಸಂಗ್ರಹಿಸಲು ಆರ್.ಎಫ್.ಪಿ.
ಖಜಾನೆ ಇಲಾಖೆಯು “ಫೈರ್ವಾಲ್” ಸಂಗ್ರಹಿಸಲು ಟೆಂಡರ್ ಅನ್ನು ಆಹ್ವಾನಿಸಿದೆ. ಟೆಂಡರ್ ವಿವರಗಳು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ www.eproc.karnataka.gov.in ನಲ್ಲಿ ಲಭ್ಯವಿದ್ದು, ಟೆಂಡರ್‌ಗಳನ್ನು ವಿದ್ಯುನ್ಮಾನವಾಗಿ www.eproc.karnataka.gov.in ಇಲ್ಲಿ ಸಲ್ಲಿಸಬಹುದು.
ಸಹಿ/– ಖಜಾನೆ ಆಯುಕ್ತರು
DIPR/CP/AAPL/RO5436/22-23

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಮುಖ್ಯ ಅಭಿಯಂತರವರ ಕಚೇರಿ, ಆರ್‌ಡಿಡಬ್ಲ್ಯು&ಎಸ್ ಇಲಾಖೆ, 1ನೇ ಮಹಡಿ,
"ಇ" ಬ್ಲಾಕ್,ಕೆ.ಹೆಚ್.ಬಿ. ಕಾಂಪ್ಲೆಕ್ಸ್, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560009
ದೂ.ಸಂ.: 080–22533700, e-mail: cerws14@gmail.com
ಸಂಖ್ಯೆ: ಆರ್‌ಡಿಪಿ/ಗ್ರಾಕುನೀನೈಇ/32/ಸಿಇ/ಟೆಕ್/2022–23/ಪಿಎಂಸಿ ದಿನಾಂಕ: 24.03.2023
ಅಲ್ಪಾವಧಿ ಟೆಂಡರ್ ಆಹ್ವಾನ
ರಾಜ್ಯ ಸರ್ಕಾರದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಇಳಂತಿಲಾದಲ್ಲಿ ಮತ್ತು ಇತರ 209 ಹ್ಯಾಬಿಟೇಷನ್‌ಗಳಿಗೆ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಾಲ್ಲೂಕಿನ ಕುಟ್ರಾಪಾಡಿ ಮತ್ತು ಇತರ 131 ವಸತಿಗಳಿಗೆ ಹ್ಯಾಬಿಟೇಷನ್‌ಗಳಿಗೆ ಕುಡಿಯುವ ನೀರು ಸರಬರಾಜು ಸೌಲಭ್ಯಗಳ ಅನುಷ್ಠಾನಕ್ಕೆ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಕನ್ಸಲ್ಟೆನ್ಸಿ ಸೇವೆಗಳನ್ನು ಒದಗಿಸಲು ಅರ್ಹ ಬಿಡ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದ್ವಿ–ಲಕೋಟೆ ಪದ್ಧತಿಯಲ್ಲಿ (ತಾಂತ್ರಿಕ ಮತ್ತು ಆರ್ಥಿಕ ಬಿಡ್) ಡಿಬಿಒಟಿ ಆಧಾರದ ಮೇಲೆ ಜಲ ಜೀವನ ಮಿಷನ್ ಅಡಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ.
ಇ–ಪೋರ್ಟಲ್ ಮೂಲಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 10.04.2023ರ ಸಂಜೆ 4.00 ಗಂಟೆಯೊಳಗೆ. ಇ.ಎಂ.ಡಿ ಮೊತ್ತ: ರೂ.2,90,000/–.
ಸಹಿ/– ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಗ್ರಾ.ಕು.ನೀ.&ನೈ.ಇಲಾಖೆ, ಬೆಂಗಳೂರು
DIPR/CP/BCPL/5463/2022-23

ಕರ್ನಾಟಕ ಸರ್ಕಾರ
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ.8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ, ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್ ಬಿಲ್ಡಿಂಗ್, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು – 560052.
ಸಂ: ಕವಶಿಸಸ/ಕಾಅ–1/ಟೆಂಡರ್–39/2022–23 ದಿನಾಂಕ: 24.03.2023
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ, ಬೆಂಗಳೂರು ನಗರ ಜಿಲ್ಲೆ, ಮಾಗಡಿ ರಸ್ತೆಯ ನಿರಾಶ್ರಿತರ ಪರಿಹಾರ ಕೇಂದ್ರದ ಆವರಣದಲ್ಲಿ ನಿರ್ಮಿಸುತ್ತಿರುವ ಡಾ॥ ಬಾಬು ಜಗಜೀವನರಾಮ್ ತರಬೇತಿ ಮತ್ತು ಸಂಶೋಧನಾ ಕೇಂದ್ರಕ್ಕೆ ಸ್ವಯಂಕಾರ್ಯ ಅಡಿಯಲ್ಲಿ 1350 ಕೆ.ವಿ.ಎ ಹೆಚ್.ಟಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸುವ ಕಾಮಗಾರಿ (ಟೆಂಡರ್ ಇಂಡೆಂಟ್ ಸಂಖ್ಯೆ : 3088)ನ್ನು ಇ–ಪೋರ್ಟಲ್ ಮುಖಾಂತರ ದಿನಾಂಕ: 24.03.2023ರಂದು ಟೆಂಡರ್‌ನ್ನು ಕರೆಯಲಾಗಿದ್ದು. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ : 06.04.2023 ರಂದು ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್: https://eproc.karnataka.gov.in ರಲ್ಲಿ ನೋಡಬಹುದಾಗಿದೆ.
ಸೂಚನೆ : ಅಲ್ಪಾವಧಿ ಟೆಂಡರ್ ಪ್ರಕಟಣೆಯಲ್ಲಿ ವ್ಯತ್ಯಾಸವಿದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅದನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/– ಕಾರ್ಯಪಾಲಕ ಅಭಿಯಂತರರು
ಕವಶಿಸಸಂ
DIPR/CP/5454/2022-23

ಬೆವಿಕಂ BESCOM
ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)
(CIN: U04010KA2002SGC030438)
ಸಂಕ್ಷಿಪ್ತ ಟೆಂಡರ್ ಪ್ರಕಟಣೆ
ಬೆಸ್ಕಾಂ ಕೆಳಕಂಡ ಸೇವೆಗಳ ಪೂರೈಕೆಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರುಗಳನ್ನು ಆಹ್ವಾನಿಸಿದೆ:
ವಿಚಾರಣೆ ಸಂಖ್ಯೆ: ಮುಇಂವಿ/ಬೆಂಮಕ್ಷೇವ ದಕ್ಷಿಣ/22–23/ ವಿಚಾರಣೆ ಸಂ:15. ವಿವರ: ಬೆಂಮಕ್ಷೇವ ದಕ್ಷಿಣ, ಬೆಸ್ಕಾಂ ಇಲ್ಲಿನ ಪಶ್ಚಿಮ ಮತ್ತು ದಕ್ಷಿಣ ವೃತ್ತಕ್ಕೆ ಒಂದು ವರ್ಷದ ಅವಧಿಗೆ 22 ಸಂಖ್ಯೆ ಚಾಲಕರುಗಳ ಸೇವೆಯನ್ನು ಒದಗಿಸುವುದು. ಬಿಡ್ ದಸ್ತಾವೇಜುಗಳು ದೊರೆಯುವ ದಿನಾಂಕ: 27.03.2023 ರಂದು 16:00 ಗಂಟೆಯಿಂದ 10.04.2023 ರಂದು 16:00 ಗಂಟೆ ವರೆಗೆ. ಬಿಡ್ ಸಲ್ಲಿಸುವ ಕಡೆಯ ದಿನಾಂಕ: 10.04.2023 ರಂದು 16:00 ಗಂಟೆವರೆಗೆ. ಬಿಡ್ ದಸ್ತಾವೇಜನ್ನು ತೆರೆಯುವ ದಿನಾಂಕ: 12.04.2023 ರಂದು 17:00 ಗಂಟೆಗೆ ಅಥವಾ ಆನಂತರ. ಟೆಂಡರಿಂಗ್ ವೆಬ್‌ಸೈಟ್ https://eproc.karnataka.gov.in ಇಲ್ಲಿಗೆ ಭೇಟಿ ನೀಡಿ ಟೆಂಡರುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಪಡೆದುಕೊಳ್ಳಬಹುದು. ಇ–ಪಾವತಿ ಬಗ್ಗೆ ಯಾವುದೇ ಸ್ಪಷ್ಟನೆಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ: 080–23010900/22340948 ಸಂಪರ್ಕಿಸಿ, ಅಥವಾ ಯಾವುದೇ ವಿಚಾರಗಳಿಗಾಗಿ hphelpdesk.blr@rteservices.com ಗೆ ಇ–ಮೇಲ್ ಮಾಡಿ.
ಸಹಿ/- ಮುಖ್ಯ ಇಂಜಿನಿಯರ್, ವಿದ್ಯುತ್,
ವಾ.ಕಾ ಮತ್ತು ಪಾ, ಬೆಂಮಕ್ಷೇವ, ಬೆವಿಕಂ
ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ ಮೊಬೈಲ್ APP Download ಮಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜೀನಿಯರರು,
ಲೋಕೋಪಯೋಗಿ, ಇಲಾಖೆ, ಕಲಬುರಗಿ ವಿಭಾಗ ಕಲಬುರಗಿ
ಸಂ.ಕಾನಿಅ/ಲೋಇ/ಕವಿ/ತಾಶಾ–2/.ಟೆಂಡರ್.ಅಧಿಸೂಚನೆ/2022–23/10899 ದಿನಾಂಕ: 23–03–2023
ಅಲ್ಪಾವಧಿ ಟೆಂಡರ್ ಅಧಿಸೂಚನೆ
1) ಕಾಮಗಾರಿ ವಿವರ: ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ, ಇಲಾಖೆ, ಕಲಬುರಗಿ ವಿಭಾಗ ಕಾರ್ಯಾಲಯದಿಂದ ಕೆ.ಕೆ.ಆರ್.ಡಿ.ಬಿ, ಯೋಜನೆಯಡಿ (01) ಕಾಮಗಾರಿಗಳಿಗೆ ಟೆಂಡರ ಕರೆಯಲಾಗಿದೆ ಇಂಡೆಂಟ್ ಸಂಖ್ಯೆ: 168133, 2) ಕಾಮಗಾರಿ ಅಂದಾಜು ಮೊತ್ತ: ರೂ. 100.00 ಲಕ್ಷ, 3) ಗುತ್ತಿಗೆದಾರರ ಅರ್ಹತೆ ವಿವರ: ಈ ಕಾಮಗಾರಿಗೆ ಟೆಂಡರ ಸಲ್ಲಿಸುವವರು, ಲೋಕೋಪಯೋಗಿ ಇಲಾಖೆಯಲ್ಲಿ ಮೂರನೆ ದರ್ಜೆ, ಹಾಗೂ ಮೇಲ್ಪಟ್ಟು ನೊಂದಾಯಿತ ಗುತ್ತಿಗೆದಾರರಾಗಿರಬೇಕು, 4) ಇ ಎಮ್ ಡಿ ಮೊತ್ತ: ರೂ. 170000.00, 5) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ: 30.03.2023 (17.30 ಗಂಟೆ), 6) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 31.03.2023 (16.00 ಗಂಟೆ), 7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 01.04.2023 (16.30 ಗಂಟೆ), 8) ಆರ್ಥಿಕ ಬಿಡ್ ತೆರೆಯುವ ದಿನಾಂಕ : 03.04.2023 (11.30 ಗಂಟೆ), 9) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ, ಇಲಾಖೆ, ವಿಭಾಗ ಕಲಬುರಗಿ ಕಚೇರಿ, 10) ಸೂಚನೆ : ಜಿ.ಎಸ್.ಟಿ. ಪ್ರತ್ಯೇಕವಾಗಿ ನೀಡಲಾಗುವುದು, 11) ಅಂತರ್ಜಾಲ ತಾಣದ ವಿಳಾಸ: www.e-proc.Karnatak.gov.in
ಸಹಿ/– ಕಾರ್ಯನಿರ್ವಾಹಕ ಇಂಜೀನಿಯರರು,
ಲೋಕೋಪಯೋಗಿ ಇಲಾಖೆ ವಿಭಾಗ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/1592/ಎಂ.ಸಿ.&ಎ/2022–23

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ
An ISO-9001:2015 & 14001:2015 Company
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಶ್ರೀಗಂಧ ನಗರ: ಅಂಚೆ ಪೆಟ್ಟಿಗೆ ಸಂ.5531, ಬೆಂಗಳೂರು–ಪುಣೆ ಹೆದ್ದಾರಿ, ಬೆಂಗಳೂರು–560 055.
ದೂರವಾಣಿ: 080–22164879, 22164886, ಜಾಲತಾಣ: www.mysoresandal.org ಇ-ಮೇಲ್: ksdl.dgmmtls@gmail.com
ದಿನಾಂಕ: 24.03.2023
ಟೆಂಡರ್ ಪ್ರಕಟಣೆ
ಕೆಎಸ್&ಡಿಎಲ್ ಸಂಸ್ಥೆಗೆ ಈ ಕೆಳಕಂಡ ಸರಕು/ಸೇವೆ/ಕಾಮಗಾರಿಗಳಿಗೆ ಇ–ಖರೀದಿ ಪೋರ್ಟಲ್ ಜಾಲತಾಣ (http://eproc.karnataka.gov.in)ದ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಟೆಂಡರ್ ಸಂಖ್ಯೆ	ಟೆಂಡರ್ ಹೆಸರು	ಸಂಖ್ಯೆ	ಪ್ರಕಟಣೆ ದಿನಾಂಕ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ
1	KSDL/2022-23/ IND5513	8" ಮೆಷಿನ್ ಮೇಡ್ ಕಚ್ಚಾ ಅಗರಬತ್ತಿ ಕಡ್ಡಿಗಳ ಖರೀದಿ (ದೇಶೀಯ ಮೂಲ)	600 M.T.	20.03.2023	21.04.2023
2	KSDL/2022-23/ IND5514	9" ಮೆಷಿನ್ ಮೇಡ್ ಕಚ್ಚಾ ಅಗರಬತ್ತಿ ಕಡ್ಡಿಗಳ ಖರೀದಿ (ದೇಶೀಯ ಮೂಲ)	130 M.T.	20.03.2023	06.04.2023
3	KSDL/AGM(S)/ 2022-23/22	ಕೆಎಸ್‌ಡಿಎಲ್, ಬೆಂಗಳೂರು ಸಂಕೀರ್ಣದಲ್ಲಿ 200 ಲೀ. ಟಿನೀಲಿ ಪ್ಲಾಸ್ಟಿಕ್ ಡ್ರಮ್, ಆಯಿಲ್ ಟಿನ್ ಮತ್ತು ಹಾಲಿನ ಕವರ್‌ಗಳ ವಿಲೇವಾರಿ ಎಲ್ಲಿ ಹೇಗಿದೆಯೋ ಹಾಗೇ ಆಧಾರದ ಮೇಲೆ.	ಸೇವೆಗಳು	21.03.2023	30.03.2023

ಯಾವುದೇ ಹೆಚ್ಚಿನ ವಿಚಾರಣೆ/ಸ್ಪಷ್ಟೀಕರಣಕ್ಕೆ ಕೆಳಕಂಡ ಸಹಿದಾರರನ್ನು ಸಂಪರ್ಕಿಸಬಹುದು.
ಸಹಿ/–
ಸಹಾಯಕ ಪ್ರಧಾನ ವ್ಯವಸ್ಥಾಪಕರು (ಸಾಮಗ್ರಿ)

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಒಂದು ಉದ್ಯಮ)
ಕಾರ್ಯಾಲಯ ಕಾರ್ಯನಿರ್ವಾಹಕ ಇಂಜಿನೀಯರರು,
ಕೃಭಾಜನಿ(ನಿ), ಜೆ.ಬಿ.ಸಿ.ವಿಭಾಗ ಸಂಖ್ಯೆ. 2 ಭೀಮರಾಯನಗುಡಿ
ಇ–ಮೇಲ್ ಐಡಿ:eejbc2@gmail.com Ph:9591461212
ಸಂಖ್ಯೆ: ಕೃಭಾಜನಿನಿ/ಜೆಬಿಸಿ/ವಿ–2/ಟಿಎನ್‌ಡಿ/ಯೋಶಾ/2022–23/1553 ದಿನಾಂಕ: 18.03.2023
ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)
ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ ಜೆ.ಬಿ.ಸಿ.ವಿಭಾಗ ಸಂಖ್ಯೆ. 2, ಭೀಮರಾಯನಗುಡಿ ರವರು ಇ–ಟೆಂಡರಿಂಗ್ ಮುಖಾಂತರ ಶೇಕಡಾವಾರು ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ ಅಹ್ವಾನಿಸಲಾಗಿದ್ದು, ಕಾಮಗಾರಿಗಳ ವಿವರಗಳು ಈ ಕೆಳಗಿನಂತಿರುತ್ತವೆ; 1) ಕಾಮಗಾರಿಗಳ ಇಂಡೆಂಟ್ ಸಂಖ್ಯೆ ಸಾಮಾನ್ಯ ವರ್ಗ : Indent no : 24408, 24358,24360, 24411, 24420 2) ಟೆಂಡರಗೆ ಇಟ್ಟ ಮೊತ್ತ: ಗರಿಷ್ಠ ಮೊತ್ತ ರೂ. 202.66 ಲಕ್ಷಗಳು , ಕನಿಷ್ಠ ಮೊತ್ತ ರೂ 61.99 ಲಕ್ಷಗಳು 3) ಟೆಂಡರಗೆ ನಿಗದಿಪಡಿಸಿದ ಇ.ಎಂ.ಡಿ ಮೊತ್ತ ಗರಿಷ್ಠ ಮೊತ್ತ ರೂ. 3.58 ಲಕ್ಷಗಳು, ಕನಿಷ್ಠ ಮೊತ್ತ ರೂ 1.46 ಲಕ್ಷಗಳು 4) ಇ–ಟೆಂಡರಿಂಗ ಲಭ್ಯವಾಗುವ ಅವಧಿ: 18.03.2023 ಮುಂಜಾನೆ 11.30 ಘಂಟೆ ರಿಂದ 27.03.2023 ಮುಂಜಾನೆ 11.30 ವರೆಗೆ. 5) ಇ–ಟೆಂಡರಿಂಗ ಕೊನೆಯ ದಿನಾಂಕ: 27.03.2023 ಮುಂಜಾನೆ 11.30 ವರೆಗೆ. 6) ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ: 28.03.2023 ಮಧ್ಯಾಹ್ನ 12.00 ಗಂಟೆಗೆ, ಸದರಿ ವಿಭಾಗ ಕಛೇರಿಯಲ್ಲಿ 7) ಆರ್ಥಿಕ ಟೆಂಡರ್ ತೆರೆಯುವ ದಿನಾಂಕ: 31.03.2023 ಮುಂಜಾನೆ 11.30 ಗಂಟೆಗೆ/ ತಾಂತ್ರಿಕ ಟೆಂಡರ್ ಗೆ ಅನುಮೋದನೆ ದೊರೆತ ನಂತರ , ಸದರಿ ವಿಭಾಗ ಕಛೇರಿಯಲ್ಲಿ. 8) ಸಂಪರ್ಕಿಸಬೇಕಾದ ಕಛೇರಿ ವಿಳಾಸ: ಹೆಚ್ಚಿನ ಮಾಹಿತಿಗಾಗಿ ವೆಬಸೈಟ್ http://www.eproc.Karnataka.gov.in ನಲ್ಲಿ ನೋಡಬಹುದು ಹಾಗೂ ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಕೃಭಾಜನಿ(ನಿ), ಜೆಬಿಸಿ ವಿಭಾಗ ಸಂಖ್ಯೆ–2
ಭೀಮರಾಯನಗುಡಿ
ವಾ.ಸಾ.ಸಂ.ಇ/ಯಾದಗಿರಿ/548/ಕೆ.ಎಸ್.ಎಂ.ಸಿ&ಎ/2022–23

ಕರ್ನಾಟಕ ಸರ್ಕಾರ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿ–585105,
ಪೋ.ನಂ: 08472-278634/256944 Email:eerwssglb14@gmail.com
ಸಂ.ಕಾ.ನಿ.ಅ/ಗ್ರಾ.ಕು.ನೀ&ನೈ/.ವಿ.ಕ/ ತಾ .ಶಾ /2022–23/3920 ದಿನಾಂಕ : 18–03–2023
:: ಅಲ್ಪಾವಧಿ ಟೆಂಡರ ಪ್ರಕಟಣೆ ::
(ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ e-procurement portal ನಡಿಯಲ್ಲಿ ಮಾತ್ರ)
ಕರ್ನಾಟಕ ಘನತೆವೆತ್ತ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ ಆಹ್ವಾನಿಸಲಾಗಿದ್ದು ವಿವರ ಈ ಕೆಳಗಿನಂತಿದೆ.
1) ಕಾಮಗಾರಿಯ ವಿವರ: Kalaburagi-01 (Indent No 61928), 2) ಟೆಂಡರಿಗಿಟ್ಟ ಮೊತ್ತ : ಕನಿಷ್ಠ : 54,19,204/-, ಗರಿಷ್ಠ 54,19,204/-, 3) ಲೆಕ್ಕ ಶೀರ್ಷಿಕೆ: DMF 2020-21, 4) ಗುತ್ತಿಗೆದಾರರ ಅರ್ಹತೆ : 3ನೇ ದರ್ಜೆ ಗುತ್ತಿಗೆದಾರರು & ಮೇಲ್ಪಟ್ಟು, 5) ಟೆಂಡರ ಫಾರಂ ಪಡೆಯುವ ದಿನಾಂಕ: 20–03–2023 ರಿಂದ 28–03–2023, 6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ: ಇ–ಪ್ರೋಕ್ಯೂರಮೆಂಟ್ ಪ್ರಕಾರ, 7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ : 28–03–2023 ಸಾಯಂಕಾಲ 4:00 ಗಂಟೆವರೆಗೆ, 8) ತಾಂತ್ರಿಕ ಬಿಡ್ಡ ತೆರೆಯುವ ದಿನಾಂಕ: 29–03–2023 ಸಾಯಂಕಾಲ 4:01 ಗಂಟೆವರೆಗೆ, 9) ಆರ್ಥಿಕ ಬಿಡ್ಡ್ ತೆರೆಯುವ ದಿನಾಂಕ: 31–03–2023 ಬೆ. 11.00 ಗಂಟೆವರೆಗೆ, 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಮೊದಲನೆ ಮಹಡಿ, ಕುಸನೂರ ರೋಡ, ಕಲಬುರಗಿ, 11) ಅಂತರಜಾಲ ತಾಣದ ವಿಳಾಸ: www.eproc.karnataka.gov.in
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/1578/ಎಂ.ಸಿ.&ಎ/2022–23

ಕರ್ನಾಟಕ ಸರಕಾರ
(ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ, ಕೊಪ್ಪಳ–583231 ಇ.ಮೇಲ್:–eemidnkst@rediffmail.com ದೂರವಾಣಿ ಸಂಖ್ಯೆ:08539:220054
ಸಂಖ್ಯೆ: ಕಾನಿಇಂ/ಸನೀ&ಅಂಅವಿ/ಕೊಪ್ಪಳ/ತಾಶಾ/2022–23/681 ದಿನಾಂಕ :23.03.2023
ಟೆಂಡರ್ ಮುಂದೂಡಿಕೆ ಮತ್ತು ತಿದ್ದುಪಡಿ ಪ್ರಕಟಣೆ
ಉಲ್ಲೇಖ: ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ: 1464 ದಿನಾಂಕ:15.03.2023 ಮತ್ತು 1407 ದಿ:13.03.2023
ಈ ಕಛೇರಿಯಿಂದ ಉಲ್ಲೇಖದಲ್ಲಿ ಹೊರಡಿಸಿದ್ದ ಟೆಂಡರ್ ಪ್ರಕಟಣೆಯನ್ನು ತಾಂತ್ರಿಕ ಕಾರಣಗಳಿಂದಾಗಿ ಈ ಕೆಳಗಿನಂತೆ ಟೆಂಡರ್ ಅವಧಿ ವಿಸ್ತರಣೆ ಪ್ರಕಟಣೆಯನ್ನು ನೀಡಲಾಗಿರುತ್ತದೆ, ಇನ್ನುಳಿದಂತೆ ಟೆಂಡರಿನಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಕ್ರ ಸಂ	ಟೆಂಡರ್ ದಿನಾಂಕಗಳು	ಈ ಹಿಂದೆ ಪ್ರಕಟಿಸಲಾದಂತೆ	ಟೆಂಡರ್ ಅವಧಿ ವಿಸ್ತರಣೆ ಪ್ರಕಟಣೆಯಂತೆ
	INDENT NO: 39633, 39632, 39628, 39626, 39627, 39631, 39629, 39630, 39459, 39634, 39635, 39700		
1	ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ ಮತ್ತು ಸಮಯ	ದಿನಾಂಕ:23/03/2023 ರ 17.30 ಘಂಟೆ ವರೆಗೆ	ದಿನಾಂಕ 28/03/2023 ರ 17.30 ಘಂಟೆ ವರೆಗೆ
2	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ.	ದಿನಾಂಕ:24/03/2023 ರ 11.00 ಘಂಟೆಯಿಂದ	ದಿನಾಂಕ 30/03/2023 ರ 11.00 ಘಂಟೆಯಿಂದ
	INDENT NO:39665, 39663		
1	ಟೆಂಡರ್ ಸಲ್ಲಿಸಬಹುದಾದ ದಿನಾಂಕ	ದಿನಾಂಕ:14/03/2023 ರ 11.00 ಘಂಟೆಯಿಂದ	ದಿನಾಂಕ 28/03/2023 ರ 11.00 ಘಂಟೆಯಿಂದ
2	ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ ಮತ್ತು ಸಮಯ	ದಿನಾಂಕ:24/03/2023 ರ 17.30 ಘಂಟೆ ವರೆಗೆ	ದಿನಾಂಕ 03/04/2023 ರ 17.30 ಘಂಟೆ ವರೆಗೆ
3	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ.	ದಿನಾಂಕ:27/03/2023 ರ 11.00 ಘಂಟೆಯಿಂದ	ದಿನಾಂಕ 05/04/2023 ರ 11.00 ಘಂಟೆಯಿಂದ

ಸಹಿ/– ಕಾರ್ಯನಿಪಾಲಕ ಇಂಜಿನೀಯರ್,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಕೊಪ್ಪಳ.
ಡಿಐಪಿಆರ್/ಕೊಪ್ಪಳ/769/ಕೆಎಸ್‌ಎಂಸಿಎ/2022–23

ಶಾಲೆ– ಆಸ್ಪತ್ರೆ ಕಾಮಗಾರಿಗೂ ಅನ್ವಯ

ನರೇಗಾ ವಿಸ್ತರಣೆ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬೆಂಗಳೂರಿನಲ್ಲಿ ಶುಕ್ರವಾರ ಗಾಂಧಿ ಗ್ರಾಮ ಪುರಸ್ಕಾರವನ್ನು ಗ್ರಾಮ ಪಂಚಾಯಿತಿ ಸದಸ್ಯರಿಗೆ ಪ್ರದಾನ ಮಾಡಿದರು

ಬೆಂಗಳೂರು: 'ಶಾಲೆ ಮತ್ತು ಆಸ್ಪತ್ರೆ ಕಾಮಗಾರಿಗಳನ್ನೂ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ (ನರೇಗಾ) ಯೋಜನೆಯಡಿ ನಿರ್ವಹಿಸಲು ನಿಯಮಗಳಿಗೆ ಕೆಲವೇ ದಿನಗಳಲ್ಲಿ ಬದಲಾವಣೆ ತರಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಶುಕ್ರವಾರ ಆಯೋಜಿಸಿದ್ದ ಗಾಂಧಿ ಗ್ರಾಮ ಪುರಸ್ಕಾರ ಹಾಗೂ ಮಹಾತ್ಮ ಗಾಂಧಿ ನರೇಗಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ಬಾಪೂಜಿ ತಂತ್ರಾಂಶ-2ಕ್ಕೆ ಚಾಲನೆ ನೀಡಲಾಗಿದ್ದು, ಇದೊಂದು ಕ್ರಾಂತಿಕಾರಕ ತೀರ್ಮಾನ. ಇದರಿಂದ ತಹಶೀಲ್ದಾರ್ ಕಚೇರಿ, ಜಿಲ್ಲಾಧಿಕಾರಿ ಕಚೇರಿಗೆ ಅಲೆದಾಡುವುದು ತಪ್ಪಲಿದೆ' ಎಂದರು.

ಅತ್ಯುತ್ತಮ ಜಿಲ್ಲಾ ಪಂಚಾಯಿತಿ ಪುರಸ್ಕಾರದ ಮೊದಲ ಬಹುಮಾನ ಬೆಂಗಳೂರು ಗ್ರಾಮಾಂತರ ಜಿಲ್ಲೆ (₹15 ಲಕ್ಷ), ದ್ವಿತೀಯ ಬಹುಮಾನ ಶಿವಮೊಗ್ಗ (₹12.50 ಲಕ್ಷ), ತೃತೀಯ ಬಹುಮಾನ ಬಳ್ಳಾರಿ ಮತ್ತು ಬಾಗಲಕೋಟೆಗೆ (ತಲಾ ₹10 ಲಕ್ಷ) ನೀಡಲಾಯಿತು.

ತಾಲ್ಲೂಕು ಪಂಚಾಯಿತಿ ವಿಭಾಗದಲ್ಲಿ ಪ್ರಥಮ ಬಹುಮಾನ ಗುಳೇದಗುಡ್ಡ (₹10 ಲಕ್ಷ), ಎರಡನೇ ಬಹುಮಾನ ದೊಡ್ಡಬಳ್ಳಾಪುರ (7.50 ಲಕ್ಷ), ಮೂರನೇ ಬಹುಮಾನವನ್ನು ಭದ್ರಾವತಿ (₹5 ಲಕ್ಷ) ಪಡೆದುಕೊಂಡಿತು.

ಗ್ರಾಮ ಪಂಚಾಯಿತಿ ವಿಭಾಗದಲ್ಲಿ ಮುಧೋಳದ ಹಲಗಲಿ, ಹಾಸನದ ಮಾಡಬಾಳ, ಕುಂದಾಪುರದ ಹಕ್ಲಾಡಿ, ಕೊಡಗಿನ ದೇವರಪುರ, ದೊಡ್ಡಬಳ್ಳಾಪುರದ ತೂಬಗೆರೆ ಪಂಚಾಯಿತಿಗಳು ಅತ್ಯುತ್ತಮ ವಿಭಾಗಕ್ಕೆ ಆಯ್ಕೆಯಾಗಿದ್ದು, ತಲಾ ₹5 ಲಕ್ಷ ಬಹುಮಾನಕ್ಕೆ ಪಾತ್ರವಾಗಿವೆ.

ಗ್ರಾ.ಪಂ ಸದಸ್ಯರಿಂದ ಪ್ರತಿಭಟನೆ

ಗಾಂಧಿ ಗ್ರಾಮ ಪುರಸ್ಕಾರ ಕಾರ್ಯಕ್ರಮ ಕೊನೆಯಲ್ಲಿ ಗೊಂದಲದ ಗೂಡಾಗಿ, ಗ್ರಾಮ ಪಂಚಾಯಿತಿ ಸದಸ್ಯರು ಪ್ರತಿಭಟನೆ ನಡೆಸಿದರು.

2019–20ರಿಂದ ಈವರೆಗಿನ ಮೂರು ವರ್ಷಗಳ ಗಾಂಧಿ ಪುರಸ್ಕಾರಕ್ಕೆ ಒಟ್ಟು 585 ಗ್ರಾಮ ಪಂಚಾಯಿತಿಗಳನ್ನು ಆಯ್ಕೆ ಮಾಡಲಾಗಿತ್ತು. ಗ್ರಾಮ ಪಂಚಾಯಿಗಳ ಅಧ್ಯಕ್ಷರು, ಸದಸ್ಯರನ್ನು ಆಹ್ವಾನಿಸಲಾಗಿತ್ತು. ಮುಖ್ಯಮಂತ್ರಿ ಸಾಂಕೇತಿಕವಾಗಿ ಕೆಲವರಿಗೆ ಪುರಸ್ಕಾರ ನೀಡಿದರು. ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಅವರೂ ಕೆಲವರಿಗೆ ಪ್ರಶಸ್ತಿ ಫಲಕ ವಿತರಿಸಿದರು.

ಇನ್ನೂ ನೂರಾರು ಗ್ರಾಮ ಪಂಚಾಯಿತಿ ಸದಸ್ಯರು ಮತ್ತು ಅಧ್ಯಕ್ಷರು ಸಾಲಿನಲ್ಲೇ ನಿಂತಿದ್ದರಿಂದ ನೂಕು ನುಗ್ಗಲು ಏರ್ಪಟ್ಟಿತು. ಗ್ರಾಮ ಪಂಚಾಯಿತಿಗೇ ಫಲಕಗಳನ್ನು ಕಳುಹಿಸುವುದಾಗಿ ಘೋಷಿಸಿ ಕಾರ್ಯಕ್ರಮ ಅಂತ್ಯಗೊಳಿಸಲಾಯಿತು. ಇದು ದೂರದ ಜಿಲ್ಲೆಗಳಿಂದ ಬಂದಿದ್ದ ಗ್ರಾಮ ಪಂಚಾಯಿತಿ ಸದಸ್ಯರ ಆಕ್ರೋಶಕ್ಕೆ ಕಾರಣವಾಯಿತು.

'ಚುನಾಯಿತ ಸದಸ್ಯರನ್ನು ಆಹ್ವಾನಿಸಿ ಪುರಸ್ಕಾರವನ್ನೂ ನೀಡದೇ ಬರಿಗೈನಲ್ಲಿ ವಾಪಸ್ ಕಳುಹಿಸುತ್ತಿರುವ ಬಿಜೆಪಿ ಸರ್ಕಾರದ ಬೇಜವಾಬ್ದಾರಿಗೆ ಇದು ಉದಾಹರಣೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಳ್ಳಂಬೆಳ್ಳ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಘಟನೆ

ಸಕಾಲದಲ್ಲಿ ಚಿಕಿತ್ಸೆ ಸಿಗದೆ ಯುವಕ ಸಾವು

ಶಿರಾ (ತುಮಕೂರು ಜಿಲ್ಲೆ): ತಾಲ್ಲೂಕಿನ ಕಳ್ಳಂಬೆಳ್ಳ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಶುಕ್ರವಾರ ಕರೆತರಲಾಗಿದ್ದ ಯುವಕ ಸಕಾಲದಲ್ಲಿ ಚಿಕಿತ್ಸೆ ಸಿಗದೆ ಮೃತಪಟ್ಟಿದ್ದಾರೆ. ಆ ಸಮಯದಲ್ಲಿ ವೈದ್ಯರು ಇರಲಿಲ್ಲ. ನರ್ಸ್ ಚಿಕಿತ್ಸೆ ನೀಡುವ ವೇಳೆಗೆ ಮೃತಪಟ್ಟಿದ್ದಾರೆ ಎಂದು ಆರೋಪಿಸಲಾಗಿದೆ.

ಕಳ್ಳಿಪಾಳ್ಯ ಗ್ರಾಮದ ಶಾಂತರಾಜು (23) ಅವರನ್ನು ಆಸ್ಪತ್ರೆಗೆ ಕರೆತಂದಾಗ ವೈದ್ಯರು ಇರಲಿಲ್ಲ. ತಪಾಸಣೆ ಮಾಡಿದ ನರ್ಸ್ ಯುವಕ ಮೃತಪಟ್ಟಿರುವುದಾಗಿ ಹೇಳಿದರು ಎಂದು ಮೃತನ ಕುಟುಂಬದವರು ತಿಳಿಸಿದ್ದಾರೆ. ಕರ್ತವ್ಯ ನಿರ್ವಹಿಸಬೇಕಿದ್ದ ಡಾ.ರಾಮೇಗೌಡ ಗೈರುಹಾಜರಾಗಿದ್ದರು.

ಆಸ್ಪತ್ರೆಗೆ ಬರುವ ವೇಳೆಗೆ ರೋಗಿ ಮೃತಪಟ್ಟಿದ್ದಾರೆ ಎಂದು ಆಸ್ಪತ್ರೆಯ ಸಿಬ್ಬಂದಿ ಹೇಳುತ್ತಿದ್ದರೂ ಮರಣ ಹೊಂದಿರುವ ಬಗ್ಗೆ ದೃಢೀಕರಣ ಪತ್ರ ನೀಡಲು ನಿರಾಕರಿಸಿರುವುದು ಅನುಮಾನಗಳಿಗೆ ಕಾರಣವಾಗಿದೆ.

ಶಾಂತರಾಜು ಅವರಿಗೆ ಹೊಟ್ಟೆ ಉರಿ ಕಾಣಿಸಿಕೊಂಡಿದ್ದು, ಮಜ್ಜಿಗೆ ಕುಡಿದು ಮಲಗಿದ್ದಾರೆ. ಎಷ್ಟು ಹೊತ್ತಾದರೂ ಎದ್ದಿಲ್ಲ. ಮನೆಯವರು ಎಬ್ಬಿಸುವ ಪ್ರಯತ್ನ ಮಾಡಿದ್ದಾರೆ. ಏಳದ ಕಾರಣ ಆಸ್ಪತ್ರೆಗೆ ಕರೆತಂದಿದ್ದಾರೆ. ರೋಗಿ ಆಸ್ಪತ್ರೆಗೆ ಬಂದ ನಂತರ ಅಥವಾ ಬರುವಾಗ ಮೃತಪಟ್ಟಿದ್ದಾರೆಯೇ ಎಂಬ ಗೊಂದಲ ಮುಂದುವರಿದಿದೆ.

ರಾಷ್ಟ್ರೀಯ ಹೆದ್ದಾರಿ-48ಕ್ಕೆ ಹೊಂದಿಕೊಂಡಂತೆ ಇರುವ ಈ ಆರೋಗ್ಯ ಕೇಂದ್ರ 24X7 ಕಾರ್ಯ ನಿರ್ವಹಿಸುತ್ತಿದೆ. ಈಗ ಒಬ್ಬರೇ ವೈದ್ಯರಿದ್ದಾರೆ. ಗ್ರಾಮೀಣ ಸೇವೆಗಾಗಿ ನಿಯೋಜನೆಗೊಂಡಿದ್ದ ವೈದ್ಯ ಸ್ವಲ್ಪ ದಿನ ಕೆಲಸ ಮಾಡಿದ್ದು, ಮತ್ತೆ ಬಂದಿಲ್ಲ. ಇರುವ ಒಬ್ಬರೇ ವೈದ್ಯರು 24 ಗಂಟೆ ಕೆಲಸ ನಿರ್ವಹಿಸಬೇಕಾಗಿದೆ.

ತನಿಖೆಗೆ ಆದೇಶ: ಡಿಎಚ್‌ಒ

ರೋಗಿ ಸಾವಿನ ಬಗ್ಗೆ ತನಿಖೆಗೆ ಶಿರಾ ತಾಲ್ಲೂಕು ವೈದ್ಯಾಧಿಕಾರಿಗೆ ಆದೇಶಿಸಿರುವುದಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಮಂಜುನಾಥ್ ತಿಳಿಸಿದರು. ಸಮಗ್ರ ತನಿಖೆ ನಡೆಸಿ ವರದಿ ನೀಡುವಂತೆ ಸೂಚಿಸಲಾಗಿದೆ ಎಂದು ಹೇಳಿದರು.

ಅನುದಾನಿತ ಶಾಲಾ ಶಿಕ್ಷಕರ ವರ್ಗಾವಣೆ

ಬೆಂಗಳೂರು: ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಶಿಕ್ಷಕರ ವರ್ಗಾವಣೆಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಅವಕಾಶ ಕಲ್ಪಿಸಿದೆ.

ಶಿಕ್ಷಕರು ತಾವು ಕಾರ್ಯನಿರ್ವಹಿಸುತ್ತಿರುವ ಆಡಳಿತ ಮಂಡಳಿಗಳ ಇತರೆ ಶಾಲೆಗಳಿಗೆ ಅಥವಾ ಇತರೆ ಆಡಳಿತ ಮಂಡಳಿಗಳ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ವರ್ಗಾವಣೆ ಕೋರಿ ಅರ್ಜಿ ಸಲ್ಲಿಸಬಹುದು. ಶಿಕ್ಷಕರ ವರ್ಗಾವಣೆ ಪ್ರಸ್ತಾವನೆಗಳನ್ನು ಆಡಳಿತ ಮಂಡಳಿಗಳು ಮೇ 31ರ ಒಳಗೆ ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸಬೇಕು.

ವರ್ಗಾವಣೆ ಬಯಸಿದ ಶಾಲೆಗಳಲ್ಲಿ ಮಕ್ಕಳ ಅನುಪಾತಕ್ಕೆ ಅನುಗುಣವಾಗಿ ಶಿಕ್ಷಕರ ಆವಶ್ಯಕತೆ ಕುರಿತು ಶಿಕ್ಷಣಾಧಿಕಾರಿಗಳು ಖಚಿತಪಡಿಸಿಕೊಳ್ಳ ಬೇಕು. ಪ್ರಸ್ತಾವನೆಗಳನ್ನು ಪರಿಶೀಲಿಸಿ, ದಾಖಲೆಗಳ ಸಹಿತ ಮೇಲಧಿಕಾರಿಗಳಿಗೆ ಸಲ್ಲಿಸಬೇಕು. ವರ್ಗಾವಣೆಯ ಎಲ್ಲ ಪ್ರಕ್ರಿಯೆಗಳನ್ನು ಜುಲೈ 31ರೊಳಗೆ ಪೂರ್ಣಗೊಳಿಸಲು ಸುತ್ತೋಲೆಯಲ್ಲಿ ಸೂಚಿಸಲಾಗಿದೆ.

ಕಲ್ಪತರು ವಿದ್ಯಾ ಸಂಸ್ಥೆ(ರಿ.),

ತಿಪಟೂರು–572201, ತುಮಕೂರು ಜಿಲ್ಲೆ, ಕರ್ನಾಟಕ

ಫೋನ್: 08134-251364, 08134-251067

Email: principal.pac.tiptur@gmail.com & kfgscprinci@gmail.com

ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ನೇರ ನೇಮಕಾತಿ

ಕಲ್ಪತರು ವಿದ್ಯಾ ಸಂಸ್ಥೆ, ತಿಪಟೂರು ವ್ಯಾಪ್ತಿಗೆ ಒಳಪಡುವ ಪಲ್ಲಾಗಟ್ಟಿ ಅಡವಪ್ಪ ಕಲಾ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜು ಮತ್ತು ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜು, ತಿಪಟೂರು ಇಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಮಾನ್ಯ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಪತ್ರದ ಸಂಖ್ಯೆ: ಕಾಶಿಇ:75:ಖಾಹುಭ:2019–20:ಬೆಂಗ್ರಾ:ನೇವಿ–2, ಬೆಂಗಳೂರು, ದಿನಾಂಕ: 21.03.2023 ರ ನಿರ್ದೇಶನದಂತೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ವಿಷಯ	ಹುದ್ದೆಗಳ ಸಂಖ್ಯೆ	ಮೀಸಲಾತಿ
01	ಕನ್ನಡ	01	ಪ.ಜಾ.–01
02	ಹಿಂದಿ	01	ಏಕವ್ಯಕ್ತಿ ವಿಭಾಗ ಮೀಸಲಾತಿ ಅನ್ವಯಿಸುವುದಿಲ್ಲ
03	ಇತಿಹಾಸ	01	ಪ.ಜಾ.–01
04	ಸಮಾಜಶಾಸ್ತ್ರ	01	ಪ.ಜಾ.–01
05	ರಾಜ್ಯಶಾಸ್ತ್ರ	01	ಪ.ಜಾ.–01
06	ವಾಣಿಜ್ಯಶಾಸ್ತ್ರ	02	ಪ.ಜಾ.–01, ಸಾಮಾನ್ಯ ಅ.–01
07	ಗಣಿತಶಾಸ್ತ್ರ	02	ಪ.ಜಾ.–01, ಸಾಮಾನ್ಯ ಅ.–01
08	ರಸಾಯನಶಾಸ್ತ್ರ	01	ಪ.ಜಾ.–01

01.**ವಿದ್ಯಾರ್ಹತೆ:** ಆಯಾ ವಿಷಯದ ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಟ ಶೇ.55% ಅಂಕಗಳನ್ನು ಪಡೆದಿರಬೇಕು. (ಪ.ಜಾ. ಅಭ್ಯರ್ಥಿಗಳಿಗೆ ಶೇ.50% ಅಂಕಗಳು) ಎನ್.ಇ.ಟಿ./ಎಸ್.ಎಲ್.ಇ.ಟಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರ ಬೇಕು. ಕೋರ್ಸ್ ವರ್ಕ್‌ನೊಂದಿಗೆ ಪಿಹೆಚ್.ಡಿ. ಪದವಿಯನ್ನು ಹೊಂದಿರುವ ಅಭ್ಯರ್ಥಿಗಳಿಗೆ ಎನ್.ಇ.ಟಿ./ಎಸ್.ಎಲ್.ಇ.ಟಿ.ಪರೀಕ್ಷೆಯಿಂದ ವಿನಾಯಿತಿ ಇರುತ್ತದೆ. ದಿನಾಂಕ: 11–07–2009 ರ ಪೂರ್ವದಲ್ಲಿ ಪಿಹೆಚ್.ಡಿ. ಪದವಿ ಪಡೆದಿದ್ದಲ್ಲಿ, ಪಿಹೆಚ್.ಡಿ.ಗೆ ನೊಂದಣಿ ಮಾಡಿಸಿದ್ದಲ್ಲಿ ಅಂತಹ ಅಭ್ಯರ್ಥಿಗಳು ದಿನಾಂಕ: 04–05–2016 ರ ಯುಜಿಸಿ ಅಧಿಸೂಚನೆಯಲ್ಲಿ ಹೊರಡಿಸಿರುವ ನಿಯಮಗಳನ್ನು ಪೂರೈಸುವ ಷರತ್ತಿಗೊಳಪಟ್ಟಿರುತ್ತದೆ. ದಿನಾಂಕ: 11–07–2009 ರ ನಂತರದ ಯಾವುದೇ ನೇಮಕಾತಿಗೆ ಎಂ.ಫಿಲ್. ವಿದ್ಯಾರ್ಹತೆ ಪರಿಗಣಿಸಲಾಗುವುದಿಲ್ಲ. ಸರ್ಕಾರ ಹಾಗೂ ಯುಜಿಸಿ ನಿಯಮಾವಳಿಗಳ ಪ್ರಕಾರ ಆಯ್ಕೆ ಪ್ರಕ್ರಿಯೆಯನ್ನು ನಡೆಸಲಾಗುವುದು.

02.**ವಯೋಮಿತಿ:** ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದಂದು ಅಭ್ಯರ್ಥಿಗಳು ಗರಿಷ್ಟ ವಯೋಮಿತಿಯನ್ನು ಮೀರಿರಬಾರದು. (ದಿನಾಂಕ: 20–06–2018ರ ಸರ್ಕಾರದ ಆದೇಶ ಸಂಖ್ಯೆ: ಇಡಿ/49/ಯುಪಿಸಿ/2018 ರ ಪ್ರಕಾರ ಪ.ಜಾ. , ಪ.ಪಂ. ಪ್ರ–1 ಗರಿಷ್ಟ 45 , ಇತರ ಹಿಂದುಳಿದ ವರ್ಗಗಳಿಗೆ ಗರಿಷ್ಟ 43 ಹಾಗೂ ಸಾಮಾನ್ಯ ವರ್ಗ ಗರಿಷ್ಟ 40 ವರ್ಷಗಳು. ದಿನಾಂಕ:13–12–2018 ರ ಸಂಖ್ಯೆ: ಇಡಿ/87/ಯುಪಿಸಿ/2016 ರ ಸರ್ಕಾರದ ಸೇರ್ಪಡೆ ಆದೇಶದನ್ವಯ ಖಾಸಗಿ ಅನುದಾನಿತ ಪದವಿಕಾಲೇಜುಗಳಲ್ಲಿ ಪೂರ್ಣಕಾಲಿಕ ಬೋಧನಾ ಅನುಭವ ಹೊಂದಿರುವ ಅಭ್ಯರ್ಥಿಗಳಿಗೆ ಮೇಲಿನ ಗರಿಷ್ಟ ವಯೋಮಿತಿಯನ್ನು ನಿಗದಿಪಡಿಸುವುದರೊಂದಿಗೆ ಅವರು ಬೋಧನಾನುಭವ ಹೊಂದಿರುವ ಸೇವಾವಧಿ ಅಥವಾ 05 ವರ್ಷಗಳು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಅವಧಿಯನ್ನು ಗರಿಷ್ಟ ವಯೋಮಿತಿಯಲ್ಲಿ ವಿನಾಯಿತಿಯನ್ನು ಪರಿಗಣಿಸಲಾಗುವುದು.

03.**ವೇತನ:** ಯುಜಿಸಿ ವೇತನಾನುಸಾರ ವೇತನ ಶ್ರೇಣಿ ನಿಗದಿಪಡಿಸಲಾಗುವುದು.

04.ಅರ್ಹ ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು ಸ್ವಪರಿಚಯ ಪತ್ರ ಮತ್ತು ಅಗತ್ಯ ಪ್ರಮಾಣ ಪತ್ರಗಳನ್ನು ದೃಢೀಕೃತ ಪ್ರತಿಗಳೊಂದಿಗೆ ಪ್ರಕಟಣೆ ಹೊರಡಿಸಿರುವ ದಿನಾಂಕದಿಂದ 21 ದಿನಗಳಗೊಳಗಾಗಿ ಅಧ್ಯಕ್ಷರು, ಕಲ್ಪತರು ವಿದ್ಯಾ ಸಂಸ್ಥೆ, ಎನ್.ಹೆಚ್.–206, ಬಿ.ಹೆಚ್. ರಸ್ತೆ, ತಿಪಟೂರು–572201, ತುಮಕೂರು ಜಿಲ್ಲೆ, ಕರ್ನಾಟಕ ಇವರಿಗೆ ತಲುಪುವಂತೆ ಕಳುಹಿಸಿತಕ್ಕದ್ದು. ಸೇವೆಯಲ್ಲಿರುವ ಅಭ್ಯರ್ಥಿಗಳು ತಮ್ಮ ಸಂಸ್ಥೆಯ/ಇಲಾಖೆಯ ಮುಖ್ಯಸ್ಥರ ಮೂಲಕ ಅರ್ಜಿಯನ್ನು ಸಲ್ಲಿಸತಕ್ಕದ್ದು. ಪ.ಜಾ. ಅಭ್ಯರ್ಥಿಗಳು ರೂ. 2000/– ಹಾಗೂ ಇತರರು ರೂ.3000/– ಬ್ಯಾಂಕ್ ಡಿ.ಡಿ. ಯನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು. (ಮರುಪಾವತಿಸಲಾಗುವುದಿಲ್ಲ). (DD in favour of "PRESIDENT, KALPATARU VIDYA SAMASTHE, TIPTUR"). ಪರಿಪೂರ್ಣವಿಲ್ಲದ ಹಾಗೂ ನಿಗದಿತ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅಲ್ಲದೇ ತಮ್ಮ ಅರ್ಜಿಯ ಒಂದು ಪ್ರತಿಯನ್ನು "ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ನಂ.5, ಕಾಳಿದಾಸ ರಸ್ತೆ,ಬೆಂಗಳೂರು" ಇವರಿಗೆ ನಿಗದಿತ ದಿನಾಂಕದ ಒಳಗೆ ಸಲ್ಲಿಸುವಂತೆ ಸೂಚಿಸಲಾಗಿದೆ. ಸಂದರ್ಶನಕ್ಕೆ ಆಹ್ವಾನ ಪಡೆದ ಅಭ್ಯರ್ಥಿಗಳು ಮೂಲ ದಾಖಲೆಗಳೊಂದಿಗೆ ತಮ್ಮ ಸ್ವಂತ ಖರ್ಚಿನಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು. ಸಂದರ್ಶನದ ದಿನಾಂಕವನ್ನು ನಂತರ ತಿಳಿಸಲಾಗುವುದು.

05.ಆಯ್ಕೆ ಪ್ರಕ್ರಿಯೆಯ ಯಾವುದೇ ಹಂತದಲ್ಲಾದರೂ, ಸದರಿ ಹುದ್ದೆಯ ಅನುಮತಿ ಮತ್ತು ಆಯ್ಕೆಯನ್ನು ಇಲಾಖಾ/ಸರ್ಕಾರವು ರದ್ದುಪಡಿಸುವ ಅಧಿಕಾರವನ್ನು ಹೊಂದಿದ್ದು, ಅಭ್ಯರ್ಥಿಯು ಅರ್ಜಿಯನ್ನು ಸಲ್ಲಿಸಿದ ಅಥವಾ ಸಂದರ್ಶನಕ್ಕೆ ಹಾಜರಾದ ಮಾತ್ರಕ್ಕೆ ಸದರಿ ಹುದ್ದೆಗೆ ಯಾವುದೇ ಹಕ್ಕನ್ನು ಹೊಂದಿರುವುದಿಲ್ಲ.

ದಿನಾಂಕ: 25–03–2023
ಸ್ಥಳ: ತಿಪಟೂರು

ಶ್ರೀ ಹೆಚ್.ಜಿ.ಸುಧಾಕರ್
ಕಾರ್ಯದರ್ಶಿಗಳು,
ಕ.ವಿ.ಸಂ.ತಿಪಟೂರು

ಶ್ರೀ ಪಿ.ಕೆ.ತಿಪ್ಪೇರುದ್ರಪ್ಪ
ಅಧ್ಯಕ್ಷರು,
ಕ.ವಿ.ಸಂ. ತಿಪಟೂರು

ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆ, ಬೀದರ.

Karnataka Rastriya Education Society, Bidar.

Karnataka India Regd No: 48/78-79

Hyderabad Road, Bidar - 585401. Ph. No: 08482-225769, Cell No: 9343834632

www.kresbidar.org / www.kascc.in.net Email: kresocietybidar@gmail.com

ಅನುದಾನಿತ ಕಾಲೇಜಿನ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಅರ್ಜಿ ಆಹ್ವಾನ

ಸದರಿ ಸಂಸ್ಥೆಯಲ್ಲಿ ನಡೆಸುತ್ತಿರುವ ಖಾಸಗಿ ಅನುದಾನಿತ ಕರ್ನಾಟಕ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಬೀದರದಲ್ಲಿ ಖಾಲಿ ಇರುವ ಅನುದಾನಿತ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಕಾಶಿಇ/111/ಹೈಕ/ ಮೀಸಲಾತಿ/2016–17/ನೇವಿ–2/308, ದಿನಾಂಕ: 21.03.2023 ಹಾಗೂ ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಕಲಬುರಗಿ ಇವರ ಪತ್ರ ಸಂಖ್ಯೆ: ಕಾಶಿಇ/ಪ್ರಾಕಕ/1309/ಖಾಹುಭ/03/2022–23/4262, ದಿನಾಂಕ: 23.03.2023ರ ನಿರ್ದೇಶನದಂತೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ವಿಷಯ	ಹುದ್ದೆಗಳ ಸಂಖ್ಯೆ	ಮೀಸಲಾತಿ
1	ಇಂಗ್ಲೀಷ್	02	ಪರಿಶಿಷ್ಟ ಜಾತಿ–01, ಸಾಮಾನ್ಯ–01
2	ಅರ್ಥಶಾಸ್ತ್ರ	02	ಪರಿಶಿಷ್ಟ ಜಾತಿ–01, ಸಾಮಾನ್ಯ–01
3	ರಾಜ್ಯಶಾಸ್ತ್ರ	01	ಪರಿಶಿಷ್ಟ ಜಾತಿ–01
4	ಸಮಾಜಶಾಸ್ತ್ರ	01	ಪರಿಶಿಷ್ಟ ಜಾತಿ–01
5	ಭೌತಶಾಸ್ತ್ರ	01	ಪರಿಶಿಷ್ಟ ಜಾತಿ–01
6	ಪ್ರಾಣಿಶಾಸ್ತ್ರ	01	ಪರಿಶಿಷ್ಟ ಜಾತಿ–01
7	ಗಣಿತಶಾಸ್ತ್ರ	01	ಪರಿಶಿಷ್ಟ ಜಾತಿ–01
8	ವಾಣಿಜ್ಯಶಾಸ್ತ್ರ	03	ಪರಿಶಿಷ್ಟ ಜಾತಿ–01, ಸಾಮಾನ್ಯ–01, ಪರಿಶಿಷ್ಟ ಪಂಗಡ–01

1. ಅಭ್ಯರ್ಥಿಗಳು ಸಂಬಂಧಪಟ್ಟ ವಿಷಯದಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ 55% ಅಂಕಗಳು, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಶೇಕಡ 50% ರಷ್ಟು ಅಂಕಗಳು ಹಾಗೂ ಎನ್.ಇ.ಟಿ./ಕೆ.ಎಸ್.ಇ.ಟಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಕೋರ್ಸ್‌ವರ್ಕ್ ಮೂಲಕ ಪಿಹೆಚ್.ಡಿ. ಪದವಿ ಪಡೆದ ಅಭ್ಯರ್ಥಿಗಳಿಗೆ ಎನ್.ಇ.ಟಿ./ಕೆ.ಎಸ್.ಇ.ಟಿ. ಪರೀಕ್ಷೆಯಿಂದ ವಿನಾಯಿತಿ ನೀಡಲಾಗುವುದು. ಒಂದು ವೇಳೆ ದಿನಾಂಕ: 11.07.2009ರ ಪೂರ್ವದಲ್ಲಿ ಪಿಹೆಚ್.ಡಿ. ಪದವಿ ಪಡೆದಿದ್ದಲ್ಲಿ/ಪಿಹೆಚ್.ಡಿ.ಗೆ ನೋಂದಣಿ ಮಾಡಿಸಿದ್ದಲ್ಲಿ ಅಂತಹ ಅಭ್ಯರ್ಥಿಗಳು ದಿನಾಂಕ: 04.05.2016ರ ಯುಜಿಸಿ ಅಧಿಸೂಚನೆಯಲ್ಲಿ ಹೊರಡಿಸಿರುವ ನಿಯಮಗಳನ್ನು ಪೂರೈಸುವ ಷರತ್ತುಗಳಿಗೆ ಒಳಪಟ್ಟಿರುತ್ತದೆ. ದಿನಾಂಕ: 11.07.2009ರ ನಂತರದ ಯಾವುದೇ ನೇಮಕಾತಿಗೆ ಎಂ.ಫಿಲ್.ಅರ್ಹತೆ ಪರಿಗಣಿಸಲಾಗುವುದಿಲ್ಲ.
2. ಕಲ್ಯಾಣ ಕರ್ನಾಟಕದ 371(ಜೆ) ಅಡಿಯಲ್ಲಿ ಮೀಸಲಾತಿ ಬಯಸುವ ಅಭ್ಯರ್ಥಿಗಳು, ಕಡ್ಡಾಯವಾಗಿ 371(ಜೆ) ದೃಢೀಕ್ರತ ಪ್ರಮಾಣಪತ್ರ ಅರ್ಜಿಯೊಂದಿಗೆ ಲಗತ್ತಿಸಬೇಕು.
3. ಅರ್ಜಿಯನ್ನು ತಮ್ಮ ಪೂರ್ಣ ಸ್ವವಿವರ ಮತ್ತು ವಿದ್ಯಾರ್ಹತೆಗೆ ಸಂಬಂಧಿಸಿದಂತೆ ದೃಢೀಕ್ರತ ಪ್ರತಿಗಳು ಹಾಗೂ ಮೀಸಲಾತಿಯ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪಡೆದುಕೊಂಡಿರುವ ಪ್ರಮಾಣಪತ್ರದ ದೃಢೀಕ್ರತ ಪ್ರತಿಗಳೊಂದಿಗೆ ಸಾಮಾನ್ಯ ವರ್ಗ ಹಾಗೂ ಇತರೆ ವರ್ಗದವರು ರೂ.2000/– ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ರೂ.1000/– ಬ್ಯಾಂಕ್ ಹುಂಡಿಯನ್ನು President, K.R.E.Society, Bidar ಇವರಿಗೆ ಸಂದಾಯವಾಗುವಂತೆ ಪಡೆದು ಎಲ್ಲಾ ದಾಖಲೆಗಳನ್ನು "ಅಧ್ಯಕ್ಷರು, ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆ, ಬೀದರ–585401" ಇಲ್ಲಿಗೆ ಪತ್ರಿಕೆಯಲ್ಲಿ ಪ್ರಕಟಗೊಂಡ ದಿನಾಂಕದಿಂದ 21 ದಿನಗಳೊಳಗಾಗಿ ರಿಜಿಸ್ಟರ್ ಅಥವಾ ಸ್ಪೀಡ್ ಪೋಸ್ಟ್ ಮೂಲಕ ತಲುಪಿಸುವುದು. ಲಕೋಟೆಯ ಮೇಲೆ ಯಾವ ಹುದ್ದೆಗೆ ಅರ್ಜಿ ಸಲ್ಲಿಸಲಾಗಿದೆ ಎಂದು ಸ್ಪಷ್ಟವಾಗಿ ನಮೂದಿಸುವುದು.
4. ವಯೋಮಿತಿ: ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿರುವ ಅಭ್ಯರ್ಥಿಗಳಿಗೆ ಗರಿಷ್ಠ 45 ವರ್ಷ, ಇತರೆ ಹಿಂದುಳಿದ ವರ್ಗದವರಿಗೆ ಗರಿಷ್ಠ 43 ವರ್ಷ ಮತ್ತು ಸಾಮಾನ್ಯ ವರ್ಗದವರಿಗೆ ಗರಿಷ್ಠ 40 ವರ್ಷಗಳನ್ನು ಮೀರಿರಬಾರದು. ದಿನಾಂಕ 13.12.2018ರ ಸಂಖ್ಯೆ: ED/87/UPC/2016ರ ಸರ್ಕಾರದ ಸೇರ್ಪಡೆ ಆದೇಶದನ್ವಯ, ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಪೂರ್ಣಕಾಲಿಕ ಬೋಧನಾನುಭವ ಹೊಂದಿರುವ ಅಭ್ಯರ್ಥಿಗಳಿಗೆ ಮೇಲಿನಂತೆ ವಯೋಮಿತಿಯನ್ನು ನಿಗದಿಪಡಿಸುವುದರೊಂದಿಗೆ ಅವರು ಬೋಧನಾನುಭವ ಹೊಂದಿರುವ ಸೇವಾವಧಿ ಅಥವಾ 05 ವರ್ಷಗಳು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಅವಧಿಯನ್ನು ಗರಿಷ್ಠ ವಯೋಮಿತಿಯಲ್ಲಿ ವಿನಾಯತಿಯನ್ನು ನೀಡಲಾಗುವುದು ಹಾಗೂ ಸೇವಾ ಪ್ರಮಾಣ ಪತ್ರದ ಮೇಲೆ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಪ್ರಾದೇಶಿಕ ಕಚೇರಿ, ಕಲಬುರಗಿ ಇವರ ಮೇಲು ರುಜು ಪಡೆದು ಸಲ್ಲಿಸತಕ್ಕದ್ದು.
5. ಅರ್ಹ ಅಭ್ಯರ್ಥಿಗಳು ನಿಗದಿತ ಅರ್ಜಿಯ ನಮೂನೆಯನ್ನು www.kascc.in.net ಈ ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ.
6. **ವೇತನ ಶ್ರೇಣಿ ಮತ್ತು ಇತರೆ ನಿಬಂಧನೆಗಳು:** ಯುಜಿಸಿ ನಿಯಮಾವಳಿ ಮತ್ತು ಸರ್ಕಾರದ ಆದೇಶಗಳನ್ವಯ ಇರುತ್ತದೆ.
7. ಅನುದಾನಿತ ಮತ್ತು ಸರ್ಕಾರಿ ಹುದ್ದೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವವರು ಅರ್ಜಿಗಳನ್ನು ಮಾತೃ ಸಂಸ್ಥೆಯಿಂದ ನಿರಾಕ್ಷೇಪಣಾ ಪತ್ರವನ್ನು ಒದಗಿಸಬೇಕು.
8. ಅಪೂರ್ಣವಾದ ಹಾಗೂ ಕಡೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
9. ಆಯ್ಕೆ ಪ್ರಕ್ರಿಯೆಯನ್ನು ಯಾವುದೇ ಹಂತದಲ್ಲಾದರೂ ರದ್ದುಪಡಿಸುವ ಅಧಿಕಾರವನ್ನು ಇಲಾಖೆ/ಸರ್ಕಾರವು ಹೊಂದಿರುತ್ತದೆ. ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ ಅಥವಾ ಸಂದರ್ಶನಕ್ಕೆ ಹಾಜರಾದ ಮಾತ್ರಕ್ಕೆ ಸದರಿ ಖಾಲಿ ಹುದ್ದೆಗಳಿಗೆ ಅಭ್ಯರ್ಥಿಗಳು ಯಾವುದೇ ಹಕ್ಕನ್ನು ಹೊಂದಿರುವದಿಲ್ಲ.
10. ಅರ್ಜಿದಾರರು ಒಂದು ನಕಲು ಪ್ರತಿಯನ್ನು ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಸರ್ಕಾರಿ ಕಾಲೇಜು ಆವರಣ, ಕಲಬುರಗಿ–585101 ಇವರಿಗೆ ಕಳುಹಿಸಬೇಕು.
11. ಸಂದರ್ಶನಕ್ಕೆ ಹಾಜರಾದ ಅಭ್ಯರ್ಥಿಗಳಿಗೆ ದಿನಭತ್ಯೆ/ಪ್ರಯಾಣಭತ್ಯೆ ಪಾವತಿಸಲಾಗುವುದಿಲ್ಲ.

ಸಹಿ/– ಅಧ್ಯಕ್ಷರು
ಕ.ರಾ.ಶಿ. ಸಂಸ್ಥೆ, ಬೀದರ

ದಿನಾಂಕ: 24.03.2023

ಸ್ವಾತಂತ್ರ್ಯದ ಅಮೃತ ಮಹೋತ್ಸವ | G20 भारत 2023 INDIA वसुधैव कुटुम्बकम् ONE EARTH • ONE FAMILY • ONE FUTURE

"ಸರ್ವರಿಗೂ ಸೂರು"

ಸರ್ಕಾರದ ದೃಢ ಸಂಕಲ್ಪ

ವಸತಿ ಇಲಾಖೆ | ರಾ.ಗಾಂ.ವ.ನಿ.ನಿ.

ಮಾನ್ಯ ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರಾದ **ಶ್ರೀ ವಿ. ಸೋಮಣ್ಣ** ರವರು ಮಹಿಳಾ ಫಲಾನುಭವಿಯೊಬ್ಬರಿಗೆ ಹಕ್ಕುಪತ್ರ ನೀಡುತ್ತಿರುವುದು

ಭದ್ರ ಬದುಕಿಗೆ ಸುಭದ್ರ ಆಸರೆ

'ನನ್ನ ಮನೆ'

ಫ್ಲಾಟ್‌ಗಳ ಹಂಚಿಕೆಗಾಗಿ ಅರ್ಜಿ ಆಹ್ವಾನ

ಸ್ಥಳ : ತಾಳಗುಪ್ಪ ಗ್ರಾಮ, ಬಿಡದಿ ಹೋಬಳಿ, ರಾಮನಗರ ಜಿಲ್ಲೆ





ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಅರ್ಜಿ ಸಲ್ಲಿಸ ಬಯಸುವವರ ಅರ್ಹತೆ ಮತ್ತು ಸಲ್ಲಿಸಬೇಕಾದ ದಾಖಲೆ

- ಕರ್ನಾಟಕ ರಾಜ್ಯದ ನಿವಾಸಿಯಾಗಿದ್ದು ಬೆಂಗಳೂರು ನಗರ/ಗ್ರಾಮಾಂತರ/ರಾಮನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಕನಿಷ್ಟ 5 ವರ್ಷಗಳಿಂದ ವಾಸವಾಗಿರಬೇಕು (ಕಂದಾಯ ಇಲಾಖೆಯಿಂದ ದೃಢೀಕರಣ ಪತ್ರ ಪಡೆದಿರಬೇಕು).
- ಆಧಾರ್ ಸಂಖ್ಯೆ ಹಾಗೂ ಪಡಿತರ ಚೀಟಿಯನ್ನು ಹೊಂದಿರಬೇಕು.
- ಚುನಾವಣೆ ಆಯೋಗದಿಂದ ನೀಡಲಾದ ಗುರುತಿನ ಚೀಟಿ ಹೊಂದಿರಬೇಕು.
- ಅರ್ಜಿ ಸಲ್ಲಿಸಬಯಸುವವರು ವಸತಿ ರಹಿತರಾಗಿರಬೇಕು ತನ್ನ ಹಾಗೂ ಕುಟುಂಬದ ಹೆಸರಿನಲ್ಲಿ ಯಾವುದೇ ನಿವೇಶನ/ಮನೆಗಳನ್ನು ಹೊಂದಿರಬಾರದು.
- ಬೆಂಗಳೂರು ನಗರ ಜಿಲ್ಲೆಯ ನಿವಾಸಿಗಳಿಗೆ ವಾರ್ಷಿಕ ಆದಾಯ ಮಿತಿ ರೂ.3.00 ಲಕ್ಷ ಹಾಗೂ ಇತರ ಜಿಲ್ಲೆಗಳ ವಾಸಿಗಳಿಗೆ ರೂ.2.00 ಲಕ್ಷ ಒಳಗಿರಬೇಕು.
- ಜಾತಿ/ಆದಾಯ ಪ್ರಮಾಣ ಪತ್ರ (ಪತ್ರಿಕೆಯಲ್ಲಿ ಈ ಪ್ರಕಟಣೆ ಪ್ರಕಟವಾದ ದಿನಾಂಕದ ನಂತರ ತಹಶೀಲ್ದಾರರಿಂದ ಪಡೆದಿರಬೇಕು)
- ಪ್ರತಿ ಕುಟುಂಬಕ್ಕೆ ಒಂದು ಅರ್ಜಿಯನ್ನು ಮಾತ್ರ ಸಲ್ಲಿಸಲು ಅವಕಾಶವಿದೆ.
- ವಿಕಲಚೇತನರಾಗಿದ್ದಲ್ಲಿ – ವಿಕಲಚೇತನ ಪ್ರಮಾಣ ಪತ್ರ ಸಲ್ಲಿಸಬೇಕು

ಅರ್ಜಿ ಸಲ್ಲಿಸುವ ವಿಧಾನ:

ಅರ್ಜಿ ಸಲ್ಲಿಕೆ : ಯಾವುದೇ ಬೌಸಿಂಗ್ ಸೆಂಟರ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಮನೆಗಳ ವಿಧಗಳು :	ಯಶಸ್ಸು 2 BHK - 265 ಮನೆಗಳು
ಪ್ರತಿ ಮನೆಯ ವಿಸ್ತೀರ್ಣ :	ಯಶಸ್ಸು ಮನೆಯ ಕಾರ್ಪೆಟ್ ಏರಿಯಾ : 40.62 ಚದರ ಮೀಟರ್

ಗ್ರಾಮೀಣ ಹಾಗೂ ನಗರದ ವಸತಿರಹಿತ ಹಾಗೂ ನಿವೇಶನರಹಿತ ಬಡಜನತೆಗೆ ಕೈಗೆಟುಕುವ ಬೆಲೆಯಲ್ಲಿ ಚೊಕ್ಕದಾದ, ಸುಂದರವಾದ, ಸುಭದ್ರ ಸೂರು ಒದಗಿಸುವುದು ಸರ್ಕಾರದ ಆಶಯ. ಈ ನಿಟ್ಟಿನಲ್ಲಿ ಪ್ರಸ್ತುತ ರಾಜ್ಯ ಸರ್ಕಾರವು ಅಸಂಘಟಿತ ಕಾರ್ಮಿಕ ವಲಯದಲ್ಲಿ ದುಡಿಯುತ್ತಿರುವ ಕಾರ್ಮಿಕರು, ಬೀಡಿ ಕಾರ್ಮಿಕರು, ಆಟೋ ಚಾಲಕರು, ಚಲನಚಿತ್ರರಂಗದ ಕಾರ್ಮಿಕರು, ಸಣ್ಣ ಗುತ್ತಿಗೆದಾರರು (Petty Contractors), ಐಟಿ/ಐಟಿಸಿ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದು, ಬೆಂಗಳೂರು ನಗರ ಜಿಲ್ಲೆಯ ನಿವಾಸಿಗಳಿಗೆ ವಾರ್ಷಿಕ ಆದಾಯ ಮಿತಿ ರೂ.3.00 ಲಕ್ಷ ಹಾಗೂ ಇತರ ಜಿಲ್ಲೆಗಳ ವಾಸಿಗಳಿಗೆ ರೂ.2.00 ಲಕ್ಷ ಒಳಗಿರಬೇಕು. ಶಾಶ್ವತ ನೆಲೆ ಒದಗಿಸಲು ಮೊಟ್ಟಮೊದಲ ಬಾರಿಗೆ ರಸ್ತೆ, ನೀರು, ಚರಂಡಿ, ವಿದ್ಯುತ್ ಮುಂತಾದ ಅಗತ್ಯ ಮೂಲಸೌಕರ್ಯಗಳೊಂದಿಗೆ ವಿನೂತನವಾದ "ನನ್ನ ಮನೆ"-ಭಾಗ್ಯ-ಸಂಪದ-ಯಶಸ್ಸು ವಸತಿ ಯೋಜನೆಯಡಿ ವಸತಿ ಸೌಕರ್ಯ ಕಲ್ಪಿಸಲಿದೆ.

ಈ ಯೋಜನೆಯು ನಿಗಮದ ಹಂಚಿಕೆ ನಿಯಮಾವಳಿಗೆ ಅನುಗುಣವಾಗಿ ಫ್ಲಾಟ್‌ಗಳನ್ನು ಹೊಂದಲು ಬಯಸುವ ಆಸಕ್ತ ಅರ್ಹ ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸುವ ಹಾಗೂ ಮುಂಗಡ ಹಣ ಪಾವತಿಸುವ ವಿಧಾನ

ನಿಗಮದ ವೆಬ್‌ಸೈಟ್: https://ashraya.karnataka.gov.in ಮೂಲಕ, ಉಚಿತವಾಗಿ ಅರ್ಜಿಯನ್ನು ಸಲ್ಲಿಸಿ, ಸ್ವೀಕೃತಿ ಪಡೆಯಬಹುದಾಗಿದೆ. ಅರ್ಹತೆ ಬಗ್ಗೆ SMS ನಲ್ಲಿ ಮಾಹಿತಿ ಪಡೆದ ನಂತರ ಮುಂಗಡ ಹಣ ರೂ.3.00 ಲಕ್ಷಗಳನ್ನು IDBI ಬ್ಯಾಂಕ್, ಗಾಂಧಿನಗರ ಇಲ್ಲಿ ಪಾವತಿಸಬಹುದಾಗಿದೆ.

ಪ್ರತಿ ಮನೆಯ ಘಟಕ ವೆಚ್ಚ:

ಯಶಸ್ಸು ಮನೆಯ ಘಟಕದ ವೆಚ್ಚ: ರೂ.13,25,000/–ಗಳಾಗಿದ್ದು ಸಂಪೂರ್ಣ ಮೊತ್ತವನ್ನು ಫಲಾನುಭವಿಯ ವಂತಿಕೆ ಮತ್ತು ಬ್ಯಾಂಕ್ ಸಾಲದ ಮೂಲಕ ಭರಿಸಲಾಗುವುದು.

ಮನೆಗಳ ಗುಣಮಟ್ಟ:

ರಾಜೀವ್ ಗಾಂಧಿ ವಸತಿ ನಿಗಮದ ನಿರ್ಮಾಣ ಸಂಸ್ಥೆಯಾದ ಕರ್ನಾಟಕ ರಾಜ್ಯ ಹ್ಯಾಬಿಟೇಟ್ ಕೇಂದ್ರದಿಂದ ಕಾಮಗಾರಿಯನ್ನು ನಿರ್ವಹಿಸಲಾಗುವುದು. ಗುಣಮಟ್ಟದ ಬಗ್ಗೆ ತೃತೀಯ ತಂತ್ರಜ್ಞರಿಂದ ವಿವಿಧ ಹಂತಗಳಲ್ಲಿ ತಪಾಸಣೆ ಮಾಡಿ ದೃಢೀಕರಿಸಲಾಗುವುದು.

ಯೋಜನೆಯ ಕಾಲಾವಧಿ : ಮುಂದಿನ 15 ತಿಂಗಳು / ಒಳಗಾಗಿ.

ನಿಗಮದ ವೆಬ್‌ಸೈಟ್‌ನಲ್ಲಿ ಮಾಹಿತಿ:

ಈ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಎಲ್ಲಾ ಮಾರ್ಗಸೂಚಿಗಳು, ಪ್ರಮುಖ ಪತ್ರಗಳು, ಸುತ್ತೋಲೆಗಳು ಮತ್ತು ನಮೂನೆಗಳು ಹಾಗೂ ಗ್ರಾಹಕರಿಗೆ ಬೇಕಾದ ಅಗತ್ಯ ಮಾಹಿತಿಗಳು ನಿಗಮದ ವೆಬ್‌ಸೈಟ್ https://ashraya.karnataka.gov.in ನಲ್ಲಿ ನೀಡಲಾಗುವುದು.

ಸಹಾಯವಾಣಿ ಸಂಖ್ಯೆ: 080 - 2311 8888 / 2210 6888

ದಿನಾಂಕ: 25-03-2023 ರಿಂದ ಅರ್ಜಿಗಳು ಆನ್‌ಲೈನ್‌ನಲ್ಲಿ ಲಭ್ಯ

ಡಾ. ಶಿವಶಂಕರ ಎನ್., ಭಾ.ಆ.ಸೇ.
ವ್ಯವಸ್ಥಾಪಕ ನಿರ್ದೇಶಕರು,
ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ

ಡಾ. ಜೆ. ರವಿಶಂಕರ್, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ವಸತಿ ಇಲಾಖೆ

ಸಾರ್ವಜನಿಕ ಆಸ್ತಿ-ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನುತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ

8 ಮತ್ತು 9ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು - 560 009. Website: https://ashraya.karnataka.gov.in

ಷೇರುಪೇಟೆ ವಹಿವಾಟು 398



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,076
ಇಂದಿನ ಅಂತ್ಯ	16,945
▼	131
ದಿನದ ಕನಿಷ್ಠ	16,917

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹475
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹480

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1690 (1690)
ಸೋಯಾ (ರಿಫೈನ್ಡ್)	₹1030(1040)
ಸೂರ್ಯಕಾಂತಿ (ರಿಫೈನ್ಡ್)	₹1080 (1080)
ಪಾಮೋಲಿನ್	₹925 (930)

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹143
ಆರ್‌ಎಸ್‌ಎಸ್-5	₹137
ಗುಡ್ ಲಾಟ್	₹130

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹307-540
ದ್ವಿತಳಿ (ಬಿ.ವಿ)	₹233-678

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1400-1800
ಮಧ್ಯಮ	₹1000-1500
ಸಣ್ಣ	₹500-1000

ಆದಾಯ ₹ 7 ಲಕ್ಷ ಮೀರಿದರೆ ವ್ಯತ್ಯಾಸದ ಮೊತ್ತಕ್ಕಷ್ಟೇ ತೆರಿಗೆ

ನವದೆಹಲಿ (ಪಿಟಿಐ): ಹೊಸ ತೆರಿಗೆ ವ್ಯವಸ್ಥೆಯಲ್ಲಿ ₹ 7 ಲಕ್ಷಕ್ಕಿಂತ ತುಸು ಹೆಚ್ಚಿನ ಆದಾಯ ಪಡೆಯುವವರಿಗೆ ವ್ಯತ್ಯಾಸದ ಮೊತ್ತಕ್ಕಷ್ಟೇ ತೆರಿಗೆ ವಿಧಿಸಲು ಸರ್ಕಾರ ಮುಂದಾಗಿದೆ.

ಕೇಂದ್ರ ಸರ್ಕಾರವು ಹಣಕಾಸು ಮಸೂದೆ 2023ಅನ್ನು ಲೋಕಸಭೆಯಲ್ಲಿ ಶುಕ್ರವಾರ ಮಂಡಿಸಿದ್ದು, ಅದಕ್ಕೆ ಅನುಮೋದನೆ ಸಿಕ್ಕಿದೆ. ಅದರಲ್ಲಿ ಹೊಸ ತೆರಿಗೆ ವ್ಯವಸ್ಥೆ ಆಯ್ಕೆ ಮಾಡಿಕೊಂಡವರಿಗೆ ತುಸು ಸಮಾಧಾನ ನೀಡುವ ಪ್ರಸ್ತಾವ ಇದೆ.

ಹೊಸ ತೆರಿಗೆ ವ್ಯವಸ್ಥೆಯ ಅಡಿ, ವಾರ್ಷಿಕ ಆದಾಯ ₹ 7 ಲಕ್ಷ ಇದ್ದರೆ ಯಾವುದೇ ತೆರಿಗೆ ಇರುವುದಿಲ್ಲ. ಆದರೆ, ವಾರ್ಷಿಕ ಆದಾಯ ₹ 7,00,100 ಆದಲ್ಲಿ ಆಗ ₹ 25,010 ತೆರಿಗೆ ಪಾವತಿಸಬೇಕಾಗುತ್ತಿತ್ತು. ಅಂದರೆ, ಆದಾಯವು ₹ 100ರಷ್ಟು ಹೆಚ್ಚಾದರೆ ಅದಕ್ಕೆ ₹ 25,010ರಷ್ಟು ತೆರಿಗೆ ಕಟ್ಟಬೇಕಾಗುತ್ತಿತ್ತು!

ಹೀಗಾಗಿ, ವಾರ್ಷಿಕ ಆದಾಯವು ₹ 7ಲಕ್ಷವನ್ನು ಮೀರಿದರೆ ಅದಕ್ಕೆ ವಿಧಿಸುವ ತೆರಿಗೆಯು ವ್ಯತ್ಯಾಸದ ಮೊತ್ತವನ್ನು (ಈ ಉದಾಹರಣೆಯನ್ನು ₹ 100) ಮೀರಬಾರದು ಎನ್ನುವ ಅಂಶವನ್ನು ಹಣಕಾಸು ಮಸೂದೆಯಲ್ಲಿ ಸೇರಿಸಲಾಗಿದೆ ಎಂದು ಹಣಕಾಸು ಸಚಿವಾಲಯವು ತಿಳಿಸಿದೆ.

ವಾರ್ಷಿಕ ಆದಾಯವು ₹ 7 ಲಕ್ಷಕ್ಕಿಂತ ಎಷ್ಟರವರೆಗೆ ಹೆಚ್ಚಿದ್ದರೆ ಪ್ರಯೋಜನ ಸಿಗಲಿದೆ ಎನ್ನುವ ಬಗ್ಗೆ ಸರ್ಕಾರವು ನಿರ್ದಿಷ್ಟವಾಗಿ ತಿಳಿಸಿಲ್ಲ.

'₹ 7 ಲಕ್ಷವನ್ನು ಮೀರಿದ ಆದಾಯಕ್ಕೆ ವ್ಯತ್ಯಾಸದ ಮೊತ್ತಕ್ಕಷ್ಟೇ ತೆರಿಗೆ ಕಡಿತ ಮಾಡಲು ಹಣಕಾಸು ಮಸೂದೆಯಲ್ಲಿ ತಿದ್ದುಪಡಿ ತರಲಾಗಿದೆ. ಇದು ವೈಯಕ್ತಿಕ ತೆರಿಗೆದಾರರಿಗೆ ತುಸು ನೆಮ್ಮದಿ ನೀಡಲಿದೆ' ಎಂದು ನಂಗಿಯಾ ಆ್ಯಂಡರ್ಸನ್ ಎಲ್‌ಎಲ್‌ಪಿನ ಪಾಲುದಾರ ಸಂದೀಪ್ ಜುಂಜುನ್‌ವಾಲಾ ಹೇಳಿದ್ದಾರೆ.

'ತೆರಿಗೆದಾರರು ವಾರ್ಷಿಕ ಅಂದಾಜು ₹ 7,27,700 ಆದಾಯ ಹೊಂದಿದ್ದರೆ, ಕೇಂದ್ರ ಸರ್ಕಾರದ ಈ ನಿರ್ಧಾರದಿಂದ ಪ್ರಯೋಜನ ಪಡೆಯಬಹುದು' ಎಂದು ಅವರು ತಿಳಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ

24-3-2023

ಜಾವಾ 70/80(ಹೊಸ)	11650-11700
ಜಾವಾ 80/90(ಹೊಸ)	11050-11100
ದಪ್ಪ ಮಧ್ಯಪ್ರದೇಶ(ಹೊಸ)	11000-11100
ದಪ್ಪ ಗುಜರಾತ್(ಹೊಸ)	11900-12000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1700 (1700)
ಒಂದು ವಾರದ ಡೆಲಿವರಿ	1695 (1695)
ಸೋಯಾ ಕಚ್ಚಾ	945 (942)
ಪಾಮ್ ವಾರದ ಡೆಲಿವರಿ	923 (928)
ಸೂರ್ಯಕಾಂತಿ ಎಣ್ಣೆ ಕಚ್ಚಾ	935 (935)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 59,500 (58,950)
ಬೆಳ್ಳಿ ಕೆ.ಜಿ 69,800 (69,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮಾರಾಟದ ಒತ್ತಡ: ಸೆನ್ಸೆಕ್ಸ್ ಇಳಿಕೆ

ಮುಂಬೈ (ಪಿಟಿಐ): ಮಾರಾಟದ ಒತ್ತಡಕ್ಕೆ ಒಳಗಾಗಿ ದೇಶದ ಷೇರುಪೇಟೆಗಳು ಶುಕ್ರವಾರ ಶೇಕಡ 1ರವರೆಗೂ ಇಳಿಕೆ ಕಂಡವು.

ಏಷ್ಯಾ ಮತ್ತು ಯುರೋಪ್ ಮಾರುಕಟ್ಟೆಗಳಲ್ಲಿ ವಹಿವಾಟು ಇಳಿಕೆ ಕಂಡಿದ್ದರಿಂದ ಭಾರತದಲ್ಲಿ ಹೂಡಿಕೆದಾರರು ಲೋಹ, ಇಂಧನ ಮತ್ತು ರಿಯಲ್ ಎಸ್ಟೇಟ್ ವಲಯದ ಷೇರುಗಳನ್ನು ಹೆಚ್ಚಾಗಿ ಮಾರಾಟ ಮಾಡಿದರು.

ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಇಳಿಕೆ ಮತ್ತು ವಿದೇಶಿ ಬಂಡವಾಳ ಹೊರಹರಿವು ಸಹ ವಹಿವಾಟಿನ ಮೇಲೆ ಪರಿಣಾಮ ಬೀರಿದವು ಎಂದು ವರ್ತಕರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 398 ಅಂಶ ಇಳಿಕೆ ಕಂಡರೆ ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 131 ಅಂಶ ಇಳಿಕೆ ಕಂಡಿತು. ವಾರದ ವಹಿವಾಟಿನಲ್ಲಿ ಸೆನ್ಸೆಕ್ಸ್ 462 ಅಂಶ ಮತ್ತು ನಿಫ್ಟಿ 131 ಅಂಶ ಇಳಿಕೆ ಆಗಿದೆ.

ಬಿಎಸ್‌ಇನಲ್ಲಿ ಬಜಾಜ್ ಫಿನ್‌ಸರ್ವ್ ಕಂಪನಿ ಶೇ 3.81ರಷ್ಟು ಹೆಚ್ಚು ಇಳಿಕೆ ಕಂಡಿತು. ಬಿಎಸ್‌ಇ ಸ್ಮಾಲ್‌ಕ್ಯಾಪ್ ಶೇ 1.37 ಮತ್ತು ಮಿಡ್‌ಕ್ಯಾಪ್ ಶೇ 1.25ರಷ್ಟು ಇಳಿಕೆ ಕಂಡಿದೆ.

ಕೇಂದ್ರ ಸರ್ಕಾರವು 2023ರ ಹಣಕಾಸು ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಿದ ಬಳಿಕ ದೇಶಿ ಷೇರುಪೇಟೆಗಳಲ್ಲಿ ಮಾರಾಟದ ಒತ್ತಡ ಕಂಡುಬಂತು. ವಾಯಿದಾ ವಹಿವಾಟಿಗೆ 'ಷೇರು ವಹಿವಾಟು ತೆರಿಗೆ' (ಎಸ್‌ಟಿಟಿ) ಹೆಚ್ಚಿಸಲಾಗಿದೆ. ಆದರೆ, ತೆರಿಗೆ ಹೆಚ್ಚಳದ ಬಗ್ಗೆ ಇನ್ನಷ್ಟೇ ಸ್ಪಷ್ಟನೆ ಸಿಗಬೇಕಿದೆ. ಡೆಟ್ ಮ್ಯೂಚುವಲ್ ಫಂಡ್‌ಗಳಿಗೆ ಇಂಡೆಕ್ಸೇಷನ್ ಪ್ರಯೋಜನವನ್ನು ತೆಗೆಯುವ ಬಗ್ಗೆಯೂ ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್‌ನ ರಿಟೇಲ್ ರಿಸರ್ಚ್‌ನ ಮುಖ್ಯಸ್ಥ ಸಿದ್ಧಾರ್ಥ ಖೇಮ್ಕಾ ಹೇಳಿದ್ದಾರೆ. ಬ್ರೆಂಟ್ ಕಚ್ಚಾ ತೈಲ ದರ ಶೇ 1.73ರಷ್ಟು ಇಳಿಕೆ ಕಂಡು ಒಂದು ಬ್ಯಾರಲ್‌ಗೆ 74.60 ಡಾಲರ್‌ಗೆ ತಲುಪಿತು.

ಪ್್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

Vaikunta Samaradhane



It is with great sadness that we inform you of the demise of
Dr. Kandavara Ratnakar Shetty
on 16th March 2023. Prayers for the departed soul will be held at
Anantya Hall Gate no.9, Princess Academy, Palace Grounds, Bengaluru.
On Thursday 30th March 2023 At 12:00 Noon
Wife: Geetha Sons: Vipin, Nithin & Chinthan
M: 9448367102 / 9448133742

ಧಾರವಾಡದಲ್ಲಿ ಎಲೆಕ್ಟ್ರಾನಿಕ್ಸ್ ಕ್ಲಸ್ಟರ್‌ಗೆ ಒಪ್ಪಿಗೆ

ನವದೆಹಲಿ (ಪಿಟಿಐ): ಕರ್ನಾಟಕದಲ್ಲಿ ಮೂರನೇ ಎಲೆಕ್ಟ್ರಾನಿಕ್ಸ್ ತಯಾರಿಕಾ ಕ್ಲಸ್ಟರ್ ಸ್ಥಾಪಿಸಲು ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಐ.ಟಿ. ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಶುಕ್ರವಾರ ಟ್ವೀಟ್ ಮಾಡಿದ್ದಾರೆ.

ಧಾರವಾಡದ ಕೋಟೂರ ಗ್ರಾಮದಲ್ಲಿ 88.48 ಎಕರೆ ಮತ್ತು ಬೇಲೂರು ಗ್ರಾಮದಲ್ಲಿ 136.02 ಎಕರೆ ಪ್ರದೇಶದಲ್ಲಿ ಈ ಕ್ಲಸ್ಟರ್ ಇರಲಿದೆ. ಒಟ್ಟು 224.5 ಎಕರೆ ಪ್ರದೇಶದಲ್ಲಿ ನಿರ್ಮಾಣ ಆಗಲಿದ್ದು, ಒಟ್ಟು ₹179 ಕೋಟಿ ವೆಚ್ಚವಾಗಲಿದೆ ಎಂದು ಅವರು ತಿಳಿಸಿದ್ದಾರೆ.

ರಾಜ್ಯದಲ್ಲಿ ಮೂರು ಕ್ಲಸ್ಟರ್‌ಗಳು ಒಟ್ಟು 1,337 ಎಕರೆ ಪ್ರದೇಶದಲ್ಲಿ ಇರಲಿದ್ದು, ಇದಕ್ಕಾಗಿ ₹1,903 ಕೋಟಿ ವೆಚ್ಚವಾಗುವ ಅಂದಾಜು ಮಾಡಲಾಗಿದೆ. ಇದರಲ್ಲಿ ಕೇಂದ್ರದ ನೆರವಿನ ಮೊತ್ತವು ₹889 ಕೋಟಿ ಸೇರಿದೆ. ₹20,910 ಕೋಟಿ ಹೂಡಿಕೆ ಆಗುವ ಗುರಿ ಇದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಹಣಕಾಸು ಮಸೂದೆ–2023ಕ್ಕೆ ಲೋಕಸಭೆ ಅನುಮೋದನೆ • ಏಪ್ರಿಲ್ 1ರಿಂದ ಅನ್ವಯ

ಮ್ಯೂಚುವಲ್ ಫಂಡ್: ತೆರಿಗೆ ಲೆಕ್ಕ ಬದಲು

ನವದೆಹಲಿ (ಪಿಟಿಐ): ಸಾಲಪತ್ರ ಆಧಾರಿತ (ಡೆಟ್) ಮ್ಯೂಚುವಲ್ ಫಂಡ್‌ಗಳಲ್ಲಿ ಮಾಡುವ ಹೂಡಿಕೆಗಳಿಗೆ ಏಪ್ರಿಲ್ 1ರಿಂದ, ದೀರ್ಘಾವಧಿ ಬಂಡವಾಳ ವೃದ್ಧಿ ತೆರಿಗೆ ಪ್ರಯೋಜನಗಳು ಸಿಗುವುದಿಲ್ಲ. ಆದಾಯ ತೆರಿಗೆ ಲೆಕ್ಕಹಾಕುವ ಸಂದರ್ಭದಲ್ಲಿ ಡೆಟ್ ಮ್ಯೂಚುವಲ್ ಫಂಡ್‌ಗಳನ್ನು, ಹೂಡಿಕೆಗಳಿಗೆ ಬಡ್ಡಿ ನೀಡುವ ಇತರ ಉತ್ಪನ್ನಗಳ ರೀತಿಯಲ್ಲಿಯೇ ಪರಿಗಣಿಸಲಾಗುತ್ತದೆ.

ಈ ಬದಲಾವಣೆಗಳಿಗೆ ಅಗತ್ಯವಿರುವ ತಿದ್ದುಪಡಿಗಳನ್ನು ಹಣಕಾಸು ಮಸೂದೆ 2023 ಒಳಗೊಂಡಿದೆ. ಇದಕ್ಕೆ ಲೋಕಸಭೆಯು ಶುಕ್ರವಾರ ಅನುಮೋದನೆ ನೀಡಿದೆ.

ಏನು ಪರಿಣಾಮ?: ಏಪ್ರಿಲ್ 1ರಿಂದ ಅನ್ವಯ ಆಗುವಂತೆ, ಡೆಟ್ ಮ್ಯೂಚುವಲ್ ಫಂಡ್ ಹೂಡಿಕೆಗಳಿಂದ ಸಿಗುವ ಲಾಭಕ್ಕೆ ಅಲ್ಪಾವಧಿ ಬಂಡವಾಳ ವೃದ್ಧಿ ತೆರಿಗೆಯನ್ನು ವಿಧಿಸಲಾಗುತ್ತದೆ. ಡೆಟ್ ಮ್ಯೂಚುವಲ್ ಫಂಡ್‌ಗಳಲ್ಲಿನ ಹೂಡಿಕೆಯು ಮೂರು ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ಆಗಿದ್ದಿದ್ದರೆ, ಅದರಿಂದ ಸಿಗುವ ಲಾಭಕ್ಕೆ ಇದುವರೆಗೆ ದೀರ್ಘಾವಧಿ ಬಂಡವಾಳ ವೃದ್ಧಿ ತೆರಿಗೆ ವಿಧಿಸಲಾಗುತ್ತಿತ್ತು. ಅಲ್ಲದೆ, ಇಂಡೆಕ್ಸೇಷನ್ (ತೆರಿಗೆ ಲೆಕ್ಕಹಾಕುವಾಗ ಹಣದುಬ್ಬರದ ಪ್ರಮಾಣವನ್ನು ಪರಿಗಣಿಸುವುದು) ಪ್ರಯೋಜನ ಕೂಡ ಹೂಡಿಕೆದಾರರಿಗೆ ಸಿಗುತ್ತಿತ್ತು. ಈ ಕಾರಣದಿಂದಾಗಿಯೂ ಡೆಟ್ ಮ್ಯೂಚುವಲ್ ಫಂಡ್‌ಗಳು ಜನಪ್ರಿಯವಾಗಿದ್ದವು.

ಈಗಿರುವ ನಿಯಮಗಳ ಅನ್ವಯ, ಮೂರು ವರ್ಷಗಳಿಗಿಂತ ಕಡಿಮೆ ಅವಧಿಯ ಹೂಡಿಕೆಯಲ್ಲಿ ಡೆಟ್ ಮ್ಯೂಚುವಲ್ ಫಂಡ್‌ಗಳಿಂದ ಸಿಗುವ ಲಾಭಕ್ಕೆ ಹೂಡಿಕೆದಾರರು ತಮ್ಮ ವೈಯಕ್ತಿಕ ತೆರಿಗೆ ದರಕ್ಕೆ ಅನುಗುಣವಾಗಿ ತೆರಿಗೆ ಪಾವತಿಸಬೇಕು. ಹೂಡಿಕೆಯ ಅವಧಿಯು ಮೂರು ವರ್ಷಗಳಿಗಿಂತ ಹೆಚ್ಚಿದ್ದರೆ, ಇಂಡೆಕ್ಸೇಷನ್ ಪ್ರಯೋಜನ ಪಡೆದು ಶೇ 20ರಷ್ಟು ತೆರಿಗೆ ಪಾವತಿಸಬೇಕು. ಅಥವಾ, ಇಂಡೆಕ್ಸೇಷನ್ ಪ್ರಯೋಜನವನ್ನು ಬಿಟ್ಟುಕೊಟ್ಟು ಶೇ 10ರಷ್ಟು ತೆರಿಗೆ ಪಾವತಿಸಿದರೆ ಸಾಕು.

ಲೋಕಸಭೆಯು ಶುಕ್ರವಾರ ಅನುಮೋದನೆ ನೀಡಿರುವ ತಿದ್ದುಪಡಿಯು ಜಾರಿಗೆ ಬಂದ ನಂತರದಲ್ಲಿ (ಏಪ್ರಿಲ್ 1ರಿಂದ), ಇಂತಹ ಮ್ಯೂಚುವಲ್ ಫಂಡ್‌ಗಳಿಂದ ಸಿಗುವ ಲಾಭವನ್ನು ಅಲ್ಪಾವಧಿ ಬಂಡವಾಳ ವೃದ್ಧಿ ಎಂದು ಪರಿಗಣಿಸಲಾಗುತ್ತದೆ. ಆ ಲಾಭಕ್ಕೆ ಹೂಡಿಕೆದಾರನ ವೈಯಕ್ತಿಕ ತೆರಿಗೆ ಹಂತಕ್ಕೆ ಅನುಗುಣವಾಗಿ ತೆರಿಗೆ ಪಾವತಿಸಬೇಕಾಗುತ್ತದೆ.

ಪುನರ್ ಪರಿಶೀಲನೆಗೆ ಉದ್ಯಮದ ಒತ್ತಾಯ

ಮುಂಬೈ (ಪಿಟಿಐ): ಸಾಲಪತ್ರ ಆಧಾರಿತ ಮ್ಯೂಚುವಲ್ ಫಂಡ್‌ಗಳಿಂದ ಸಿಗುವ ಗಳಿಕೆಯ ತೆರಿಗೆ ನಿರ್ಣಯದ ವಿಚಾರದಲ್ಲಿ ಕೇಂದ್ರ ಸರ್ಕಾರ ತಂದಿರುವ ಬದಲಾವಣೆಗಳು ಕಾರ್ಪೊರೇಟ್ ಬಾಂಡ್ ಮಾರುಕಟ್ಟೆಯನ್ನು ಬೆಳೆಸುವ ಉದ್ದೇಶಕ್ಕೆ ಪೂರಕವಾಗಿಲ್ಲ ಎಂದು ನಿಧಿ ನಿರ್ವಾಹಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟದ (ಎಎಂಎಫ್‌ಐ) ಅಧ್ಯಕ್ಷ ಎ. ಬಾಲಸುಬ್ರಮಣಿಯನ್ ಅವರು, ಈ ಬದಲಾವಣೆಗಳು ಆಶ್ಚರ್ಯ ತರಿಸಿವೆ ಎಂದು ಹೇಳಿದ್ದಾರೆ.

ಎಎಂಎಫ್‌ಐ ಉಪಾಧ್ಯಕ್ಷೆ ರಾಧಿಕಾ ಗುಪ್ತ ಅವರು ಈ ತೀರ್ಮಾನವನ್ನು ಕೇಂದ್ರವು ಪುನರ್ ಪರಿಶೀಲಿಸಬೇಕು ಎಂದು ಒತ್ತಾಯಿಸಿದ್ದಾರೆ.

'ಭಾರತದಲ್ಲಿ ಜನ ಹಣಕಾಸಿನ ಉತ್ಪನ್ನಗಳಲ್ಲಿ ಹೆಚ್ಚು ಹಣ ತೊಡಗಿಸುವುದು ಈಗಷ್ಟೇ ಶುರುವಾಗಿದೆ. ದೇಶದ ಸಾಲಪತ್ರ ಮಾರುಕಟ್ಟೆಯು ಹೆಚ್ಚು ಶಕ್ತಿಯುತವಾಗಿ ಇರಬೇಕು ಎಂದಾದರೆ, ಡೆಟ್ ಮ್ಯೂಚುವಲ್ ಫಂಡ್ ವ್ಯವಸ್ಥೆಯು ಚೆನ್ನಾಗಿರಬೇಕು' ಎಂದು ರಾಧಿಕಾ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಈಗ ಜಾರಿಗೆ ತಂದಿರುವ ಬದಲಾವಣೆಗಳ ಕಾರಣದಿಂದಾಗಿ ಸಣ್ಣ ಹೂಡಿಕೆದಾರರ ಪಾಲಿಗೆ ಬ್ಯಾಂಕ್ ನಿಶ್ಚಿತ ಠೇವಣಿಗಳು ಹೆಚ್ಚು ಆಕರ್ಷಕವಾಗಲಿವೆ ಎಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ.

'ಈ ತೀರ್ಮಾನದ ಕಾರಣದಿಂದಾಗಿ ಅತಿ ಶ್ರೀಮಂತರು ಹಾಗೂ ಶ್ರೀಮಂತರು ತಮ್ಮ ಹಣವನ್ನು ಬ್ಯಾಂಕ್ ನಿಶ್ಚಿತ ಠೇವಣಿಗಳಲ್ಲಿ ಇರಿಸಲು ಮುಂದಾಗಬಹುದು. ದೀರ್ಘಾವಧಿ ಡೆಟ್ ಮ್ಯೂಚುವಲ್ ಫಂಡ್‌ಗಳಿಂದ ಒಂದಿಷ್ಟು ಹಣವು ಈಕ್ವಿಟಿ ಆಧಾರಿತ ಫಂಡ್‌ಗಳ ಕಡೆ ಹರಿಯಬಹುದು' ಎಂದು ಫಿಂಟೂ ಸಂಸ್ಥೆಯ ಸಂಸ್ಥಾಪಕ ಮನೀಶ್ ಪಿ.ಎಚ್. ಹೇಳಿದ್ದಾರೆ.

ದೇಶಿ ಕಂಪನಿಗಳ ಷೇರುಗಳಲ್ಲಿ ಶೇಕಡ 35ಕ್ಕಿಂತ ಕಡಿಮೆ ಮೊತ್ತವನ್ನು ತೊಡಗಿಸಿರುವ ಮ್ಯೂಚುವಲ್ ಫಂಡ್‌ಗಳಿಗೆ ಈ ರೀತಿಯಲ್ಲಿ ತೆರಿಗೆ ಲೆಕ್ಕಹಾಕಲಾಗುತ್ತದೆ. ಚಿನ್ನದ ವಿನಿಮಯ ವಹಿವಾಟು ನಿಧಿಗಳು (ಇಟಿಎಫ್) ಕೂಡ ಇದರ ವ್ಯಾಪ್ತಿಗೆ ಬರಲಿವೆ.

ಇದರಿಂದಾಗಿ ತೆರಿಗೆ ಲೆಕ್ಕಹಾಕುವಾಗ, ಈ ಬಗೆಯ ಮ್ಯೂಚುವಲ್ ಫಂಡ್‌ಗಳು ಹಾಗೂ ಬ್ಯಾಂಕ್ ಠೇವಣಿಗಳು ಒಂದೇ ಬಗೆಯದ್ದಾಗಲಿವೆ. 'ಒಂದೇ ಸ್ವರೂಪದ ಹೂಡಿಕೆ ಉತ್ಪನ್ನಗಳ ನಡುವೆ ಸಮಾನತೆ ತರುವ ಉದ್ದೇಶದಿಂದ ಹೀಗೆ ಮಾಡಲಾಗಿದೆ' ಎಂದು ಕೇಂದ್ರ ಹಣಕಾಸು ಕಾರ್ಯದರ್ಶಿ ಟಿ.ವಿ. ಸೋಮನಾಥನ್ ಹೇಳಿದ್ದಾರೆ.

ವಿದೇಶ ಪ್ರಯಾಣಗಳಿಗೆ ಕ್ರೆಡಿಟ್ ಕಾರ್ಡ್ ಮೂಲಕ ಮಾಡುವ ಪಾವತಿಗಳನ್ನು ಉದಾರೀಕೃತ ಪಾವತಿ ವ್ಯವಸ್ಥೆ (ಎಲ್‌ಆರ್‌ಎಸ್) ಅಡಿಯಲ್ಲಿ ತರಲಾಗುತ್ತದೆ. ಈ ಮೂಲಕ ಇಂತಹ ಪಾವತಿಗಳು ಮೂಲದಲ್ಲಿಯೇ ತೆರಿಗೆ ಕಡಿತದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗದಂತೆ ಮಾಡಲಾಗುತ್ತದೆ.

ಎನ್‌ಪಿಎಸ್ ಸುಧಾರಣೆಗೆ ಸಮಿತಿ

ನವದೆಹಲಿ (ಪಿಟಿಐ): ಹೊಸ ಪಿಂಚಣಿ ವ್ಯವಸ್ಥೆಯನ್ನು (ಎನ್‌ಪಿಎಸ್) ಸುಧಾರಿಸಲು ಕೇಂದ್ರ ಹಣಕಾಸು ಕಾರ್ಯದರ್ಶಿ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಲಾಗುವುದು ಎಂದು ಕೇಂದ್ರ ಸರ್ಕಾರವು ಶುಕ್ರವಾರ ಹೇಳಿದೆ.

ಜನಸಾಮಾನ್ಯರ ಹಿತ ಕಾಪಾಡಾಲು ಹಣಕಾಸಿನ ವಿಚಾರದಲ್ಲಿ ವಿವೇಕವನ್ನು ಕಾಯ್ದುಕೊಂಡು, ನೌಕರರ ಕಳವಳಗಳ ಕಡೆಗೂ ಗಮನ ನೀಡುವ ಕೆಲಸವನ್ನು ಸಮಿತಿಯು ಮಾಡಲಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

'ಹಣಕಾಸು ಮಸೂದೆ 2023'ಅನ್ನು ಅನುಮೋದನೆಗೆ ಲೋಕಸಭೆಯಲ್ಲಿ ಮಂಡಿಸುವ ಸಂದರ್ಭದಲ್ಲಿ ನಿರ್ಮಲಾ ಅವರು ಈ ವಿಷಯ ತಿಳಿಸಿದ್ದಾರೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅಳವಡಿಸಿಕೊಳ್ಳಲು ಅನುವಾಗುವ ರೀತಿಯಲ್ಲಿ ಸಮಿತಿಯ ಎನ್‌ಪಿಎಸ್ ಬಗ್ಗೆ ಪರಿಶೀಲನೆ ನಡೆಸಲಿದೆ ಎಂದು ಅವರು ಹೇಳಿದ್ದಾರೆ.

ಬಿಜೆಪಿ ಆಡಳಿತ ಇಲ್ಲದ ಹಲವು ರಾಜ್ಯಗಳು ಹಳೆಯ ಪಿಂಚಣಿ ವ್ಯವಸ್ಥೆಗೆ (ಒಪಿಎಸ್) ಮರಳಲು ತೀರ್ಮಾನಿಸಿರುವ ಸಂದರ್ಭದಲ್ಲಿ ಕೇಂದ್ರವು ಈ ತೀರ್ಮಾನ ಕೈಗೊಂಡಿದೆ. ಹಲವು ರಾಜ್ಯಗಳಲ್ಲಿ ನೌಕರರ ಸಂಘಟನೆಗಳು ಒಪಿಎಸ್ ಜಾರಿಗೆ ಆಗ್ರಹಿಸಿವೆ. 2004ರ ಜನವರಿ 1ರ ನಂತರ ನೇಮಕ ಆದವರಿಗೆ ಒಪಿಎಸ್ ಜಾರಿಗೆ ತರುವ ಪ್ರಸ್ತಾವ ತನ್ನ ಪರಿಶೀಲನೆಯಲ್ಲಿ ಇಲ್ಲ ಎಂದು ಕೇಂದ್ರವು ಸಂಸತ್ತಿಗೆ ಈಚೆಗೆ ತಿಳಿಸಿತ್ತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ		**ಸಿದ್ದಾಪುರ**		ಕೆಂಪುಗೋಟು	
ಕೋಕ	12500-25000	ಬಿಳಿಗೋಟು	27399-29909		24520-33899
ಹೊಸತು	22500-40000	ಚಾಲಿ	34899-35599	ರಾಶಿ	32599-43899
ಹಳತು	48000-54500	ಕೋಕ	24899-29899	**ಯಲ್ಲಾಪುರ**	
ಪುತ್ತೂರು		ಹೊಸಚಾಲಿ	32299-35229	ಬಿಳಿಗೋಟು	26099-34131
ಕೋಕ	11000-26000	ಕೆಂಪುಗೋಟು	29699-32699	ಚಾಲಿ	33399-37699
ಹೊಸತು	32000-38300	ರಾಶಿ	41049-44099	ಕೋಕ	14611-30499
ಶಿವಮೊಗ್ಗ		ತಟ್ಟಿಬೆಟ್ಟೆ	36149-43699	ಕೆಂಪುಗೋಟು	26899-34801
ಬೆಟ್ಟೆ	44000-50909	**ಶಿರಸಿ**		ರಾಶಿ	40399-48899
ಗೊರಬಲು	16006-31516	ಬೆಟ್ಟೆ	30099-42999	ತಟ್ಟಿಬೆಟ್ಟೆ	37510-43919
ರಾಶಿ	30166-45099	ಬಿಳಿಗೋಟು	24309-32818	ಆಪಿ	50399-58195
ಸರಕು	50000-79009	ಚಾಲಿ	32191-37562		

19 ಸಾವಿರ ಸಿಬ್ಬಂದಿ ಕಡಿತ ಮಾಡಲಿರುವ ಆ್ಯಕ್ಸೆಂಚರ್

ನ್ಯೂಯಾರ್ಕ್ (ಎಎಫ್‌ಪಿ): ಆ್ಯಕ್ಸೆಂಚರ್ ಕಂಪನಿಯು 18 ತಿಂಗಳಿನಲ್ಲಿ 19 ಸಾವಿರ ಸಿಬ್ಬಂದಿಯನ್ನು ಕೆಲಸದಿಂದ ತೆಗೆಯುವುದಾಗಿ ಹೇಳಿದೆ. ಇದು ಕಂಪನಿ ಹೊಂದಿರುವ ಒಟ್ಟು ಸಿಬ್ಬಂದಿಯಲ್ಲಿ ಶೇಕಡ 2.5ರಷ್ಟು.

ವೆಚ್ಚ ಕಡಿಮೆ ಮಾಡುವ ಭಾಗವಾಗಿ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ಕಂಪನಿ ತಿಳಿಸಿದೆ.

ಸಿಬ್ಬಂದಿ ಸಂಖ್ಯೆ ಕಡಿಮೆ ಮಾಡುವುದಕ್ಕೆ ಒಟ್ಟಾರೆ ₹ 12,300 ಕೋಟಿ ವೆಚ್ಚವಾಗಲಿದೆ ಎಂದು ಕಂಪನಿಯು ಅಮೆರಿಕದ ಸೆಕ್ಯುರಿಟಿ ಆ್ಯಂಡ್ ಎಕ್ಸ್‌ಚೇಂಜ್ ಕಮಿಷನ್‌ಗೆ ಮಾಹಿತಿ ನೀಡಿದೆ.

19 ಸಾವಿರದಲ್ಲಿ ಅರ್ಧದಷ್ಟು ಉದ್ಯೋಗ ಕಡಿತವು ಆಡಳಿತಾತ್ಮಕ ವಿಭಾಗದಲ್ಲಿ ಆಗಲಿದೆ ಎಂದು ಕಂಪನಿ ತಿಳಿಸಿದೆ. ಕಂಪನಿಯ ವಾರ್ಷಿಕ ವರದಿಯ ಪ್ರಕಾರ, 2022ರಲ್ಲಿ ಒಟ್ಟು 7.21 ಲಕ್ಷ ಸಿಬ್ಬಂದಿ ಇದ್ದಾರೆ.

ಎಲ್‌ಐಸಿ ಹೂಡಿಕೆಗೆ ಮಿತಿ?

ನವದೆಹಲಿ (ರಾಯಿಟರ್ಸ್): ದೇಶದ ಅತಿದೊಡ್ಡ ವಿಮಾ ಕಂಪನಿಯಾಗಿರುವ ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ತಾನು ಯಾವುದೇ ಕಂಪನಿಗಳಲ್ಲಿ ಮಾಡಬಹುದಾದ ಹೂಡಿಕೆ ಹಾಗೂ ನೀಡಬಹುದಾದ ಸಾಲಕ್ಕೆ ಮಿತಿ ಹೇರಲು ಚಿಂತನೆ ನಡೆಸಿದೆ.

ಅದಾನಿ ಸಮೂಹದ ಕಂಪನಿಗಳಲ್ಲಿ ಎಲ್‌ಐಸಿ ಮಾಡಿರುವ ಕೆಲವು ಹೂಡಿಕೆಗಳು ಟೀಕೆಗೆ ಗುರಿಯಾಗಿವೆ. ಈ ಹಿನ್ನೆಲೆಯಲ್ಲಿ, ಒಂದೇ ಕಡೆ ಭಾರಿ ಹೂಡಿಕೆ ಮಾಡಿ ಅಥವಾ ಒಂದೇ ಕಂಪನಿಗೆ ಹೆಚ್ಚು ಸಾಲ ನೀಡಿ ರಿಸ್ಕ್ ಹೆಚ್ಚಿಸಿಕೊಳ್ಳುವುದು ಬೇಡ ಎಂಬ ಕಾರಣಕ್ಕೆ ಎಲ್‌ಐಸಿಯಲ್ಲಿ ಈ ಆಲೋಚನೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ದೇಶದ ಅತಿದೊಡ್ಡ ಸಾಂಸ್ಥಿಕ ಹೂಡಿಕೆದಾರ ಎಂಬ ಹೆಗ್ಗಳಿಕೆ ಎಲ್‌ಐಸಿಗೆ ಇದೆ. ಒಂದೇ ಪ್ರವರ್ತಕರಿಗೆ ಸೇರಿದ ಕಂಪನಿಗಳಲ್ಲಿ ಹಾಗೂ ಸಮೂಹದಲ್ಲಿ ಮಾಡುವ ಹೂಡಿಕೆ ಮತ್ತು ಅವುಗಳಿಗೆ ನೀಡುವ ಸಾಲಕ್ಕೆ ಮಿತಿ ಹಾಕಲು ಎಲ್‌ಐಸಿ ಆಲೋಚಿಸುತ್ತಿದೆ ಎಂದು ಮೂಲಗಳು ವಿವರಿಸಿವೆ.

ಈ ಆಲೋಚನೆಗೆ ಎಲ್‌ಐಸಿ ಆಡಳಿತ ಮಂಡಳಿಯ ಅನುಮೋದನೆ ಬೇಕಿದೆ. ಈ ಕುರಿತು ಎಲ್‌ಐಸಿ ಹಾಗೂ ಕೇಂದ್ರ ಹಣಕಾಸು ಸಚಿವಾಲಯದಿಂದ ತಕ್ಷಣಕ್ಕೆ ಪ್ರತಿಕ್ರಿಯೆ ಲಭ್ಯವಾಗಿಲ್ಲ.

ಈಗಿರುವ ನಿಯಮಗಳ ಪ್ರಕಾರ ಎಲ್‌ಐಸಿ ಒಂದು ಕಂಪನಿಯ ಶೇಕಡ 10ಕ್ಕಿಂತ ಹೆಚ್ಚಿನ ಪ್ರಮಾಣದ ಷೇರುಗಳಲ್ಲಿ ಹೂಡಿಕೆ ಮಾಡುವಂತಿಲ್ಲ. ಹೊಸ ಆಲೋಚನೆಯು ಜಾರಿಗೆ ಬಂದಲ್ಲಿ, ಎಲ್‌ಐಸಿ ಹೂಡಿಕೆಗಳ ಮೇಲೆ ಇನ್ನಷ್ಟು ಮಿತಿಗಳು ಎದುರಾಗಬಹುದು.

'ಡ್ರೋಇವಿ' ಕ್ಲಸ್ಟರ್: ₹400 ಕೋಟಿ ಹೂಡಿಕೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬೆಳಗಾವಿಯನ್ನು ಡ್ರೋನ್ ಹಾಗೂ ಎಲೆಕ್ಟ್ರಿಕ್ ವಾಹನಗಳ ಹಬ್ ಆಗಿಸಲು ರೂಪಿಸಿದ 'ಡ್ರೋಇವಿ–2023'ಸಮಾವೇಶಕ್ಕೆ ಮೊದಲ ದಿನ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ವಿವಿಧ ಜಿಲ್ಲೆಗಳಿಂದ 16 ಕಂಪನಿಗಳ ಪ್ರತಿನಿಧಿಗಳು, 200 ಉದ್ಯಮಿಗಳು ಪಾಲ್ಗೊಂಡು ₹ 400 ಕೋಟಿ ಹೂಡಿಕೆ ಮಾಡುವುದಾಗಿ ಭರವಸೆ ನೀಡಿದ್ದಾರೆ.

ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ (ಕೆಡಿಇಎಂ) ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ 'ಡ್ರೋಇವಿ-2023' ಉದ್ಘಾಟನಾ ಸಮಾರಂಭದಲ್ಲಿ, ಬೆಳಗಾವಿ ಜಿಲ್ಲೆಯ 9 ಹಾಗೂ ಹೊರ ಜಿಲ್ಲೆಗಳ 7 ಕಂಪನಿಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಕೆಡಿಇಎಂ ಅಧ್ಯಕ್ಷ ಬಿ.ವಿ.ನಾಯ್ಡು, 'ದೇಶದಲ್ಲಿಯೇ ಇದನ್ನು ಮಾದರಿ ಕ್ಲಸ್ಟರ್ ಆಗಿ ರೂಪುಗೊಳಿಸಲಾಗುವುದು. 10 ಸಾವಿರಕ್ಕೂ ಹೆಚ್ಚು ಜನರಿಗೆ ಉದ್ಯೋಗ ಸಿಗಲಿದೆ' ಎಂದರು.

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹14400
ಎಸಿ	₹7700
ಆರ್‌ಪಿ	₹10200
ಆರ್‌ಸಿ	₹5090

ಸಂಕ್ಷಿಪ್ತ ಸುದ್ದಿ

ಬಿಲ್ಕಿಸ್ ಪ್ರಕರಣ 27ರಂದು ವಿಚಾರಣೆ

ನವದೆಹಲಿ: ಬಿಲ್ಕಿಸ್ ಬಾನೊ ಸಾಮೂಹಿಕ ಅತ್ಯಾಚಾರ ಪ್ರಕರಣದ 11 ಮಂದಿ ಅಪರಾಧಿಗಳನ್ನು ಸನ್ನಡತೆ ಆಧಾರದಲ್ಲಿ ಬಿಡುಗಡೆ ಮಾಡಿದ್ದನ್ನು ಪ್ರಶ್ನಿಸಿದ್ದ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಮಾರ್ಚ್ 27ರಂದು ನಡೆಸಲಿದೆ. ನ್ಯಾಯಮೂರ್ತಿಗಳಾದ ಕೆ.ಎಂ.ಜೋಸೆಫ್ ಮತ್ತು ಬಿ.ವಿ. ನಾಗರತ್ನ ಅವರನ್ನೊಳಗೊಂಡ ನ್ಯಾಯಪೀಠವು ಅರ್ಜಿಗಳ ವಿಚಾರಣೆ ನಡೆಸಲಿದೆ.

ಶರಣಾಗಲು ಕೈದಿಗಳಿಗೆ ಸೂಚನೆ

ನವದೆಹಲಿ (ಪಿಟಿಐ): ಜೈಲಿನಲ್ಲಿ ದಟ್ಟಣೆ ತಪ್ಪಿಸಲು ಕೋವಿಡ್ ಅವಧಿಯಲ್ಲಿ ಬಿಡುಗಡೆ ಮಾಡಿದ್ದ ಎಲ್ಲ ವಿಚಾರಣಾಧೀನ ಕೈದಿಗಳು 15 ದಿನದಲ್ಲಿ ಶರಣಾಗಬೇಕು ಎಂದು ಸುಪ್ರೀಂ ಕೋರ್ಟ್ ಆದೇಶಿಸಿದೆ. ತುರ್ತು ಜಾಮೀನಿನಡಿ ಬಿಡುಗಡೆ ಆದವರು ಶರಣಾಗತಿಯ ಬಳಿಕ ಜಾಮೀನು ಕೋರಿ ಸಕ್ಷಮ ಕೋರ್ಟ್‌ಗಳಿಗೆ ಅರ್ಜಿ ಸಲ್ಲಿಸಬಹುದು ಎಂದು ತಿಳಿಸಿದೆ.

ಏ. 5ಕ್ಕೆ ವಿರೋಧ ಪಕ್ಷಗಳ ಅರ್ಜಿ ವಿಚಾರಣೆ: ಸುಪ್ರೀಂ ಕೋರ್ಟ್

ನವದೆಹಲಿ: ತನ್ನ ರಾಜಕೀಯ ವಿರೋಧಿಗಳನ್ನು ಹಣಿಯಲು ಕೇಂದ್ರ ಸರ್ಕಾರವು ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಆರೋಪಿಸಿ ಕಾಂಗ್ರೆಸ್ ಸೇರಿದಂತೆ ಒಟ್ಟು 14 ವಿರೋಧ ಪಕ್ಷಗಳು ಸಲ್ಲಿಸಿರುವ ಅರ್ಜಿಯನ್ನು ಏಪ್ರಿಲ್ 5ಕ್ಕೆ ವಿಚಾರಣೆಗೆ ಕೈಗೆತ್ತಿಕೊಳ್ಳುವುದಾಗಿ ಸುಪ್ರೀಂ ಕೋರ್ಟ್ ಶುಕ್ರವಾರ ತಿಳಿಸಿದೆ.

ಕಾಂಗ್ರೆಸ್, ಡಿಎಂಕೆ, ಆರ್‌ಜೆಡಿ, ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್), ತೃಣಮೂಲ ಕಾಂಗ್ರೆಸ್ (ಟಿಎಂಸಿ), ಆಮ್ ಆದ್ಮಿ ಪಕ್ಷ (ಎಎಪಿ), ಎನ್‌ಸಿಪಿ, ಶಿವಸೇನಾ (ಉದ್ಧವ್ ಠಾಕ್ರೆ ಬಣ), ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ), ಜೆಡಿಯು, ಸಿಪಿಎಂ, ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಸಿಪಿಐ), ಸಮಾಜವಾದಿ ಪಕ್ಷ ಹಾಗೂ ಜಮ್ಮು ಮತ್ತು ಕಾಶ್ಮೀರ ನ್ಯಾಷನಲ್ ಕಾನ್ಫರೆನ್ಸ್ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದ ವಕೀಲ ಅಭಿಷೇಕ್ ಮನು ಸಿಂಘ್ವಿ ಅವರು ಅರ್ಜಿಯನ್ನು ತುರ್ತು ವಿಚಾರಣೆಗೆ ಪರಿಗಣಿಸುವಂತೆ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ತ್ರಿಸದಸ್ಯ ನ್ಯಾಯಪೀಠಕ್ಕೆ ಮನವಿ ಮಾಡಿದರು.

'ಅರ್ಜಿಯನ್ನು ಏಪ್ರಿಲ್ 5ಕ್ಕೆ ವಿಚಾರಣೆಗೆ ಪಟ್ಟಿ ಮಾಡಿರುವುದಾಗಿ' ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಹಾಗೂ ಜೆ.ಬಿ.ಪಾರ್ದಿವಾಲಾ ಅವರನ್ನೊಳಗೊಂಡ ನ್ಯಾಯಪೀಠ ಹೇಳಿತು.

'ವಿರೋಧ ಪಕ್ಷಗಳ ನಾಯಕರಿಗೆ ಮಾನಸಿಕ ಕಿರುಕುಳ ನೀಡುವುದಕ್ಕಾಗಿಯೇ ಜಾರಿ ನಿರ್ದೇಶನಾಲಯವನ್ನು (ಇ.ಡಿ) ಅಸ್ತ್ರವಾಗಿ ಬಳಸಿಕೊಳ್ಳಲಾಗುತ್ತಿದೆ. ಈಗಂತೂ ಇದು ಸಾಮಾನ್ಯವಾಗಿದೆ. ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ (ಪಿಎಂಎಲ್‌ಎ) ಅಡಿಯಲ್ಲಿ ಇ.ಡಿ ದಾಖಲಿಸಿರುವ ಪ್ರಕರಣಗಳ ಸಂಖ್ಯೆಯು ಗಣನೀಯವಾಗಿ ಹೆಚ್ಚಳವಾಗಿದೆ. 2013-14ರಲ್ಲಿ ಪಿಎಂಎಲ್‌ಎ ಅಡಿಯಲ್ಲಿ 209 ಪ್ರಕರಣಗಳು ದಾಖಲಾಗಿದ್ದವು.

2020-21ರಲ್ಲಿ ಈ ಸಂಖ್ಯೆ 981ಕ್ಕೆ ಏರಿತ್ತು. 2021-22ರಲ್ಲಿ ಒಟ್ಟು 1,180 ಪ್ರಕರಣಗಳನ್ನು ದಾಖಲಿಸಲಾಗಿದೆ' ಎಂದು ಅರ್ಜಿಯಲ್ಲಿ ದೂರಲಾಗಿದೆ.

ಗಾಯಕಿ ಜಯಶ್ರೀ ಆರೋಗ್ಯ ಸ್ಥಿರ

ಚೆನ್ನೈ (ಪಿಟಿಐ): ಖ್ಯಾತ ಕರ್ನಾಟಕ ಶಾಸ್ತ್ರೀಯ ಗಾಯಕಿ ಬಾಂಬೆ ಜಯಶ್ರೀ ರಾಮನಾಥ್ ಅವರು ಬ್ರಿಟನ್ ಪ್ರವಾಸದ ವೇಳೆಯಲ್ಲಿ ಅನಾರೋಗ್ಯಕ್ಕೀಡಾಗಿದ್ದು, ಸದ್ಯಕ್ಕೆ ಅವರ ಆರೋಗ್ಯ ಸ್ಥಿರವಾಗಿದೆ ಎಂದು ವಕ್ತಾರ ಶುಕ್ರವಾರ ತಿಳಿಸಿದ್ದಾರೆ.

ಬಾಂಬೆ ಜಯಶ್ರೀ

ಜಯಶ್ರೀ ಅವರ ಇನ್‌ಸ್ಟಾಗ್ರಾಂ ಪೋಸ್ಟ್‌ನ ಪ್ರಕಾರ, 'ಸಂಗೀತ ಕಾರ್ಯಕ್ರಮ ನೀಡಲು ಬ್ರಿಟನ್‌ಗೆ ತೆರಳಿದ್ದ ಸಂದರ್ಭದಲ್ಲಿ ಅವರು ದಿಢೀರನೆ ಅನಾರೋಗ್ಯಕ್ಕೀಡಾಗಿದ್ದರು. ಅಲ್ಲಿನ ರಾಷ್ಟ್ರೀಯ ಆರೋಗ್ಯ ಸೇವೆ (ಎನ್‌ಎಚ್‌ಎಸ್) ವತಿಯಿಂದ ಸಕಾಲಕ್ಕೆ ಸೂಕ್ತ ಚಿಕಿತ್ಸೆ ನೀಡಲಾಗಿದೆ' ಎನ್ನಲಾಗಿದೆ.

'ಜಯಶ್ರೀ ಅವರು ಹೃದಯಕ್ಕೆ ಸಂಬಂಧಿಸಿದ ಚಿಕಿತ್ಸೆಗೆ ಒಳಗಾಗಿದ್ದಾರೆ' ಎಂದು ಕುಟುಂಬದ ಮೂಲಗಳು ತಿಳಿಸಿವೆ. 'ಒಂದೆರಡು ದಿನಗಳ ವಿಶ್ರಾಂತಿಯ ಅಗತ್ಯವಿದೆ. ಅವರು ಚೇತರಿಸಿಕೊಳ್ಳುತ್ತಿದ್ದಾರೆ' ಎಂದು ಗಾಯಕಿಯ ವಕ್ತಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆದ್ದಾರಿಗಳಲ್ಲಿ ಇನ್ನು ಮುಂದೆ ಜಿಪಿಎಸ್ ಆಧಾರಿತ ಟೋಲ್ ವ್ಯವಸ್ಥೆ

ನವದೆಹಲಿ: 'ದೇಶದಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಹೆದ್ದಾರಿ ಟೋಲ್ ಪ್ಲಾಜಾಗಳನ್ನು ಬದಲಿಸಿ, ಇನ್ನು ಆರು ತಿಂಗಳಲ್ಲಿ ಹೊಸ ತಂತ್ರಜ್ಞಾನವನ್ನೊಳಗೊಂಡ ಜಿಪಿಎಸ್ ಆಧಾರಿತ ಟೋಲ್ ಸಂಗ್ರಹ ವ್ಯವಸ್ಥೆಯನ್ನು ಜಾರಿಗೆ ತರಲಾಗುವುದು' ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಶುಕ್ರವಾರ ಹೇಳಿದ್ದಾರೆ.

ಈ ಹೊಸ ವ್ಯವಸ್ಥೆಯು ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ಹಾಗೂ ಹೆದ್ದಾರಿಗಳಲ್ಲಿ ಪ್ರಯಾಣಿಸಿದ ನಿಖರ ದೂರಕ್ಕೆ ಶುಲ್ಕವನ್ನು ವಿಧಿಸುವ ಗುರಿಯನ್ನು ಹೊಂದಿದೆ ಎಂದೂ ಅವರು ತಿಳಿಸಿದ್ದಾರೆ.

ಉದ್ಯಮ ಸಂಸ್ಥೆ ಸಿಐಐ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ (ಎನ್‌ಎಚ್‌ಎಐ) ಟೋಲ್‌ನಿಂದ ಸಂಗ್ರಹವಾಗುವ ಆದಾಯವು ₹40 ಸಾವಿರ ಕೋಟಿಯಷ್ಟು ಇದ್ದು, ಇನ್ನು 2–3 ವರ್ಷಗಳಲ್ಲಿ ಈ ಪ್ರಮಾಣವು ₹1.40 ಲಕ್ಷ ಕೋಟಿಗಳಿಗೆ ಏರಿಕೆಯಾಗಲಿದೆ ಎಂದು ಗಡ್ಕರಿ ಹೇಳಿದ್ದಾರೆ.

ಕೇಂದ್ರ ಹೆದ್ದಾರಿ ಮತ್ತು ಸಾರಿಗೆ ಸಚಿವಾಲಯವು, ವಾಹನಗಳನ್ನು ನಿಲ್ಲಿಸದೆ ಸ್ವಯಂಚಾಲಿತ ಟೋಲ್ ಸಂಗ್ರಹವನ್ನು ಸಕ್ರಿಯಗೊಳಿಸಲು, ವಾಹನಗಳ ನಂಬರ್ ಪ್ಲೇಟ್‌ಗಳನ್ನು ಸ್ವಯಂಚಾಲಿತವಾಗಿ (ಆಟೊಮ್ಯಾಟಿಕ್) ಗುರುತಿಸುವ ಪ್ರಾಯೋಗಿಕ ಯೋಜನೆಯನ್ನು ಜಾರಿಗೆ ತರಲಿದೆ.

ಪಿಂಚಣಿ ನೀತಿ ವಿರೋಧಿಸಿ ಪ್ರತಿಭಟನೆ

ಪ್ಯಾರಿಸ್ (ಎಪಿ, ರಾಯಿಟರ್ಸ್): ಪಿಂಚಣಿ ವ್ಯವಸ್ಥೆಯಲ್ಲಿ ಸುಧಾರಣೆ ತರಲು ಮುಂದಾಗಿರುವ ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಅವರ ಕ್ರಮಕ್ಕೆ ದೇಶದಾದ್ಯಂತ ದೊಡ್ಡ ಮಟ್ಟದ ಪ್ರತಿರೋಧ ವ್ಯಕ್ತವಾಗುತ್ತಿದೆ. ಮತ ಹಾಕದೆಯೇ ನೀತಿಯನ್ನು ಅಂಗೀಕಾರ ಮಾಡಿದ ಅಧ್ಯಕ್ಷ ಮ್ಯಾಕ್ರನ್ ಅವರ ಕ್ರಮವನ್ನು ಜನರು ಕಟುವಾಗಿ ವಿರೋಧಿಸುತ್ತಿದ್ದಾರೆ.

ನಿವೃತ್ತಿ ವಯಸ್ಸನ್ನು 62ರಿಂದ 64ಕ್ಕೆ ಏರಿಸಿರುವುದು ಜನರು ಆಕ್ರೋಶಕ್ಕೆ ಕಾರಣವಾಗಿದ್ದು, ಸುಮಾರು 300 ಕಡೆಗಳಲ್ಲಿ ಪ್ರತಿಭಟನೆಗಳು ನಡೆಯುತ್ತಿವೆ. 10 ಲಕ್ಷಕ್ಕೂ ಹೆಚ್ಚು ಜನರು ಪಾಲ್ಗೊಳ್ಳುತ್ತಿದ್ದಾರೆ. 450ಕ್ಕೂ ಹೆಚ್ಚು ಪ್ರತಿಭಟನಕಾರರನ್ನು ಬಂಧಿಸಲಾಗಿದೆ.

ನೀತಿಯನ್ನು ಹಿಂಪಡೆಯುವ ಸಂಬಂಧ ಅಧ್ಯಕ್ಷ ಮ್ಯಾಕ್ರನ್ ಅವರ ಮೇಲೆ ಒತ್ತಡ ಹೆಚ್ಚುತ್ತಿದೆ. ಆದರೆ ಅವರು, 'ವ್ಯವಸ್ಥೆಯು ದಿಕ್ಕುತಪ್ಪದಂತೆ ಮಾಡಲು ಈ ನೀತಿಯು ಅಗತ್ಯವಾಗಿದೆ' ಎಂದಿದ್ದಾರೆ.

3ನೇ ಚಾರ್ಲ್ಸ್ ಭೇಟಿ ಮುಂದೂಡಿಕೆ: ಬ್ರಿಟನ್‌ನ ರಾಜ 3ನೇ ಚಾರ್ಲ್ಸ್ ಅವರು ಮಂಗಳವಾರ ಬೋರ್ಡೊ ನಗರಕ್ಕೆ ಭೇಟಿ ನೀಡಲಿದ್ದರು. ಈ ವೇಳೆ ದೇಶದಾದ್ಯಂತ ಪ್ರತಿಭಟನೆಗಳನ್ನು ನಡೆಸಲು ಕಾರ್ಮಿಕ ಒಕ್ಕೂಟಗಳು ನಿರ್ಧರಿಸಿದ್ದವು. ಆದರೆ ಬೋರ್ಡೊ ನಗರದ ಭವ್ಯವಾದ ಸಿಟಿ ಹಾಲ್‌ನ ಮರದ ಬಾಗಿಲಿಗೆ ಪ್ರತಿಭಟನಕಾರರು ಬೆಂಕಿ ಹಚ್ಚಿದ್ದರು. ಹೀಗಾಗಿ ಚಾರ್ಲ್ಸ್ ಅವರ ಫ್ರಾನ್ಸ್ ಭೇಟಿಯನ್ನು ಮುಂದೂಡಲಾಗಿದೆ' ಎಂದು ಅಧ್ಯಕ್ಷ ಮ್ಯಾಕ್ರನ್ ಕಚೇರಿ ತಿಳಿಸಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ರೆಂಟಲ್ ಪ್ರಾಪರ್ಟೀಸ್

Accommodation Available

Commercial

G+5 FLOORS Commercial space available on rent near Mantri mall Malleshwaram. Lift facility and cellar storage. Contact 9972181838

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commercial Land

Tumkur

COMMERCIAL LAND (11 Guntas) For Sale in Tumkur. Land adjacent to Bangalore Mumbai highway. Suitable for Choultry, Hotel,Complex. Owner:6364742964

Airport Road

2BHK 1100 SFTWhite Marble Flooring Adjacent to Old Airport RdCar Prkg and Semi FurnMurugeshpalya for IMMEDIATE SALECONTACT 8884414416

House

Old Madras Road

ಮನೆ ಮಾರಾಟಕ್ಕಿದೆ: ಬೆಂಗಳೂರಿನ ಹಳೇ ಬೈಯಪ್ಪನಹಳ್ಳಿಯ ಮೋಟಪ್ಪ ಬಡಾವಣೆಯಲ್ಲಿ, ತಲಾ 400 ಚ. ಅಡಿ ಇರುವಂತಹ ಅವಳಿ ನಿವೇಶನಗಳು ಪ್ರತಿ ಚ. ಅಡಿಗೆ ರೂ. 5000/- ದಂತೆ ಮಾರಾಟಕ್ಕಿದೆ. ಸಂಪರ್ಕಿಸಿ: 9448904183, 9986948267

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266/ 9611225266

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/ ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

Wanted

ಸಂಪರ್ಕಿಸಿ: 250ಕ್ಕೂ ಹೆಚ್ಚಿನ ವಿವಿಧ ಕೋರ್ಸ್ ಗಳ ಅಡ್ಮಿಶನ್ ಸೆಂಟರ್/ಫ್ರಾಂಚಯಿಸಿಗಾಗಿ ಹಾಗೂ ಬ್ಯಾಂಕಿಂಗ್ ಸೇವಾ ಸಂಘಟನೆಯ ತಾಲೂಕು ಉಸ್ತುವಾರಿಯಾಗಲು: 9342326501

ಪ್ರವಾಸ

Travel

07/05/2023ರಿಂದ 16ದಿನಗಳ ನೇಪಾಳ,ಮುಕ್ತಿನಾಥ್,ಕಾಶಿ, ನೈಮಿಷಾರಣ್ಯ ಹಾಗೂ ಚಾರಧಾಮ್ ಸಮೇತ ಹರಿದ್ವಾರ, ಮಸ್ಸೂರಿ,ಋಷಿಕೇಶ,ಇತ್ಯಾದಿ 30/6/2023ರಿಂದ ಅಮರನಾಥ್ ವೈಷ್ಣೋದೇವಿ,ಕಾಶ್ಮೀರ, ಅಮೃತಸರ,ವಾಘಾಬಾರ್ಡರ್ ಇತ್ಯಾದಿ.ಏಷ್ಯನ್ ಟ್ರಾವೆಲ್ ಲೈನ್ಸ್ 164/3.ಅರ್.ವಿ.ರಸ್ತೆ ಬೆಂಗಳೂರು-4. 8105657052/ 9480182865 (ಷಣ್ಮುಗಾನಂದ)

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 6/12 ದಿನಗಳು. 19.04.2023 ರಾಮೇಶ್ವರ,ಕನ್ಯಾಕುಮಾರಿ ಮಧುರೈ ಇತ್ಯಾದಿ 7600. 09.05.2023 ಕೇರಳ ಪ್ರವಾಸ 7600. 23.05.2023 ಗುಜರಾತ್,ಮಧ್ಯಪ್ರದೇಶ 17000. 13.06.2023 ಕಾಶಿ,ಗಯಾ,ಅಯೋಧ್ಯ ಇತ್ಯಾದಿ 17000. 9448390735 9449721678

TRAVEL CORNER

BGS WORLD TOURS ಬಿಜಿಎಸ್ ವರ್ಲ್ಡ್ ಟೂರ್ಸ್‌ನಿಂದ
ಉತ್ತಮ ಪ್ರವಾಸಗಳು: 15.4.2023, ಕಾಶಿ, ಗಯಾ, ಅಯೋಧ್ಯ, ಅಲಹಾಬಾದ, ನೇಮಿಶಾರಣ್ಯ 6 ದಿನಗಳು ರೈಲಿನಲ್ಲಿ 20,000/–, ವಿಮಾನದಲ್ಲಿ 35,000/–. 20.4.2023 ಮತ್ತು 2.5.2023 ಜೈಪುರ, ಆಗ್ರ, ಕಾಶಿ, ಹರಿದ್ವಾರ, ದೆಹಲಿ 12 ದಿನಗಳು ರೈಲಿನಲ್ಲಿ 35,000/–, ವಿಮಾನದಲ್ಲಿ 45,000/–. 18.4.2023 ಗುಜರಾತ್ 6 ದಿನಗಳು ರೈಲಿನಲ್ಲಿ 23,000/– ವಿಮಾನದಲ್ಲಿ 35,000/–. 25.4.2023, 5.5.2023 ಶ್ರೀಲಂಕಾ ರಾಮಾಯಣ ಪ್ರವಾಸ 7 ದಿನಗಳು 59,000/–. 10 ದಿನಗಳು 78,000/– ಸಾವಿರ. 15.4.2023 ದುಬೈ ಫೆಸ್ಟಿವಲ್ 5 ದಿನಗಳು. 2.5.2023 ಸಿಂಗಪೂರ್, ಮಲೇಷಿಯಾ, ಥೈಲ್ಯಾಂಡ್ 7/12 ದಿನಗಳು 1.9.2023 ದುಬೈ, ಇರಾನ್, ಅಜೆರ್‌ಬೈಜನ್ 16 ದಿನಗಳು. ಸಂಪರ್ಕಿಸಿ: ಎನ್.ಎಸ್. ಇಂದ್ರೇಶ್. ಪೀಣ್ಯ ದಾಸರಹಳ್ಳಿ ಮತ್ತು ವಿಜಯನಗರ, ಬೆಂಗಳೂರು.
ಮೊಬೈಲ್ 9845133785, 9686200695

ಶಿವನಂದಿ ಟ್ರಾವೆಲ್ಸ್ ಹನುಮಂತನಗರ,ಬೆಂಗಳೂರು ಅಮರನಾಥ್ ಯಾತ್ರೆ,ಕಟ್ರಾ ವೈಷ್ಣೋದೇವಿ,ದೆಹಲಿ,ಶ್ರೀನಗರ 12ದಿನಗಳು 1.7.2023, 14.7.2023. ಕಾಶಿಯಾತ್ರೆ, ದೆಹಲಿ,ಆಗ್ರಾ,ಅಯೋಧ್ಯ 13ದಿನಗಳು 17.5.2023. ದುಬೈ,ಅಬುಧಾಭಿ 5ದಿನಗಳು 17.4.2023, 15.5.2023 ಸಂಪರ್ಕಿಸಿ 9036056352 9481027363

ಶ್ರೀರಾಜರಾಜೇಶ್ವರಿ ಟೂರ್ಸ್ 05.05.2023,12ದಿನ 4ಸಿಸ್ಟರ್ಸ್ ನಾರ್ತ್‌ಈಸ್ಟ್ ನಾಗಾಲ್ಯಾಂಡ್ ಮಿಝೋರಾಂ ಮಣಿಪುರ್ ತ್ರಿಪುರಸುಂದರಿ ಶಕ್ತಿಪೀಠ ಫ್ಲೋಟಿಂಗ್ ನ್ಯಾಷನಲ್ ಪಾರ್ಕ್ 9739618243, 9743895346

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್. 14/04/23 ಜಾರ್ಖಂಡ್, ಕೋಲ್ಕತಾ,ಭುವನೇಶ್ವರ್. 26/04/23 ಜಮ್ಮು, ಕಾಶ್ಮೀರ, ವೈಷ್ಣೋದೇವಿ. 08/06/23 ಚಾರ್ಧಾಮ್ ಯಾತ್ರ. 9964527782/9291017782

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ
Book Your Classifieds Ads
Online Log in to dhclassifieds.com
Contact :
9886213331 : 9901641752
9845114560 : 9731810277
080 - 45557163 / 164

ಡಬ್ಲ್ಯುಪಿಎಲ್ ಕ್ರಿಕೆಟ್ ಟೂರ್ನಿ: ವಾಂಗ್ ಹ್ಯಾಟ್ರಿಕ್; ನಥಾಲಿ ಅಬ್ಬರದ ಬ್ಯಾಟಿಂಗ್

ಫೈನಲ್‌ಗೆ ಮುಂಬೈ ಇಂಡಿಯನ್ಸ್

ನವಿ ಮುಂಬೈ (ಪಿಟಿಐ): ಇಸಾಬೆಲ್ ವಾಂಗ್ (15ಕ್ಕೆ 4) ಅವರು ಗಳಿಸಿದ ಹ್ಯಾಟ್ರಿಕ್ ಹಾಗೂ ನಥಾಲಿ ಸಿವೆರ್ ಬ್ರಂಟ್ ಅವರ ಅಬ್ಬರದ ಬ್ಯಾಟಿಂಗ್ ನೆರವಿನಿಂದ ಮುಂಬೈ ಇಂಡಿಯನ್ಸ್ ತಂಡದವರು ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಟಿ20 ಕ್ರಿಕೆಟ್ ಟೂರ್ನಿಯ ಪ್ರಶಸ್ತಿ ಸುತ್ತು ತಲುಪಿದರು.

ಡಿ.ವೈ.ಪಾಟೀಲ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಎಲಿಮಿನೇಟರ್ ಪಂದ್ಯದಲ್ಲಿ ಮುಂಬೈ 72 ರನ್‌ಗಳಿಂದ ಯುಪಿ ವಾರಿಯರ್ಸ್ ತಂಡವನ್ನು ಪರಾಭವಗೊಳಿಸಿತು. ಮುಂಬೈ ತಂಡ ಭಾನುವಾರ ನಡೆಯುವ ಫೈನಲ್‌ನಲ್ಲಿ ಡೆಲ್ಲಿ ಕ್ಯಾಪಿಟಲ್ಸ್‌ಅನ್ನು ಎದುರಿಸಲಿದೆ.

ಮೊದಲು ಬ್ಯಾಟ್ ಮಾಡಿದ ಹರ್ಮನ್‌ಪ್ರೀತ್ ಕೌರ್ ಬಳಗ, ನಿಗದಿತ ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 182 ರನ್ ಪೇರಿಸಿತು. ಗುರಿ ಬೆನ್ನತ್ತಿದ ವಾರಿಯರ್ಸ್ 17.4 ಓವರ್‌ಗಳಲ್ಲಿ 110 ರನ್ ಗಳಿಸಿ ಎಲ್ಲ ವಿಕೆಟ್ ಒಪ್ಪಿಸಿತು.

ವಿಕೆಟ್ ಗಳಿಸಿದ ಇಸಾಬೆಲ್ ವಾಂಗ್ ಸಂಭ್ರಮ– ಎಎಫ್‌ಪಿ ಚಿತ್ರ

ಸವಾಲಿನ ಗುರಿ ಪಡೆದ ಯುಪಿ ನಿರಂತರವಾಗಿ ವಿಕೆಟ್ ಕಳೆದುಕೊಳ್ಳುತ್ತಾ ಸಾಗಿತು. ಇನಿಂಗ್ಸ್‌ನ ಮೂರನೇ ಓವರ್‌ನ ಎರಡನೇ ಎಸೆತದಲ್ಲಿ ಅಲಿಸಾ ಹೀಲಿ (11) ಅವರನ್ನು ಔಟ್ ಮಾಡುವ ಮೂಲಕ ವಾಂಗ್ ತಮ್ಮ ವಿಕೆಟ್ ಬೇಟೆ ಆರಂಭಿಸಿದರು. 13ನೇ ಓವರ್‌ನ 2ನೇ ಎಸೆತದಲ್ಲಿ ಕಿರಣ್ ನವಗಿರೆ (43 ರನ್), 3ನೇ ಎಸೆತದಲ್ಲಿ ಸಿಮ್ರಾನ್ ಶೇಖ್ ಮತ್ತು 4ನೇ ಎಸೆತದಲ್ಲಿ ಸೋಫಿ ಎಕ್ಸೆಲ್‌ಸ್ಟನ್ ಅವರ ವಿಕೆಟ್ ಗಳಿಸಿದ ವಾಂಗ್ ಟೂರ್ನಿಯ ಮೊದಲ ಹ್ಯಾಟ್ರಿಕ್ ಗಳಿಸಿದ ಗೌರವಕ್ಕೆ ಭಾಜನರಾದರು.

27 ಎಸೆತ ಎದುರಿಸಿದ ಕಿರಣ್ 4ಬೌಂಡರಿ ಮತ್ತು 2 ಸಿಕ್ಸರ್ ಸಿಡಿಸಿದರು. ಅವರಿಗೆ ಉಳಿದವರಿಂದ ಬೆಂಬಲ ದೊರೆಯಲಿಲ್ಲ.

ವಾಂಗ್ ಅವರಿಗೆ ಸೈಕಾ ಇಶಾಕ್ (24ಕ್ಕೆ 2) ಉತ್ತಮ ಸಾಥ್ ನೀಡಿದರು.

ಸವಾಲಿನ ಮೊತ್ತ: ಟಾಸ್ ಗೆದ್ದ ವಾರಿಯರ್ಸ್ ತಂಡದ ನಾಯಕಿ ಅಲಿಸಾ ಹೀಲಿ ಅವರು ಎದುರಾಳಿ ತಂಡವನ್ನು ಬ್ಯಾಟಿಂಗ್‌ಗೆ ಕಳುಹಿಸಿದರು. ಯಷ್ಟಿಕಾ ಭಾಟಿಯಾ (21) ಮತ್ತು ಹೇಯಿಲಿ ಮ್ಯಾಥ್ಯೂಸ್ (26) ಮೊದಲ ವಿಕೆಟ್‌ಗೆ 31 ರನ್ ಸೇರಿಸಿದರು.

ನಥಾಲಿ (38 ಎಸೆತಗಳಲ್ಲಿ ಅಜೇಯ 72 ರನ್) ಮತ್ತು ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರು ಮೂರನೇ ವಿಕೆಟ್‌ಗೆ 35 ರನ್ ಸೇರಿಸಿದರು. ಕೌರ್ (14 ರನ್, 15 ಎ.) ಅದೇ ಓವರ್‌ನಲ್ಲಿ ಸೋಫಿ ಎಕ್ಸೆಲ್‌ಸ್ಟನ್ ಅವರಿಗೆ ವಿಕೆಟ್ ಒಪ್ಪಿಸಿದರು.

ನತಾಲಿ 9 ಬೌಂಡರಿ ಮತ್ತು 2 ಸಿಕ್ಸರ್ ಹೊಡೆದು ತಂಡದ ಮೊತ್ತ ಹೆಚ್ಚಿಸಿದರು.

ಕೊನೆಯಲ್ಲಿ ಅಮೇಲಿ ಕೆರ್ (29 ರನ್, 19 ಎ) ಕೂಡಾ ಅಬ್ಬರಿಸಿದರು.

ಸಂಕ್ಷಿಪ್ತ ಸ್ಕೋರ್: ಮುಂಬೈ ಇಂಡಿಯನ್ಸ್ 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 182 (ಯಷ್ಟಿಕಾ ಭಾಟಿಯಾ 21, ಹೇಯಿಲಿ ಮ್ಯಾಥ್ಯೂಸ್ 26, ನಥಾಲಿ ಸಿವೆರ್ ಬ್ರಂಟ್ ಔಟಾಗದೆ 72, ಹರ್ಮನ್‌ಪ್ರೀತ್ ಕೌರ್ 14, ಅಮೇಲಿ ಕೆರ್ 29, ಸೋಫಿ ಎಕ್ಸೆಲ್‌ಸ್ಟನ್ 39ಕ್ಕೆ 2, ಅಂಜಲಿ ಸರ್ವಾಣಿ 17ಕ್ಕೆ 1). ಯುಪಿ ವಾರಿಯರ್ಸ್: 17.4 ಓವರ್‌ಗಳಲ್ಲಿ 110 (ಕಿರಣ್ ನವಗಿರೆ 43, ದೀಪ್ತಿ ಶರ್ಮಾ 16; ನತಾಲಿ ಸಿವೆರ್ ಬ್ರಂಟ್ 21ಕ್ಕೆ 1, ಸೈಕಾ ಇಶಾಕ್ 24ಕ್ಕೆ 2, ಇಸಾಬೆಲ್ ವಾಂಗ್ 15ಕ್ಕೆ 4). ಫಲಿತಾಂಶ: ಮುಂಬೈಗೆ 72 ರನ್‌ಗಳ ಜಯ ಫೈನಲ್ ಪ್ರವೇಶ.

ಬಾಕ್ಸರ್‌ಗಳ ‘ಚಿನ್ನ’ದ ನಿರೀಕ್ಷೆ

ವಿಶ್ವ ಚಾಂಪಿಯನ್‌ಷಿಪ್: ಫೈನಲ್‌ನಲ್ಲಿ ಭಾರತದ ನಾಲ್ವರು

ನವದೆಹಲಿ (ಪಿಟಿಐ): ಮಹಿಳೆಯರ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಅಮೋಘ ಸಾಮರ್ಥ್ಯ ತೋರಿ ಫೈನಲ್‌ಗೆ ಲಗ್ಗೆಯಿಟ್ಟಿರುವ ಭಾರತದ ಲವ್ಲಿನಾ ಬೊರ್ಗೊಹೈನ್, ನಿಖತ್ ಜರೀನ್, ನೀತು ಗಂಗಾಸ್ ಮತ್ತು ಸ್ವೀಟಿ ಬೂರಾ ಅವರು ಚಿನ್ನದ ಪದಕದ ನಿರೀಕ್ಷೆಯಲ್ಲಿದ್ದಾರೆ.

ಇಲ್ಲಿಯ ಕೆ.ಡಿ. ಜಾಧವ್ ಒಳಾಂಗಣದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಈ ನಾಲ್ವರು ಬಾಕ್ಸರ್‌ಗಳು ತಮ್ಮ ಸೆಮಿಫೈನಲ್‌ಗಳಲ್ಲಿ ರೋಚಕ ಜಯ ಸಾಧಿಸಿ ಫೈನಲ್ ತಲುಪಿದ್ದರು.

52 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿರುವ ನಿಖತ್ ಅವರಿಗೆ ಎರಡನೇ ಬಾರಿ ವಿಶ್ವ ಕಿರೀಟ ಧರಿಸುವ ಅವಕಾಶವಿದೆ. ದಿಗ್ಗಜ ಬಾಕ್ಸರ್ ಮೇರಿ ಕೋಮ್ (ಆರು ಬಾರಿ) ನಂತರ ಈ ಸಾಧನೆ ಮಾಡುವ ಕಾತರದಲ್ಲಿ ಅವರಿದ್ದಾರೆ.

ಭಾನುವಾರ ನಡೆಯುವ ಫೈನಲ್‌ನಲ್ಲಿ ನಿಖತ್ ಅವರು ವಿಯೆಟ್ನಾಂನ ಗುಯೆನ್ ಥಿ ಟಾಮ್ ಅವರನ್ನು ಎದುರಿಸುವರು.

ಟೋಕಿಯೊ ಒಲಿಂಪಿಕ್ಸ್ ಕಂಚು ವಿಜೇತೆ ಲವ್ಲಿನಾ (75 ಕೆಜಿ) ಮೊದಲ ಬಾರಿ ವಿಶ್ವ ಚಾಂಪಿಯನ್ ಆಗುವ ಹಂಬಲದಲ್ಲಿದ್ದು, ಆಸ್ಟ್ರೇಲಿಯಾದ ಕೈಟ್ಲನ್ ಪಾರ್ಕರ್ ಅವರಿಗೆ ಮುಖಾಮುಖಿಯಾಗಲಿದ್ದಾರೆ. ಈ ಫೈನಲ್ ಬೌಟ್ ಕೂಡ ಭಾನುವಾರ ನಿಗದಿಯಾಗಿದೆ.

ಸ್ವೀಟಿ ಬೂರಾ

ಲವ್ಲಿನಾ ಬೊರ್ಗೊಹೈನ್

48 ಕೆಜಿ ವಿಭಾಗದ ಸ್ಪರ್ಧಿ, ಕಾಮನ್‌ವೆಲ್ತ್ ಗೇಮ್ಸ್ ಚಿನ್ನ ವಿಜೇತೆ ನೀತು ಅವರು ಚಿನ್ನದ ಪದಕದ ಸುತ್ತಿನಲ್ಲಿ ಶನಿವಾರ ಮಂಗೋಲಿಯಾದ ಲುತ್ಸಾಯಿಖಾನ್ ಅಲ್ಟಂಟ್‌ಸೆಟ್‌ಸೆಗ್ ಅವರಿಗೆ ಮುಖಾಮುಖಿಯಾಗುವರು.

81 ಕೆಜಿ ವಿಭಾಗದಲ್ಲಿ ಚಿನ್ನದ ಪದಕದ ಸುತ್ತು ತಲುಪಿರುವ ಸ್ವೀಟಿ ಬೂರಾ ಅವರಿಗೆ ಶನಿವಾರ ನಡೆಯುವ ಫೈನಲ್ ಬೌಟ್‌ನಲ್ಲಿ ಚೀನಾದ ವಾಂಗ್ ಲೀನಾ ಅವರ ಸವಾಲು ಎದುರಾಗಿದೆ.

ಮಂಡೀರ ಮತ್ತು ಅಲ್ಲಂಡ ತಂಡಗಳ ನಡುವಿನ ಹಣಾಹಣಿ

ಫುಟ್‌ಬಾಲ್ ಆಟಗಾರ ಗಣೇಶ್ ನಿಧನ

ಬೆಂಗಳೂರು: ಮೈಸೂರಿನಲ್ಲಿ ಸರ್ಕಾರಿ ಮುದ್ರಣಾಲಯ ತಂಡದ ಪರ ಆಡಿದ್ದ ಫುಟ್‌ಬಾಲ್ ಆಟಗಾರ ಎಂ.ಆರ್. ಗಣೇಶ್ ಸಿಂಗ್ (84) ಶುಕ್ರವಾರ ನಿಧನರಾದರು.

ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆ ಸಾಮಾನ್ಯ ಸಭೆಯ ಸದಸ್ಯರಾಗಿದ್ದ ಅವರು ತಳಮಟ್ಟದಲ್ಲಿ ಫುಟ್‌ಬಾಲ್ ಬೆಳವಣಿಗೆಗೆ ಅಮೂಲ್ಯ ಸಲಹೆಗಳನ್ನು ನೀಡಿದ್ದರು. ಅವರ ಅಂತ್ಯಕ್ರಿಯೆ ಶುಕ್ರವಾರ ಮೈಸೂರಿನಲ್ಲಿ ನಡೆಯಿತು.

ಕೊಡವ ಕೌಟುಂಬಿಕ ಹಾಕಿ: ತಾತಂಡ ತಂಡಕ್ಕೆ ಗೆಲುವು

ಪ್ರಜಾವಾಣಿ ವಾರ್ತೆ

ನಾಪೋಕ್ಲು (ಕೊಡಗು ಜಿಲ್ಲೆ): ತಾತಂಡ ತಂಡದವರು ಕೊಡವ ಕೌಟುಂಬಿಕ ಹಾಕಿ ಉತ್ಸವದ ಟೂರ್ನಿಯಲ್ಲಿ ಶುಕ್ರವಾರ ಗೆಲುವು ಸಾಧಿಸಿದರು.

ಸಮೀಪದ ಚೆರಿಯಪರಂಬುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ತಾತಂಡ 6–1 ಗೋಲಿನಿಂದ ಮುಕ್ಕಾಟಿರ (ಕುಂಬಳದಾಳು) ತಂಡವನ್ನು ಮಣಿಸಿತು.

ಎಳ್ತಂಡ ತಂಡದವರು 4–0ರಲ್ಲಿ ನಾಪನೆರವಂಡ ತಂಡದವರನ್ನು ಸೋಲಿಸಿದರು. ನಾಪನೆರವಂಡ ತಂಡದ 84 ವರ್ಷದ ಪೊನ್ನಪ್ಪ ಅವರು ಹಾಕಿ ಸ್ಟಿಕ್ ಹಿಡಿದು ಎಲ್ಲರ ಗಮನ ಸೆಳೆದರು. ಅದೇ ತಂಡದಲ್ಲಿ ಒಂದೇ ಕುಟುಂಬದ ನಾಲ್ವರು ಆಟವಾಡಿದ್ದು ವಿಶೇಷವಾಗಿತ್ತು.

ಕಡೇಮಾಡ ತಂಡವು 4-1 ಅಂತರದಿಂದ ಮೂಕಂಡ ವಿರುದ್ಧ, ಪಾಲೆಯಂಡ 5-0ರಿಂದ ತೆನ್ನಿರ ತಂಡದ ಎದುರು ಜಯಿಸಿದವು. ಕೇಟೋಳಿರ ವಿರುದ್ಧ ಕೊಂಗಂಡ, ಮಂಡೆಯಂಡ ವಿರುದ್ಧ ಚೌರಿರ (ಹೊದವಾಡ), ಬಾಚಂಗಡ ಎದುರು ಕೊಕ್ಕಂಡ, ಸುಳ್ಳಿಮಾಡ ವಿರುದ್ಧ ಪೊನ್ನಚೆಟ್ಟಿರ ತಂಡದವರು ಗೆದ್ದರು. ಅಲ್ಲಂಡ 4–3 ಗೋಲುಗಳಿಂದ ಮಂಡೀರ (ನೆಲಜಿ) ವಿರುದ್ಧ ರೋಚಕವಾಗಿ ಗೆದ್ದಿತು.

ರಾಜಸ್ಥಾನ ತಂಡಕ್ಕೆ ಲುಮಿನಸ್ ಪ್ರಾಯೋಜಕತ್ವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಆಡುವ ರಾಜಸ್ಥಾನ ರಾಯಲ್ಸ್ ತಂಡಕ್ಕೆ ಲುಮಿನಸ್ ಪವರ್ ಟೆಕ್ನಾಲಜೀಸ್ ಕಂಪನಿಯು ಟೈಟಲ್ ಪ್ರಾಯೋಜಕತ್ವ ವಹಿಸಿಕೊಂಡಿದೆ. ರಾಯಲ್ಸ್ ಸ್ಪೋರ್ಟ್ಸ್ ಗ್ರೂಪ್ ಶುಕ್ರವಾರ ಪ್ರಕಟಣೆಯಲ್ಲಿ ಈ ವಿಷಯ ತಿಳಿಸಿದೆ.

ಇದೇ 31ರಿಂದ ಐಪಿಎಲ್ ಟೂರ್ನಿ ನಡೆಯಲಿದೆ. ರಾಜಸ್ಥಾನ ತಂಡವು ಟೂರ್ನಿಯ ತನ್ನ ಮೊದಲ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಎದುರಿಸಲಿದೆ. ಏಪ್ರಿಲ್ 2ರಂದು ಹೈದರಾಬಾದ್‌ನಲ್ಲಿ ಈ ಪಂದ್ಯ ನಡೆಯಲಿದೆ.

ಲೈಂಗಿಕ ಸಮಸ್ಯೆಗೆ ಪ್ರಭಾವಶಾಲಿ ಪರಿಹಾರ
18 ರಿಂದ 75 ವಯಸ್ಸಿನವರಿಗೆ
ಸ್ವೈಯಂ ಟ್ಯಾಬ್ಲೆಟ್ ಹಾಗೂ ಎಕ್ಸ್‌ಟೆಂಜರ್ ಆಯಿಲ್ ತಯಾರಿಸಿದ ಹಾಗೂ ಶೀಘ್ರಸ್ಖಲನ ಸ್ವಪ್ನ ದೋಷ ಇಂದ್ರಿಯ ದೋಷಗಳಿಗೆ ಸ್ಪೆಷಲ್ ಪರಿಹಾರವಾಗಿದೆ. ಇಂದ್ರಿಯ ಗಾತ್ರ ಹೆಚ್ಚಿಸಿಕೊಳ್ಳಲು ವಿಶೇಷ ಆಯುರ್ವೇದದ ಪ್ರತೀಕವಾಗಿದೆ. ಮನೆಯಲ್ಲಿ ನೆಲೆಸಿ ತೆರೆದುಕೊಳ್ಳಿ. ಈಗ ಕರ್ನಾಟಕದಲ್ಲಿ ಲಭ್ಯವಿದೆ.
74115 06650

ಲೈಂಗಿಕ ಸಮಸ್ಯೆಗೆ ವಿಶ್ವದ ನಂಬರ್ 1 ಪರಿಹಾರ
ಶಿಶ್ನ ಚಿಕ್ಕದಾಗಿದೆಯೆ?, ವಕ್ರವಾಗಿದೆಯೆ? ಸೆಕ್ಸ್ ಸಮಯ ಹೆಚ್ಚಿಸಬೇಕೆ? ಚಿಂತಿಸಬೇಡಿ. ವಿಶ್ವದ ನಂಬರ 1 ಆಯುರ್ವೇದಿಕ ಔಷಧಿಯಿಂದ ಶಿಶ್ನದ ಗಾತ್ರ 7 ರಿಂದ 8 ಇಂಚು ಉದ್ದದಪ್ಪ ಹಾಗೂ ಲೈಂಗಿಕ ಸಮಯವನ್ನು ಹೆಚ್ಚಿಸಿಕೊಳ್ಳಿ. ಯಾವುದೇ ಅಡ್ಡಪರಿಣಾಮ ಇಲ್ಲ, ಲಕ್ಷಾಂತರ ಮಂದಿ ಸಂತುಷ್ಟರಾಗಿದ್ದಾರೆ.
ಸಂಪರ್ಕಿಸಿ
02262676816



ಸಂಕ್ಷಿಪ್ತ ಸುದ್ದಿ

ಟ್ರೆಂಟ್ ರಾಕೆಟ್ಸ್ ಪರ ಆಡಲಿರುವ ಹರ್ಮನ್‌ಪ್ರೀತ್

ಲಂಡನ್ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರು ಇಂಗ್ಲೆಂಡ್‌ನಲ್ಲಿ ನಡೆಯುವ ‘ದಿ ಹಂಡ್ರೆಡ್’ ಟಿ20 ಲೀಗ್‌ನಲ್ಲಿ ಟ್ರೆಂಟ್ ರಾಕೆಟ್ಸ್ ಪರ ಆಡಲಿದ್ದಾರೆ.

ಹರ್ಮನ್‌ಪ್ರೀತ್

ದಿ ಹಂಡ್ರೆಡ್ ಲೀಗ್‌ಗೆ ಆಟಗಾರರು ಮತ್ತು ಆಟಗಾರ್ತಿಯರ ಹರಾಜು ಪ್ರಕ್ರಿಯೆ ಗುರುವಾರ ನಡೆಯಿತು. ಸ್ಮೃತಿ ಮಂದಾನ ಅವರನ್ನು ಸದರ್ನ್ ಬ್ರೇವ್ ತಂಡ ತನ್ನಲ್ಲೇ ಉಳಿಸಿಕೊಂಡಿದೆ.

ಪುರುಷ ಮತ್ತು ಮಹಿಳಾ ತಂಡಗಳ ಒಟ್ಟು 64 ಸ್ಥಾನಗಳನ್ನು ತುಂಬಲು ಹರಾಜು ಪ್ರಕ್ರಿಯೆ ನಡೆಯಿತು. ಮಹಿಳಾ ತಂಡಗಳಿಗೆ ಇದೇ ಮೊದಲ ಬಾರಿಗೆ ಹರಾಜು ಪ್ರಕ್ರಿಯೆ ನಡೆದಿದೆ.

ಪುರುಷರ ವಿಭಾಗದಲ್ಲಿ ಪಾಕಿಸ್ತಾನದ ಶಾಹೀನ್ ಶಾ ಆಫ್ರಿದಿ ಮತ್ತು ಹ್ಯಾರಿಸ್ ರವೂಫ್ ಅವರನ್ನು ವೆಲ್ಶ್ ಫೈರ್ ತಂಡ ತನ್ನದಾಗಿಸಿಕೊಂಡಿತು. ಪ್ರಮುಖ ಆಟಗಾರರಾದ ಪಾಕ್ ತಂಡದ ನಾಯಕ ಬಾಬರ್ ಅಜಂ, ವೆಸ್ಟ್ ಇಂಡೀಸ್‌ನ ಕೀರನ್ ಪೊಲಾರ್ಡ್ ಮತ್ತು ನ್ಯೂಜಿಲೆಂಡ್‌ನ ಟ್ರೆಂಟ್ ಬೌಲ್ಟ್ ಅವರನ್ನು ಕೊಳ್ಳಲು ಯಾವುದೇ ತಂಡ ಆಸಕ್ತಿ ತೋರಲಿಲ್ಲ.

2023ರ ದಿ ಹಂಡ್ರೆಡ್ ಟೂರ್ನಿ ಆ.1 ರಂದು ಆರಂಭವಾಗಲಿದೆ.

13 ಕ್ರಿಕೆಟ್ ಪಂದ್ಯಗಳ ಮೇಲೆ ಸಂಶಯದ ನೋಟ

ನವದೆಹಲಿ (ಪಿಟಿಐ): ಕಳೆದ ವರ್ಷ ವಿಶ್ವದ ವಿವಿಧೆಡೆ ನಡೆದ ಸ್ಪರ್ಧಾತ್ಮಕ ಕ್ರಿಕೆಟ್ ಪಂದ್ಯಗಳಲ್ಲಿ 13 ಪಂದ್ಯಗಳು ಸಂಶಯಕ್ಕೆ ಎಡೆಮಾಡಿಕೊಡುವಂತಿದ್ದವು ಎಂದು ಸ್ಪೋರ್ಟ್‌ರೆಡಾರ್ ಇಂಟೆಗ್ರಿಟಿ ಸರ್ವಿಸಸ್ ಸಂಸ್ಥೆಯು ಪ್ರಕಟಿಸಿದ ವರದಿ ಹೇಳಿದೆ.

ಬೆಟ್ಟಿಂಗ್ ಮತ್ತು ಮ್ಯಾಚ್ ಫಿಕ್ಸಿಂಗ್ ಒಳಗೊಂಡಂತೆ ಕ್ರೀಡೆಯಲ್ಲಿ ನಡೆಯುವ ಇನ್ನಿತರ ಭ್ರಷ್ಟಾಚಾರಗಳ ಬಗ್ಗೆ ವಿಶ್ಲೇಷಣೆ ನಡೆಸುವ ಕೆಲಸವನ್ನು ಸ್ಪೋರ್ಟ್‌ರೆಡಾರ್ ಮಾಡುತ್ತದೆ.

‘2022ರ ಅವಧಿಯಲ್ಲಿ 92 ದೇಶಗಳಲ್ಲಿ 12 ವಿವಿಧ ಕ್ರೀಡೆಗಳಲ್ಲಿ ಆಯೋಜಿಸಿದ್ದ 1,212 ಪಂದ್ಯಗಳು ಸಂಶಯಕ್ಕೆ ಎಡೆಮಾಡಿಕೊಡುವಂತಿದ್ದವು’ ಎಂದು 28 ಪುಟಗಳ ತನ್ನ ವರದಿಯಲ್ಲಿ ತಿಳಿಸಿದೆ.

‘ಫುಟ್‌ಬಾಲ್ ಕ್ರೀಡೆಯಲ್ಲಿ 775 ಪಂದ್ಯಗಳು, ಬ್ಯಾಸ್ಕೆಟ್‌ಬಾಲ್‌ನಲ್ಲಿ 220 ಮತ್ತು ಟೆನಿಸ್‌ನಲ್ಲಿ 75 ಪಂದ್ಯಗಳು ಅನುಮಾನ ಹುಟ್ಟಿಸುವಂತಿದ್ದವು’ ಎಂದಿದೆ.

ಈ ಪಟ್ಟಿಯಲ್ಲಿ ಕ್ರಿಕೆಟ್ ಆರನೇ ಸ್ಥಾನ ಪಡೆದುಕೊಂಡಿದೆ. ವರದಿಯಲ್ಲಿ ಉಲ್ಲೇಖಿಸಿರುವ 13 ಕ್ರಿಕೆಟ್ ಪಂದ್ಯಗಳಲ್ಲಿ ಅಂತರರಾಷ್ಟ್ರೀಯ ಪಂದ್ಯಗಳು ಇವೆಯೇ ಅಥವಾ ಟಿ20 ಲೀಗ್‌ನಲ್ಲಿ ನಡೆದ ಪಂದ್ಯಗಳೇ ಎಂಬುದನ್ನು ಸ್ಪಷ್ಟಪಡಿಸಿಲ್ಲ. ಭಾರತದಲ್ಲಿ ನಡೆದಿರುವ ಪಂದ್ಯಗಳು ಈ ಪಟ್ಟಿಯಲ್ಲಿ ಇಲ್ಲ.

ಹಿಂದೆ ಸರಿದ ಶರತ್

ಜಮ್ಮು (ಪಿಟಿಐ): ರಾಷ್ಟ್ರೀಯ ಚಾಂಪಿಯನ್ ಅಚಂತ ಶರತ್ ಕಮಲ್ ಅವರು ಶನಿವಾರ ಇಲ್ಲಿ ಆರಂಭವಾಗುವ ಅಂತರರಾಜ್ಯ ಸೀನಿಯರ್ ರಾಷ್ಟ್ರೀಯ ಟೇಬಲ್ ಟೆನಿಸ್ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ.

ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಅವರು ಸ್ಪರ್ಧಿಸಬೇಕಿತ್ತು. ಬೆನ್ನು ಮತ್ತು ಕಾಲುನೋವಿನ ಹಿನ್ನೆಲೆಯಲ್ಲಿ ಅವರು ಟೂರ್ನಿಯಲ್ಲಿ ಆಡುತ್ತಿಲ್ಲ. ಜಿ.ಸತ್ಯನ್ ಕಣಕ್ಕಿಳಿಯಲಿದ್ದಾರೆ.

ಕ್ವಾರ್ಟರ್ ಫೈನಲ್‌ಗೆ ಸಾತ್ವಿಕ್–ಚಿರಾಗ್

ಸ್ವಿಸ್ ಓಪನ್ ಬ್ಯಾಡ್ಮಿಂಟನ್ ಟೂರ್ನಿ: 16ರ ಘಟ್ಟದಲ್ಲಿ ಸಿಂಧುಗೆ ನಿರಾಸೆ

ಬಾಸೆಲ್ (ಪಿಟಿಐ): ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಸ್ವಿಸ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿತು. ಆದರೆ ಇಲ್ಲಿ ಸತತ ಎರಡನೇ ಪ್ರಶಸ್ತಿ ಗೆಲ್ಲಬೇಕೆಂಬ ಪಿ.ವಿ. ಸಿಂಧು ಅವರ ಕನಸು ಭಗ್ನಗೊಂಡಿತು.

ಗುರುವಾರ ರಾತ್ರಿ ನಡೆದ ಪುರುಷರ ಡಬಲ್ಸ್ ವಿಭಾಗದ ಪ್ರೀಕ್ವಾರ್ಟರ್ ಫೈನಲ್‌ನಲ್ಲಿ ಸಾತ್ವಿಕ್- ಚಿರಾಗ್ ಜೋಡಿ 21–21, 21–17, 28–26 ರಲ್ಲಿ ತೈವಾನ್‌ನ ಫಾಂಗ್ ಚಿ ಲೀ- ಫಾಂಗ್ ಜೆನ್ ಲೀ ಅವರನ್ನು ಪ್ರಯಾಸದಿಂದ ಮಣಿಸಿತು.

ಸಾತ್ವಿಕ್ (ಎಡ) ಮತ್ತು ಚಿರಾಗ್ ಶೆಟ್ಟಿ

ಎರಡನೇ ಶ್ರೇಯಾಂಕ ಹೊಂದಿರುವ ಭಾರತದ ಜೋಡಿ ಒಂದು ಗಂಟೆ 21 ನಿಮಿಷದ ಜಿದ್ದಾಜಿದ್ದಿನ ಪೈಪೋಟಿ ಬಳಿಕ ಗೆದ್ದಿತು. ಮೊದಲ ಗೇಮ್‌ಅನ್ನು ಸುಲಭದಲ್ಲಿ ಎದುರಾಳಿಗೆ ಒಪ್ಪಿಸಿದ ಸಾತ್ವಿಕ್– ಚಿರಾಗ್ ಆ ಬಳಿಕ ಅಮೋಘವಾಗಿ ಮರುಹೋರಾಟ ನಡೆಸಿತು. ಮೂರನೇ ಗೇಮ್‌ನಲ್ಲಿ ರೋಚಕ ಹಣಾಹಣಿ ಕಂಡುಬಂತು.

ವಿಶ್ವ ರ್‍ಯಾಂಕಿಂಗ್‌ನಲ್ಲಿ ಆರನೇ ಸ್ಥಾನದಲ್ಲಿರುವ ಸಾತ್ವಿಕ್-ಚಿರಾಗ್ ಅವರು ಎಂಟರಘಟ್ಟದ ಪಂದ್ಯದಲ್ಲಿ ಡೆನ್ಮಾರ್ಕ್‌ನ ಜೆಪ್ ಬೇ- ಲಾಸ್ಸೆ ಮಾಲ್‌ಹಿಡ್ ವಿರುದ್ಧ ಪೈಪೋಟಿ ನಡೆಸುವರು.

ಸಿಂಧುಗೆ ನಿರಾಸೆ: ಮಹಿಳೆಯರ ಸಿಂಗಲ್ಸ್ ವಿಭಾಗದ ಪ್ರಶಸ್ತಿಯನ್ನು ತಮ್ಮಲ್ಲೇ ಉಳಿಸಿಕೊಳ್ಳಬೇಕೆಂಬ ಭಾರತದ ಅನುಭವಿ ಆಟಗಾರ್ತಿ ಸಿಂಧು ಅವರ ಆಸೆ ಕೈಗೂಡಲಿಲ್ಲ.

ಪ್ರೀಕ್ವಾರ್ಟರ್ ಫೈನಲ್‌ನಲ್ಲಿ ಸಿಂಧು 15-21, 21-12, 18-21 ರಲ್ಲಿ ಇಂಡೊನೇಷ್ಯಾದ ಪುತ್ರಿ ಕುಸುಮಾ ವರ್ದನಿ ಕೈಯಲ್ಲಿ ಆಘಾತ ಅನುಭವಿಸಿದರು. ವಿಶ್ವ ರ್‍ಯಾಂಕಿಂಗ್‌ನಲ್ಲಿ 38ನೇ ಸ್ಥಾನದಲ್ಲಿರುವ ಕುಸುಮಾ ಮತ್ತು ಸಿಂಧು ಇದೇ ಮೊದಲ ಬಾರಿ ಪರಸ್ಪರ ಎದುರಾಗಿದ್ದರು.

ವಿಶ್ವದ 9ನೇ ರ್‍ಯಾಂಕ್‌ನ ಆಟಗಾರ್ತಿ ಸಿಂಧು ಅವರಿಗೆ ಇಲ್ಲಿ ನಾಲ್ಕನೇ ಶ್ರೇಯಾಂಕ ನೀಡಲಾಗಿತ್ತು. ಮೊದಲ ಗೇಮ್ ಸೋತ ಸಿಂಧು, ಎರಡನೇ ಗೇಮ್ ಗೆದ್ದು ಸಮಬಲ ಸಾಧಿಸಿದರು. ಆದರೆ ನಿರ್ಣಾಯಕ ಗೇಮ್‌ನಲ್ಲಿ ಒತ್ತಡವನ್ನು ನಿಭಾಯಿಸಲು ವಿಫಲರಾದರು. ಈ ಹಣಾಹಣಿ ಭರ್ತಿ ಒಂದು ಗಂಟೆ ನಡೆಯಿತು.

ವಿಶ್ವಕಪ್ ಶೂಟಿಂಗ್: ಚೀನಾ ಸ್ಪರ್ಧಿಗಳ ಪ್ರಾಬಲ್ಯ

ರುದ್ರಾಕ್ಷ್ ಪಾಟೀಲ್‌ಗೆ ಕಂಚಿನ ಪದಕ

ಭೋಪಾಲ್ (ಪಿಟಿಐ): ಭಾರತದ ರುದ್ರಾಕ್ಷ್ ಪಾಟೀಲ್ ಅವರು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್‌ನ ಪುರುಷರ 10 ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ಶುಕ್ರವಾರ ಕಂಚಿನ ಪದಕ ಗೆದ್ದುಕೊಂಡರು.

ರುದ್ರಾಕ್ಷ್ ಅವರಿಗೆ ಚಾಂಪಿಯನ್‌ಷಿಪ್‌ನಲ್ಲಿ ದೊರೆತ ಎರಡನೇ ಪದಕ ಇದು. ಗುರುವಾರ ಏರ್ ಪಿಸ್ತೂಲ್ ಮಿಶ್ರ ತಂಡ ವಿಭಾಗದಲ್ಲೂ ಅವರು ಕಂಚು ಗೆದ್ದುಕೊಂಡಿದ್ದರು.

ಅರ್ಹತಾ ಸುತ್ತಿನಲ್ಲಿ 631.0 ಪಾಯಿಂಟ್ಸ್‌ಗಳೊಂದಿಗೆ ನಾಲ್ಕನೇ ಸ್ಥಾನ ಪಡೆಯುವ ಮೂಲಕ ರುದ್ರಾಕ್ಷ್ ರ್‍ಯಾಂಕಿಂಗ್ ಸುತ್ತು ಪ್ರವೇಶಿಸಿದ್ದರು. ಅಂತಿಮವಾಗಿ 262.3 ಪಾಯಿಂಟ್ಸ್‌ಗಳೊಂದಿಗೆ ಮೂರನೇ ಸ್ಥಾನ ಪಡೆದರು. 264.2 ಪಾಯಿಂಟ್ಸ್ ಗಳಿಸಿದ ಚೀನಾದ ಶೆಂಗ್ ಲಿಹಾವೊ ಚಿನ್ನ ಗೆದ್ದರೆ, ದು ಲಿನ್‌ಶು (263.3) ಬೆಳ್ಳಿ ಪಡೆದುಕೊಂಡರು.

ರುದ್ರಾಕ್ಷ್ ಪಾಟೀಲ್

ರಮಿತಾಗೆ ನಾಲ್ಕನೇ ಸ್ಥಾನ: ಮಹಿಳೆಯರ 10 ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ಕಣದಲ್ಲಿದ್ದ ಭಾರತದ ರಮಿತಾ ಅವರು ಕಂಚಿನ ಪದಕದ ಅವಕಾಶವನ್ನು ಅಲ್ಪದರಲ್ಲೇ ಕಳೆದುಕೊಂಡು ನಾಲ್ಕನೇ ಸ್ಥಾನ ಗಳಿಸಿದರು.

3ನೇ ಸ್ಥಾನಕ್ಕಾಗಿ ನಡೆದ ಪೈಪೋಟಿಯಲ್ಲಿ ಕಜಕಸ್ತಾನದ ಅಲೆ ಕ್ಸಾಂಡ್ರಾ ಲಿ ಅವರು ರಮಿತಾ ವಿರುದ್ಧ ಗೆದ್ದರು. ಅಲೆಕ್ಸಾಂಡ್ರಾ 261.2 ಪಾಯಿಂಟ್ಸ್ ಗಳಿಸಿದರೆ, ಭಾರತದ ಶೂಟರ್ 260.5 ಪಾಯಿಂಟ್ಸ್ ಕಲೆ ಹಾಕಿದರು. ಚೀನಾದ ಹುವಾಂಗ್ ಯೂತಿಂಗ್ ಚಿನ್ನ, ಅಮೆರಿಕದ ಮೇರಿ ಟಕರ್ ಬೆಳ್ಳಿ ಪಡೆದರು.

ಮೂರನೇ ದಿನದ ಸ್ಪರ್ಧೆಗಳ ಬಳಿಕ ಚೀನಾ ಶೂಟರ್‌ಗಳು 5 ಚಿನ್ನ, 1 ಬೆಳ್ಳಿ ಮತ್ತು 2 ಕಂಚು ಜಯಿಸಿ ಪದಕ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ.

ಸ್ಪೋರ್ಟ್ಸ್‌ಬೈಕ್ ರೇಸ್: ಮಿಂಚಿದ ರುಶಬ್ ಶಾ

ಬೆಂಗಳೂರು (ಪಿಟಿಐ): ನಗರದ ಸೂಪರ್ ಬೈಕ್ ರೈಡರ್ ರುಶಬ್ ಶಾ ಅವರು ದುಬೈನಲ್ಲಿ ನಡೆದ ದುಬೈ ನ್ಯಾಷನಲ್ ಸ್ಪೋರ್ಟ್ಸ್‌ಬೈಕ್ ಸೂಪರ್ ಸೀರಿಸ್‌ನಲ್ಲಿ ಮಿಂಚಿದ್ದಾರೆ.

ಕಳೆದ ವಾರ ನಡೆದ ವಲೀದ್ ಅಲ್‌ಶೆಮೈಸ್ ದುಬೈ ನ್ಯಾಷನಲ್ ಚಾಂಪಿಯನ್‌ಷಿಪ್‌ನಲ್ಲಿ ಅವರಿಂದ ಈ ಸಾಧನೆ ಮೂಡಿಬಂದಿದೆ. ಎರಡು ರೇಸ್‌ಗಳನ್ನು ಗೆದ್ದಿರುವ ಅವರು ಐದು ರೇಸ್‌ಗಳಲ್ಲಿ ಎರಡನೇ ಸ್ಥಾನ ಗಳಿಸಿದ್ದಾರೆ. ತಾವು ಪಾಲ್ಗೊಂಡ ಎಂಟು ರೇಸ್‌ಗಳಲ್ಲಿ ಏಳ ರಲ್ಲೂ ‘ಪೋಡಿಯಂ ಫಿನಿಷ್’ ಮಾಡಿದ್ದಾರೆ. 27 ವರ್ಷದ ರುಶಬ್, ಇಂಡಿಯನ್ ನ್ಯಾಷನಲ್ ರೇಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಮೂರು ಋತುಗಳಲ್ಲಿ ಪಾಲ್ಗೊಂಡ ಬಳಿಕ ಅಂತರರಾಷ್ಟ್ರೀಯ ಸ್ಪರ್ಧೆಯಲ್ಲಿ ಭಾಗವಹಿಸಿದ್ದಾರೆ.

ವೇಟ್‌ಲಿಫ್ಟಿಂಗ್: ಹರ್ಷದಾ, ಮೀನಾ ಮಿಂಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾರಾಷ್ಟ್ರದ ಹರ್ಷದಾ ಶರದ್ ಗರುಡ್ ಅವರು ಇಲ್ಲಿ ಆರಂಭವಾದ ಖೇಲೊ ಇಂಡಿಯಾ ಮಹಿಳೆಯರ ರಾಷ್ಟ್ರೀಯ ರ್‍ಯಾಂಕಿಂಗ್ ವೇಟ್‌ಲಿಫ್ಟಿಂಗ್ ಟೂರ್ನಿಯಲ್ಲಿ ಎರಡು ಚಿನ್ನದ ಪದಕ ಜಯಿಸಿದರು.

ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ 49 ಕೆಜಿ ಸ್ಪರ್ಧೆಯ ಜೂನಿಯರ್ ಮತ್ತು ಸೀನಿಯರ್ ವಿಭಾಗದಲ್ಲಿ ಅವರಿಗೆ ಪದಕಗಳು ಒಲಿದವು.

ಜೂನಿಯರ್ ವಿಭಾಗದಲ್ಲಿ ಹರ್ಷದಾ ಒಟ್ಟು 161 ಕೆಜಿ (ಸ್ನ್ಯಾಚ್ 73 + ಕ್ಲೀನ್ ಮತ್ತು ಜರ್ಕ್ 88) ಭಾರ ಎತ್ತಿದರು. ಸೀನಿಯರ್ ವಿಭಾಗದಲ್ಲೂ ಇದೇ ರೀತಿಯ ಸಾಧನೆಯನ್ನು ಅವರು ಮಾಡಿದರು. ಒಡಿಶಾದ ಮೀನಾ ಸಿಂಗ್ ಕೂಡ ಎರಡು ಚಿನ್ನ ತಮ್ಮದಾಗಿಸಿಕೊಂಡರು.

ಕರ್ನಾಟಕದ ಲಕ್ಷ್ಮಿ ಬಿ.ಅವರು 49 ಕೆಜಿ ಸೀನಿಯರ್ ವಿಭಾಗದಲ್ಲಿ ಬೆಳ್ಳಿ ಜಯಿಸಿದರು. ಅವರು ಒಟ್ಟು 160 ಕೆಜಿ (72 + 88) ಭಾರ ಸಾಧನೆ ಮಾಡಿದರು.

ಫಲಿತಾಂಶಗಳು: 40 ಕೆಜಿ ಯೂತ್: ವಿನಾತಾಯಿ ಅಹೆರ್ (131 ಕೆಜಿ (ಸ್ನ್ಯಾಚ್ 57 + ಕ್ಲೀನ್ ಮತ್ತು ಜರ್ಕ್ 74)–1, ಪ್ರೀತಿಸ್ಮಿತಾ ಬೊಯಿ–2, ಸಲೋನಿ ಸೈನಿ (ರಾಜಸ್ಥಾನ)–3. **45 ಕೆಜಿ ಜೂನಿಯರ್:** ರಾಣಿ ನಾಯಕ್ (ಮಧ್ಯಪ್ರದೇಶ, ಒಟ್ಟು 140 ಕೆಜಿ: ಸ್ನ್ಯಾಚ್ 64 + ಕ್ಲೀನ್ ಮತ್ತು ಜರ್ಕ್ 76)–1, ಮನೀಷಾ ಸೋರೆನ್ (ಜಾರ್ಖಂಡ್)–2, ಬಬಿತಾ ಕುಮಾರಿ (ಜಾರ್ಖಂಡ್)–3 **49 ಕೆಜಿ ಜೂನಿಯರ್:** ಹರ್ಷದಾ ಶರದ್ ಗರುಡ್ (ಮಹಾರಾಷ್ಟ್ರ, ಒಟ್ಟು ಭಾರ: 161: 73 + 88)–1, ಗ್ಯಾನೇಶ್ವರಿ ಯಾದವ್ (ಛತ್ತೀಸಗಡ)–2, ಶಾಲು (ಹರಿಯಾಣ)–3. **45 ಕೆಜಿ ಸೀನಿಯರ್:** ಕೋಮಲ್ ಕೋಹರ್ (ರೈಲ್ವೆ, ಒಟ್ಟು ಭಾರ: 150: 70 + 80)–1, ದೀಪಾಲಿ ಗುರ್ಸಾಳೆ (ರೈಲ್ವೆ)–2. **49 ಕೆಜಿ ಸೀನಿಯರ್:** ಹರ್ಷದಾ ಗರುಡ್ (ಮಹಾರಾಷ್ಟ್ರ, ಒಟ್ಟು ಭಾರ: 161: 73 + 88)–1, ಲಕ್ಷ್ಮಿ ಬಿ. (ಕರ್ನಾಟಕ)–2, ಸಾಕ್ಷಿ ಮಸ್ಕೆ (ಮಹಾರಾಷ್ಟ್ರ)–3 **45 ಕೆಜಿ ಯೂತ್:** ಮೀನಾ ಸಿಂಗ್ (ಒಡಿಶಾ, ಒಟ್ಟು ಭಾರ: 128: 58 + 70)–1, ಮನೀಷಾ ಸೋರೆನ್ (ಜಾರ್ಖಂಡ್)–2, ಬಬಿತಾ ಕುಮಾರಿ (ಜಾರ್ಖಂಡ್)–3 **49 ಕೆಜಿ ಯೂತ್:** ಮೀನಾ ಸಿಂಗ್ (ಒಡಿಶಾ, ಒಟ್ಟು ಭಾರ: 135: 62 + 73)–1, ಆರತಿ ತಟಗುಂತಿ (ಮಹಾರಾಷ್ಟ್ರ_2, ಪೂಜಾ ವೈಷ್ಣವ್ (ಮಹಾರಾಷ್ಟ್ರ)–3

ಗಾಲ್ಫ್: ಮುನ್ನಡೆಯಲ್ಲಿ ಮ್ಯಾನುಯೆಲ್ ಎಲ್ವಿರಾ

ಬೆಂಗಳೂರು: ಸ್ಪೇನ್‌ನ ಮ್ಯಾನುಯೆಲ್ ಎಲ್ವಿರಾ ಅವರು ಮೊದಲ ಸುತ್ತಿನಲ್ಲಿ ತೋರಿದ್ದ ನಿಖರ ಪ್ರದರ್ಶನವನ್ನು ಪುನರಾವರ್ತಿಸಲು ವಿಫಲರಾದರೂ, ಡಂಕನ್ ಟೇಲರ್ ಬ್ಲ್ಯಾಕ್ ಬುಲ್ ಚಾಲೆಂಜ್ ಗಾಲ್ಫ್ ಟೂರ್ನಿಯಲ್ಲಿ ಮುನ್ನಡೆ ಕಾಪಾಡಿಕೊಂಡಿದ್ದಾರೆ.

ಕೆಜಿಎ ಕೋರ್ಸ್‌ನಲ್ಲಿ ನಡೆಯುತ್ತಿರುವ ಟೂರ್ನಿಯ ಎರಡನೇ ಸುತ್ತಿನ ಸ್ಪರ್ಧೆ ಕೊನೆಗೊಳಿಸಲು ಎಲ್ವಿರಾ 70 ಸ್ಟ್ರೋಕ್‌ಗಳನ್ನು ತೆಗೆದುಕೊಂಡರು. ಇದೀಗ ಅವರು ಒಟ್ಟು 133 ಸ್ಕೋರ್‌ಗಳೊಂದಿಗೆ ಅಗ್ರಸ್ಥಾನದಲ್ಲಿದ್ದಾರೆ.

ಸ್ವೀಡನ್‌ನ ರಿಕಾರ್ಡ್ ಕಾರ್ಲ್‌ಬರ್ಗ್ (134) ಅವರು ಎಲ್ವಿರಾಗೆ ಪ್ರಬಲ ಪೈಪೋಟಿ ಒಡ್ಡಿದ್ದು, ಎರಡನೇ ಸ್ಥಾನದಲ್ಲಿದ್ದಾರೆ. ಭಾರತದ ಸ್ಪರ್ಧಿಗಳಲ್ಲಿ ಅಮನ್ ರಾಜ್ (135) ಜಂಟಿ 3ನೇ ಸ್ಥಾನ ಹೊಂದಿದ್ದಾರೆ.

ಫುಟ್‌ಬಾಲ್: ಅತಿಹೆಚ್ಚು ಪಂದ್ಯ ಆಡಿದ ಸಾಧನೆ

ಕ್ರಿಸ್ಟಿಯಾನೊ ರೊನಾಲ್ಡೊ ದಾಖಲೆ

ಲಿಸ್ಬನ್ (ಎಎಫ್‌ಪಿ): ಪೋರ್ಚುಗಲ್ ಫುಟ್‌ಬಾಲ್ ತಂಡದ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ ಅವರು ಅತಿಹೆಚ್ಚು ಅಂತರರಾಷ್ಟ್ರೀಯ ಪಂದ್ಯಗಳನ್ನಾಡಿದ ದಾಖಲೆ ತಮ್ಮದಾಗಿಸಿಕೊಂಡರು.

ಲಿಸ್ಬನ್‌ನಲ್ಲಿ ಗುರುವಾರ ನಡೆದ ಪೋರ್ಚುಗಲ್ – ಲಿಕ್‌ಸ್ಟನ್‌ಸ್ಟೈನ್ ನಡುವಣ ಪಂದ್ಯ ಅವರಿಗೆ 197ನೇ ಅಂತರರಾಷ್ಟ್ರೀಯ ಪಂದ್ಯ ಆಗಿತ್ತು. ಯೂರೊ 2024 ಅರ್ಹತಾ ಹಂತದ ಈ ಪಂದ್ಯವನ್ನು ಪೋರ್ಚುಗಲ್ 4–0 ರಲ್ಲಿ ಗೆದ್ದಿತು. 196 ಅಂತರರಾಷ್ಟ್ರೀಯ ಪಂದ್ಯಗಳನ್ನಾಡಿರುವ ಕುವೈತ್‌ನ ಬದರ್ ಅಲ್ ಮುತಾವ ಅವರ ದಾಖಲೆಯನ್ನು ರೊನಾಲ್ಡೊ ಮುರಿದರು.

ರೊನಾಲ್ಡೊ ಎರಡು ಗೋಲು ಗಳಿಸಿ ಪಂದ್ಯವನ್ನು ಸ್ಮರಣೀಯವನ್ನಾಗಿಸಿಕೊಂಡರು. 51ನೇ ನಿಮಿಷದಲ್ಲಿ ಪೆನಾಲ್ಟಿ ಕಿಕ್ ಅವಕಾಶದಲ್ಲಿ ಚೆಂಡನ್ನು ಗುರಿ ಸೇರಿಸಿದ ಅವರು 12 ನಿಮಿಷಗಳ ಬಳಿಕ ದೊರೆತ ಫ್ರೀಕಿಕ್‌ನಲ್ಲಿ ಮತ್ತೊಂದು ಗೋಲು ಗಳಿಸಿದರು. ತಂಡದ ಇತರ ಗೋಲುಗಳನ್ನು ಜೊವಾವೊ ಕನ್ಸೆಲೊ ಮತ್ತು ಬರ್ನಾರ್ಡೊ ಸಿಲ್ವ ತಂದಿತ್ತರು.

ರೂನಿ ಹಿಂದಿಕ್ಕಿದ ಹ್ಯಾರಿ ಕೇನ್

ನೇಪಲ್ಸ್, ಇಟಲಿ: ಹ್ಯಾರಿ ಕೇನ್ ಅವರು ಇಂಗ್ಲೆಂಡ್ ತಂಡದ ಪರ ಅತಿಹೆಚ್ಚು ಗೋಲುಗಳನ್ನು ಗಳಿಸಿದ ದಾಖಲೆ ತಮ್ಮದಾಗಿಸಿಕೊಂಡರು.

ಯೂರೊ ಫುಟ್‌ಬಾಲ್ ಟೂರ್ನಿಯ ಅರ್ಹತಾ ಪಂದ್ಯದಲ್ಲಿ ಇಟಲಿ ವಿರುದ್ಧ ಚೆಂಡನ್ನು ಗುರಿ ಸೇರಿಸಿದ ಅವರು ತಮ್ಮ ಒಟ್ಟು ಗೋಲುಗಳ ಸಂಖ್ಯೆಯನ್ನು 54ಕ್ಕೆ ಹೆಚ್ಚಿಸಿಕೊಂಡರು. ಈ ಮೂಲಕ ವೇಯ್ನ್ ರೂನಿ (53 ಗೋಲು) ದಾಖಲೆಯನ್ನು ಅವರು ಮುರಿದರು. ಗುರುವಾರ ನಡೆದ ಪಂದ್ಯವನ್ನು ಇಂಗ್ಲೆಂಡ್ 2–1 ಗೋಲುಗಳಿಂದ ಗೆದ್ದಿತು.

ರೊನಾಲ್ಡೊ –ಎಎಫ್‌ಪಿ ಚಿತ್ರ

ರೊನಾಲ್ಡೊ, ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಗೋಲುಗಳ ಸಂಖ್ಯೆಯನ್ನು 120ಕ್ಕೆ ಹೆಚ್ಚಿಸಿಕೊಂಡರು. ಪೋರ್ಚುಗಲ್ ಪರ ಅತ್ಯಧಿಕ ಗೋಲು ಗಳಿಸಿದ ದಾಖಲೆಯೂ ಅವರ ಹೆಸರಿನಲ್ಲಿದೆ.